

ಆರಂಭೋಲನ
ದಿನ ಪತ್ರಿಕೆ

ಭಾನುವಾರ, 2 ಫೆಬ್ರವರಿ 2025

ಡಾ.ಬಿ.ಆರ್.ಜಯಕುಮಾರಿ ಅವರಿಗೆ ಸನ್ಮಾನ...

ಮೈಸೂರಿನ ಜಯಲಕ್ಷ್ಮಿ ಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶತಮಾನದ ವಾರದ ಸಮಾವೇಶದಲ್ಲಿ ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರನ್ನು ಸನ್ಮಾನಿಸಲಾಯಿತು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಮುತ್ತಿ ಮಾಲೆಹಾಕಿ, ಆಡಳಿತಾ ಧಿಕಾರಿ ಪ್ರೊ.ಪಿ.ಸರೋಜಮ್ಮ, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಪ್ರಾಧ್ಯಾಪಕರಾದ ಡಾ.ವಿಕ್ಟೋರಿಯಾ, ಗ್ರಂಥಪಾಲಕರಾದ ಎಂ. ವೀಣಾ, ಆಡಳಿತಾಧಿಕಾರಿ ವಿಭಾಗದ ಮುಖ್ಯಸ್ಥ ಎಂ.ಎಸ್.ಬೆಳಕುಪ್ಪೆ, ಸಮಾಜಕಲ್ಯಾಣಾಧಿಕಾರಿ ಪ್ರೊ.ಪಿ.ಪುಷ್ಪಲತಾ, ಹಿರಿಯ ಪ್ರಾಧ್ಯಾಪಕರಾದ ಎಂ.ಜಿ.ಪುಷ್ಪಲತಾ, ಪರೀಕ್ಷಾಂಗ ನಿಯಂತ್ರಣಾಧಿಕಾರಿ ಪ್ರೊ.ಪೂರ್ಣಚ್ಚ, ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಮೊಗ್ಗವಳ್ಳಿ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಎಂ.ನಾಗೇಶ, ಸಿ.ಎಂ.ತಿಗಳ ಕುಮಾರ್, ಜೆ.ಮಲೇಶ್ ಕುಮಾರ್ ಇತರರು ಹಾಜರಿದ್ದರು.



ಪ್ರಜಾ ವಾಣಿ

ಮಂಗಳವಾರ • ಫೆಬ್ರವರಿ 25, 2025

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಪಬ್ಲಿಯು ನಿರ್ದೇಶನದಲ್ಲಿ ಶೋಮವಾರದಲ್ಲಿ ಶೋಮವಾರದಿಂದ ಆಯೋಜಿಸಿರುವ ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಸರಳಳ್ಳಿ ಬಾಲಸುಬ್ರಹ್ಮಣ್ಯ ಉದ್ಘಾಟಿಸಿದರು. ಸ. ರವಿಕುಮಾರ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಮುತ್ತಿ, ಮೂರೀವರ್, ಪ್ರಾಂಶುಪಾಲ ಬಿ.ಆರ್ ಜಯಕುಮಾರಿ, ಸ್ನಾತಕೋತ್ತರ ವಿಭಾಗದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಕನ್ನಡ ವಿಭಾಗದ ಮುಖ್ಯಸ್ಥೆ ಎಚ್.ಆರ್. ತಿಮ್ಮೇಗೌಡ, ಪ್ರಾಧ್ಯಾಪಕಿ ವಿಕ್ಟೋರಿಯಾ, ಸಮಾಜಕಲ್ಯಾಣಾಧಿಕಾರಿ ಪ್ರೊ. ಪಿ. ಪುಷ್ಪಲತಾ ಇತರರು ಹಾಜರಿದ್ದರು.

'ವಿಜ್ಞಾನ, ವೈದ್ಯಕೀಯ ಲೇಖಕರೆಂಬ ಭೇದ ಸಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಜ್ಞಾನವನ್ನು ಜನ ಸಾಮಾನ್ಯರೂ ಅರ್ಥಮಾಡಿಕೊಳ್ಳಲು ಸಾಹಿತ್ಯದ ಸ್ಪರ್ಶ ಅಗತ್ಯ. ನಿಜಾರ್ಥ ವೈದ್ಯಕೀಯ ಲೇಖಕರಲ್ಲಿ ಭೇದ ಸಲ್ಲದು. ಅವರೆಲ್ಲರನ್ನೂ ಸಾಹಿತಿ ಗಳೆಂದೇ ಒಪ್ಪಬೇಕು' ಎಂದು ಪ್ರೊ.ಸಂಗಮೇಶ ಬಾಲಸುಬ್ರಹ್ಮಣ್ಯ ಪ್ರತಿಪಾದಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು, ಅಭಿನವ ಬೆಂಗಳೂರು ಸಹಯೋಗದಲ್ಲಿ ಸೋಮವಾರದಿಂದ ಏರ್ಪಡಿಸಿರುವ 'ಅಧ್ಯಶತಮಾನದ ಬಗ್ಗೆ ಅಂತರ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿ, 'ಡಾಕ್ಟರು, ಧರ್ಮ, ವಿಜ್ಞಾನವು ಸಾಮಾಜಿಕ ಕಳಿಯ ಪ್ರತಿರೂಪ. ಆದರೆ ವಿಜ್ಞಾನದ ಬರಹ ಚಿಂತನೆಗಳು ಸದಸದಿರುವುದು ವಿರಳ. ಸಾಂಸ್ಕೃತಿಕ ಲೋಕ ಆದರ ಬಗ್ಗೆ ಚಿಂತಿಸಿಲ್ಲ' ಎಂದರು.

'ಚತ್ತಕಲೆ, ಸಾಹಿತ್ಯ, ಚರಿತ್ರೆ ಹಾಗೂ ವಿಜ್ಞಾನ ಕುರಿತು ಗಂಭೀರವಾಗಿ ಚಿಂತನೆಯಾಗಿರುವುದು ದುರಂತ. ಇದು ನನ್ನನ್ನು ದ್ವಿಜದಂತೆ ಮಾಡಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

'ಹಿಂದೆ ಸಾಹಿತ್ಯ ಹಾಗೂ ವಿಜ್ಞಾನಕ್ಕೆ ನಿಕಟ ಸಂಬಂಧವಿತ್ತು. ವಿಜ್ಞಾನವನ್ನು ಕುರಿತಲ್ಲಿ 'ಯಂತ್ರ ಶ್ರೀ', 'ಆಧುನಿಕ ಭೌತಶಾಸ್ತ್ರ' ಎಂಬಿದ್ದರು. ಜೀವನದ ಪ್ರಾರಂಭದ ಸಾಹಿತ್ಯದಲ್ಲಿ ವಿಜ್ಞಾನದ ಪ್ರಭಾವವಿತ್ತು. ಕೃಷ್ಣಾಗಳನ್ನು ಹೇಳುವಲ್ಲಿ ಪ್ರಮಾಣವಿತ್ತು. ಆದರೆ ಇಂದು ಸಾಹಿತ್ಯ ಮತ್ತು ವಿಜ್ಞಾನ ಬೇರೆಬೇರೆಯಾಗಿವೆ. ಅಧ್ಯಾತ್ಮ ಪ್ರಭಾವ ಕ್ಷೀಣಿಸಿದೆ. ಇದರಿಂದ ಸಂಸ್ಕೃತಿಯ ಅಧ್ಯಾತ್ಮ ಧರ್ಮಾಧಿಷ್ಠಿತ ವಿಜ್ಞಾನ ಸಂಬಂಧಿಸಿದರು.

ರವಿಕುಮಾರ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಮುತ್ತಿ, ಮೂರೀವರ್, ಪ್ರಾಂಶುಪಾಲ ಬಿ.ಆರ್. ಜಯಕುಮಾರಿ, ಸ್ನಾತಕೋತ್ತರ ವಿಭಾಗದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಕನ್ನಡ ವಿಭಾಗದ ಮುಖ್ಯಸ್ಥೆ ಎಚ್.ಆರ್. ತಿಮ್ಮೇಗೌಡ, ಪ್ರಾಧ್ಯಾಪಕಿ ವಿಕ್ಟೋರಿಯಾ, ಸಮಾಜಕಲ್ಯಾಣಾಧಿಕಾರಿ ಪ್ರೊ. ಪಿ. ಪುಷ್ಪಲತಾ ಇತರರು ಹಾಜರಿದ್ದರು.



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಿಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 28 ಜನವರಿ 2025

ಮಹಾಜನ ಕಾಲೇಜಿನಲ್ಲಿ ಗಣರಾಜ್ಯೋತ್ಸವ

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆಯಲ್ಲಿ ಭಾಗವಹಿಸಿದ್ದ ಭಾರತೀಯ ವಾಯುಸೇನೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಎನ್.ಆರ್.ಲಿ ಧ್ವಜಾರೋಹಣ ಶೆರವೇರಿಸಿದರು. ಕಾಲೇಜಿನ ಹಿರಿಯ ಪ್ರಾಧ್ಯಾಪಕರಾದ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಣಾಧಿಕಾರಿಗಳು ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಸ್ನಾತಕೋತ್ತರ ಕೇಂದ್ರ ನಿರ್ದೇಶಕರಾದ ಡಾ.ಸಿ.ಕೆ. ರೇಣುಕಾರ್ಯ, ಎನ್.ಸಿ.ಸಿ ಪ್ಲೈಟಿಂಗ್ ಆಫೀಸರ್ ಡಾ.ಹುಚ್ಚರಾಜೆ ಪಿ.ಜಿ. ಹಾಗೂ ಎನ್.ಸಿ.ಸಿ ಘೋಡಳದ ಸಿಟಿಒ ಶ್ರೀಮತಿ ಗಾಯತ್ರಿ ಹಾಜರಿದ್ದರು.

MAHAJANA IN THE EYES OF THE PRESS.....

College with Potential for Excellence
Education to Excel

SBRR MAHAJANA FIRST GRADE COLLEGE (Autonomous)

Jayalakshmipuram, Mysore - 12

2024-25

MAHAJANA IN THE EYES OF THE PRESS.....

18

EIGHTEENTH VOLUME

MAHAJANA EDUCATION SOCIETY (R.)

ಮುನ್ನುಡಿ

ಸಾಂಸ್ಕೃತಿಕ ನಗರ ಮೈಸೂರು ವೈವಿಧ್ಯಮಯ ರತ್ನಗಳಿಂದ ಶೋಭಿಸುತ್ತಿರುವ ದೊಡ್ಡ ಕಿರೀಟ. ಆ ಕಿರೀಟದಲ್ಲಿನ ಒಂದು ಮುತ್ತು ನಮ್ಮ ಮಹಾಜನ ವಿದ್ಯಾಸಂಸ್ಥೆ. ಸಮಾಜದಲ್ಲಿ ಶೈಕ್ಷಣಿಕವಾಗಿ ಸಹಾಯ ಮಾಡಬೇಕು ಎಂಬ ಸದುದ್ದೇಶದಿಂದ ಆರಂಭಗೊಂಡ ಸಂಸ್ಥೆ ನಮ್ಮದು. SBRR ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸದಾ ತುಡಿಯುತ್ತಾ, ಕಲಿಕೆಯ ಪ್ರಕ್ರಿಯೆಯನ್ನು ನಿರಂತರವಾಗಿ ಆರೋಗ್ಯ ಹಾಗೂ ಕ್ರಿಯಾಶೀಲವಾಗಿರಿಸಲು ಪಠ್ಯದ ಜೊತೆಗೆ ಪಠ್ಯ ಪೂರಕ, ಪಠ್ಯೇತರ ಮತ್ತು ಕೌಶಲ್ಯವರ್ಧಿತ ಚಟುವಟಿಕೆಗಳನ್ನು ಆಯೋಜಿಸುತ್ತಾ ಬರುತ್ತಿದೆ. ಇಂಥ ಯಾವುದೇ ಕಾರ್ಯಕ್ರಮ ಕಾಲೇಜಿನಲ್ಲಿ ನಡೆದರೂ ಮರುದಿನ ಪತ್ರಿಕೆಯಲ್ಲಿ ಅದರ ಮಾಹಿತಿ ಮತ್ತು ಛಾಯಚಿತ್ರವನ್ನು ನೋಡುವುದು ಅತ್ಯಂತ ಸಂತೋಷ ಮತ್ತು ತೃಪ್ತಿದಾಯಕವಾದುದು. ಅದಷ್ಟೇ ಅಲ್ಲ ಕಾಲೇಜಿನ ಮತ್ತು ಸಮಾಜದ ದೃಷ್ಟಿಯಿಂದ ಮಹತ್ವವಾದದ್ದೂ ಕೂಡ. ಇದರಿಂದ ಕಾಲೇಜು ಸಮಾಜದೊಂದಿಗೆ ನೇರ ಸಂಪರ್ಕ ಸಾಧಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ನಮ್ಮ ಸಾಧನೆಗಳನ್ನು, ಘಟನೆಗಳನ್ನು, ಕಾರ್ಯಕ್ರಮಗಳನ್ನು, ಸಮಾಜದೊಂದಿಗೆ ಹಂಚಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ. ಅಧ್ಯಾಪಕರ, ಅಧ್ಯಾಪಕೇತರರ, ವಿದ್ಯಾರ್ಥಿಗಳ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಂಸ್ಕೃತಿಕೇತರ ಸಾಧನೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಈ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಡಿಜಿಟಲ್ ರೂಪದಲ್ಲಿ ಸಂಕಲಿಸಿ ಅದನ್ನು ಪುಸ್ತಕ ರೂಪದಲ್ಲಿ ತಂದು ದಾಖಲಿಸಿ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಎಂಬ ಶೀರ್ಷಿಕೆಯೊಂದಿಗೆ ಕೃತಿ ರೂಪ ತಾಳಿದೆ. ಈ ಕೃತಿ ನಮ್ಮ ಕಾಲೇಜಿನ ಇತಿಹಾಸದ ಮೈಲಿಗಲ್ಲು. ಮುಂದಿನವರಿಗೆ ಮಾಹಿತಿಯ ಮೂಲವೂ ಆಗಿದೆ. ಪ್ರತಿದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ನಮ್ಮ ಗ್ರಂಥಾಲಯ ವಿಭಾಗ ಅತ್ಯಂತ ಬದ್ಧತೆಯಿಂದ ನಿರ್ವಹಿಸಿಕೊಂಡು ಬರುತ್ತಿದೆ.

ಮುಖ್ಯ ಗ್ರಂಥಪಾಲಕಿಯಾದ ಶ್ರೀಮತಿ ವೀಣಾ ಎಂ ಅವರಿಂದ ಗ್ರಂಥಾಲಯಕ್ಕೆ ಹೊಸ ಚೈತನ್ಯ ಬಂದಿದೆ. ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಗ್ರಂಥಾಲಯದೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಲೈಬ್ರರಿ ಕೇವಲ ಪುಸ್ತಕ ಸಂಗ್ರಹಿಸುವ ಕೇಂದ್ರವಾಗಿಲ್ಲ. ಸರಸ್ವತಿಯ ಮಂದಿರವಾಗಿದೆ. ಈ ಮಂದಿರಕ್ಕೆ ಗೌರವ ತರುವ ರೀತಿಯಲ್ಲಿ ಶ್ರೀ ಮಹೇಶ್ ಎಂ ಮತ್ತು ಶ್ರೀಮತಿ ಪುಷ್ಪ ಎಲ್ ಅವರು ಸಂಕಲ್ಪ ಸಿದ್ಧರಾಗಿ ದುಡಿಯುತ್ತಿದ್ದಾರೆ. ಗ್ರಂಥಾಲಯ ವಿಭಾಗದ ಎಲ್ಲಾ ಸದಸ್ಯರು ಇವರೊಂದಿಗೆ ಕೈ ಜೋಡಿಸಿ ಮುನ್ನಡೆಸುತ್ತಿದ್ದಾರೆ. ಈ ದುಡಿಮೆಯ ಫಲ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಸಂಪುಟಗಳು ಹೊರಬಂದಿವೆ. ಇವರೆಲ್ಲರಿಗೂ ವಿಶೇಷ ಅಭಿನಂದನೆಗಳು. ಈ ಕೃತಿಗಾಗಿ ಪರಿಶ್ರಮದಿಂದ ಕಾರ್ಯನಿರ್ವಹಿಸಿದ ಅಧ್ಯಾಪಕರು, ಅಧ್ಯಾಪಕೇತರರಿಗೆ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಕಾಲೇಜಿನ ಇತಿಹಾಸ ಹಸಿರಾಗಿ ಉಳಿಯಬೇಕಾದರೆ ಈ ಕೆಲಸ ನಿರಂತರವಾಗಿ ಸಾಗಲೆಂದು ಆಶಿಸುತ್ತೇನೆ.

(ಡಾ. ಬಿ.ಆರ್ ಜಯಕುಮಾರಿ)

ದಿನಾಂಕ: 30–06–2025

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 25 ಜುಲೈ 2024

ಮಹಾಜನ ಕಾಲೇಜಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಏರ್ಪಡಿಸಲಾಗಿತ್ತು.

ಮೈಸೂರು,ಜು.24–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಏರ್ಪಡಿಸಲಾಗಿತ್ತು. 1982ರಿಂದ 2024ರವರೆಗೆ ಕಾಲೇಜಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದು ದೇಶದ ವಿವಿಧೆಡೆಗಳಲ್ಲಿ ನೆಲೆಸಿರುವ ಹಲವಾರು ಹಿರಿಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಹಿರಿಯ ವಿದ್ಯಾರ್ಥಿಗಳ ಸಂಘವು ಈ ವೇಳೆ ಆಟೋಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಶ್ರೀಮತಿ ರಾಧಿಕಾರಾಣಿ, ಉಪಾಧ್ಯಕ್ಷ ನಾಗೇಶ, ಕಾರ್ಯದರ್ಶಿ ರೋಷನ್, ಜಂಟಿ ಕಾರ್ಯದರ್ಶಿ ಶ್ರೀಮತಿ ಸ್ಮಿತಾ ಗ್ರೇಸ್, ಖಜಾಂಚಿ ಶ್ರೀಮತಿ ಸಹನಶ್ರೀ ಹಾಗೂ ಸದಸ್ಯರು ಹಾಜರಿದ್ದರು.

MFGE In the Eyes of the Press.....

THE TIMES OF INDIA

Wednesday, July 31, 2024

MAHAJANA EDUCATION SOCIETY (REGD.)
SBRR Mahajana First Grade College
(Autonomous)
Affiliated to the University of Mysore &
Re-accredited by NAAC with 'A' Grade College with Potential for Excellence
Jayalakshmipuram, Mysuru – 570 012

REQUIRES FACULTY MEMBERS

ASSOCIATE PROFESSOR
Bachelor of Commerce (B.Com)
Qualification: M.Com., Ph.D. with Minimum 10 years of experience in degree college

ASSISTANT PROFESSOR
Bachelor of Computer Applications (BCA)
Qualification: M.Sc. Computer Science/ MCA/ M.Tech. with a minimum of 55% aggregate marks

Eligible candidates may mail their updated bio-data to the **principal.fgc@mahajana.edu.in** within 7 days.

For more details contact 0821-2512065, 91132 93595.

Sd/- (Dr. B.R.Jayakumari) Principal
Sd/- (Dr. T. Vijayalakshmi Muralidhar) Hon. Secretary
Sd/- (Sri. T. Muralidhar Bhagavat) President



ವಿಜಯವಾಣಿ

ಕನ್ನಡಿಗರ ಧ್ವನಿ

ಬುಧವಾರ 31 ಜುಲೈ 2024
31 JULY 2024

MAHAJANA EDUCATION SOCIETY (REGD.)

SBRR Mahajana First Grade College

(Autonomous)

Affiliated to the University of Mysore &
Re-accredited by NAAC with 'A' Grade College with Potential for Excellence
Jayalakshmipuram, Mysuru – 570 012

REQUIRES FACULTY MEMBERS

ASSOCIATE PROFESSOR

Bachelor of Commerce (B.Com)

Qualification: M.Com., Ph.D. with Minimum 10 years of experience in degree college

ASSISTANT PROFESSOR

Bachelor of Computer Applications (BCA)

Qualification: M.Sc. Computer Science/ MCA/ M.Tech. with a minimum of 55% aggregate marks

Eligible candidates may mail their updated bio-data to the **principal.fgc@mahajana.edu.in** within 7 days.

For more details contact 0821-2512065, 91132 93595.

Sd/-	Sd/-	Sd/-
(Dr. B.R.Jayakumari)	(Dr. T. Vijayalakshmi Muralidhar)	(Sri. T. Muralidhar Bhagavat)
Principal	Hon. Secretary	President

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 21.07.2024

ಬದ್ಧತೆ, ಸಮರ್ಪಣೆಯೊಂದಿಗೆ ಸದಾ ಸೇವೆ ಸಲ್ಲಿಸಿ

ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪರಿಷತ್‌ನ ಮಾಜಿ ಉಪಾಧ್ಯಕ್ಷ ಪ್ರೊ.ಬಿ. ತಿಮ್ಮೇಗೌಡ ಸಲಹೆ | ಪದವಿ ಪ್ರದಾನ ಸಮಾರಂಭ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಮೈಸೂರು

ನಿಮ್ಮಓದು ನಿಮ್ಮ ಸ್ವಾರ್ಥಕ್ಕಾಗಿ ಮಾತ್ರವಲ್ಲ, ಸಮಾಜಕ್ಕೆ ಸಂಪೂರ್ಣ ಬದ್ಧತೆ ಮತ್ತು ಸಮರ್ಪಣೆಯೊಂದಿಗೆ ಸೇವೆ ಸಲ್ಲಿಸಬೇಕು ಎಂದು ವಿಶ್ರಾಂತ ಕುಲಪತಿ ಮತ್ತು ಉನ್ನತ ಶಿಕ್ಷಣ ಪರಿಷತ್ ನ ಮಾಜಿ ಉಪಾಧ್ಯಕ್ಷ ಪ್ರೊ.ಬಿ. ತಿಮ್ಮೇಗೌಡ ಹೇಳಿದರು.

ನಗರದ ಮಹಾಜನ ವಿದ್ಯಾಸಂಸ್ಥೆಯ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಆಯೋಜಿಸಿದ್ದ 2002-23ನೇ ಶೈಕ್ಷಣಿಕ ಸಾಲಿನ 3ನೇ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಮತ್ತು ಶೈಕ್ಷಣಿಕವಾಗಿ ಉನ್ನತ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಂಸಾ ಪ್ರಮಾಣ ಪತ್ರ ನೀಡಿ ಗೌರವಿಸುವ ಮಹತ್ವಪೂರ್ಣ ದಿನ. ಯುವ ಪದವೀಧರರು ತಮ್ಮ ಪದವಿಗಳು, ಪದಕಗಳು ಮತ್ತು ಪ್ರಶಸ್ತಿ ಪಡೆಯುವುದನ್ನು ನೋಡಲು ನನಗೆ ತುಂಬಾ ಸಂತೋಷವಾಗಿದೆ ಎಂದರು.

ಎಲ್ಲಾ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರನ್ನು ಅಭಿನಂದಿಸಿ ಮಾತನಾಡಿ, ನಿಮ್ಮ ಪರಿಶ್ರಮದಿಂದ ಕೂಡಿದ ಯಶಸ್ಸಿಗೆ ಪದವಿ ಪಡೆಯಲು ಕಾರಣರ್ಕರಾದ ಮಹಾಜನ ವಿದ್ಯಾಸಂಸ್ಥೆಯು ಸ್ವಾತಂತ್ರ್ಯ ಪೂರ್ವದಲ್ಲಿ ಆಂಬಳೆ ಸುಬ್ರಹ್ಮಣ್ಯ, ರಟ್ಟೆಹಳ್ಳಿ ರಾಮಪ್ಪ ಮತ್ತು ಇತರ



ಮೈಸೂರಿನ ಮಹಾಜನ ಕಾಲೇಜಿನಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ನೂರಾರು ಮಂದಿಗೆ ಪದವಿ ಪ್ರದಾನ ಮಾಡಲಾಯಿತು. ಪ್ರೊ.ಬಿ. ತಿಮ್ಮೇಗೌಡ, ಪ್ರೊ.ಎಸ್.ಕೆ. ಲೋಕನಾಥ್, ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ, ಮುರಳೀಧರ್ ಮೊದಲಾದವರು ಇದ್ದಾರೆ.

ದಾರ್ಶನಿಕ ಸಮಾಜ ಸೇವಾಸ್ಥರಿಂದ ಸ್ಥಾಪಿತವಾಗಿ, ಇಂದು ಉನ್ನತ ಶಿಕ್ಷಣದವರೆಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಾಡಿನ ಪ್ರಶಿಷ್ಟಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ ಎಂದರು.

ಮಹಾಜನ ಆಡಳಿತ ಮಂಡಳಿ ಮತ್ತು ಮಹಾಜನ ಪ್ರಥಮ ದರ್ಜೆಕಾಲೇಜು ಹಾಗೂ ಸ್ನಾತಕೋತ್ತರ ಪದವಿ ಕಾಲೇಜಿನ ನುರಿತ ಅಧ್ಯಾಪಕ ವೃಂದದವರಿಗೂ, ಪೋಷಕರಿಗೂ ಹಾಗೂ ಸಿಬ್ಬಂದಿ ವರ್ಗದವರನ್ನೂ ಅಭಿನಂದಿಸಿದರು.

ಪ್ರಾಚೀನ ಭಾರತದಲ್ಲಿ ಶಿಕ್ಷಣದ ಗುರಿಯು, ಈ ಜಗತ್ತಿನಲ್ಲಿ ಜೀವನಕ್ಕಾಗಿ ಅಥವಾ ಶಾಲಾ ಕಾಲೇಜಿನ ಶಿಕ್ಷಣವನ್ನು ಮೀರಿದ ಜೀವನಕ್ಕೆ ಸಿದ್ಧತೆಯಾಗಿ ಜ್ಞಾನವನ್ನು ಸಂಪಾದಿಸುವುದು ಮಾತ್ರವಲ್ಲ, ಸಂಪೂರ್ಣ ಸಾಕ್ಷಾತ್ಕಾರ ಮತ್ತು ಸ್ವಯಂ ವಿಮೋಚನೆಗೂ ಪೂರಕವಾಗಿತ್ತು. ಪ್ರಾಚೀನ ಭಾರತವು ತಕ್ಷಶಿಲಾ ಮತ್ತು ನಳಂದದಂತಹ ವಿಶ್ವಮಟ್ಟದ ಸಂಸ್ಥೆಗಳನ್ನು ಹೊಂದಿತ್ತು ಎಂದರು.

ಭಾರತೀಯ ಶಿಕ್ಷಣ ವ್ಯವಸ್ಥೆಯು ಚಾಣಕ್ಯ, ಚರಕ, ಸುಶ್ರುತ, ಆರ್ಯಭಟ್ಟ, ಭಾಸ್ಕರ, ಪತಂಜಲಿಯಿಂದ ವಿವೇಕಾನಂದ, ಬುದ್ಧ, ಬಸವ, ಅಂಬೇಡ್ಕರ್‌ವರೆಗಿನ ಅಭಿನಂದಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಒಂದು ಹಂತವಾದರೆ ಇನ್ನು ಮುಂದೆ ನೀವು ಅಷ್ಟಕ್ಕೆ ಮಾತ್ರ ಸೀಮಿತವಾಗದೆ ಹೊಸ ಬದುಕಿಗೆ ಮುಖಾ-ಮುಖಿಯಾಗಬೇಕಿದೆ. ಇದುವರೆಗಿನ ಓದು ನಿಮ್ಮ ವ್ಯಕ್ತಿತ್ವವನ್ನು ಬದಲಾಯಿಸಿ, ಅದರ ಮೂಲಕ ಬದುಕಿನ ಸವಾಲನ್ನು ಎದುರಿಸಲು ನಿಮ್ಮನ್ನು ಸಿದ್ಧಗೊಳಿಸಿದೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ, ಮುರಳೀಧರ್ ಅವರು ಪದವಿ ಪಡೆದ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಒಟ್ಟು03 ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. 125 ವಿದ್ಯಾರ್ಥಿಗಳು ಉನ್ನತ ಶ್ರೇಣಿ (ಅಣಟಛಿಣಟ)ಹೊಂದಿದ್ದು 227 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 40 ವಿದ್ಯಾರ್ಥಿಗಳು ಪದಕಗೊಂದಿಗೆ ನಗದು ಬಹುಮಾನ ಪಡೆದಿದ್ದಾರೆ. 18 ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆದಿದ್ದಾರೆ.

ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಬಿ.ಎಸ್. ರವಿಕುಮಾರ್‌ಅಧ್ಯಕ್ಷತೆ ವಹಿಸಿದ್ದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಸ್ವಾಗತಿಸಿದರು. ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ವ್ಯವಹಾರ ನಿರ್ವಹಣಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಎನ್. ಸುನಿಲ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ವಂದಿಸಿದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಜುಲೈ 21, 2024

ಮಹಾಜನ ಕಾಲೇಜು: ಪದವಿ ಪ್ರದಾನ ಸಮಾರಂಭ

'ಉನ್ನತ ಶಿಕ್ಷಣಕ್ಕೆ ಆದ್ಯತೆ ಸಿಗಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪದವಿ ಎನ್ನುವುದು ವೃತ್ತಿ ಬದುಕಿನ ಆರಂಭಕ್ಕೆ ಇರುವ ಕೀಲಿಕೈ. ಕೌಶಲ ವೃದ್ಧಿಯ ಜೊತೆಗೆ ಉನ್ನತ ಶಿಕ್ಷಣಕ್ಕೂ ಯುವಜನರು ಆದ್ಯತೆ ನೀಡಬೇಕು' ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾಜಿ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ ಸಲಹೆ ನೀಡಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ 2022-23ನೇ ಸಾಲಿನ ಪದವೀಧರರಿಗೆ ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಕೇವಲ ಪದವಿಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳಬಾರದು. ಸ್ನಾತಕೋತ್ತರ ಪದವಿ, ಪಿಎಚ್‌ಡಿಗೂ ಆದ್ಯತೆ ನೀಡಬೇಕು. ತಮ್ಮ ಕ್ಷೇತ್ರದಲ್ಲಿ ನೈಪುಣ್ಯತೆ ಸಾಧಿಸಬೇಕು ಎಂದು ಕಿವಿಮಾತು ಹೇಳಿದರು.

ನಮ್ಮ ದೇಶದಲ್ಲಿ ಮಾನ್ಯತೆ ಆಧಾರದ ಶಿಕ್ಷಣ ವ್ಯವಸ್ಥೆ ಇದ್ದು, ವಿ.ವಿ ಗಳು ಅದನ್ನು ನಿರ್ಧರಿಸುತ್ತಿವೆ. ಆದರೆ ವಿದೇಶಗಳಲ್ಲಿ ಆಯಾ ಶಿಕ್ಷಣ ಸಂಸ್ಥೆಗಳೇ ಪದವಿ ಪ್ರದಾನ ಅಧಿಕಾರ ಹೊಂದಿವೆ. ಈಗ ನಮ್ಮಲ್ಲೂ ಎನ್‌ಇಪಿ ಅಡಿ ಈ ರೀತಿಯ ವ್ಯವಸ್ಥೆ ಪ್ರಸ್ತಾಪಿಸಲಾಗಿದೆ. ಇದರಿಂದ ಡೀಮ್ಡ್ ವಿ.ವಿ ಗಳ ಸಂಖ್ಯೆ ಹೆಚ್ಚಾಗಲಿದೆ. ಇಂತಹ ವಿ.ವಿ ಗಳನ್ನು ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ನಿಯಂತ್ರಿಸಲಿದೆ. ಮಹಾಜನ ಸಂಸ್ಥೆ ಸಹ ಡೀಮ್ಡ್ ವಿ.ವಿ ಆಗುವ ಎಲ್ಲ ಅವಕಾಶ ಹೊಂದಿದೆ ಎಂದು ವಿವರಿಸಿದರು.

ಮೈಸೂರು ವಿ.ವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ 'ಶಿಕ್ಷಣ ಎನ್ನುವುದು ನಿಮ್ಮ ವ್ಯಕ್ತಿತ್ವ ರೂಪಿಸುವ ಸಾಧನ. ಕಲಿಕೆಯ ವೇಳೆ ಉತ್ತಮ ಮೌಲ್ಯ ಬೆಳೆಸಿಕೊಳ್ಳಿ. ಇವತ್ತಿನ ಜಾಗತಿಕ ಕಾಲದ ತಂತ್ರಜ್ಞಾನಕ್ಕೆ ತಕ್ಕಂತೆ ನಿರಂತರ ಕಲಿಕೆ ಬೆಳೆಸಿಕೊಳ್ಳಿ. ಉನ್ನತ ಶಿಕ್ಷಣದಲ್ಲಿ ಇನ್ನಷ್ಟು ಸಾಧನೆ ಮಾಡಿದರೆ ಅವಕಾಶಗಳು ಹೆಚ್ಚಲಿವೆ. ಅದಕ್ಕಾಗಿ ಕಠಿಣ ಶ್ರಮ ಹಾಗೂ ಪ್ರಾಮಾಣಿಕ ಪ್ರಯತ್ನ ಅಗತ್ಯ' ಎಂದು ಸಲಹೆ ನೀಡಿದರು.

ಮಹಾಜನ ವಿದ್ಯಾ ಸಂಸ್ಥೆ ಉಪಾಧ್ಯಕ್ಷ ಡಿ.ಎನ್.ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರಳೀಧರ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಸಿ.ಕೆ.ರೇಣುಕಾರ್ಯ, ಪ್ರಾಚಾರ್ಯೆ ಬಿ.ಆರ್.ವಿಜಯಕುಮಾರಿ, ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ, ಡೀನ್ ಎಚ್.ಶ್ರೀಧರ ಇದ್ದರು.



ಮಹಾಜನ ಕಾಲೇಜಿನಲ್ಲಿ ಶನಿವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳೊಂದಿಗೆ ಎಚ್. ಶ್ರೀಧರ, ಸಿ.ಕೆ.ರೇಣುಕಾರ್ಯ, ಡಿ.ಎನ್.ರವಿಕುಮಾರ್, ಪ್ರೊ.ಬಿ.ತಿಮ್ಮೇಗೌಡ, ಪ್ರೊ.ಎನ್.ಕೆ.ಲೋಕನಾಥ, ಟಿ.ವಿಜಯಲಕ್ಷ್ಮಿ ಮುರಳೀಧರ್, ಬಿ.ಆರ್.ವಿಜಯಕುಮಾರಿ ಹಾಗೂ ಶ್ರುತಿ ಪೂಣಚ್ಚ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

40 ಮಂದಿಗೆ ಚಿನ್ನದ ಪದಕ

2022-23ನೇ ಸಾಲಿನಲ್ಲಿ ಸ್ನಾತಕ ವಿಭಾಗದಲ್ಲಿ ವಿವಿಧ ವಿಷಯಗಳಲ್ಲಿ 503 ಮಂದಿಗೆ ಕಾರ್ಯಕ್ರಮದಲ್ಲಿ ಪದವಿ ಪ್ರದಾನ ಮಾಡಲಾಯಿತು. ಒಟ್ಟು 40 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಪುರಸ್ಕಾರವನ್ನೂ ತಮ್ಮದಾಗಿಸಿಕೊಂಡರು.

ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಕೇಂದ್ರದಲ್ಲಿ 10 ವಿಷಯಗಳಲ್ಲಿ 461 ವಿದ್ಯಾರ್ಥಿಗಳು ಪದವಿ ಪಡೆದರು. ಇವರಲ್ಲಿ 18 ಮಂದಿ ಚಿನ್ನದ ಪದಕದೊಂದಿಗೆ ನಗದು ಪುರಸ್ಕಾರ ಹಾಗೂ 4 ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನವನ್ನು ಪಡೆದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹಮ್ಮ
ಭಾನುವಾರ,21 ಜುಲೈ 2024

ಪರಿಪೂರ್ಣ ವ್ಯಕ್ತಿತ್ವ ರೂಪುಗೊಳ್ಳಲು ಶಿಕ್ಷಣ ಅಗತ್ಯ

■ **ವಿಕ ಸುದ್ದಿಲೋಕ** ಮೈಸೂರು

ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಶಿಕ್ಷಣವು ಅತ್ಯಗತ್ಯವಾಗಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ತಿಮ್ಮೇಗೌಡ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶನಿವಾರ ನಡೆದ ಪದವೀಧರ ದಿನಾಚರಣೆಯಲ್ಲಿ ಮಾತನಾಡಿದರು.

''ವ್ಯಕ್ತಿ, ಸಮಾಜ, ದೇಶ ಮತ್ತು ಪ್ರಪಂಚದ ಒಳಿತಿಗಾಗಿ ಶಿಕ್ಷಣ ಮುಖ್ಯವಾಗಿದೆ. ದೇಶವನ್ನು ಅಭಿವೃದ್ಧಿ ಪಡಿಸಲು ಉನ್ನತ ಗುಣಮಟ್ಟದ ಶಿಕ್ಷಣವು ಉತ್ತಮ ಮಾರ್ಗವಾಗಿದೆ,'' ಎಂದು ಹೇಳಿದರು.

''ವಿದ್ಯಾರ್ಥಿಗಳು ತಮ್ಮ ಮಿತಿಗಳನ್ನು ದಾಟಿದರೆ, ವೃತ್ತಿಪರ ಮತ್ತು ಖಾಸಗಿ ಜೀವನ ಎರಡೂ ನಾಶವಾಗುತ್ತವೆ. ಹಾಗಾಗಿ ಭವಿಷ್ಯವನ್ನು ಆತ್ಮವಿಶ್ವಾಸ ಮತ್ತು ಸ್ವ ಸಾಮರ್ಥ್ಯದಿಂದ ನಿಭಾಯಿಸಬೇಕು,'' ಎಂದರು.

ಮೈಸೂರು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಮಾತನಾಡಿ, ''ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಹಂತದಲ್ಲಿ ಕಲಿತ ಜೀವನಮೌಲ್ಯಗಳನ್ನು ಮರೆಯದೆ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು,'' ಎಂದರು.

''ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಾಂತ್ರಿಕ ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಇರುವುದರಿಂದ ವಿದ್ಯಾರ್ಥಿಗಳು ಅದರಲ್ಲೂ ನೈಪುಣ್ಯತೆಯನ್ನು ಪಡೆಯಬೇಕಾಗಿದೆ,'' ಎಂದು ಸಲಹೆ ನೀಡಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ. ಬಿ.ಆರ್.ಜಯಕುಮಾರಿ, ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ , ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಇಒ ಡಾ.ಎಸ್. ಆರ್.ರಮೇಶ್, ಡೀನ್ ಡಾ.ಎಚ್.ಶ್ರೀಧರ್ ಇದ್ದರು.

ವಿಶ್ರಾಂತ ಕುಲಪತಿ ಪ್ರೊ.ಬಿ.ತಿಮ್ಮೇಗೌಡ ಹೇಳಿಕೆ



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ಪದವೀಧರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಭಾನುವಾರ 21 ಜುಲೈ 2024
21 JULY 2024

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹೇಳಿಕೆ

ಪ್ರಾಮಾಣಿಕತೆ ರೂಢಿಸಿಕೊಂಡರೆ ಜೀವನದಲ್ಲಿ ಯಶಸ್ಸು ಸಾಧ್ಯ

■ ವಿಜಯವಾಣಿ ಸುದ್ದಿಜಾಲ ಮೈಸೂರು

ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಹಂತದಲ್ಲಿ ಕಲಿತ ಜೀವನ ಮೌಲ್ಯಗಳನ್ನು ಮರೆಯದೆ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶನಿವಾರ ನಡೆದ ಪದವೀಧರ ದಿನಾಚರಣೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಹಾಗೂ ಪ್ರಶಂಸನೀಯ ಪ್ರಮಾಣ ಪತ್ರಗಳನ್ನು ನೀಡಿ ಅವರು ಮಾತನಾಡಿದರು. ಇಂದು ತಾಂತ್ರಿಕಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಇರುವುದರಿಂದ ವಿದ್ಯಾರ್ಥಿಗಳು ಅದರಲ್ಲೂ ನೈಪುಣ್ಯತೆಯನ್ನು ಪಡೆಯಬೇಕಾಗಿದೆ. ಮುಂದಿನ ದಿನಗಳಲ್ಲಿ ಪರಿಶ್ರಮ, ಸ್ವಯಂ ಅಧ್ಯಯನ, ಪ್ರಾಮಾಣಿಕತೆ, ಸಕಾರಾತ್ಮಕ ಮನೋಭಾವಗಳನ್ನು ಬೆಳೆಸಿಕೊಂಡರೆ ಜೀವನದಲ್ಲಿ ಯಶಸ್ಸನ್ನು ಸಾಧಿಸಬಹುದು ಎಂದರು.

ವಿಶ್ರಾಂತ ಕುಲಪತಿ ಪ್ರೊ.ಬಿ.ತಿಮ್ಮೇಗೌಡ ಮಾತನಾಡಿ, ದೇಶದ ಶ್ರೀಮಂತ ಪ್ರತಿಭೆ ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಉನ್ನತ ಗುಣಮಟ್ಟದ



ವಿಜಯವಾಣಿ ಚಿತ್ರ

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶನಿವಾರ ಪದವೀಧರ ದಿನ ನೆರವೇರಿತು. ಪ್ರೊ.ಎನ್.ಕೆ. ಲೋಕನಾಥ್, ಪ್ರೊ. ಬಿ. ತಿಮ್ಮೇಗೌಡ, ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಡಾ. ಬಿ.ಆರ್.ಜಯಕುಮಾರಿ ಇದ್ದರು.

ಶಿಕ್ಷಣವು ಉತ್ತಮ ಮಾರ್ಗವಾಗಿದೆ. ಭಾರತೀಯ ಶಿಕ್ಷಣ ವ್ಯವಸ್ಥೆಯು ಚಾಣಕ್ಯ, ಚರಕ, ಶುಶ್ರುತ, ಆರ್ಯಭಟ ಭಾಸ್ಕರ, ಪತಂಜಲಿ, ವಿವೇಕಾನಂದ, ಬುದ್ಧ, ಬಸವ, ಅಂಬೇಡ್ಕರ್ ಮೊದಲಾದ ದಾರ್ಶನಿಕರನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿದೆ. ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಶಿಕ್ಷಣವು ಮೂಲಭೂತವಾಗಿದೆ. ಆದ್ದರಿಂದ ವ್ಯಕ್ತಿ, ಸಮಾಜ, ದೇಶ ಮತ್ತು ಪ್ರಪಂಚದ ಒಳಿತಿಗಾಗಿ ಶಿಕ್ಷಣ ಮುಖ್ಯ ಎಂದರು. ಮೌಲ್ಯಗಳನ್ನು ಕಳೆದುಕೊಳ್ಳುವ ಶಿಕ್ಷಣವು ಅರ್ಥಹೀನ ಮತ್ತು ಪ್ರಚಾರಕ್ಕೆ ಯೋಗ್ಯವಲ್ಲ. ಆದ್ದರಿಂದ ವಿದ್ಯಾರ್ಥಿಗಳು ವೃತ್ತಿ ಜೀವನವನ್ನು ರೂಪಿಸಿಕೊಳ್ಳುವಾಗ ಯಾವಾಗಲೂ ಸನ್ಮಾರ್ಗದಲ್ಲಿ ನಡೆಯಬೇಕು. ವಿದ್ಯಾರ್ಥಿಗಳು ತಮ್ಮ ಮಿತಿಗಳನ್ನು ದಾಟಿದರೆ, ವೃತ್ತಿಪರ ಮತ್ತು ಖಾಸಗಿ ಜೀವನ ಎರಡೂ ನಾಶವಾಗುತ್ತವೆ. ಹಾಗಾಗಿ, ಭವಿಷ್ಯವನ್ನು ಆತ್ಮವಿಶ್ವಾಸ ಮತ್ತು ಸ್ವ-ಸಾಮರ್ಥ್ಯದಿಂದ ನಿಭಾಯಿಸ ಬೇಕು. ಅದಕ್ಕಾಗಿ ಯಾವಾಗಲೂ ಒಳ್ಳೆಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬೇಕು. ಓದು ಸ್ವಾರ್ಥಕ್ಕಾಗಿ ಮಾತ್ರವಲ್ಲ, ಸಮಾಜಕ್ಕೆ ಸಂಪೂರ್ಣ ಬದ್ಧತೆ ಮತ್ತು ಸಮರ್ಪಣೆಯೊಂದಿಗೆ ಸೇವೆ ಸಲ್ಲಿಸಲು ಬಳಕೆಯಾಗ ಬೇಕು. ಉದ್ಯೋಗ ಕ್ಷೇತ್ರದಲ್ಲೂ ಜಗತ್ತು ಬದಲಾವಣೆಗೆ ಒಳಗಾಗುತ್ತಿದೆ. ಸಮಗ್ರ ಮಾಹಿತಿ, ತಂತ್ರಜ್ಞಾನ, ಕೃತಕ ಬುದ್ಧಿ ಮತ್ತೆಯಂತಹ ವಿವಿಧ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯೊಂದಿಗೆ ಪ್ರಪಂಚದಾದ್ಯಂತ ಅನೇಕ ಕೌಶಲರಹಿತ ಉದ್ಯೋಗಗಳು ಯಂತ್ರಗಳಿಂದ ಆಕ್ರಮಿಸಿ ಕೊಂಡಿವೆ. ಆದರೆ, ಇದೇ ಸಮಯದಲ್ಲಿ ನುರಿತ ತಂತ್ರಜ್ಞರಿಗೂ ಹೆಚ್ಚಿನ ಬೇಡಿಕೆ ಇದೆ. ಆದ್ದರಿಂದ ವಿದ್ಯಾರ್ಥಿಗಳು ಗಣಿತ, ಕಂಪ್ಯೂಟರ್ ವಿಜ್ಞಾನ, ದತ್ತಾಂಶ ವಿಜ್ಞಾನ, ಸಾಮಾಜಿಕ ವಿಜ್ಞಾನ, ಮಾನವಿಕ ಸೇರಿದಂತೆ ಬಹು ಶಿಸ್ತಿನ ಸಾಮರ್ಥ್ಯಗಳನ್ನು ಪಡೆದು ಕೊಳ್ಳಬೇಕಾಗಿದೆ ಎಂದು ಅಭಿಪ್ರಾಯ ಪಟ್ಟರು. ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲ ಡಾ. ಬಿ.ಆರ್.ಜಯಕುಮಾರ್ ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ , ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಸಿ.ಕೆ.ರೇಣುಕಾಚಾರ್ಯ, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಇಒ ಡಾ.ಎಸ್.ಆರ್. ರಮೇಶ್, ಡೀನ್ ಡಾ.ಎಚ್.ಶ್ರೀಧರ್ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 28.07.2024

ಮಹಾಜನ ಕಾಲೇಜಿನಲ್ಲಿ 25ನೇ ವರ್ಷದ ಕಾರ್ಗಿಲ್ ವಿಜಯ ದಿವಸ ಆಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 25ನೇ ವರ್ಷದ ಕಾರ್ಗಿಲ್ ವಿಜಯ ದಿವಸ ಅಂಗವಾಗಿ ಸ್ವಾಮಿ ವಿವೇಕಾನಂದ ಹಾಲ್ ನಲ್ಲಿ ಹುತಾತ್ಮರಿಗೆ ಗೌರವ ಸಮರ್ಪಿಸಲಾಯಿತು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಎನ್.ಸಿ.ಸಿ ಅಧಿಕಾರಿ ಕ್ಯಾಪ್ಟನ್ ಡಾ.ಎಂ.ಆರ್.ಇಂದ್ರಾಣಿ, ಪ್ಲೇಯಿಂಗ್ ಆಫೀಸರ್ ಡಾ.ಪಿ.ಜಿ.ಪುಷ್ಪರಾಣಿ, ಕನ್ನಡವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಐಕ್ಯೂ ಎಸಿ ಅಂಡ್ ನ್ಯಾಕ್ ಸಂಚಾಲಕಿ ಡಿ.ಗೀತಾ, ಪಿರ್ಆಓ ಪೂರ್ಣಿಮಾ, ಹವಾಲ್ ದಾರ್ ಗಳಾದ ಸಂಜಯ್ ಕುಮಾರ್, ಸಂಜೋಯ್ ಕುಮಾರ್, 40 ಎನ್.ಸಿ.ಸಿ ಕ್ಯಾಡೆಟ್ಸ್, 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 29 ಜುಲೈ 2024

ಮಹಾಜನ ಕಾಲೇಜಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಣೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 25ನೇ ವರ್ಷದ ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಹುತಾತ್ಮರಿಗೆ ಗೌರವ ಸಮರ್ಪಿಸಲಾಯಿತು.

ಮೈಸೂರು, ಜು. 28– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 25ನೇ ವರ್ಷದ ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಸ್ವಾಮಿ ವಿವೇಕಾನಂದ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಹುತಾತ್ಮರಿಗೆ ಗೌರವ ಸಮರ್ಪಿಸಲಾಯಿತು. ಕಾರ್ಯಕ್ರಮದಲ್ಲಿ ಸುಮಾರು 40 ಎನ್‌ಸಿಸಿ ಕೆಡೆಟ್ಸ್ ಹಾಗೂ 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಎನ್‌ಸಿಸಿ ಆಫೀಸರ್ ಕ್ಯಾಪ್ಟನ್ ಡಾ. ಇಂದ್ರಾಣಿ ಎಂ.ಆರ್., ಪ್ಲೇಯಿಂಗ್ ಆಫೀಸರ್ ಡಾ. ಪುಷ್ಪರಾಣಿ ಪಿ.ಜಿ., ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಐಕ್ಯೂಎಸಿ ಅಂಡ್ ನ್ಯಾಕ್ ಸಂಚಾಲಕರಾದ ಶ್ರೀಮತಿ ಗೀತಾ, ಪಿಆರ್‌ಓ ಶ್ರೀಮತಿ ಪೂರ್ಣಿಮಾ, ಅವಾಲ್‌ದಾರ್ ಸಂಜಯ್‌ಕುಮಾರ್, ಅವಾಲ್‌ದಾರ್ ಸಂಜೋಯ್‌ಕುಮಾರ್ ಒನ್ ಕರ್ನಾಟಕ ಆರ್‌ಟಿಲರಿ ಬ್ಯಾಟರಿ, ಅಧ್ಯಾಪಕ, ಅಧ್ಯಾಪಕೇತರರು ಹಾಗೂ ಎನ್‌ಸಿಸಿ ಕೆಡೆಟ್‌ಗಳು ಹಾಜರಿದ್ದರು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 27 ಜುಲೈ 2024

■ **ಮಹಾಜನ ವಿದ್ಯಾಸಂಸ್ಥೆ :** ಪೋಷಕರ ಸಮಾವೇಶ, ಉದ್ಘಾಟನೆ : ಸಾಹಿತಿ ಡಾ. ಟಿ.ಸಿ. ಪೂರ್ಣಿಮಾ, ಅಧ್ಯಕ್ಷತೆ : ಪೋಷಕರ ಸಂಘದ ಅಧ್ಯಕ್ಷ ಸಿ.ಕೆ. ರಂಗರಾಮು, ಉಪಸ್ಥಿತರು : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ ಭಾಗವತ್, ಪೋಷಕರ ಸಂಘದ ಕಾರ್ಯದರ್ಶಿ ಆರ್.ಕೆ. ಸತ್ಯಪ್ರಕಾಶ್, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 10.30ಕ್ಕೆ.

ವಿಜಯ ಕರ್ನಾಟಕ

ಶನಿವಾರ,27 ಜುಲೈ 2024

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ಪೋಷಕರ ಸಮಾವೇಶ, ಉದ್ಘಾಟನೆ- ಸಾಹಿತಿ ಡಾ.ಟಿ.ಸಿ.ಪೂರ್ಣಿಮಾ, ಅಧ್ಯಕ್ಷತೆ- ಪೋಷಕರ ಸಂಘದ ಸಿ.ಕೆ. ರಂಗರಾಮು, ವಿವೇಕಾನಂದ ಸಭಾಂಗಣ ಮಹಾಜನ ಕಾಲೇಜು , ಬೆ.10.30ಕ್ಕೆ

ಆಂದೋಲನ

ದಿನ ಪತ್ರಿಕೆ

ಸೋಮವಾರ, 12 ಆಗಸ್ಟ್ 2024



ಎಲೆಕ್ಟ್ರಿಕಲ್ ಸ್ಕೂಟರ್ ವಿತರಣೆ

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಕಾಲೇಜಿನ ಕಾರ್ಯ ಚಟುವಟಿಕೆಗಳಿಗೋಸ್ಕರ 'ಟಿವಿಎಸ್ ಐಕ್ಯೂಬ್ ಎಸ್' ಎಲೆಕ್ಟ್ರಿಕಲ್ ಸ್ಕೂಟರನ್ನು ಕೊಡುಗೆಯಾಗಿ ನೀಡಲಾಯಿತು. ಕಾಲೇಜಿನ ಪರವಾಗಿ ಪ್ರಾಂಶುಪಾಲ ರಾದ ಡಾ.ಬಿ.ಆರ್.ಜಯಕುಮಾರಿ ಅವರು ವಾರದ ಸಮಾವೇಶದಲ್ಲಿ ಸ್ಕೂಟರ್ ಸ್ವೀಕರಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 14.08.2024



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಕಾಲೇಜಿನ ಕಾರ್ಯ ಚಟುವಟಿಕೆಗಳಿಗೋಸ್ಕರ ಟಿವಿಎಸ್ ಐಕ್ಯೂಬ್ ಎಸ್. ಎಲೆಕ್ಟ್ರಿಕಲ್ ಸ್ಕೂಟರ್ ನ್ನು ಕೊಡುಗೆಯಾಗಿ ನೀಡಿದರು. ಕಾಲೇಜಿನ ಪರವಾಗಿ ಪ್ರಾಂಶುಪಾಲೆ ಡಾ.ಬಿ. ಆರ್. ಜಯಕುಮಾರಿ ವಾರದ ಸಮಾವೇಶದಲ್ಲಿ ಸ್ವೀಕರಿಸಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಮಂಗಳವಾರ 13.08.2024



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ಮತ್ತು ಬಿಎಸ್ಸಿ ವಿದ್ಯಾರ್ಥಿಗಳಿಗೆ ಎಂಸಿಎ ಪ್ರವೇಶಾತಿ ಪರೀಕ್ಷೆ, ಕೌಶಲ್ಯಾಭಿವೃದ್ಧಿಗಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಸೆಂಟರ್ಫಾರ್ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಮತ್ತು ರೊಬೋಟಿಕ್ಸ್ನ ಹಿರಿಯ ವಿಜ್ಞಾನಿ ಎಸ್. ಸಂಜಯ್ ಮಾತನಾಡಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 11.08.2024

ಹೆಚ್ಚು ಉತ್ತಮವಾದ ಆಲೋಚನೆ ಮನಸ್ಸನ್ನು ಸ್ಥಿರವಾಗಿ ಇರಿಸುತ್ತದೆ

ವಿಶೇಷ ಉಪನ್ಯಾಸದಲ್ಲಿ ಸರಸ್ವತಿಪುರಂ ಕೇಂದ್ರದ ಬ್ರಹ್ಮಕುಮಾರಿ ಮಂಜುಳಾ ಅಭಿಮತ

• ಕನ್ನಡಪ್ರಭ ವಾರ್ತೆ ಮೈಸೂರು

ಉತ್ತಮವಾದ ಆಲೋಚನೆಗಳು ಮನಸ್ಸನ್ನು ಸ್ಥಿರವಾಗಿ ಇರಿಸುತ್ತದೆ. ಅಂತಹವರು ಶಾಂತಿ ಶಾಶ್ವತವಾಗಿರಿಸಲು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ ಎಂದು ಸರಸ್ವತಿಪುರಂ ಕೇಂದ್ರದ ಬ್ರಹ್ಮಕುಮಾರಿ ಮಂಜುಳಾ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿರೋಷಿಮಾ ಮತ್ತು ನಾಗಾಸಾಕಿ ದಿನಾಚರಣೆಯ ಸ್ಮರಣಾರ್ಥವಾಗಿ ಐಕ್ಯೂಎಸಿ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಶಾಂತಿ ಮತ್ತು ತಿಳುವಳಿಕೆ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಯುವಕರಿಗಾಗಿ ಶಾಂತಿ ಉಪಕ್ರಮದ ಬಗ್ಗೆ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಮನಸ್ಸಿನಲ್ಲಿರುವ ಹಿಂಸೆಯೇ ಮಾನವನನ್ನು ರಾಕ್ಷಸನನ್ನಾಗಿ ಮಾಡುತ್ತದೆ.

ಶಾಂತಿಯ ಉಪಕ್ರಮವು ವಿಶ್ವದಲ್ಲಿ ಶಾಂತಿಯಿಂದಲೇ ಪ್ರಾರಂಭವಾಗಬೇಕು. ರಾಷ್ಟ್ರದಲ್ಲಿ ಶಾಂತಿ, ಸಮಾಜದಲ್ಲಿ ಶಾಂತಿ, ಕುಟುಂಬದಲ್ಲಿ ಶಾಂತಿ ಮತ್ತು ಜೀವನದಲ್ಲಿ ವೈಯಕ್ತಿಕ ಶಾಂತಿಯನ್ನು ಪಡೆಯಲು ಆಂತರಿಕ ಶಾಂತಿ



ಆಗತ್ಯವಿದೆ ಎಂದರು.

ನಕಾರಾತ್ಮಕ ಚಿಂತನೆಯು ಋಣಾತ್ಮಕ ಮತ್ತು ಋಣಾತ್ಮಕ ಆಲೋಚನೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ವಿಶ್ವವನ್ನು ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳಲು ಬುದ್ಧಿವಂತಿಕೆ ಮತ್ತು ಜ್ಞಾನದ ಪದವನ್ನು ಬೆಳಗಿಸುವ ಮೂಲಕ ನಿಮ್ಮ ಗುರಿಗಳು, ಉದ್ದೇಶಗಳು, ಶಾಂತಿಯುತ ಜೀವನವನ್ನು ನಡೆಸುವ ಉದ್ದೇಶವನ್ನು ಹೊಂದಿರಬೇಕು ಎಂದು ಅವರು ಯುವಕರಿಗೆ ಸಲಹೆ ನೀಡಿದರು.

ಇದೇ ವೇಳೆ ಹಿರೋಷಿಮಾ ಮತ್ತು ನಾಗಾಸಾಕಿ ಬಾಂಬ್ ದುರಂತ ಕುರಿತು ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶಾಂತಿ ಮತ್ತು ತಿಳುವಳಿಕೆ ವೇದಿಕೆಯ ಸಂಚಾಲಕಿ ಡಾ.ಎಂ.ಆರ್. ಇಂದ್ರಾಣಿ, ಹಂಸವೇಣಿ, ವಿದ್ಯಾ, ಚಂದನಾ ಮೊದಲಾದವರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 29.08.2024

ಗಣಿತ ವಿಜ್ಞಾನದಲ್ಲಿ ಉತ್ತಮ ಬೋಧನೆ

ಸಂಪನ್ಮೂಲ ವ್ಯಕ್ತಿಯಾಗಿದ್ದ ಮೈಸೂರು ವಿವಿಯ ಗಣಿತ ವಿಜ್ಞಾನ ವಿಭಾಗದ ಪ್ರೊ.ಡಾ.ಡಿ.ಎಸ್.ಗುರು ಅವರಿಂದ ಸಂವಾದ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಂಪ್ಯೂಟರ್‌ಸೈನ್ಸ್ ಮತ್ತು ಅಪ್ಲಿಕೇಶನ್ ಗಳ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗ ದೊಂದಿಗೆ ಕಂಪ್ಯೂಟರ್‌ಸೈನ್ಸ್‌ನಲ್ಲಿ ಉತ್ತಮ ಬೋಧನೆ ಮತ್ತು ಸಂಶೋಧನೆಯ ನಿರೀಕ್ಷೆಗಳ ಕುರಿತು ಸಂವಾದ ಕಾರ್ಯಕ್ರಮ ಆಯೋಜಿಸಿತ್ತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಮೈಸೂರು ವಿವಿಯ ಗಣಿತ ವಿಜ್ಞಾನ ವಿಭಾಗದ ಪ್ರೊ. ಫೆಸರ್ ಡಾ.ಡಿ.ಎಸ್. ಗುರು ಮಾತನಾಡಿ, ಸಮಯ ಮತ್ತು ಜಾಗದ ಸಂಕೀರ್ಣತೆಯನ್ನು ನಿರ್ವಹಿಸುವಲ್ಲಿ ಗಣಿತದ ಇಂಡಕ್ಷನ್ ನಂತಹ ಗಣಿತದ ತಂತ್ರಗಳ ಪರಿಣಾಮಕಾರಿತ್ವವನ್ನು ವಿವರಿಸಲು ಅವಿ



ಭಾಜ್ಯ ಸಂಖ್ಯೆಯ ಪರಿಶೀಲನೆಗಳನ್ನು ಒಳಗೊಂಡು ಸಮಸ್ಯೆ-ಪರಿಹರಿಸುವ ಕೌಶಲ್ಯ ಗಳ ಪ್ರಾಮುಖ್ಯತೆಯನ್ನು ತೋರಿಸಿದರು.

ವಿದ್ಯಾರ್ಥಿಗಳು ತಮ್ಮ ಸಮಸ್ಯೆ-ಪರಿಹರಿಸುವ ಕೌಶಲ್ಯ ಮತ್ತು ಪ್ರೋಗ್ರಾಮಿಂಗ್ ಭಾಷಾ ಪಾಂಡಿತ್ಯವನ್ನು ಹೆಚ್ಚಿಸಲು ಸಹಾಯ ಮಾಡಲು ಅವರು ಅಧ್ಯಾಪಕರನ್ನು ಒತ್ತಾಯಿಸಿದರು.

ನಂತರ ಅವರು ನೈಜ ಪ್ರಪಂಚದ ಅನುಭವವನ್ನು ಒದಗಿಸುವ ಇಂಟರ್ನ್‌ಶಿಪ್ ಗಳು ಮತ್ತು ಪ್ರಾಯೋಗಿಕ ಸಮಸ್ಯೆಗಳಿಗೆ ಶೈಕ್ಷಣಿಕ ಜ್ಞಾನವನ್ನು ಅನ್ವಯಿಸುವ ಯೋಜನೆಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿದರು.

ಪಿಎಚ್.ಡಿ ಕುರಿತು ಅನ್ವೇಷಣೆಗಳು, ಸಂಶೋಧನಾ ಕ್ಷೇತ್ರವನ್ನು ಆಯ್ಕೆ ಮಾಡಲು ಮತ್ತು ಬುದ್ಧಿವಂತಿಕೆಯಿಂದ ಮಾರ್ಗದರ್ಶನ ಮಾಡಲು ಹೇಳಿದರು.

ವಿದ್ಯಾರ್ಥಿಗಳೊಂದಿಗೆ ನೇರ ಸಂಪರ್ಕದ ಬಗ್ಗೆ ಗಣಿತ ಪ್ರಾವೀಣ್ಯತೆಯ ಪ್ರಾಮುಖ್ಯತೆಯನ್ನು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ. ಎಸ್.ಆರ್. ರಮೇಶ್, ಪರೀಕ್ಷಾ ನಿಯಂತ್ರಕರಾದ ಶ್ರುತಿ ಪೂಣಚ್ಚ, ಗಣಿತ ವಿಜ್ಞಾನ ವಿಭಾಗದ ಮುಖ್ಯಸ್ಥ ಎ. ರಾಧೇಶ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಇತರೆ ಕಾಲೇಜಿನ ಸಿಬ್ಬಂದಿ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 24.08.2024

ಮಹಾಜನ ಕಾಲೇಜಿನಲ್ಲಿ ಕಣ್ಣಿನ ತಪಾಸಣಾ ಶಿಬಿರ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್.ಬಿ.ಆರ್.ಆರ್‌ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ವಾಸನ್ ಕಣ್ಣಿನ ಆಸ್ಪತ್ರೆ ಸಹಯೋಗ ದಲ್ಲಿ ಕಣ್ಣಿನ ಉಚಿತ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತ ನಾಡಿ, ಪ್ರಪಂಚದ ಸೌಂದರ್ಯವನ್ನು ಕಾಣಲು ಪ್ರತಿ ಯೊಂದು ಜೀವಿಗೂ ಕಣ್ಣುಗಳು ಅತ್ಯಾವಶ್ಯಕ. ದೇಹದ ಅಂಗಗಳು ತಮ್ಮದೇ ಆದ ಪ್ರಾಮುಖ್ಯತೆ ಒಳಗೊಂಡಿದೆ. ಮನುಷ್ಯ ಎಷ್ಟೇ ಐಶ್ವರ್ಯ, ಆಸ್ತಿ ಸಂಪಾದಿಸಿದರೂ ಆರೋಗ್ಯ ಇಲ್ಲದಿದ್ದರೆ ಆತ ಬಡವ. ನಮ್ಮ ಕಣ್ಣಿನ ಆರೋಗ್ಯದ ಮೇಲೆ ಗಮನವಹಿಸಬೇಕು. ಕಣ್ಣುಗಳು ಆರೋಗ್ಯವಾಗಿದ್ದಲ್ಲಿ ನೇತ್ರದಾನ ಮಾಡುವ ಮೂಲಕ ಮತ್ತೊಂದು ಜೀವವು ಪ್ರಪಂಚದ ಸೌಂದರ್ಯವನ್ನು ಕಾಣಲು ನಾವು ಕಾರಣರಾಗುತ್ತೇವೆ. ಸದಾ ಆರೋಗ್ಯ ಚಿಂತನೆಗಳಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ



ಕಾಯ್ದಿರಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣಕರ್ತ ರಾಗಬೇಕು ಎಂದು ಕರೆ ನೀಡಿದರು. ವಾಸನ್ ಕಣ್ಣಿನ ಆಸ್ಪತ್ರೆಯ ಮಾರುಕಟ್ಟೆ ಮುಖ್ಯಸ್ಥ ರಕ್ಷಿತ್, ಮಾರ್ಕೆ ಟಿಂಗ್ ಎಕ್ಸಿಕ್ಯೂಟರ್‌ಪ್ರವೀಣ್, ಆಪ್ಟೊಮೆಟ್ರಿಸ್ಟ್‌ಗಳಾ ದ ಪರಿಮಳ ಮತ್ತು ಶ್ರೀಲಕ್ಷ್ಮೀ ಶಿಬಿರ ನಡೆಸಿಕೊಟ್ಟರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ, ಡಾ.ಸಿ.ಎಸ್. ಸಿದ್ದರಾಜು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 23 ಆಗಸ್ಟ್ 2024

ಮಹಾಜನ ಕಾಲೇಜಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ



ಮೈಸೂರು, ಆ.22- ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ (ಸ್ವಾಯತ್ತ) ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ವಾಸನ್ ಕಣ್ಣಿನ ಆಸ್ಪತ್ರೆ ಮೈಸೂರು ಇವರ ಸಹಯೋಗ ದೊಂದಿಗೆ 'ಕಣ್ಣಿನ ಉಚಿತ ತಪಾಸಣೆ ಮತ್ತು ಕಣ್ಣಿನ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಮಾತನಾಡುತ್ತಾ, ಪ್ರಪಂಚದ ಸೌಂದರ್ಯವನ್ನು ಕಾಣಲು ಪ್ರತಿಯೊಂದು ಜೀವಿಗಳಿಗೂ ಕಣ್ಣುಗಳು ಅತ್ಯಾವಶ್ಯಕ. ದೇಹದ ಅಂಗಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಒಳಗೊಂಡಿದೆ. ಮನುಷ್ಯ ಎಷ್ಟೇ ಐಶ್ವರ್ಯ, ಆಸ್ತಿ ಸಂಪಾದಿಸಿದರೂ ಆರೋಗ್ಯ ಇಲ್ಲದಿದ್ದರೆ ಆತ ಬಡವ. ನಮ್ಮ ಕಣ್ಣಿನ ಆರೋಗ್ಯದ ಮೇಲೆ ಗಮನ ವಹಿಸಬೇಕು. ಕಣ್ಣುಗಳು ಆರೋಗ್ಯವಾಗಿದ್ದಲ್ಲಿ ನೇತ್ರದಾನ ಮಾಡುವ ಮೂಲಕ ಮತ್ತೊಂದು ಜೀವವು ಪ್ರಪಂಚದ ಸೌಂದರ್ಯವನ್ನು ಕಾಣಲು ನಾವು ಕಾರಣರಾಗುತ್ತೇವೆ. ಸದಾ ಆರೋಗ್ಯ ಚಿಂತನೆಗಳಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಯ್ದಿರಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣಕರ್ತರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಾಸನ್ ಕಣ್ಣಿನ ಆಸ್ಪತ್ರೆಯ ಮಾರ್ಕೇಟಿಂಗ್ ಮುಖ್ಯಸ್ಥರಾದ ರಕ್ಷಿತ್, ಮಾರ್ಕೇಟಿಂಗ್ ಎಕ್ಸಿಕ್ಯೂಟರ್ ಪ್ರವೀಣ್, ಆಪ್ಥೊಮೆ ಟ್ರಿಸ್ಟ್‌ಗಳಾದ ಪರಿಮಳ ಮತ್ತು ಶ್ರೀಲಕ್ಷ್ಮೀ ತಪಾಸಣಾ ಶಿಬಿರವನ್ನು ನಡೆಸಿಕೊಟ್ಟರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳಾದ ಡಾ. ದೊಡ್ಡರಸಯ್ಯ ಜಿ, ಡಾ. ಸಿದ್ದರಾಜು ಸಿ.ಎಸ್. ಹಾಜರಿದ್ದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು, ಎನ್‌ಎಸ್‌ಎಸ್ ಸ್ವಯಂ ಸೇವಕ, ಸೇವಕಿಯರು ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡಂತೆ 200ಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 30 ಆಗಸ್ಟ್ 2024

ಅಮಾನುಷ ಘಟನೆಯ ಮನಮಿಡಿದ ಛಾಯಾಚಿತ್ರಗಳು

ಮಹಾಜನ ಕಾಲೇಜಿನಲ್ಲಿ ಹಿರೋಷಿಮಾ-ನಾಗಸಾಕಿ ದುರಂತದ ಛಾಯಾಚಿತ್ರ ಪ್ರದರ್ಶನ







ಮೈಸೂರು: 'ಅದೊಂದು ದೊಡ್ಡ ಶಬ್ದ ಕೇಳಿಸಿ ತಷ್ಟೇ, ಅಮ್ಮ ಅಂಗಾತ ಬಿದ್ದಿದ್ದಳು, ಅವಳ ಮೈ ಮೇಲೆಲ್ಲಾ ಮನೆ ಗೋಡೆಯ ಇಟ್ಟಿಗೆ ಅವಶೇಷಗಳು ಬಿದ್ದಿದ್ದವು, ಅವಳಿಗೆ ದೇಹವನ್ನು ಕದಲಿಸಲೂ ಆಗುತ್ತಿರ ಲಿಲ್ಲ, ಏನನ್ನೋ ಹೇಳಬೇಕೆಂದಿದ್ದಳು. ಅಷ್ಟರಲ್ಲಿ ಸುತ್ತಲೂ ದೊಡ್ಡ ಬೆಂಕಿಯ ಜ್ವಾಲೆ ಆವರಿಸಿತು. ಅಮ್ಮನಿಗೆ ಗುಡ್ ಬೈ ಹೇಳಿ ಬೆಂಕಿ ಜ್ವಾಲೆಯಿಂದ ತಪ್ಪಿಸಿಕೊಂಡೆ'...

ಜಪಾನಿನ ಹಿರೋಷಿಮಾ ನಗರದ ಮೇಲೆ ಅಣುಬಾಂಬ್ ಬಿದ್ದ ಕೂಡಲೇ ಸಂಭವಿಸಿದ ಘಟನೆಯಲ್ಲಿ ಹೆತ್ತವರನ್ನು ಕಳೆದುಕೊಂಡ ವ್ಯಕ್ತಿಯೊಬ್ಬ ಆ ಗಳಿಗೆಯ ಅನುಭವವನ್ನು ಹಂಚಿಕೊಂಡಿದ್ದ ದಾಖಲೆಗಳು ಜೀವಂತ ಸಾಕ್ಷಿಯಾಗಿ ಅಲ್ಲಿದ್ದವು.

ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಎರಡು ಪರಮಾಣು ಬಾಂಬುಗಳನ್ನು ಅಮೆರಿಕ ಸ್ಫೋಟಿಸಿದ್ದರಿಂದ ಉಂಟಾದ ಮಾರಣಹೋಮದ ಅಮಾನುಷ ಘಟನೆಯನ್ನು ಛಾಯಾಚಿತ್ರಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸುವ ಪ್ರಯತ್ನವಾಗಿ ನಗರದ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎವಿಸಿ-2 ಸಭಾಂಗಣದಲ್ಲಿ ಗುರುವಾರ ಇತಿಹಾಸ ವಿಭಾಗ ಹಾಗೂ ಶಾಂತಿ ಮತ್ತು ತಿಳಿವಳಿಕೆ ವೇದಿಕೆ ಸಹಯೋಗದಲ್ಲಿ ಆಯೋಜಿಸಿದ್ದ ಛಾಯಾಚಿತ್ರ ಪ್ರದರ್ಶನದಲ್ಲಿ ಕಂಡುಬಂದ ದೃಶ್ಯಾವಳಿ ಇದು.

1945ರ ಆಗಸ್ಟ್ 6 ಮತ್ತು 9 ರಂದು, ಯುನೈಟೆಡ್ ಸ್ಟೇಟ್ಸ್ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಪರಮಾಣು ಬಾಂಬುಗಳನ್ನು ಸ್ಫೋಟಿಸಿತು. 2011ರಲ್ಲಿ ಜಪಾನಿನ ನಿಯೋಗವೊಂದು ಮಹಾಜನ ಕಾಲೇಜಿಗೆ ಭೇಟಿ ನೀಡಿ ಆ ಘಟನೆಯ ಛಾಯಾಚಿತ್ರಗಳು ಹಾಗೂ ವಿಡಿಯೋ ತುಣುಕುಗಳನ್ನು ನೀಡಿತ್ತು. ಅವುಗಳನ್ನು ಕಳೆದ 13 ವರ್ಷಗಳಿಂದ ಕಾಲೇಜಿನಲ್ಲಿ ಪ್ರದರ್ಶನ ಮಾಡಲಾಗುತ್ತಿದೆ. ಈವರೆಗೂ 45 ಶಾಲಾ ಕಾಲೇಜುಗಳಲ್ಲಿ ಈ ಛಾಯಾಚಿತ್ರಗಳ ಪ್ರದರ್ಶನ ಮಾಡಲಾಗಿದೆ ಎಂದು ಇತಿಹಾಸ ವಿಭಾಗದ ಉಪನ್ಯಾಸಕ ಶ್ರೀಧರ್ ತಿಳಿಸಿದರು.



ಸಾಕ್ಷ್ಯಚಿತ್ರದ ತುಣುಕು ಪ್ರದರ್ಶನ...

ಹಿರೋಷಿಮಾ, ನಾಗಸಾಕಿ ನಗರಗಳ ಮೇಲೆ ನಡೆದ ಪರಮಾಣು ಬಾಂಬ್ ದಾಳಿ ಸಂದರ್ಭದ ಡಾಕ್ಯುಮೆಂಟರಿಯ ಕೆಲ ದೃಶ್ಯಗಳ ವೀಡಿಯೊ ತುಣುಕುಗಳನ್ನು ಕೂಡ ಪ್ರದರ್ಶಿಸಲಾಯಿತು. ಅವುಗಳಲ್ಲಿ ಕೆಲವರ ಮೈ ಮೇಲಿನ ಚರ್ಮ ಬೆಂದು ರಕ್ತ ಸುರಿಯುತ್ತಿದ್ದು, ಕೊನೇ ಗಳಿಗೆಯಲ್ಲಿ ಸಹಾಯಕ್ಕಾಗಿ ರಕ್ತ ಸೋರುತ್ತಿದ್ದ ಕೈಗಳನ್ನೆತ್ತಿ ಅಂಗಲಾಚಿದ ದೃಶ್ಯಗಳಿದ್ದವು. ಶರೀರದಲ್ಲಿ ಉರಿ ತಾಳದೆ ಹೆಂಗಸರು, ಗಂಡಸರು ನದಿಗೆ ಹಾರಿದರೂ ಬದುಕಿ ಉಳಿಯಲಿಲ್ಲ. ನದಿ ನೀರೆಲ್ಲ ರಕ್ತಮಯವಾಗಿತ್ತು. ಮೈ ಉರಿಯುತ್ತಿದೆ ಎಂದು ಸವರಿಕೊಂಡರೆ ಚರ್ಮ ಕಿತ್ತು ಬರುತ್ತಿತ್ತು. ಆಸ್ಪತ್ರೆಯಲ್ಲಿ ದಾಖಲಾದವರು ನಾನು ಬದುಕಬೇಕು, ಜವಾಬ್ದಾರಿಗಳಿವೆ... ನನ್ನನ್ನು ಬದುಕಿಸಿ ಎಂದೆಲ್ಲ ಕೂಗಿಕೊಳ್ಳುತ್ತಿದ್ದ ದೃಶ್ಯಗಳ ವೀಡಿಯೊ ತುಣುಕುಗಳಲ್ಲಿ ಕಂಡುಬಂದ ಧ್ವನಿ ಕಿವಿಗಳಿಗೆ ಬರಸಿಡಿಲಿನಂತೆ ಅಪ್ಪಳಿಸಿದವು.



ಇದಕ್ಕೂ ಮುನ್ನ ಛಾಯಾಚಿತ್ರ ಪ್ರದರ್ಶನವನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್.ಮಂಜುನಾಥ್ ಉದ್ಘಾಟಿಸಿದರು. ನಂತರ ಎನ್‌ಎಸ್‌ಎಸ್ ಸಂಚಾಲಕಿ ಇಂದ್ರಾಣಿ ಚಿತ್ರಗಳು ಹಾಗೂ ಘಟನೆಯ ಬಗ್ಗೆ ವಿವರಣೆ ನೀಡಿದರು.

ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್ ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮಳವಳ್ಳಿ ಶಾಂತಿಕಾಲೇಜಿನಡಾ.ಸಿದ್ದರಾಜುಉಪಸ್ಥಿತರಿದ್ದರು.

ಹೊಸ ದಿಗಂತ

ಸೋಮವಾರ, 12 ಆಗಸ್ಟ್ 2024

ಉತ್ತಮ ಆಲೋಚನೆಯಿಂದ ಮನಸ್ಸು ಸ್ಥಿರ

ಮೈಸೂರು: ನಗರದ ಜಯಲಕ್ಷ್ಮೀಪುರಂನ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿರೋಷಿಮಾ ಮತ್ತು ನಾಗಾಸಾಕಿ ದಿನಾಚರಣೆಯ ಸ್ಮರಣಾರ್ಥವಾಗಿ ಐಕ್ಯೂಎಸಿ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಶಾಂತಿ ಮತ್ತು ತಿಳುವಳಿಕೆ ವೇದಿಕೆಯ ಸಹಯೋಗದೊಂದಿಗೆ ಯುವಕರಿಗಾಗಿ ಶಾಂತಿ ಉಪಕ್ರಮದ ಬಗ್ಗೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಯಿತು.

ಸಂಪನ್ಮೂಲವ್ಯಕ್ತಿಯಾಗಿ ಆಗಮಿಸಿದ್ದ ಸರಸ್ವತಿಪುರಂನ ಬ್ರಹ್ಮಕುಮಾರಿ ಕೇಂದ್ರದ ಪ್ರಭಾರಿ ಮಂಜುಳಾ ಮಾತನಾಡಿ, ಮನಸ್ಸಿನಲ್ಲಿರುವ ಹಿಂಸೆಯೇ ಮಾನವನನ್ನು ರಾಕ್ಷಸನನ್ನಾಗಿ ಮಾಡುತ್ತದೆ. ಶಾಂತಿಯ ಉಪಕ್ರಮವು ವಿಶ್ವದಲ್ಲಿ ಶಾಂತಿಯಿಂದಲೇ ಪ್ರಾರಂಭ ವಾಗಬೇಕು ಎಂದರು. ಉತ್ತಮವಾದ ಆಲೋಚನೆಗಳು ಮನಸ್ಸನ್ನು ಸ್ಥಿರವಾಗಿ ಇರಿಸುತ್ತದೆ. ಅಂತಹವರು ಶಾಂತಿ ಶಾಶ್ವತವಾಗಿರಿಸಲು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ ಎಂದು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ನಮ್ಮ ದೇಶದ ಆತ್ಮಮೂಲ್ಯ ಆಸ್ತಿ ಎಂದರೆ, ಯುವಕರು. ಯುವಕರಿಗೆ ಉತ್ತಮ ಗುಣಮಟ್ಟದ ನೈಪುಣ್ಯವರ್ಧಿತ ಶೈಕ್ಷಣಿಕ ಅವಕಾಶಗಳನ್ನು ಒದಗಿಸಲು ಶಾಂತಿಯ ಮಂತ್ರವನ್ನು ನಮ್ಮ ಯುವ



ಜನತೆಗೆ ತಿಳಿಸಿಕೊಡುವ ಮಹತ್ಕಾರ್ಯ ನಮ್ಮದಾಗಿದೆ. ಯುವಕರು ಸಮಗ್ರ ಮಾಹಿತಿ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆಯಂತಹ ವಿವಿಧ ವೈಜ್ಞಾನಿಕ ಮತ್ತುತಾಂತ್ರಿಕ ಪ್ರಗತಿಯೊಂದಿಗೆ, ಪ್ರಪಂಚದಾದ್ಯಂತ ಶಾಂತಿಯ ಮೂಲ ಮಂತ್ರಗಳನ್ನು ಅಳವಡಿಸಿಕೊಂಡು ಜೀವನದ ಉದ್ದೇಶವನ್ನು ಪರಿಪೂರ್ಣತೆಯಿಂದ ಬದುಕಬೇಕು ಎಂದರು.

ಶಿಕ್ಷಣವು ಐದು ಪ್ರಮುಖ ಸಾರ್ವತ್ರಿಕ ಮೌಲ್ಯಗಳನ್ನು ಒಳಗೊಂಡಿದೆ, ಸತ್ಯ, ನೀತಿ, ಶಾಂತಿ, ಪ್ರೀತಿ ಮತ್ತು ಅಹಿಂಸೆ. ಇವು ಮಾನವ ವ್ಯಕ್ತಿತ್ವದಐದು ಕ್ಷೇತ್ರಗಳನ್ನು ಪ್ರತಿನಿಧಿಸುತ್ತದೆ. ಅವುಗಳೆಂದರೆ, ಬೌದ್ಧಿಕ, ದೈಹಿಕ, ಭಾವನಾತ್ಮಕ, ಮಾನಸಿಕ ಮತ್ತು ಆಧ್ಯಾತ್ಮಿಕ ಇವುಗಳು ಶಿಕ್ಷಣದ ಐದು ಪ್ರಮುಖ ಉದ್ದೇಶಗಳನ್ನು ಪ್ರತಿನಿಧಿಸುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರೋಷಿಮಾ ಮತ್ತು ನಾಗಾಸಾಕಿ ಬಾಂಬ್‌ದುರಂತಕುರಿತು ಸಾಕ್ಷ್ಯಚಿತ್ರವನ್ನು ವಿಡಿಯೋ ಮೂಲಕ ವಿದ್ಯಾರ್ಥಿಗಳಿಗೆ ಪ್ರದರ್ಶಿಸಿ 'ಶಾಂತಿಯ ಮಹತ್ವ'ವನ್ನು ಶಾಂತಿ ಮತ್ತು ತಿಳುವಳಿಕೆ ವೇದಿಕೆಯ ಸಂಚಾಲಕರಾದಡಾ. ಕ್ಯಾಪ್ಟನ್ ಇಂದ್ರಾಣಿಎಂ.ಆರ್. ಅವರು ವಿದ್ಯಾರ್ಥಿಗಳಿಗೆ ಮನವನರಿಕೆ ಮಾಡಿದರು.

ಹಂಸವೇಣಿ, ವಿದ್ಯಾ, ಚಂದನಾ, ಸಹಾಯಕ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತುಅಧ್ಯಾಪಕ, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಆಂದೋಲನ
ದಿನ ಪತ್ರಿಕೆ

ಗುರುವಾರ, 29 ಆಗಸ್ಟ್ 2024

● **ಉಪನ್ಯಾಸ ಮಾಲೆ**

ಬೆಳಿಗ್ಗೆ 10.45ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಉಪನ್ಯಾಸ-ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ, ಹಿರೋಶಿಮಾ ಮತ್ತು ನಾಗಾಸಾಕಿ ದುರಂತದ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ-ಪತ್ರಾಗಾರ ಕಚೇರಿ ಮೈಸೂರು ವಿಭಾಗೀಯ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್.ಮಂಜುನಾಥ್, ಉಪಸ್ಥಿತಿ-ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಅಧ್ಯಕ್ಷತೆ-ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸ್ಥಳ-ಎವಿಸಿ 3, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 29 ಆಗಸ್ಟ್ 2024

■ **ಮಹಾಜನ ಪ್ರಥಮ ದರ್ಜೆ ಕಾಲೇಜು** : ಪತ್ರಾಗಾರ ಪರಿಚಯ ಉಪನ್ಯಾಸ ಮಾಲೆ, ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ ಹಾಗೂ ಹಿರೋಷಿಮಾ ಮತ್ತು ನಾಗಾಸಾಕಿ ದುರಂತದ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ: ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್. ಮಂಜುನಾಥ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್.ಜಯಕುಮಾರಿ, ಉಪಸ್ಥಿತರು : ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಸ್ಥಳ: ಎವಿಸಿ-3, ಬೆಳಗ್ಗೆ 10.45ಕ್ಕೆ.

ಆಂಜನೇಯ
ದಿನ ಪತ್ರಿಕೆ

ಶುಕ್ರವಾರ, 30 ಆಗಸ್ಟ್ 2024

ದಾಖಲೆಗಳು ನಾಡಿನ ಸಂಪತ್ತು: ಮಂಜುನಾಥ್

ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ ಕುರಿತು ಉಪನ್ಯಾಸ

ಮೈಸೂರು: ದಾಖಲೆಗಳು ನಾಡಿನ ಸಂಪತ್ತು. ದಾಖಲೆಗಳು ಇಲ್ಲದಿದ್ದರೆ ಸರ್ಕಾರದ ಭೂಮಿ, ಆಸ್ತಿಯ ಕಬಳಿಕೆ ಆಗುತ್ತದೆ. ಇತಿಹಾಸದ ಸತ್ಯಾಂಶ ಬಯಲಿಗೆ ಬರುವುದಿಲ್ಲ ಎಂದು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಮೈಸೂರು ವಿಭಾಗದ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್. ಮಂಜು ನಾಥ್ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ' ಕುರಿತು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬ ವ್ಯಕ್ತಿಗೂ ಜನನ ಪ್ರಮಾಣ ಪತ್ರ ಹುಟ್ಟಿದಾಗಿನಿಂದ ಕೊನೆಯವ ರೆಗೂ ಅಗತ್ಯವಿದೆ. ಆಸ್ತಿವಂತರಾದರೆ ಮರಣದ ನಂತರವೂ ಅದು ಒಂದು ಅಮೂಲ್ಯ ದಾಖಲೆ ಪತ್ರವಾಗಿರುತ್ತದೆ ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ಅರಮನೆಗಳು, ಪೊಲೀಸ್ ಬ್ಯಾಂಡ್, ಬಾಡಿ ಗಾರ್ಡ್‌ನ್, ಚಾಮುಂಡಿ ಜಮಖಾನ, ಚಾಮುಂಡಿ ತೊಟ್ಟಿ, ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ, ಚಾಮರಾಜೇಂದ್ರ ಅರಸು ಬೋರ್ಡಿಂಗ್, ಶ್ರೀ ಚಾಮರಾಜೇಂದ್ರ ಮೃಗಾಲಯ, ಗಜಶಾಲಾ, ಗೇಮ್ಸ್ ಆಂಡ್ ಟೈಗರ್ ಪ್ರಿಜರ್ವ್ಸ್ ಮುಂತಾದ ನೂರಾರು ವಿವರಗಳ ಬಗ್ಗೆ ದಾಖಲೆಗಳು ಪತ್ರಾಗಾರದಲ್ಲಿವೆ ಎಂದು ತಿಳಿಸಿದರು.



ಇತಿಹಾಸದಲ್ಲಿ ಮರೆಯಾದ ಜನರಲ್ ಡಾಸನ್!

ಕೆಆರ್‌ಎಸ್ ಎಂದೊಡನೆ ನೆನಪಾಗುವುದು ಮುಮ್ಮಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ. ಆದರೆ, 1908 ಹಾಗೂ 1909ರಲ್ಲಿ ಇಂಜಿನಿಯರ್ ಜನರಲ್ ಡಾಸನ್ ಎಂಬವರು ಮುಖ್ಯ ಇಂಜಿನಿಯರ್ ಆಗಿ ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆ ದಿನಗಳಲ್ಲಿ ಅತಿಯಾದ ಮಳೆಯಿಂದ ಪ್ರವಾಹ ಬಂದಿತ್ತು. ಪ್ರವಾಹದಲ್ಲಿ ಅನೇಕ ಕೂಲಿ ಕಾರ್ಮಿಕರು ಸಿಲುಕಿದ್ದರು. ಆಗ ಡಾಸನ್ ಅವರೇ ಪ್ರವಾಹದ ವಿರುದ್ಧ ದೋಣಿ ಚಾಲನೆ ಮಾಡಿಕೊಂಡು 5 ಮಂದಿ ಕೂಲಿ ಕಾರ್ಮಿಕರನ್ನು ರಕ್ಷಿಸಿದ್ದರು. ಆದರೆ, ಡಾಸನ್ ಈ ಪ್ರವಾಹದಲ್ಲಿ ಮೃತ ಪಟ್ಟಿದ್ದರು. ಅವರ ಮರಣದ ವಿಚಾರವನ್ನು ರಾಜರ್ಷಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಪತ್ರದ ಮೂಲಕ ದಾಖಲಿಸಿದ್ದಾರೆ ಎಂದು ಮಂಜುನಾಥ್ ಮಾಹಿತಿ ನೀಡಿದರು.

ಕಾಲೇಜಿನ ಸಿಇಒ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ.ಬಿ. ಆರ್.ಜಯ ಕುಮಾರಿ, ಉಪನ್ಯಾಸಕ ಶ್ರೀಧರ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಹೊಸ ದಿಗಂತ
ಸುಸ್ಥ ಜನಾಗ್ರತಿಯ ದೈನಿಕ

ಶುಕ್ರವಾರ, 30 ಆಗಸ್ಟ್ 2024

ಐತಿಹಾಸಿಕ ದಾಖಲೆ ಸಂಸ್ಕೃತಿ ಕೈಗನ್ನಡಿ

ಮೈಸೂರು: ಐತಿಹಾಸಿಕ ದಾಖಲೆಗಳು ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿವೆ ಎಂದು ಮಂಜುನಾಥ ಎಚ್. ಎಲ್ ಅಭಿಪ್ರಾಯಪಟ್ಟರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮೂಲಾಧಾರಗಳಿಲ್ಲದೆ ಇತಿಹಾಸವಿಲ್ಲ ಎಂಬ ವಿಷಯವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟರು. ತಮ್ಮ ಇಲಾಖೆಯಲ್ಲಿ ಇದುವರೆವಿಗೂ ಸಂಗ್ರಹಿಸಿರುವ ಸಾವಿರಾರು ಸಂಖ್ಯೆಯ ಪ್ರಾಥಮಿಕ ಹಾಗೂ ದ್ವಿತೀಯ ಚಾರಿತ್ರಿಕ ಮೂಲಾಧಾರಗಳ ಬಗ್ಗೆ ಮಾಹಿತಿ ನೀಡಿದರು.

ಐತಿಹಾಸಿಕ ದಾಖಲೆಗಳು ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿದ್ದು, ಪ್ರಕಟಿತ ಹಾಗೂ ಅಪ್ರಕಟಿತ ದಾಖಲೆಗಳಾದ ಮೈಸೂರು ಅಡಳಿತ ವರದಿಗಳು, ಗೆಜೆಟಿಯರ್‌ಗಳು, ಪ್ರೊಸಿಡಿಂಗ್ಸ್‌ಗಳು, ವಾರ್ಷಿಕ ವರದಿಗಳು, ಆದೇಶಗಳು, ಸೆನ್ಸಸ್ ವರದಿಗಳು, ಕಡತಗಳು, ಖಾಸಗಿ ದಾಖಲೆಗಳು, ಪತ್ರಿಕೆಗಳು ಹಾಗೂ ಚಾರಿತ್ರಿಕ ಬರವಣಿಗೆಯ ಸಂಪೂರ್ಣ ದಾಖಲೆಗಳನ್ನು ನಮ್ಮ ವಿಭಾಗೀಯ ಪತ್ರಾಗಾರ ಕಛೇರಿಯಲ್ಲಿ ಸಂರಕ್ಷಿಸಿ



ಇಡಲಾಗಿದೆ. ಸಾವಿರಾರು ಹಳೆಯ ಐತಿಹಾಸಿಕ ದಾಖಲೆಗಳನ್ನು ಹಾಗೂ ವರದಿಗಳನ್ನು ಇತ್ತೀಚೆಗೆ ಡಿಜಿಟಲೀಕರಣ ಮಾಡಲಾಗಿದೆ.

ಈದಾಖಲೆಗಳುಆಸಕ್ತವಿದ್ಯಾರ್ಥಿಗಳಿಗೆ,ಸಂಶೋಧಕರಿಗೆಹಾಗೂಇತಿಹಾಸಕ್ತರಿಗೆಅತ್ಯಾಮೂಲ್ಯವಾದ ಪ್ರಾಥಮಿಕ ಅಧ್ಯಯನ ಸಾಮಗ್ರಿಗಳಾಗಿದ್ದು, ಇದುವರೆವಿಗೂ ಪ್ರಕಟವಾಗದಿರುವ ಹಲವು ವಿಷಯಗಳು ಹಾಗೂ ಮಾಹಿತಿಗಳು ಈ ದಾಖಲೆಗಳಿಂದ ಸಿಗುತ್ತವೆ. ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಈ ದಾಖಲೆಗಳನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳುವ ಆಸಕ್ತಿ ಮತ್ತು ಮನಸ್ಸನ್ನು ಬೆಳೆಸಿಕೊಳ್ಳಬೇಕು ಎಂದರು.

ಸರ್ಕಾರದ ವಿವಿಧ ಇಲಾಖೆಗಳು ಇಂದಿಗೂ ತಮಗೆ ಅತ್ಯಗತ್ಯವಾದ ಅಪರೂಪದ ದಾಖಲೆಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಹಾಗೂ ವಿಭಾಗೀಯ ಪತ್ರಾಗಾರ ಕಛೇರಿಗಳಿಂದ ಪಡೆಯುತ್ತಾರೆ. ನೂರಾರು ವರ್ಷಗಳ ಭೂದಾಖಲೆಗಳು, ಅಡಳಿತ ವರದಿಗಳು, ಆದೇಶಗಳು, ಜ್ಞಾಪನಾಪತ್ರಗಳು, ಸುತ್ತೋಲೆಗಳು, ರಾಜಾದೇಶಗಳು, ಸಾಮಾನ್ಯ ಪತ್ರಗಳು ಸೇರಿದಂತೆ ನೂರಾರು ವರ್ಷಗಳ ಅತ್ಯಮೂಲ್ಯವಾದ ಪ್ರಕಟಿತ, ಮಾಹಿತಿಗಳು ಇಲಾಖೆಯಲ್ಲಿ ಲಭ್ಯವಿರುತ್ತವೆ ಎಂದು ತಿಳಿಸಿದರು.

ತಮ್ಮ ಇಲಾಖೆಯಲ್ಲಿ ಇದುವರೆವಿಗೂ ಡಿಜಿಟಲೀಕರಣ ಮೂಲಕ ಸಂರಕ್ಷಿಸಿರುವ ಮೂಲ ದಾಖಲೆಗಳನ್ನು ಪ್ರಯೋಗಿಕವಾಗಿ ವಿದ್ಯಾರ್ಥಿಗಳಿಗೆ ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಪತ್ರಾಗಾರ ಸಂರಕ್ಷಣೆಯ ಮಹತ್ವ ಮತ್ತು ಉಪಯೋಗಗಳನ್ನು ತಿಳಿಸಿಕೊಟ್ಟರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 30.08.2024

ಐತಿಹಾಸಿಕ ದಾಖಲೆಗಳು ಡಿಜಿಟಲೀಕರಣಗೊಂಡಿವೆ

ವಿಶೇಷ ಉಪನ್ಯಾಸದಲ್ಲಿ ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಮೈಸೂರು

ಸಾವಿರಾರು ಹಳೆಯ ಐತಿಹಾಸಿಕ ದಾಖಲೆಗಳನ್ನು ಹಾಗೂ ವರದಿಗಳನ್ನು ಇತ್ತೀಚೆಗೆ ಡಿಜಿಟಲೀಕರಣಗೊಳಿಸಲಾಗಿದೆ ಎಂದು ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್ ಹೇಳಿದರು.

ನಗರದ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಪಾರಂಪರಿಕ ಕೂಟ ಹಾಗೂ ಕರ್ನಾಟಕ ರಾಜ್ಯ ವಿಭಾಗೀಯ ಪತ್ರಾಗಾರ ಕಚೇರಿ ಸಹಯೋಗದಲ್ಲಿ ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಏರ್ಪಡಿಸಲಾಗಿತ್ತು.

ಈ ದಾಖಲೆಗಳು ಆಸಕ್ತ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹಾಗೂ ಇತಿಹಾಸಕ್ತರಿಗೆ ಅತ್ಯಾಮೂಲ್ಯ ಪ್ರಾಥಮಿಕ ಅಧ್ಯಯನ ಸಾಮಗ್ರಿಗಳಾಗಿದ್ದು, ಇದುವರೆವಿಗೂ ಪ್ರಕಟವಾಗದಿರುವ ಹಲವು ವಿಷಯಗಳು ಹಾಗೂ ಮಾಹಿತಿಗಳು ಈ ದಾಖಲೆಗಳಿಂದ ಸಿಗುತ್ತವೆ. ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಈ ದಾಖಲೆಗಳನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳುವ ಆಸಕ್ತಿ ಮತ್ತು ಮನಸ್ಸನ್ನು ಬೆಳೆಸಿಕೊಳ್ಳಬೇಕು ಎಂದರು.



ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ನಡೆಯಿತು.

ಮೂಲಾಧಾರಗಳಿಲ್ಲದೆ ಇತಿಹಾಸವಿಲ್ಲ, ತಮ್ಮ ಇಲಾಖೆಯಲ್ಲಿ ಇದುವರೆವಿಗೂ ಸಂಗ್ರಹಿಸಿರುವ ಸಾವಿರಾರು ಸಂಖ್ಯೆಯ ಪ್ರಾಥಮಿಕ ಹಾಗೂ ದ್ವಿತೀಯ ಚಾರಿತ್ರಿಕ ಮೂಲಾಧಾರಗಳ ಬಗ್ಗೆ ಮಾಹಿತಿ ನೀಡಿದರು. ಐತಿಹಾಸಿಕ ದಾಖಲೆಗಳು ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿದ್ದು, ಪ್ರಕಟಿತ ಹಾಗೂ ಅಪ್ರಕಟಿತ ದಾಖಲೆಗಳಾದ ಮೈಸೂರು ಅಡಳಿತ ವರದಿಗಳು, ಗೆಜೆಟಿಯರ್ ಗಳು, ಪ್ಲೊಸಿಡಿಂಗ್ಸ್ ಗಳು, ವಾರ್ಷಿಕ ವರದಿಗಳು, ಆದೇಶಗಳು, ಸೆನ್ಸಸ್ ವರದಿಗಳು, ಕಡತಗಳು, ಖಾಸಗಿ ದಾಖಲೆಗಳು, ಪತ್ರಿಕೆಗಳು ಹಾಗೂ ಚಾರಿತ್ರಿಕ ಬರವಣಿಗೆಯ ಸಂಪೂರ್ಣ ದಾಖಲೆಗಳನ್ನು ನಮ್ಮ ವಿಭಾಗೀಯ ಪತ್ರಾಗಾರ ಕಚೇರಿಯಲ್ಲಿ ಸಂರಕ್ಷಿಸಿ ಇಡಲಾಗಿದೆ ಎಂದರು.

ಸರ್ಕಾರದ ವಿವಿಧ ಇಲಾಖೆಗಳು ಇಂದಿಗೂ ತಮಗೆ ಅತ್ಯಗತ್ಯವಾದ ಅಪರೂಪದ ದಾಖಲೆಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಹಾಗೂ ವಿಭಾಗೀಯ ಪತ್ರಾಗಾರ ಕಚೇರಿಯಿಂದ ಪಡೆಯುತ್ತಾರೆ. ನೂರಾರು ವರ್ಷಗಳ ಭೂ ದಾಖಲೆ, ಅಡಳಿತ ವರದಿ, ಆದೇಶ, ಜ್ಞಾಪನಾಪತ್ರ, ಸುತ್ತೋಲೆ, ರಾಜಾ ದೇಶ, ಸಾಮಾನ್ಯ ಪತ್ರಗಳು ಸೇರಿದಂತೆ ನೂರಾರು ವರ್ಷಗಳ ಅತ್ಯಮೂಲ್ಯವಾದ ಅಪ್ರಕಟಿತಮಾಹಿತಿಗಳು ಇಲಾಖೆಯಲ್ಲಿ ಲಭ್ಯವಿರುತ್ತವೆ ಎಂದು ಅವರು ತಿಳಿಸಿದರು. ಇಲಾಖೆಯಲ್ಲಿ ಇದುವರೆವಿಗೂ ಡಿಜಿಟಲೀಕರಣ ಮೂಲಕ ಸಂರಕ್ಷಿಸಿರುವ ಮೂಲ ದಾಖಲೆಗಳನ್ನು ಪ್ರಯೋಗಿಕವಾಗಿ ವಿದ್ಯಾರ್ಥಿಗಳಿಗೆ ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಪತ್ರಾಗಾರ ಸಂರಕ್ಷಣೆಯ ಮಹತ್ವ ಮತ್ತು ಉಪಯೋಗಗಳನ್ನು ತಿಳಿಸಿ ಕೊಟ್ಟರು. ಶಾಂತಿ ಮತ್ತು ತಿಳುವಳಿಕೆ ವೇದಿಕೆ ಸಹಯೋಗದಲ್ಲಿ ಹಿರೋಶಿಮಾ ಮತ್ತು ನಾಗಾಸಾಕಿ ದುರಂತದ ಭೀಕರತೆಯನ್ನು ಸಾರುವ ಅಪರೂಪದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಪ್ರಾಧ್ಯಾಪಕರಾದ ಎ.ಆರ್. ನಂದೀಶ, ಡಾ. ಎಂ.ಆರ್. ಇಂದ್ರಾಣಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಇತಿಹಾಸ ವಿಷಯದ ವಿದ್ಯಾರ್ಥಿಗಳು ಇದ್ದರು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 30 ಆಗಸ್ಟ್ 2024

ಚಾರಿತ್ರಿಕ ದಾಖಲೆಗಳು ಇತಿಹಾಸ, ಸಂಸ್ಕೃತಿ ಬಿಂಬಿಸುವ ಕೈಗನ್ನಡಿ

ವಿಶೇಷ ಉಪನ್ಯಾಸ, ಸಂವಾದದಲ್ಲಿ ರಾಜ್ಯ ವಿಭಾಗೀಯ ಪತ್ರಾಗಾರ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್.ಮಂಜುನಾಥ ಅಭಿಮತ

ಮೈಸೂರು, ಆ. 29- ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಇತಿಹಾಸ ವಿಭಾಗ, ಪಾರಂಪರಿಕ ಕೂಟ ಹಾಗೂ ಕರ್ನಾಟಕ ರಾಜ್ಯ ವಿಭಾಗೀಯ ಪತ್ರಾಗಾರ ಕಚೇರಿ ಸಹಯೋಗದೊಂದಿಗೆ 'ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ' ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್ ಮಾತನಾಡುತ್ತಾ, ಮೂಲಾಧಾರಗಳಿಲ್ಲದೆ ಇತಿಹಾಸವಿಲ್ಲ ಎಂಬ ವಿಷಯವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟು, ತಮ್ಮ ಇಲಾಖೆಯಲ್ಲಿ ಇದುವರೆವಿಗೂ ಸಂಗ್ರಹಿಸಿರುವ ಸಾವಿರಾರು ಸಂಖ್ಯೆಯ ಪ್ರಾಥಮಿಕ ಹಾಗೂ ದ್ವಿತೀಯ ಚಾರಿತ್ರಿಕ ಮೂಲಾಧಾರಗಳ ಬಗ್ಗೆ ಮಾಹಿತಿ ನೀಡಿದರು.



ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಂಜುನಾಥ್ ಮಾತನಾಡಿದರು.

ಐತಿಹಾಸಿಕ ದಾಖಲೆಗಳು ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿದ್ದು, ಪ್ರಕಟಿತ ಹಾಗೂ ಅಪ್ರಕಟಿತ ದಾಖಲೆಗಳಾದ ಮೈಸೂರು ಆಡಳಿತ ವರದಿಗಳು, ಗೆಜೆಟಿಯರ್‌ಗಳು, ಪ್ರೊಸೀಡಿಂಗ್ಸ್‌ಗಳು, ವಾರ್ಷಿಕ ವರದಿಗಳು, ಆದೇಶಗಳು, ಸೆನ್ಸಸ್ ವರದಿಗಳು, ಕಡತಗಳು, ಖಾಸಗಿ ದಾಖಲೆಗಳು, ಪತ್ರಿಕೆಗಳು ಹಾಗೂ ಚಾರಿತ್ರಿಕ ಬರವಣಿಗೆಯ ಸಂಪೂರ್ಣ ದಾಖಲೆಗಳನ್ನು ನಮ್ಮ ವಿಭಾಗೀಯ ಪತ್ರಾಗಾರ ಕಚೇರಿಯಲ್ಲಿ ಸಂರಕ್ಷಿಸಿ ಇಡಲಾಗಿದೆ. ಸಾವಿರಾರು ಹಳೆಯ ಐತಿಹಾಸಿಕ ದಾಖಲೆಗಳನ್ನು ಹಾಗೂ ವರದಿಗಳನ್ನು ಇತ್ತೀಚೆಗೆ ಡಿಜಿಟಲೀಕರಣ ಮಾಡಲಾಗಿದೆ. ಈ ದಾಖಲೆಗಳು ಆಸಕ್ತ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹಾಗೂ ಇತಿಹಾಸಕ್ತರಿಗೆ ಅತ್ಯಮೂಲ್ಯವಾದ ಪ್ರಾಥಮಿಕ ಅಧ್ಯಯನ ಸಾಮಗ್ರಿಗಳಾಗಿದ್ದು, ಇದುವರೆಗೂ ಪ್ರಕಟವಾಗದಿರುವ ಹಲವು ವಿಷಯಗಳು ಹಾಗೂ ಮಾಹಿತಿಗಳು ಈ ದಾಖಲೆಗಳಿಂದ ಸಿಗುತ್ತವೆ. ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಈ ದಾಖಲೆಗಳನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳುವ ಆಸಕ್ತ ಮತ್ತು ಮನಸ್ಸನ್ನು ಬೆಳೆಸಿಕೊಳ್ಳಬೇಕು ಎಂದರು.

ಸರ್ಕಾರದ ವಿವಿಧ ಇಲಾಖೆಗಳು ಇಂದಿಗೂ ತಮಗೆ ಅತ್ಯಗತ್ಯವಾದ ಅಪರೂಪದ ದಾಖಲೆಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಹಾಗೂ ವಿಭಾಗೀಯ ಪತ್ರಾಗಾರ ಕಚೇರಿಗಳಿಂದ ಪಡೆಯುತ್ತಾರೆ. ನೂರಾರು ವರ್ಷಗಳ ಭೂ ದಾಖಲೆಗಳು, ಆಡಳಿತ ವರದಿಗಳು, ಆದೇಶಗಳು, ಜ್ಞಾಪನಾ ಪತ್ರಗಳು, ಸುತ್ತೋಲೆಗಳು, ರಾಜಾದೇಶಗಳು, ಸಾಮಾನ್ಯ ಪತ್ರಗಳು ಸೇರಿದಂತೆ ನೂರಾರು ವರ್ಷಗಳ ಅತ್ಯಮೂಲ್ಯವಾದ ಅಪ್ರಕಟಿತ ಮಾಹಿತಿಗಳು ಸದರಿ ಇಲಾಖೆಯಲ್ಲಿ ಲಭ್ಯವಿರುತ್ತವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶಾಂತಿ ಮತ್ತು ತಿಳುವಳಿಕೆ ವೇದಿಕೆ ಸಹಯೋಗದಲ್ಲಿ ಹಿರೋಶಿಮಾ ಮತ್ತು ನಾಗಾಸಾಕಿ ದುರಂತದ ಭೀಕರತೆಯನ್ನು ಸಾರುವ ಅಪರೂಪದ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ವೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಧ್ಯಾಪಕ ನಂದೀಶ, ಡಾ.ಕ್ಯಾಪ್ಟನ್ ಇಂದ್ರಾಣಿ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಇತಿಹಾಸ ವಿಷಯದ ವಿದ್ಯಾರ್ಥಿಗಳು ಹಾಜರಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 30 ಆಗಸ್ಟ್ 2024
30 AUGUST 2024

ಐತಿಹಾಸಿಕ ದಾಖಲೆಗಳು ನಾಡಿನ ಇತಿಹಾಸ, ಸಂಸ್ಕೃತಿ ಪ್ರತಿಬಿಂಬಿಸುವ ಕೈಗನ್ನಡಿ

ಮೈಸೂರು: ಐತಿಹಾಸಿಕ ದಾಖಲೆಗಳು ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿದೆ ಎಂದು ಪತ್ರಾಗಾರ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್ ಹೇಳಿದರು.

ಪಾರಂಪರಿಕ ಕೂಟ ಹಾಗೂ ಕರ್ನಾಟಕ ರಾಜ್ಯ ವಿಭಾಗೀಯ ಪತ್ರಾಗಾರ ಕಚೇರಿ ಸಹಯೋಗದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ 'ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ' ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಕಟಿತ ಹಾಗೂ ಅಪ್ರಕಟಿತ ದಾಖಲೆಗಳಾದ ಮೈಸೂರು ಅಡಳಿತ ವರದಿಗಳು, ಗೆಜೆಟಿಯರ್‌ಗಳು, ಪೊಲೀಸ್ ಡಿಂಗ್ಸ್‌ಗಳು, ವಾರ್ಷಿಕ ವರದಿಗಳು, ಆದೇಶಗಳು, ಸೆನ್ಸಸ್ ವರದಿ ಗಳು, ಕಡತ ಗಳು, ಖಾಸಗಿ ದಾಖಲೆಗಳು, ಪತ್ರಿಕೆಗಳು ಹಾಗೂ ಚಾರಿತ್ರಿಕ ಬರ ವಣಿಗೆಯ ಸಂಪೂರ್ಣ ದಾಖಲೆಗಳನ್ನು ನಮ್ಮ ವಿಭಾಗೀಯ


ವಿಜಯವಾಣಿ

ಪತ್ರಾಗಾರ ಕಚೇರಿಯಲ್ಲಿ ಸಂರಕ್ಷಿಸಿಡಲಾಗಿದೆ ಎಂದರು.

ಸಾವಿರಾರು ಹಳೆಯ ಐತಿಹಾಸಿಕ ದಾಖಲೆ, ವರದಿಗಳನ್ನು ಇತ್ತೀಚಿಗೆ ಡಿಜಿಟಲೀಕರಣ ಮಾಡಲಾಗಿದೆ. ಈ ದಾಖಲೆಗಳು ಆಸಕ್ತ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹಾಗೂ ಇತಿಹಾಸಕ್ತರಿಗೆ ಪ್ರಾಥಮಿಕ ಅಧ್ಯಯನ ಸಾಮಗ್ರಿಗಳಾಗಿವೆ. ಈ ವರೆವಿಗೂ ಪ್ರಕಟವಾಗದಿರುವ ಹಲವು ವಿಷಯಗಳು ಹಾಗೂ ಮಾಹಿತಿಗಳು ಈ

ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಪತ್ರಾಗಾರ **ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್ ಮಾತನಾಡಿದರು. ಡಾ.ಬಿ.ಆರ್. ಜಯಕುಮಾರಿ, ಶ್ರೀಧರ್, ರಮೇಶ್, ಎ.ಆರ್. ನಂದೀಶ್** ಇತರರು ಇದ್ದರು.

ದಾಖಲೆಗಳಿಂದ ಸಿಗುತ್ತವೆ. ವಿದ್ಯಾರ್ಥಿಗಳು, ಸಂಶೋಧಕರು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು. ಸರ್ಕಾರದ ವಿವಿಧ ಇಲಾಖೆಗಳು ನಮ್ಮ ಕಚೇರಿಗಳಿಂದ ಪಡೆಯುತ್ತವೆ. ನೂರಾರು ವರ್ಷಗಳ ಭೂದಾಖಲೆಗಳು, ಅಡಳಿತ ವರದಿಗಳು, ಆದೇಶಗಳು, ಜ್ಞಾಪನಾಪತ್ರಗಳು, ಸುತ್ತೋ ಲೆಗಳು, ರಾಜಾದೇಶಗಳು, ಸಾಮಾನ್ಯ ಪತ್ರಗಳು ನೇರಿದಂತೆ ನೂರಾರು ವರ್ಷಗಳ ಅತ್ಯಮೂಲ್ಯವಾದ ಅಪ್ರಕಟಿತ ಮಾಹಿತಿ ಗಳು ಸದರಿ ಇಲಾಖೆಯಲ್ಲಿ ಲಭ್ಯವಿರುತ್ತವೆ ಎಂದು ತಿಳಿಸಿದರು.

ಇಲಾಖೆಯಲ್ಲಿ ಇದುವರೆವಿಗೂ ಡಿಜಿಟಲೀಕರಣ ಮೂಲಕ ಸಂರಕ್ಷಿಸಿರುವ ಮೂಲ ದಾಖಲೆಗಳನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಪತ್ರಾಗಾರ ಸಂರಕ್ಷಣೆಯ ಮಹತ್ವ ಮತ್ತು ಉಪಯೋಗಗಳನ್ನು ತಿಳಿಸಿಹೊಟ್ಟರು. ಶಾಂತಿ ಮತ್ತು ತಿಳಿವಳಿಕೆ ವೇದಿಕೆ ಸಹಯೋಗ ದಲ್ಲಿ ಹಿರೋಶಿಮಾ ಮತ್ತು ನಾಗಾಸಾಕಿ ದುರಂತದ ಭೀಕರತೆ ಯನ್ನು ಸಾರುವ ಅಪರೂಪದ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.ಪ್ರಾಂಶುಪಾಲೆಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಮುಖ್ಯಕಾರ್ಯನಿರ್ವಹಣಾ ಅಧಿಕಾರಿ ಡಾ.ಎಸ್. ಆರ್.ರಮೇಶ್, ಪ್ರಾಧ್ಯಾಪಕರಾದ ಎ.ಆರ್.ನಂದೀಶ, ಡಾ. ಎಂ.ಆರ್.ಕೃಷ್ಣನ್ ಇಂದ್ರಾಣಿ ಇತರರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 19.08.2024

ಮಹಾಜನ ವಿದ್ಯಾಸಂಸ್ಥೆಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ವಿದ್ಯಾಸಂಸ್ಥೆಯ ವತಿಯಿಂದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ78ನೇಸ್ವಾತಂತ್ರ್ಯ ದಿನವನ್ನುಸಂಭ್ರಮದಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ. ಕೃಷ್ಣ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಮಹಾಜನ ವಿದ್ಯಾಸಂಸ್ಥೆಯನ್ನು ಕಟ್ಟಿ ಬೆಳೆಸಿದ ಶ್ರೀಮತಿ ಭಾಗ್ಯಲಕ್ಷ್ಮಮ್ಮ ರಟ್ಟೇಹಳ್ಳಿ ರಾಮಪ್ಪ ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಅವರ ಸುಪುತ್ರ ಸ್ವಾತಂತ್ರ್ಯ ಹೋರಾಟಗಾರರು, ಕೈಗಾರಿಕೋದ್ಯಮಿ ದಿವಂಗತ ಆರ್. ವಾಸುದೇವಮೂರ್ತಿ ಅವರ ಕೊಡುಗೆ ಅಪಾರವಾದದ್ದು ಎಂದರು.

ಎಸ್.ಬಿ.ಆರ್.ಆರ್. ಅಂದರೆ ನನ್ನ ದೃಷ್ಟಿಯಲ್ಲಿ ಸೃಜನಶೀಲತೆ, ಭವ್ಯತೆ, ರಾಷ್ಟ್ರ ರಕ್ಷಣೆಗೆ ನಿರ್ಮಿಸಿರುವ ಮಹಾಜನ ಶಿಕ್ಷಣ ಸಂಸ್ಥೆ ಎಂದು ವ್ಯಾಖ್ಯಾನಿಸಿದರು.

ಅಧ್ಯಕ್ಷತೆ ವಹಿಸಿದ್ದ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್‌ಅವರು ಸ್ವಾತಂತ್ರ್ಯ



ದಿನಾಚರಣೆಯ ಶುಭಾಶಯ ಕೋರಿದರು.

ಮಹಾಜನ ವಿದ್ಯಾಸಂಸ್ಥೆಯ ಅಂಗಸಂಸ್ಥೆಗಳ ಮುಖ್ಯಸ್ಥರಾದ ಡಾ. ಸಿ.ಕೆ. ರೇಣುಕಾರ್ಯ, ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ. ಎಸ್. ಆರ್. ರಮೇಶ್, ವಿಷಕಂಠಮೂರ್ತಿ, ಎಸ್.ಎಂ. ಮಹಂತೇಶಪ್ಪ, ಸುಜಾತ, ಪ್ರೊ. ಸದಾಶಿವ ಭಟ್ಟ, ಡಾ. ಪುಷ್ಪರಾಜ್ ಹೆಗಡೆ ಇದ್ದರು.ಅಂಗಸಂಸ್ಥೆಗಳ ಎಲ್ಲ ಅಧ್ಯಾಪಕರು, ಅಧ್ಯಾಪ ಕೇತರರು, ತಾಂತ್ರಿಕ ವರ್ಗದವರು ಹಾಗೂ ವಿದ್ಯಾರ್ಥಿಗಳು ಇದ್ದರು. ದೇಶಪ್ರೇಮ ಮತ್ತು ತ್ಯಾಗಬಲಿದಾನವನ್ನು ಬಿಂಬಿಸುವ ಕರು ಪ್ರಹಸನವನ್ನು ಮಹಾಜನ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಮನೋಜ್ಞವಾಗಿ ಅಭಿನಯಿಸಿದರು. ಸ್ವಾತಂತ್ರ್ಯೋತ್ಸವದ ಮಹತ್ವವನ್ನು ಮಹಾಜನ ಪ್ರೌಢಶಾಲೆಯ ವಿದ್ಯಾರ್ಥಿನಿ ಎಚ್.ಎಸ್. ಸಿಂಧು ತಮ್ಮ ಕಿರು ಭಾಷಣದ ಮೂಲಕ ವಿವರಿಸಿದರು.

ಮಹಾಜನ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಎಂ.ಪಿ. ಗಾನವಿ ನಿರೂಪಿಸಿದರು.

ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲೆ ಕೆ. ಸೌಮ್ಯಾ ಸ್ವಾಗತಿಸಿದರು, ಮಹಾಜನ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ರಾಜೇಶ್ವರಿ ಅಯ್ಯರ್‌ವಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 11.08.2024

ವಿ.ಕೃ. ಗೋಕಾಕ್ ಕನ್ನಡಿಗ, ಭಾರತೀಯ, ವಿಶ್ವಮಾನವ

ಹಿರಿಯ ವಿದ್ವಾಂಸರು, ಅನುವಾದಕರು ಡಾ.ಸಿ. ನಾಗಣ್ಣ | ವಿ.ಕೃ. ಗೋಕಾಕರ 113ನೇ ಜನ್ಮ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿ.ಕೃ. ಗೋಕಾಕ್ ಅವರು ಕನ್ನಡಿಗ, ಭಾರತೀಯ, ವಿಶ್ವಮಾನವ ಎಂದು ಹಿರಿಯ ವಿದ್ವಾಂಸರು, ಅನುವಾದಕರು ಡಾ.ಸಿ. ನಾಗಣ್ಣ ಹೇಳಿದರು.

ಎಸ್.ಬಿಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಬೆಂಗಳೂರು ಇವರ ಸಹಯೋಗದೊಂದಿಗೆ ವಿ.ಕೃ. ಗೋಕಾಕರ 113ನೇ ಜನುಮದಿನದ ಅಂಗವಾಗಿ ವಿ.ಕೃ. ಗೋಕಾಕ್ ಮತ್ತು ಕನ್ನಡ ಜಗತ್ತು ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗೋಕಾಕರು 20ನೇ ಶತಮಾನದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಗೋಕಾಕರ ಬದುಕು ಮತ್ತು ಬರಹವನ್ನು ಕುರಿತು ಸಮಗ್ರವಾಗಿ ವಿವರಿಸುತ್ತಾ, ಬೆಳಗಾವಿ ಜಿಲ್ಲೆಯ ಗೋಕಾಕನಲ್ಲಿ ಇವರ ಪೂರ್ವಜರಿದ್ದರು. ಪತ್ರಪುಷ್ಪ ಲೇಖನದಲ್ಲಿ ಅವರ ಬಾಲ್ಯ ಜೀವನದ ಬಗ್ಗೆ ಪ್ರಸ್ತುತಪಡಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಮತ್ತು ವಿ.ಕೃ. ಗೋಕಾಕ್ ಅವರಲ್ಲಿ ಸಾಮ್ಯತೆ ಇದೆ. ವಿ.ಕೃ. ಗೋಕಾಕ್ ಅವರು ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗಲೇ ಇಂಗ್ಲಿಷ್ ಭಾಷೆಯಲ್ಲಿ ಕವಿತೆ ರಚಿಸುವ ಸಾಮರ್ಥ್ಯವನ್ನು ರೂಢಿಸಿಕೊಂಡಿದ್ದರು. ಬೇಂದ್ರೆಯವರ ಪ್ರಭಾವದಿಂದ ವಿ.ಕೃ. ಗೋಕಾಕ್ ಅವರು ಕನ್ನಡದಲ್ಲಿ ಬರೆಯಲು



ಪ್ರಾರಂಭಿಸಿದರು.

ಜೊತೆಗೆ ಬೇಂದ್ರೆಯವರನ್ನು ಗುರು ಎಂದು ಪರಿಭಾವಿಸಿದ್ದರು. ಬೇಂದ್ರೆಯವರನ್ನು ಭೇಟಿಯಾಗದಿದ್ದಲ್ಲಿ ನನ್ನ ಕಾವ್ಯ ಕನ್ನಿಕ ಇಂಗ್ಲಿಷ್ ಭಾಷೆಯಲ್ಲಿ ಕಮರಿ ಹೋಗುತ್ತಿತ್ತು. ಬೇಂದ್ರೆಯವರ ಸಹಕಾರದಿಂದ ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡಲು ಸಾಧ್ಯವಾಯಿತು ಎಂದು ಸ್ವತಃ ಗೋಕಾಕ್ ಅವರೇ ಹೇಳಿಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, ಕನ್ನಡವನ್ನು ಜಾಗತಿಕವಾಗಿ ಮತ್ತು ಜಾಗತಿಕವಾದ ಸಂಗತಿಗಳನ್ನು ಕನ್ನಡಕ್ಕೆ ಸಮರ್ಥವಾಗಿ ತಂದವರಲ್ಲಿ ವಿ.ಕೃ. ಗೋಕಾಕ್ ಪ್ರಮುಖರು. ನಮ್ಮಲ್ಲಿ ಕುವೆಂಪು ಅವರನ್ನು ಕನ್ನಡದ ವರ್ಡ್ಸ್‌ವರ್ತ್ ಎನ್ನುತ್ತಾರೆ, ಅದು ಹಾಗಲ್ಲ. ವರ್ಡ್ಸ್‌ವರ್ತ್ ಇಂಗ್ಲಿಷಿನ ಕುವೆಂಪು ಎನ್ನುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್. ಆರ್. ತಿಮ್ಮೇಗೌಡ, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಅಭಿನವ ರವಿಕುಮಾರ್ ಇದ್ದರು. ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಎಂ. ನಾಗೇಶ, ಸಿ.ಎಂ. ಕಿರಣ್ ಕುಮಾರ್, ಜೆ. ಮನೋಜ್ ಕುಮಾರ್, ವಿನಾಯಕ ಕೃಷ್ಣ, ಗೋಕಾಕರ ವಿದ್ಯಾರ್ಥಿನಿ ಲತಾ ಎಲ್. ನಾಡಿಗೇರ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ವಿನೋದಮ್ಮ ನಿರೂಪಿಸಿದರು.

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಸೋಮವಾರ • ಆಗಸ್ಟ್ 12, 2024

'ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ ವಿ.ಕೃ.ಗೋಕಾಕ್'

ಪ್ರಜಾವಾಣಿ ವಾರ್ತೆ

ಮೈಸೂರು: 'ಕವಿ ವಿ.ಕೃ.ಗೋಕಾಕ್ ಅವರು ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಲು ಅಪಾರ ಕೊಡುಗೆ ನೀಡಿದ್ದಾರೆ' ಎಂದು ಲೇಖಕ ಪ್ರೊ.ಸಿ.ನಾಗಣ್ಣ ಸ್ಮರಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ಬೆಂಗಳೂರಿನ ವಿನಾಯಕ ಗೋಕಾಕ ವಾಙ್ಮಯ ಟ್ರಸ್ಟ್ ಸಹಯೋಗದೊಂದಿಗೆ ವಿ.ಕೃ.ಗೋಕಾಕ್ ಜನ್ಮದಿನದ ಪ್ರಯುಕ್ತ ಈಚೆಗೆ ಆಯೋಜಿಸಿದ್ದ 'ವಿ.ಕೃ.ಗೋಕಾಕ್ ಮತ್ತು ಕನ್ನಡ ಜಗತ್ತು' ಕುರಿತ ಉಪನ್ಯಾಸ, ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗೋಕಾಕ್ ಅಗ್ರಗಣ್ಯರು. ಅವರ ಸಮುದ್ರ ಗೀತೆಗಳು ಪ್ರಸಿದ್ಧವಾದದ್ದು. ಕನ್ನಡ ಜಗತ್ತು ವಿಸ್ತಾರಗೊಳಿಸುವ ಜೊತೆಗೆ, ಕನ್ನಡಿಗರು ಹೆಮ್ಮೆಪಡುವ ರೀತಿಯಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧರಾದವರು. ನವೋದಯದಿಂದ ನವ್ಯದವರೆಗೂ ಹೊಸಗನ್ನಡದಲ್ಲಿ ಸ್ವಚ್ಛಂದದ ಕಾವ್ಯ ರಚಿಸಿದವರು. ಇಂದಿಲ್ಲ ನಾಳೆ ಎಂಬ ಚಂಪೂ ಕಾವ್ಯವಲ್ಲದೆ ಇಂಗ್ಲಿಷ್‌ನಲ್ಲೂ ಅನೇಕ ಕೃತಿಗಳನ್ನು ರಚಿಸಿದ್ದಾರೆ' ಎಂದು ತಿಳಿಸಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ನಡೆದ 'ವಿ.ಕೃ.ಗೋಕಾಕ್ ಮತ್ತು ಕನ್ನಡ ಜಗತ್ತು' ಕುರಿತ ಕಾರ್ಯಕ್ರಮವನ್ನು ಸಾಹಿತಿ ಪ್ರೊ. ಸಿ.ನಾಗಣ್ಣ ಉದ್ಘಾಟಿಸಿದರು

ಚಿಂತಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, 'ಕನ್ನಡವನ್ನು ಜಾಗತಿಕವಾಗಿ ಮತ್ತು ಜಾಗತಿಕವಾದ ಸಂಗತಿಗಳನ್ನು ಕನ್ನಡಕ್ಕೆ ಸಮರ್ಥವಾಗಿ ತಂದವರಲ್ಲಿ ವಿ.ಕೃ.ಗೋಕಾಕ್ ಪ್ರಮುಖರು. ನಮ್ಮಲ್ಲಿ ಕುವೆಂಪು ಅವರನ್ನು ಕನ್ನಡದ ವರ್ಡ್ಸ್‌ವರ್ತ್ ಎನ್ನುತ್ತಾರೆ. ಅದು ಹಾಗಲ್ಲ. ವರ್ಡ್ಸ್‌ವರ್ತ್ ಇಂಗ್ಲಿಷ್‌ನ ಕುವೆಂಪು ಎನ್ನುವಂತಾಗಬೇಕು' ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್. ತಿಮ್ಮೇಗೌಡ, ಅಭಿನವ ರವಿಕುಮಾರ್, ವಿನೋದಮ್ಮ, ಅಕ್ಷೆಭ್ಯ, ನಾಗೇಶ ಎಂ, ಕಿರಣ್‌ಕುಮಾರ್ ಸಿ.ಎಂ, ಮನೋಜ್‌ಕುಮಾರ್ ಜೆ, ಲತಾ ಎಲ್. ನಾಡಿಗೇರ ಹಾಜರಿದ್ದರು.

ಪ್ರಜಾವಾಣಿ
ಗುರುವಾರ • ಆಗಸ್ಟ್ 8, 2024

ವಿನಾಯಕ ಗೋಕಾಕ್ ವಾಜ್ಮಯ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ: ವಿ.ಕೃ. ಗೋಕಾಕ್ ಮತ್ತು ಕನ್ನಡ ಜಗತ್ತು ಕಾರ್ಯಕ್ರಮ, ಭಾಗವಹಿಸುವವರು- ಸಾಹಿತಿ ಪ್ರೊ. ಸಿ.ನಾಗಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್. ತಿಮ್ಮೇಗೌಡ, ಚಿಂತಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ. ಸ್ಥಳ: ಕಾಲೇಜಿನ ಎವಿಸಿ-3 ಸಭಾಂಗಣ, ಕನ್ನಡ ವಿಭಾಗ, ಜಯಲಕ್ಷ್ಮೀಪುರಂ, ಬೆಳಿಗ್ಗೆ 10.30.


ಪ್ರೊ.ಸಿ.ನಾಗಣ್ಣ

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 8 ಆಗಸ್ಟ್ 2024

■ **ವಿನಾಯಕ ಗೋಕಾಕ್ ವಾಜ್ಮಯ ಟ್ರಸ್ಟ್, ಬೆಂಗಳೂರು, ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ :** ವಿ.ಕೃ. ಗೋಕಾಕರ 113ನೇ ಜನುಮ ದಿನದ ಸಂದರ್ಭದಲ್ಲಿ ವಿ.ಕೃ. ಗೋಕಾಕ್ ಮತ್ತು ಕನ್ನಡ ಜಗತ್ತು ಕುರಿತು ವಿಚಾರ ಸಂಕಿರಣ. ಉಪಸ್ಥಿತರು : ಹಿರಿಯ ವಿದ್ವಾಂಸ ಡಾ. ಸಿ. ನಾಗಣ್ಣ. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್. ಜಯಕುಮಾರಿ. ಸ್ಥಳ: ಕಾಲೇಜು ಆವರಣ. ಬೆಳಗ್ಗೆ 10.30ಕ್ಕೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 13.08.2024

ಯಾರು ಸಮಕಾಲೀನವಾಗಿ ಬದುಕುವುದಿಲ್ಲವೋ ಅವರು ಯಶಸ್ವೀ ಅಧ್ಯಾಪಕನಾಗಲು ಸಾಧ್ಯವಿಲ್ಲ

ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ | ಅಧ್ಯಾಪಕರ ಕೌಶಲ ಬಲವರ್ಧನೆ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಅಧ್ಯಾಪಕರು ಯಾವಾಗಲೂ ಕಲಿಕಾ ಮನೋಭಾವವನ್ನು ಹೊಂದಬೇಕಾಗುತ್ತದೆ. ಯಾವ ಅಧ್ಯಾಪಕ ಸಮಕಾಲೀನವಾಗಿ ಬದುಕುವುದಿಲ್ಲವೋ ಅವನು ಯಶಸ್ವಿ ಅಧ್ಯಾಪಕನಾಗಲು ಸಾಧ್ಯವಿಲ್ಲ ಎಂದು ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಅಧ್ಯಕ್ಷ ಹಾಗೂ ಬಹುಮುಖಿ ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ಅಭಿನವ ಸಹಯೋಗದೊಂದಿಗೆ ಕಲಿಸುತ್ತಾ ಕಲಿಯುವ ಪರಿ ಕುರಿತು ಅಧ್ಯಾಪಕರ ಕೌಶಲ ಬಲವರ್ಧನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಧ್ಯಾಪಕನಿಗೆ ಯಾವುದೇ ವಿಷಯದಲ್ಲಿ ಪ್ರಭುತ್ವ ಇಲ್ಲದಿದ್ದರೆ, ಅತ್ಯುತ್ತಮ ಅಧ್ಯಾಪಕರಾಗಲು ಸಾಧ್ಯವಿಲ್ಲ ಎಂದರು.

ಅಧ್ಯಾಪಕರಿಗೆ ತುಂಬಾ ಸವಾಲುಗಳಿವೆ. ಏಕೆಂದರೆ ಸದಾಯುವ ಮನಸ್ಸುಗಳ ಜೊತೆ ಮುಖಾಮುಖಿ ಆಗಿರಬೇಕಾಗುತ್ತದೆ. ಅಧ್ಯಾಪಕರು ಕಲಿಯುವುದರಲ್ಲಿ ಹಾಗೂ ಕಲಿಸುವುದರಲ್ಲಿ ಆಸಕ್ತಿಯನ್ನು ಹೊಂದಿದ್ದರೆ ಯುವ ಮನಸ್ಸುಗಳ ಜೊತೆಗಿನ ಒಡನಾಟ, ಸಂತೋಷ ಮತ್ತು ಸಂಭ್ರಮವನ್ನು ತರುವುದರಲ್ಲಿ ಆಶ್ಚರ್ಯವಿಲ್ಲ.



ವಿದ್ಯಾರ್ಥಿಗಳು ಎಂದು ಕೆಟ್ಟವರಾಗಿರುವುದಿಲ್ಲ. ಅವರಿಗೆ ಸರಿಯಾದ ಮಾದರಿ ಕೊಡಬೇಕಾಗಿದೆ ಎಂದರು.

ಹಿಂದಿನ ತಲೆಮಾರಿನ ಅಧ್ಯಾಪಕರಿಗಿರುವ ಸದಾ ತಾರುಣ್ಯದಿಂದ ಕೂಡಿರುವ ಉತ್ಸಾಹ, ಇಂದಿನ ಬಹುತೇಕ ಅಧ್ಯಾಪಕರಲ್ಲಿ ಮಾತ್ರವಲ್ಲ, ಬಹುತೇಕ ವಿದ್ಯಾರ್ಥಿಗಳಲ್ಲೂ ಇಲ್ಲದಿರುವುದು ವಿಪರ್ಯಾಸ. ಆಧುನಿಕ ವ್ಯವಸ್ಥೆಯಲ್ಲಿ ಕಾರ್ಪೋರೇಟ್ ಸಂಸ್ಕೃತಿ ಹೆಚ್ಚಾಗಿದೆ. ಶಿಕ್ಷಣ ವ್ಯಾಪಾರೀಕರಣವಾಗಿದೆ. ಬಹುಪಾಲು ಶಿಕ್ಷಣ ಸಂಸ್ಥೆಗಳು ಜ್ಞಾನವನ್ನು ಮಾರಾಟದ ವಸ್ತುವನ್ನಾಗಿಸಿದೆ. ಹಿಂದೆ ಶಿಕ್ಷಕರಿಂದ ಶಿಕ್ಷಣ ಸಂಸ್ಥೆಯನ್ನು ಗುರುತಿಸಲಾಗುತ್ತಿತ್ತು. ಆದರೆ, ಇಂದು ಅವರ ಸ್ಥಾನವನ್ನು ಬೇರೆಯವೇ ಆಕ್ರಮಿಸಿಕೊಂಡಿವೆ. ಜೊತೆಗೆ ಈಗ ಬಹುತೇಕ ಅಧ್ಯಾಪಕರು ಅಧ್ಯಯನದಿಂದ ದೂರವಾಗುತ್ತಿದ್ದಾರೆ ಎಂದು ಅವರು ವಿಷಾದಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್, ಲೇಖಕ ರವಿಕುಮಾರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಇದ್ದರು. ಡಾ.ಎಚ್.ಆರ್. ತಿಮ್ಮೇಗೌಡ ನಿರೂಪಿಸಿದರು. ಡಾ. ಪ್ರಿಯಾಂಕ ಶೆಣೈ ಪ್ರಾರ್ಥಿಸಿದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 13 ಆಗಸ್ಟ್ 2024
13 AUGUST 2024

ಅಧ್ಯಾಪಕರಿಗೆ ಅಧ್ಯಯನ ಅಗತ್ಯ



ವಿಜಯವಾಣಿ ಚಿತ್ರ

ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು. ಅಭಿನವ ರವಿಕುಮಾರ್, ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಡಾ.ಬಿ.ಆರ್.ಜಯಕುಮಾರಿ, ಡಾ.ಎಚ್.ಆರ್.ತಿಮ್ಮೇಗೌಡ ಇತರರಿದ್ದರು.

ಮೈಸೂರು: ಬಹುತೇಕ ಅಧ್ಯಾಪಕರು ಅಧ್ಯಯನದಿಂದ ದೂರವಾಗುತ್ತಿದ್ದಾರೆ. ಸಮಕಾಲೀನವಾಗಿ ಬದುಕುವುದಿಲ್ಲವೋ ಅವರು ಯಶಸ್ವಿ ಅಧ್ಯಾಪಕನಾಗಲು ಸಾಧ್ಯವಿಲ್ಲ ಎಂದು ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಬೆಂಗಳೂರಿನ ಅಭಿನವ ಸಹಯೋಗದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ 'ಅಧ್ಯಾಪಕರ ಕೌಶಲ ಬಲವರ್ಧನೆ ಕಲಿಸುತ್ತಾ ಕಲಿಯುವ ಪರಿ' ಕುರಿತು ಕಾರ್ಯಕ್ರಮದಲ್ಲಿ ಮಾತನಾಡಿ, ಅಧ್ಯಾಪಕರು ಯಾವಾಗಲೂ ಕಲಿಕಾ ಮನೋಭಾವ ಹೊಂದಬೇಕಾಗುತ್ತದೆ. ಅಧ್ಯಾಪಕನಿಗೆ ಯಾವುದೇ ವಿಷಯದಲ್ಲಿ ಪ್ರಭುತ್ವ ಇಲ್ಲದಿದ್ದರೆ, ಅತ್ಯುತ್ತಮ ಅಧ್ಯಾಪಕರಾಗಲು ಸಾಧ್ಯವಿಲ್ಲ. ಇವರಿಗೆ ಸವಾಲುಗಳಿವೆ. ಏಕೆಂದರೆ ಸದಾ ಯುವ ಮನಸ್ಸುಗಳ ಜತೆಗೆ ಮುಖಾಮುಖಿ ಆಗಬೇಕಾಗುತ್ತದೆ. ಅಧ್ಯಾಪಕರು ಕಲಿಯುವುದರಲ್ಲಿ ಹಾಗೂ ಕಲಿಸುವುದರಲ್ಲಿ ಆಸಕ್ತಿ ಹೊಂದಿದ್ದರೆ ಯುವ ಮನಸ್ಸುಗಳ ಜತೆಗಿನ ಒಡನಾಟ, ಸಂತೋಷ ತರುವುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ, ವಿದ್ಯಾರ್ಥಿಗಳು ಎಂದು ಕೆಟ್ಟವರಾಗಿರುವುದಿಲ್ಲ. ಅವರಿಗೆ ಸರಿಯಾದ ಮಾದರಿ ಕೊಡಬೇಕಾಗಿದೆ ಎಂದರು.

ಅಧ್ಯಾಪಕ ವೃತ್ತಿ ಎಲ್ಲ ವೃತ್ತಿಗಿಂತಲೂ ಪವಿತ್ರವಾದ ವೃತ್ತಿ. ಆದರಲ್ಲೂ ಕಾಲೇಜು ಅಧ್ಯಾಪಕರಿಗಿರುವ ಭಾಗ್ಯವೇ ಸರಿ. ಅಧ್ಯಾಪಕರು ಸದಾ ಯುವ ಮನಸ್ಸುಗಳ ಒಡನಾಟದಲ್ಲಿರುತ್ತಾರೆ. ಯೌವನಕ್ಕೆ ಉತ್ಸಾಹ, ಬೆಲುವು ಭಾಗ್ಯ ಇರುತ್ತದೆ. ಆದ್ದರಿಂದ ಕಾಲೇಜು ಅಧ್ಯಾಪಕರಾಗಿರುವವರು ಸದಾ ತಾರುಣ್ಯ ಮತ್ತು ಉತ್ಸಾಹದಿಂದ ಇರಲು ಸಾಧ್ಯವಾಗುತ್ತದೆ. ಆದರೆ ಇಂದು ಕೆಲ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಂತೋಷಪಡುವ ಮನಸ್ಸನ್ನು ಕಳೆದುಕೊಳ್ಳುತ್ತಿರುವುದು ಶಿಕ್ಷಣ ವ್ಯವಸ್ಥೆಯ ದುರಂತವೇ ಸರಿ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಭಾರತೀಯ ಪರಂಪರೆ ಗುರುಗಳನ್ನು ತಂದೆ, ತಾಯಿಯ ಸ್ಥಾನದಲ್ಲಿ ನೋಡಿದೆ. ಅಧ್ಯಾಪಕರು ತಮ್ಮ ಹೊಣೆಗಾರಿಕೆಯನ್ನು ಎಂದು ಮರೆಯಬಾರದು ಎಂದು ತಿಳಿಸಿದರು.

ಲೇಖಕ ಅಭಿನವ ರವಿಕುಮಾರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಅಧ್ಯಾಪಕರಾದ ಡಾ.ಪ್ರಿಯಾಂಕಾ ಶೆಣೈ ಮತ್ತು ಪ್ರೊ.ಶಿವಸ್ವಾಮಿ ಇನ್ನಿತರರಿದ್ದರು.

MFGE In the Eyes of the Press.....

ಪ್ರಜಾವಾಣಿ

ಗುರುವಾರ • ಆಗಸ್ಟ್ 8, 2024

ಅಭಿನವ ಬೆಂಗಳೂರು, ಮಹಾಜನ ವಿದ್ಯಾಸಂಸ್ಥೆ: ಅಧ್ಯಾಪಕರ ಕೌಶಲ ಬಲವರ್ಧನೆ ಕಾರ್ಯಕ್ರಮ, ಭಾಗವಹಿಸುವವರು- ಚಿಂತಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಲೇಖಕ ಅಭಿನವ ರವಿಕುಮಾರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಸ್ಥಳ: ಎವಿಸಿ-3 ಸಭಾಂಗಣ, ಎಸ್‌ಬಿಆರ್‌ಆರ್ ಮಹಾಜನ ಕಾಲೇಜು, ಜಯಲಕ್ಷ್ಮೀಪುರಂ, ಮಧ್ಯಾಹ್ನ 2.30.



ನರಹಳ್ಳಿ ಬಾಲಸುಬ್ರಹ್ಮಣ್ಯ

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 8 ಆಗಸ್ಟ್ 2024

■ **ಅಭಿನವ ಬೆಂಗಳೂರು, ಮಹಾಜನ ವಿದ್ಯಾಸಂಸ್ಥೆ :** ಅಧ್ಯಾಪಕರ ಕೌಶಲ ಬಲವರ್ಧನೆ ಕಾರ್ಯಕ್ರಮ ಕಲಿಸುತ್ತಾ ಕಲಿಯುವ ಪರಿ, ಉಪಸ್ಥಿತರು : ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಲೇಖಕ ಅಭಿನವ ರವಿಕುಮಾರ್, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್.ಜಯಕುಮಾರಿ, ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2.30ಕ್ಕೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 15.08.2024

ಸುಸ್ವಾಗತ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯಕ್ರಮ

ಪದವಿ ವಿದ್ಯಾರ್ಥಿಗಳಿಗೆ ಪೂರ್ವ ಪರಿಚಯ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಪದವಿ ಪ್ರೋಗ್ರಾಂಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪೂರ್ವ ಪರಿಚಯ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಅತ್ಯುನ್ನತ ಶೈಕ್ಷಣಿಕ ಗುಣಮಟ್ಟದ ಕಾರಣಕ್ಕಾಗಿ ನಮ್ಮ ಕಾಲೇಜಿಗೆ ನ್ಯಾಕ್ ನಿಂದ ಎ ಮಾನ್ಯತೆ ಹಾಗೂ ಸ್ವಾಯತ್ತತೆ ದೊರಕಿದೆ. ಇದಕ್ಕೆ ಪೂರಕವಾಗಿ ವಿದ್ಯಾಸಂಸ್ಥೆಯು ಎಲ್ಲಾ ಸವಲತ್ತುಗಳನ್ನು ಒದಗಿಸುತ್ತಿದೆ. ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನಮ್ಮ ಸಂಸ್ಥೆ ನೀಡುತ್ತಿದೆ ಎಂದರು.

ಕಾಲೇಜು ಕೊಡುವ ಶೈಕ್ಷಣಿಕ, ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡು ವ್ಯಕ್ತಿತ್ವ ವಿಕಸನಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾ, ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಕಾಲೇಜಿನ ವಿದ್ಯಾರ್ಥಿ ಸಂಸತ್



ಮೂಲಕ ಒದಗುವ ಅವಕಾಶಗಳನ್ನು ಬಳಸಿಕೊಂಡು ನಾಯಕತ್ವಗುಣವನ್ನು ಬೆಳೆಸಿಕೊಳ್ಳಬೇಕು. ಹಾಗೆಯೇ ಕೇವಲ ತರಗತಿ ಕಲಿಕೆಗೆ ಮಾತ್ರ ಪ್ರಾಮುಖ್ಯತೆ ಕೊಡದೆ ಕಾಲೇಜು ನೀಡುವ ಹಲವಾರು ಮೌಲ್ಯವರ್ಧಿತ ಕೋರ್ಸ್ ಗಳಿಗೆ ಸೇರಿಕೊಂಡು ನೈಪುಣ್ಯ ವರ್ಧನೆ ಆಧಾರಿತ ಶಿಕ್ಷಣದ ನೀತಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಆಂಗ್ಲ ವಿಭಾಗದ ಮುಖ್ಯಸ್ಥೆ ಡಿ. ಗೀತಾ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗ್ಡೆ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಅವರು ಕಾಲೇಜಿನ ಸೌಲಭ್ಯ ಮತ್ತು ನಿಯಮಗಳ ಕುರಿತು ವಿವರಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಎಚ್. ಎನ್. ಭಾಸ್ಕರ್, ಪಿ. ಮಧುಸೂಧನ್, ಎನ್.ಸಿ.ಸಿ ಏರ್ ವಿಂಗ್ ಆಫೀಸರ್ ಡಾ.ಪಿ.ಜಿ. ಪುಷ್ಪರಾಣಿ, ಡಾ.ಎಂ.ಆರ್.ಇಂದ್ರಾಣಿ, ಸುನಿತಾ, ಡಾ.ಬಿ.ಆರ್. ಆನಿತಾ ಮೊದಲಾದವರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 22.08.2024

ಮಹಾಜನ ಕಾಲೇಜಿನಲ್ಲಿ ಸದ್ಭಾವನಾ ದಿನಾಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಜನ್ಮ ದಿನದ ನೆನಪಿಗಾಗಿ ಮಂಗಳವಾರ ಸದ್ಭಾವನಾ ದಿನವನ್ನು ಆಚರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಎಲ್ಲಾ ಧರ್ಮಗಳು, ಭಾಷೆಗಳು ಮತ್ತು ಪ್ರದೇಶಗಳ ಜನರಲ್ಲಿ ರಾಷ್ಟ್ರೀಯ ಏಕೀಕರಣ ಹಾಗೂ ಕೋಮು ಸೌಹಾರ್ದತೆಯನ್ನು ಉತ್ತೇಜಿಸುವುದು ಈ ದಿನದ ವಿಶೇಷತೆಯಾಗಿದೆ. ರಾಜೀವ್ ಗಾಂಧಿಯವರು ಏಕತೆಯ ಪ್ರಬಲ ಪ್ರತಿಪಾದಕರಾಗಿದ್ದು, ವಿವಿಧ ಸಮುದಾಯಗಳು ಮತ್ತು ಪ್ರದೇಶಗಳ ನಡುವಿನ ಬಾಂಧವ್ಯವನ್ನು ಬಲಪಡಿಸಲು ಅವಿರತವಾಗಿ ಶ್ರಮಿಸಿದರು ಎಂದರು.

ಸದ್ಭಾವನಾ ದಿನಾಚರಣೆಯು ನ್ಯಾಯ, ಸಹಾನುಭೂತಿ ಮತ್ತು ತಿಳುವಳಿಕೆಯ ತತ್ವಗಳನ್ನು ಗೌರವಿಸುವ ಮತ್ತು ಎತ್ತಿ ಹಿಡಿಯುವ ರಾಷ್ಟ್ರದ ಭಾವನೆಗಳನ್ನು ಪ್ರತಿಧ್ವನಿಸುವ ಒಂದು ಏಕೀಕೃತ ಅಂತರ್ಗತ ಸಮಾಜದ ಆದರ್ಶಗಳೊಂದಿಗೆ ಸಂಯೋಜಿತವಾಗಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಅನುಸರಿಸುವ ನಮ್ಮ ದೇಶದ ಮಹತ್ವವನ್ನು ಅವರು ಹೇಳಿದರು.

ಯುವಜನತೆಗೆ ಸೌಹಾರ್ದತೆಯ ಮನೋಭಾವದ ಅವಶ್ಯಕತೆ ಹಾಗೂ ಅಗತ್ಯತೆಯನ್ನು ತಿಳಿಸುವುದರ ಜೊತೆಗೆ ಮಾನವೀಯತೆಯನ್ನು ಮರೆತಿರುವ ಜನರು ಮಾನಸಿಕವಾಗಿ ವಿಕಸನಗೊಳ್ಳ ಬೇಕಾಗಿರುವುದು ಅನಿವಾರ್ಯ ಎಂದು ಅವರು ಹೇಳಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯದ ಶಿಕ್ಷಕರಾದ ಡಾ.ಬಿ.ಕೆ. ಸಾಧನಾ ಮಾತನಾಡಿ, ಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆಗಳ ಹೆಸರಿನಲ್ಲಿ ಒಡೆದು ಹೋಗುತ್ತಿರುವ ನಮ್ಮ ದೇಶಕ್ಕೆ ಏಕತೆಯನ್ನು ತಂದು ಕೊಡುವುದೇ ಸೌಹಾರ್ದತೆ ಮತ್ತು ಸದ್ಭಾವನೆಗಳು. ಈ ನಿಟ್ಟಿನಲ್ಲಿ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿಯವರು ಏಕತೆಯ ಪ್ರಬಲ ಪ್ರತಿಪಾದಕರಾಗಿದ್ದು, ವಿವಿಧ ಸಮುದಾಯಗಳು ಮತ್ತು ಪ್ರದೇಶಗಳ ನಡುವಿನ ಭಾಂದವ್ಯವನ್ನು ಬಲಪಡಿಸಲು ಅವಿರತವಾಗಿ ಶ್ರಮಿಸಿದರು ಎಂದು ತಿಳಿಸಿದರು.

ಬಿ.ಕೆ. ಯೋಗೀಶ್ವರಿ, ಎನ್‌ಎಸ್‌ಎಸ್ ಸ್ವಯಂ ಸೇವಕರು, ವಿದ್ಯಾರ್ಥಿಗಳು ಇದ್ದರು. ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ ಸ್ವಾಗತಿಸಿದರು, ಡಾ.ಸಿ.ಎಸ್. ಸಿದ್ಧರಾಜು ವಂದಿಸಿದರು. ಆರ್. ಅಂಕಿತಾ ನಿರೂಪಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 25.08.2024

ಇತರ ಬಾಹ್ಯಾಕಾಶ ಸಂಸ್ಥೆಗಳನ್ನು ಹಿಂದಿಕ್ಕಿ ಮುನ್ನಡೆಯಲಿದೆ ಇಸ್ರೋ

ನಿವೃತ್ತ ಪ್ರಾಂಶುಪಾಲ ಡಾ.ಎಸ್.ಎನ್. ಪ್ರಸಾದ್ | ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ

• ಕನ್ನಡಪ್ರಭ ವಾರ್ತೆ ಮೈಸೂರು

ಇನ್ನೂ ಕೆಲವೇ ದಿನಗಳಲ್ಲಿ ಇಸ್ರೋ ಇತರ ಬಾಹ್ಯಾಕಾಶ ಸಂಸ್ಥೆಗಳನ್ನು ಹಿಂದಿಕ್ಕಿ ಮುನ್ನಡೆಯಲಿದೆ ಎಂದು ನಿವೃತ್ತ ಪ್ರಾಂಶುಪಾಲ ಡಾ.ಎಸ್.ಎನ್. ಪ್ರಸಾದ್ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಶನಿವಾರ ನಡೆದ ವಾರದ ಸಮಾವೇಶದಲ್ಲಿ ಭೌತಶಾಸ್ತ್ರ ವಿಭಾಗವು ಆಯೋಜಿಸಿದ್ದ ರಾಷ್ಟ್ರೀಯ ಬಾಹ್ಯಕಾಶ ದಿನಾಚರಣೆಯಲ್ಲಿ ಮಾತನಾಡಿದ ಅವರು, ಭಾರತದ ಇಸ್ರೋ, ಅಮೆರಿಕಾ, ಚೀನಾ, ರಷ್ಯಾ ಹೀಗೆ ಹಲವಾರು ದೇಶದ ಬಾಹ್ಯಾಕಾಶ ಸಂಸ್ಥೆಗಳ ಜೊತೆ ಪೈಪೋಟಿ ನಡೆಸುವಷ್ಟು ಎತ್ತರವಾಗಿ ಬೆಳೆದಿದೆ ಎಂದರು.

ಹಿಂದೆಲ್ಲಾ ಬಾಹ್ಯಾಕಾಶ ನೌಕೆಗಳನ್ನು ಎತ್ತಿನ ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಉಡಾವಣೆ ಮಾಡಬೇಕಾಗಿತ್ತು. ಆದರೆ, ಭಾರತವು ಆಧುನಿಕ ತಂತ್ರಜ್ಞಾನಗಳನ್ನು ಸಮೃದ್ಧವಾಗಿ ಬಳಸುತ್ತಿರುವ ಕಾರಣ ಬಾಹ್ಯಾಕಾಶ ಕ್ಷೇತ್ರದಲ್ಲಿ ಯಶಸ್ಸನ್ನು ಕಾಣುತ್ತಿದೆ ಎಂದು ಅವರು ಹೇಳಿದರು.



ಮುಂಬರುವ ದಿನಗಳಲ್ಲಿ ಇಸ್ರೋ ಅನೇಕ ಯೋಜನೆಗಳನ್ನು ಹೊರತರಲು ಕಾರ್ಯ ನಿರ್ವಹಿಸುತ್ತಿದೆ. ಗಗನಯಾನ ಯೋಜನೆಯ ಮೂಲಕ ಇನ್ನು ಕೆಲವೇ ವರ್ಷಗಳಲ್ಲಿ ಭಾರತೀಯರನ್ನು ಅಂತರಕ್ಷಕ್ಕೆ ಕಳುಹಿಸಲಿದ್ದಾರೆ.

ಮುಂದಿನ ಚಂದ್ರಯಾನ ಯೋಜನೆಗಳಲ್ಲಿ ಮಿಷನ್‌ಗಳು ಚಂದ್ರನ ಮೇಲ್ಮೈನಿಂದ ಮಣ್ಣುಗಳು ಮತ್ತು ಲೋಹಗಳನ್ನು ಹೊತ್ತುಕೊಂಡು ಭೂಮಿಗೆ ಹಿಂತಿರುಗಿಸುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಪೂರ್ಣಿಮಾ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 25 ಆಗಸ್ಟ್ 2024

'ಚಂದ್ರಯಾನ–3' ಯಶಸ್ವಿಯಾದ ದಿನವೇ 'ರಾಷ್ಟ್ರೀಯ ಬಾಹ್ಯಾಕಾಶ ದಿನ'



ಮೈಸೂರಿನ ಆರ್‌ಐಇ ಕಾಲೇಜಿನ ನಿವೃತ್ತ ಪ್ರಾಂಶು ಪಾಲರಾದ ಡಾ.ಎಸ್‌ಎನ್ ಪ್ರಸಾದ್ ಮಾತನಾಡು ತ್ತಿರುವುದು.

ಮೈಸೂರು,ಆ.24–ಮೈಸೂರಿನ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಡೆದ ವಾರದ ಸಮಾವೇಶದಲ್ಲಿ ಭೌತಶಾಸ್ತ್ರ ವಿಭಾಗದ ವತಿಯಿಂದ 'ರಾಷ್ಟ್ರೀಯ ಬಾಹ್ಯಕಾಶ ದಿನ'ದ ಬಗ್ಗೆ ಮಾಹಿತಿ ನೀಡಲಾಯಿತು.

ಸಮಾವೇಶಕ್ಕೆ ಪ್ರಸ್ತುತ ನ್ಯಾಕ್‌ನಲ್ಲಿ ಮೌಲ್ಯಮಾಪಕರಾಗಿ ಮತ್ತು 'ಕಾಸ್ಮೋಸ್' ಬಾಹ್ಯಾಕಾಶ ಯೋಜನೆಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವ, ಮೈಸೂರಿನ ಆರ್‌ಐಇ ಕಾಲೇಜಿನ ನಿವೃತ್ತ ಪ್ರಾಂಶು ಪಾಲರಾದ ಡಾ.ಎಸ್.ಎನ್.ಪ್ರಸಾದ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ರಾಷ್ಟ್ರೀಯ ಬಾಹ್ಯಾಕಾಶ ದಿನದ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿ ಸುತ್ತಾ ಮಾತನಾಡಿದ ಅವರು, "2023 ಆಗಸ್ಟ್ 23ರಂದು ಇಸ್ರೋ ಸಂಸ್ಥೆಯು 'ಚಂದ್ರಯಾನ–3' ಅನ್ನು ಯಶಸ್ವಿಗೊಳಿ ಸಿದ ಸಂಭ್ರಮದ ದಿನದ ಪರಿಣಾಮ ವಾಗಿ ಈ ವರ್ಷದಿಂದ 'ರಾಷ್ಟ್ರೀಯ ಬಾಹ್ಯಾಕಾಶ ದಿನ'ವನ್ನಾಗಿ ಆಚರಿಸಲಾಗು ತ್ತಿದೆ. ಶ್ರೀಹರಿಕೋಟದಲ್ಲಿ ಈ ಅಭೂತ ಪೂರ್ವ ಕ್ಷಣವನ್ನು ನೋಡಲು ನನಗೆ ಅವಕಾಶ ಸಿಕ್ಕಿತು ಎಂದು ತಮ್ಮ ಅನು ಭವಗಳನ್ನು ಹಂಚಿಕೊಂಡರು. ಪ್ರಾಂಶು ಪಾಲರಾದ ಡಾ.ಬಿ.ಆರ್.ಜಯಕುಮಾರಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪೂರ್ಣಿಮಾ ಇನ್ನಿತರರಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಭಾನುವಾರ, 18 ಆಗಸ್ಟ್ 2024

ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಚಾಲನೆ

ರಾಜ್ಯದ ವಿವಿಧ ಜಿಲ್ಲೆಗಳ 250ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗಿ

ಮೈಸೂರು: ಕ್ರೀಡೆಗೆ ಮತ್ತು ಕ್ರೀಡಾಪಟುಗಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳು ಶೂನ್ಯ. ಕ್ರೀಡೆ ಬಗ್ಗೆ ಸರ್ಕಾರದ ಧೋರಣೆ ಬದಲಾಗಬೇಕು ಎಂದು ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರೂ ಆದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ಸಹಯೋಗದಲ್ಲಿ ಏರ್ಪಡಿಸಿರುವ 2 ದಿನಗಳ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರ ಎತ್ತುವ ಸ್ಪರ್ಧೆಗೆ ತರಬೇತುದಾರರ ಕೊರತೆ ಇದೆ. ಬೆಳಗಾವಿ, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಮಾತ್ರ ತಲಾ ಒಬ್ಬರು ತರಬೇತುದಾರರಿದ್ದಾರೆ. ಈ ಸಂಖ್ಯೆ ಹೆಚ್ಚಾಗಬೇಕು. ಸಂಬಂಧಪಟ್ಟ ಇಲಾಖೆಯ ಗಮನ ಸೆಳೆಯಬೇಕು ಎಂದು ಕಿವಿಮಾತು ಹೇಳಿದರು.

ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಸ್.ಎಚ್.ಆನಂದೇ ಗೌಡ, ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆಯ ಗೌರವಾಧ್ಯಕ್ಷರಾದ ಪ್ರೊ.ಕೆ.ಸೌಮ್ಯಾ ಈರಪ್ಪ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಸಿ.ಕೃಷ್ಣ ಮಾತನಾಡಿದರು. ರಾಜ್ಯ ವೇಟ್ ಲಿಫ್ಟರ್ಸ್ ಸಂಸ್ಥೆ ಕಾರ್ಯಾಧ್ಯಕ್ಷರಾದ ಶ್ಯಾಮಲಾ ಶೆಟ್ಟಿ, ಮಹಾಜ ಶಿಕ್ಷಣ ಸಂಸ್ಥೆಯ ಸಿಇಒ ಸುಬ್ರಹ್ಮಣ್ಯ ಕುಂಬಾಸಿ, ಕಾರ್ಯದರ್ಶಿ ಡಾ.ಎನ್.ಆರ್.ರಮೇಶ್, ಎಂಪವರ್ ಟಾಕ್ ಸ್ಥಾಪಕ ಕಿಶೋರ್ ರಾಚಯ್ಯ, ಪತ್ರಕರ್ತ ಆಂಠಿ ಪ್ರಸನ್ನಕುಮಾರ್, ವೇಟ್ ಲಿಫ್ಟಿಂಗ್ ತರಬೇತುದಾರ ಪ್ರೊ.ಪಿ.ಆರ್. ಗುರುಮೂರ್ತಿ ಭಟ್ ಇತರರು ಹಾಜರಿದ್ದರು. ಟೆರೇಷಿಯನ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಅಂಥೋನಿ ಮೋಸೆಸ್ ನಿರೂಪಿಸಿದರು. ಶೇಷಾದ್ರಿಪುರಂ ಕಾಲೇಜಿನ ಪಾಲ್ಗೊಂಡಿದ್ದಾರೆ. ಸುಭಾಷಿಣಿ ಹರೀಶ್ ವಂದಿಸಿದರು. ಎರಡು ದಿನಗಳು ನಡೆಯುವ ಈ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿರುವ 250 ಮಂದಿ



ಮೈಸೂರಿನ ಮಹಾಜನ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಚಾಲನೆ ನೀಡಿದರು.

ಭಾರ ಎತ್ತುವ ಸ್ಪರ್ಧೆ ತುಂಬಾ ಕಠಿಣವಾದ ಕ್ರೀಡೆ. ಅದನ್ನು ಕಷ್ಟಪಟ್ಟು ಪೋಷಿಸಬೇಕು. ಮೈಸೂರು ಸಂಸ್ಥೆಯು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಇದೇ ಮೊದಲ ಬಾರಿಗೆ ರಾಜ್ಯಮಟ್ಟದ ಸ್ಪರ್ಧೆಯನ್ನು ಆಯೋಜಿಸಲಾಗಿದೆ.
-ಪುಷ್ಪರಾಜ್ ಹೆಗ್ಡೆ, ಮಾಜಿ ವೇಟ್ ಲಿಫ್ಟರ್.



ಅಂತಾರಾಷ್ಟ್ರೀಯ ಮಟ್ಟದ ನಿಯಮಾವಳಿಗೆ ಅನುಗುಣವಾಗಿ ಈ ಸ್ಪರ್ಧೆ ಆಯೋಜಿಸಲಾಗಿದೆ. ತಾಂತ್ರಿಕ ನಿಯಮಗಳನ್ನು ಪಾಲಿಸಲಾಗಿದೆ.
-ಡಾ.ಸಿ.ಕೃಷ್ಣ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ.



MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಸೋಮವಾರ, 19 ಆಗಸ್ಟ್ 2024

ಕರ್ನಾಟಕ ರಾಜ್ಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್

ಮೂಡಬಿದಿರೆ ಆಳ್ವಾಸ್ ಕಾಲೇಜು ಚಾಂಪಿಯನ್





ಮೈಸೂರು: ಕರ್ನಾಟಕ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನ ಪುರುಷ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದ ಪ್ರವಾಸಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ಆಳ್ವಾಸ್ ಕಾಲೇಜು ಸಮಗ್ರ ಪ್ರಶಸ್ತಿ ಬಾಚಿಕೊಂಡಿದೆ.

ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ಸಹಯೋಗದಲ್ಲಿ ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡ ಪಂದ್ಯಾವಳಿಯಲ್ಲಿ 247 ಅಂಕ ಗಳಿಸಿ ಗೆಲುವು ಸಾಧಿಸಿವೆ.

ಪುರುಷ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಉಜಿರೆಯ ಎಸ್‌ಡಿಎಂ ಕಾಲೇಜು ಉತ್ತಮ ಪೈಪೋಟಿ ತೋರುವ ಮೂಲಕ 232 ಅಂಕಗಳೊಂದಿಗೆ ರನ್ನರ್ ಅಪ್ ಸ್ಥಾನ ಪಡೆದಿದೆ. ಈ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ನಾನಾ ಕಾಲೇಜುಗಳಿಂದ 250 ಮಂದಿ ಸ್ಪರ್ಧಿಗಳು ಭಾಗವಹಿಸಿದ್ದರು.

'ಉತ್ತಮ ಲಿಫ್ಟರ್' ಪ್ರಶಸ್ತಿ ಪಡೆದವರ ವಿವರ

ಪುರುಷರ ವಿಭಾಗದಲ್ಲಿ ಉಜಿರೆಯ ಎಸ್‌ಡಿಎಂ ಕಾಲೇಜಿನ ಪ್ರಜ್ವಲ್, ಜೂನಿಯರ್ ವಿಭಾಗದಲ್ಲಿ ಬೆಂಗಳೂರಿನ ಸಂಜೀವಿ ಶೆಟ್ಟಿ ಸ್ಪೋರ್ಟ್ಸ್ ಕ್ಲಬ್‌ನ ದೇವೇಂದ್ರ ಹಾಗೂ ಯೂತ್ ವಿಭಾಗದಲ್ಲಿ ದಾವಣಗೆರೆಯ ಸಿಎಂಸಿ ಜಿಮ್‌ನ ವಿ. ಗಣೇಶ್ 'ಉತ್ತಮ ಲಿಫ್ಟರ್' ಪ್ರಶಸ್ತಿ ಎತ್ತಿ ಹಿಡಿದರು.

ಮಹಿಳೆಯರ ವಿಭಾಗದಲ್ಲಿ ಸಂಜೀವಿ ಶೆಟ್ಟಿ ಸ್ಪೋರ್ಟ್ಸ್ ಕ್ಲಬ್‌ನ ಬಿ.ಲಕ್ಷ್ಮಿ, ಜೂನಿಯರ್ ವಿಭಾಗದಲ್ಲಿ ಪುತ್ತೂರಿನ ಸೇಂಟ್ ಫಿಲೋಮಿನಾ ಕಾಲೇಜಿನ ಕೆ.ಸ್ಪಂದನಾ ಹಾಗೂ ಯೂತ್ ವಿಭಾಗದಲ್ಲಿ ಸುಧೀರ್ ಫಿಟ್ನೆಸ್ ಕೇಂದ್ರದ ಎಸ್.ಸಾನಿಕಾ 'ಉತ್ತಮ ಲಿಫ್ಟರ್' ಗೌರವಕ್ಕೆ ಪಾತ್ರರಾದರು.

ಬಹುಮಾನ ವಿತರಣೆ

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ಬಹುಮಾನ ವಿತರಣಾ ಸಮಾರಂಭ ನಡೆಯಿತು. ಭಾರತೀಯ ಬಾಲ್ ಬ್ಯಾಡ್‌ಮಿಂಟನ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ದಿನೇಶ್ ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಮಾಡಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 18.08.2024

ಅಸಮಾಧಾನ ಕಾಮನ್ ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್‌ಪುಷ್ಪರಾಜ್ ಹೆಗ್ಡೆ। ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಚಾಲನೆ

ಕ್ರೀಡೆ, ಕ್ರೀಡಾಪಟುಗಳ ಬಗ್ಗೆ ಸರ್ಕಾರದ ಧೋರಣೆ ಸರಿಯಿಲ್ಲ

• ಕನ್ನಡಪ್ರಭ ವಾರ್ತೆ ಮೈಸೂರು

ಕ್ರೀಡಾ ಕ್ಷೇತ್ರ ಹಾಗೂ ಕ್ರೀಡಾಪಟುಗಳ ಬಗ್ಗೆ ಸರ್ಕಾರದ ಧೋರಣೆ ಸರಿಯಿಲ್ಲ ಎಂದು ಕಾಮನ್ ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್‌ಪುಷ್ಪರಾಜ್ ಹೆಗ್ಡೆ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಡಿಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಡಾ.ಎಪಿಜೆ ಅಬ್ದುಲ್ ಕಲಾಂ !ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿರುವ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್ ಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಗೆ ಮತ್ತು ಕ್ರೀಡಾಪಟುಗಳಿಗೆ ಸವಲತ್ತು ಕೊಡುವುದು ಬರೀ ಕೊನ್ಯ ಮಾತ್ರ. ಕ್ರೀಡೆ ಬಗ್ಗೆ ಧೋರಣೆ ಸರಿಯಿಲ್ಲ. ಮೂಲಸೌಲಭ್ಯ ಕೊಡುವಲ್ಲಿ ನಾವು ಎಡವಿದ್ದೇವೆ. ಇನ್ನಾದರೂ ಕ್ರೀಡಾಕ್ಷೇತ್ರವನ್ನು ದೇಶ ಆದ್ಯತೆ ಮೇರೆಗೆ ತಗದುಕೊಂಡು ಹೋಗಬೇಕು. ಕ್ರೀಡೆಗೆ ಉತ್ತೇಜನ ಸಿಕ್ಕರೆ ಆರೋಗ್ಯಕ್ಕೆ ಉತ್ತೇಜನ ಸಿಕ್ಕಿದಂತೆ ಎಂದರು.

ಭಾರ ಎತ್ತುವ ಸ್ಪರ್ಧೆ ತುಂಬಾ ಕಠಿಣವಾದ ಕ್ರೀಡೆ. ಅದನ್ನು ಕಷ್ಟಪಟ್ಟು ಪೋಷಿಸಬೇಕು. ಮೈಸೂರು ಸಂಸ್ಥೆಯು ಹೊಸ ಪ್ರತಿಭೆಗಳಿಗೆ



ಮೈಕೂರಿನ ಮಹಾಜನ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಕಾಮನ್ವೆಲ್ತ್ ಚಿನ್ನದಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್‌ಪುಷ್ಪರಾಜ್ ಹೆಗ್ಡೆ ಚಾಲನೆ ನೀಡಿದರು. ಎಸ್.ಎಚ್. ಆನಂದೇಗೌಡ, ಡಾ.ಸಿ. ಕೃಷ್ಣ, ಶ್ಯಾಮಲಾಶೆಟ್ಟಿ, ಅಂಶಿ ಪ್ರಸನ್ನಕುಮಾರ್, ಪ್ರೊ.ಕೆ. ಸೌಮ್ಯಾ ಈಶಪ್ಪ ಡಾ.ಬಿ.ಆರ್. ಜಯಕುಮಾರಿ, ಡಾ.ಎಸ್.ಆರ್. ರಮೇಶ್, ಡಾ.ಬಿ. ಸದಾಶಿವ ಭಟ್, ಪ್ರೊ.ಪಿ.ಆರ್. ಗುರುಮೂರ್ತಿ ಭಟ್, ಸುಭಾಷಿಣಿ ಹರೀಶ್ ಇದ್ದಾರೆ.



ಮಹಿಳೆಯರ ವಿಭಾಗದಲ್ಲಿ ಭಾರ ಎತ್ತುವ ಸ್ಪರ್ಧೆ

ಅವಕಾಶ ನೀಡುವ ಸಲುವಾಗಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಸ್ಪರ್ಧೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ಆಯೋಜಿಸುವ ಮೂಲಕ ಉತ್ತಮ ಕೆಲಸ ಮಾಡಿದೆ ಎಂದು ಅವರು ಶ್ಲಾಘಿಸಿದರು.

ಪ್ರತಿಯೊಬ್ಬರೂ ಕೂಡ ಓದಿನ ಜೊತೆಗೆ ಒಂದು ಗಂಟೆ ವ್ಯಾಯಾಮಕ್ಕೆ ಮೀಸಲಿಡಬೇಕು. ಇದರಿಂದ ಆರೋಗ್ಯಕರ ಜೀವನ ಸಾಗಿಸಬಹುದು ಎಂದ ಅವರು, ಭಾರ ಎತ್ತುವ ಸ್ಪರ್ಧೆಗೆ ತರಬೇತುದಾರರ ಕೊರತೆ ಇದೆ. ಬೆಳಗಾವಿ, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಮಾತ್ರ ತಲಾ ಒಬ್ಬರು ತರಬೇತುದಾರರಿದ್ದಾರೆ. ಈ ಸಂಖ್ಯೆ ಹೆಚ್ಚಾಗಬೇಕು. ಸಂಬಂಧಪಟ್ಟ ಇಲಾಖೆಯ ಗಮನ ಸೆಳೆಯಬೇಕು ಎಂದು ಹೇಳಿದರು.

ಯಾವುದೇ ಸ್ಪರ್ಧೆ ಇರಲಿ ಕ್ರೀಡಾಪಟುಗಳು ಶಿಸ್ತಿನಿಂದ ಭಾಗವಹಿಸಬೇಕು. ಅದರ ಜೊತೆ ರಾಜಿಯಾಗಬಾರದು. ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿಲ್ಲ, ಅಡ್ಡದಾರಿಗಳಿಂದ ಬರುವ ಯಶಸ್ಸು ಅಲ್ಪಕಾಲದ್ದು ಎಂದು ಅವರು ಹೇಳಿದರು.

ಕ್ರೀಡಾಪಟುಗಳಿಗೆ ಹೆಚ್ಚು ಸಹಾಯ, ಹೆಚ್ಚಿನ ಆಂಕ ಕೊಡಿಸುವ ಬಗ್ಗೆ ಗಮನ ನೀಡಬೇಕು ಎಂದು ಅವರು ತಿಳಿಸಿದರು.

ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಶಾಖೆಯ ಗೌರವ ಕಾರ್ಯದರ್ಶಿ ಎಸ್.ಎಚ್. ಆನಂದೇಗೌಡ ಮಾತನಾಡಿ, ಇಡೀ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಇತಿಹಾಸದಲ್ಲಿ ಉಳಿಯುವ ರೀತಿಯಲ್ಲಿ ಭಾರ ಎತ್ತುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಈ ಕ್ರೀಡೆಯನ್ನು ಬೆಳೆಸಬೇಕು. ಕ್ರೀಡೆಯಲ್ಲಿ ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ ಎಂದರು.

ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆಯ ಗೌರವಾಧ್ಯಕ್ಷ ಪ್ರೊ.ಕೆ. ಸೌಮ್ಯಾ ಈಶಪ್ಪ ಮಾತನಾಡಿ, ಕ್ರೀಡೆಯಲ್ಲಿ ಶಿಸ್ತು ಮತ್ತು ತಾಳ್ಮೆ ಮುಖ್ಯ ಎಂದರು.

ಮಹಾಜನ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಕ್ರೀಡೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಚೆನ್ನಾಗಿರುತ್ತದೆ. ಕ್ರೀಡೆಯಲ್ಲಿ ಸತತ ಪ್ರಯತ್ನ, ಬದ್ಧತೆ ಮತ್ತು ಶಿಸ್ತು ಮುಖ್ಯ ಎಂದರು.

ಆಧ್ಯಕ್ಷತೆ ವಹಿಸಿದ್ದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಸಿ. ಕೃಷ್ಣ ಮಾತನಾಡಿ, ಅಂತಾರಾಷ್ಟ್ರೀಯ ಮಟ್ಟದ ನಿಯಮಾವಳಿಗೆ ಅನುಗುಣವಾಗಿ ಈ ಸ್ಪರ್ಧೆ ಆಯೋಜಿಸಲಾಗಿದೆ. ತಾಂತ್ರಿಕ ನಿಯಮಗಳನ್ನು ಪಾಲಿಸಲಾಗಿದೆ ಎಂದರು.

ರಾಜ್ಯ ವೇಟ್ ಲಿಫ್ಟರ್ಸ್ ಸಂಸ್ಥೆ ಕಾರ್ಯಾಧ್ಯಕ್ಷೆ ಶ್ಯಾಮಲಾ ಶೆಟ್ಟಿ, ಮಹಾಜ ಶಿಕ್ಷಣ ಸಂಸ್ಥೆಯ ಸಿಇಒ ಡಾ.ಎಸ್.ಆರ್. ರಮೇಶ್, ಎಂಪವರ್‌ಟಾಕ್ ಸ್ಥಾಪಕ ಕಿಶೋರ್‌ರಾಚಯ್ಯ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವೇಟ್ ಲಿಫ್ಟಿಂಗ್ ತರಬೇತುದಾರ ಸುಬ್ರಹ್ಮಣ್ಯ ಕುಬಾಶಿ ಮುಖ್ಯ ಅತಿಥಿಗಳಾಗಿದ್ದರು.

ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆಯ ಅಧ್ಯಕ್ಷ, ವ್ಯವಸ್ಥಾಪನಾ ಸಮಿತಿಯ ಸಂಘಟನಾ ಕಾರ್ಯದರ್ಶಿ ಡಾ.ಬಿ. ಸದಾಶಿವ ಭಟ್ ಸ್ವಾಗತಿಸಿದರು. ಕಾರ್ಯದರ್ಶಿ ಪ್ರೊ.ಪಿ.ಆರ್. ಗುರುಮೂರ್ತಿ ಭಟ್ ಇದ್ದರು. ಟೆಲೆಷಿಯನ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಆಂಥೋನಿ ಮೋಸೆಸ್ ನಿರೂಪಿಸಿದರು. ಕೇಷಾದ್ರಿಪುರಂ ಕಾಲೇಜಿನ ಸುಭಾಷಿಣಿ ಹರೀಶ್ ವಂದಿಸಿದರು.

ಎರಡು ದಿನಗಳು ನಡೆಯುವ ಈ ಪಂದ್ಯಾವಳಿಯಲ್ಲಿ ರಾಜ್ಯದವಿವಿಧೆಡೆಯಿಂದ ಬಂದಿರುವ 250 ಮಂದಿ ಪಾಲ್ಗೊಂಡಿದ್ದಾರೆ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ • ಆಗಸ್ಟ್ 18, 2024

ದಕ್ಷಿಣ ಕನ್ನಡ ಸ್ಪರ್ಧಿಗಳ ಮೇಲುಗೈ

ಕರ್ನಾಟಕ ರಾಜ್ಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಮೈಸೂರು: ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ಆಳ್ವಾಸ್ ಕಾಲೇಜು ಹಾಗೂ ಉಜಿರೆಯ ಎಸ್‌ಡಿಎಂ ಕಾಲೇಜಿನ ಸ್ಪರ್ಧಿಗಳು ಶನಿವಾರ ಇಲ್ಲಿ ಆರಂಭಗೊಂಡ ಕರ್ನಾಟಕ ರಾಜ್ಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಾಬಲ್ಯ ಮೆರೆದರು.

ಕರ್ನಾಟಕ ರಾಜ್ಯ ವೇಟ್‌ಲಿಫ್ಟರ್ಸ್ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ವೇಟ್‌ಲಿಫ್ಟರ್ಸ್ ಸಂಸ್ಥೆ ಸಹಯೋಗದಲ್ಲಿ ಮಹಾಜನ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯ ಪುರುಷರ 55 ಕೆ.ಜಿ. ಒಳಗಿನವರ ವಿಭಾಗದಲ್ಲಿ ಮೂಡಬಿದಿರೆಯ ಆಳ್ವಾಸ್ ಕಾಲೇಜಿನ ಪ್ರಶಾಂತ್ ಸಿನ್ಹಾ ಚಿನ್ನ ಗೆದ್ದರು. ಒಟ್ಟು 223 ಕೆ.ಜಿ (97 + 126) ಭಾರ ಎತ್ತಿ ಈ ಸಾಧನೆ ಮಾಡಿದರು.

ಮಹಿಳೆಯರ 49 ಕೆ.ಜಿ. ವಿಭಾಗದಲ್ಲಿ ಬೆಂಗಳೂರಿನ ಸಂಜೀವಿ ಶೆಟ್ಟಿ ಕ್ಲಬ್‌ನ ಬಿ. ಲಕ್ಷ್ಮಿ ಒಟ್ಟು 156 ಕೆ.ಜಿ ((71 + 85) ಭಾರ ಎತ್ತಿ ಬಂಗಾರ ತಮ್ಮದಾಗಿಸಿಕೊಂಡರು.

ದಿನದ ಫಲಿತಾಂಶ: ಪುರುಷರು: 55 ಕೆ.ಜಿ. ವಿಭಾಗ: ಪ್ರಶಾಂತ್ ಸಿನ್ಹಾ (ಆಳ್ವಾಸ್ ಕಾಲೇಜು, ಒಟ್ಟು ಭಾರ: 223 ಕೆ.ಜಿ)-1, ಬಿ.ಆರ್. ಮನೋಜ್ (ಎಸ್‌ಡಿಎಂ, ಉಜಿರೆ)-2; 61 ಕೆ.ಜಿ. ವಿಭಾಗ: ಸುಬ್ರಹ್ಮಣ್ಯ (ಎಸ್‌ಡಿಎಂ, ಉಜಿರೆ, 240 ಕೆ.ಜಿ)-1, ಕೆ. ನಾಗರಾಜ್ (ಆಳ್ವಾಸ್)-2; 67 ಕೆ.ಜಿ. ವಿಭಾಗ: ಚಿರಂಜೀವಿ (ಆಳ್ವಾಸ್, 241 ಕೆ.ಜಿ)-1, ಕೆ.ಕವನ್ (ಎಸ್‌ಡಿಎಂ, ಉಜಿರೆ)-2. ದೇವೇಂದ್ರ (ಸಂಜೀವಿ ಶೆಟ್ಟಿ ಕ್ಲಬ್)-3.

ಜೂನಿಯರ್ ಬಾಲಕರು: 55 ಕೆ.ಜಿ: ಮೊಹಮ್ಮದ್ ಅಮೀರ್-1, 61 ಕೆ.ಜಿ. ವಿಭಾಗ: ವಿ. ಗಣೇಶ್ (ಸಿಎಂಸಿ ಜಿಮ್, ದಾವಣಗೆರೆ, 210 ಕೆ.ಜಿ)-1, ಮೊಹಮ್ಮದ್ ಮುನಾಫ್ ರೆಹಮಾನ್ (ಸೇಂಟ್ ಫಿಲೋಮಿನಾ, ಪುತ್ತೂರು)-2, ರಹಿಫಾನ್ (ಮಂಗಳಾ ಥ್ರೋವರ್ಸ್ ಅಕಾಡೆಮಿ)-3; 67 ಕೆ.ಜಿ. ಒಳಗಿನವರು: ದೇವೇಂದ್ರ (ಸಂಜೀವಿ ಶೆಟ್ಟಿ ಕ್ಲಬ್, 228 ಕೆ.ಜಿ)-1, ಕೆಂಚಪ್ಪ ಗಡ್ಡಿ (ಆಳ್ವಾಸ್)-2, ರಾಹುಲ್ ಶರ್ಮ (ಡಿಸಿಸಿ, ಮಂಗಳೂರು)-3.

ಯೂತ್ ಬಾಯ್ಸ್: 49 ಕೆ.ಜಿ ಒಳಗಿನವರು: ಬಿ. ಹೇಮಾದ್ರಿ (ಸಂಜೀವಿಶೆಟ್ಟಿ ಕ್ಲಬ್. 138 ಕೆ.ಜಿ), ಪ್ರಜ್ವಲ್ (ಮಂಗಳಾ ಅಕಾಡೆಮಿ)-2, ಅದಿತ್ ಪಟೇಲ್ (ಡಿವೈಇಎಸ್, ಬೆಳಗಾವಿ)-3; 55 ಕೆ.ಜಿ.



ಭಾರ ಎತ್ತಿದ ಬಿ. ಲಕ್ಷ್ಮಿ

ಒಳಗಿನವರು: ರೋಹಿತ್ ಕೆ.ಎಂ (ಡಿವೈಇಎಸ್, ಬೆಳಗಾವಿ. 135 ಕೆ.ಜಿ)-1, ಧ್ರುವ ಭಂಡಾರಿ (ಸೇಂಟ್ ಫಿಲೋಮಿನಾ, ಪುತ್ತೂರು)-2; 61 ಕೆ.ಜಿ. ಒಳಗಿನವರು: ವಿ. ಗಣೇಶ್ (ಸಿಎಂಸಿ ಜಿಮ್, ದಾವಣಗೆರೆ. 210 ಕೆ.ಜಿ)-1, ಯಜತ್ (ಜೈನ್ ಕಾಲೇಜು)-2, ಆರ್. ಕೆ. ರಂಜನ್ (ಜೈನ್ ಕಾಲೇಜು)-3; 67 ಕೆ.ಜಿ. ವಿಭಾಗ: ಆರ್. ಶ್ರೀರಾಫ್ (ಡಿಸಿಎಂ ಮಂಗಳೂರು. 160 ಕೆ.ಜಿ)-1, ಕೆ.ಎ.ಮಂಜುನಾಥ್ (ಸಿಎಂಸಿ ಜಿಮ್, ದಾವಣಗೆರೆ)-2, ಎಂ. ದಿಶನ್ (ಸೇಂಟ್ ಫಿಲೋಮಿನಾ, ಪುತ್ತೂರು)-3.

ಮಹಿಳೆಯರು: 45 ಕೆ.ಜಿ. ಒಳಗಿನವರು: ಕೆ. ಸ್ಪಂದನಾ (ಸೇಂಟ್ ಫಿಲೋಮಿನಾ, ಪುತ್ತೂರು)-1, ಶ್ರಾವ್ಯ (ಆಳ್ವಾಸ್)-2, ಪಲ್ಲವಿ (ಡಿವೈಇಎಸ್, ಬೆಂಗಳೂರು)-3; 49 ಕೆ.ಜಿ. ಒಳಗಿನವರು: ಬಿ. ಲಕ್ಷ್ಮಿ (ಸಂಜೀವಿ ಶೆಟ್ಟಿ ಕ್ಲಬ್, ಬೆಂಗಳೂರು)-1, ಯಾಸ್ಮಿನ್ ಶೇಖ್ (ಆಳ್ವಾಸ್)-2, ಎಸ್.ಆರ್. ಅಮೃತಾ (ಎಸ್‌ಡಿಎಂ, ಉಜಿರೆ)-3.

ಜೂನಿಯರ್ ಬಾಲಕಿಯರು: 40 ಕೆ.ಜಿ. ಒಳಗಿನವರು: ಸಾನಿಕಾ (ಸುಧೀರ್ ಫಿಟ್ನೆಸ್ ಕೇಂದ್ರ. 87 ಕೆ.ಜಿ)-1, ಪಲ್ಲವಿ (ಆಳ್ವಾಸ್)-2, ಅದಿತಿ ಪಾಟೀಲ (ಡಿವೈಇಎಸ್, ಬೆಳಗಾವಿ)-3: 45 ಕೆ.ಜಿ. ಒಳಗಿನವರು: ಸಂಜನಾ (ಆಳ್ವಾಸ್. 85 ಕೆ.ಜಿ) 1, ಸೈಶಾ ಗೊಂದಲ್ಕರ್ (ಡಿವೈಇಎಸ್, ಬೆಳಗಾವಿ)-2. 49 ಕೆ.ಜಿ. ಒಳಗಿನವರು: ಎಸ್.ಆರ್. ಅಮೃತಾ (ಎಸ್‌ಡಿಎಂ ಉಜಿರೆ, 90 ಕೆ.ಜಿ)-1, ವನಜಾಕ್ಷಿ (ಆಳ್ವಾಸ್)-2, ಲಾವಣ್ಯ ಭಟ್ (ಮೈಸೂರು)-3.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಭಾನುವಾರ 18 ಆಗಸ್ಟ್ 2024

ಕ್ರೀಡೆ ವಿಚಾರದಲ್ಲಿ ಸರ್ಕಾರದ ಧೋರಣೆ ಸರಿಯಿಲ್ಲ

ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಚಾಲನೆ



ಮೈಸೂರಿನ ಮಹಾಜನ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಚಾಲನೆ ನೀಡಿದರು. ಎಸ್.ಎಚ್.ಆನಂದೇಗೌಡ, ಡಾ.ಬಿ.ಕೃಷ್ಣ, ಶ್ಯಾಮಲಾಶೆಟ್ಟಿ, ಅಂಶಿ ಪ್ರಸನ್ನಕುಮಾರ್, ಪ್ರೊ.ಕೆ.ಸೌಮ್ಯಾ ಈರಪ್ಪ, ಡಾ.ಜಯಕುಮಾರಿ, ಡಾ.ಎಸ್.ಆರ್.ರಮೇಶ್, ಡಾ.ಸದಾಶಿವ ಭಟ್, ಪ್ರೊ.ಗುರುಮೂರ್ತಿ ಭಟ್, ಸುಭಾಷಿಣಿ ಹರೀಶ್ ಇದ್ದಾರೆ.

ಮೈಸೂರು.ಆ.17-ಕ್ರೀಡಾ ಕ್ಷೇತ್ರ ಹಾಗೂ ಕ್ರೀಡಾಪಟುಗಳ ಬಗ್ಗೆ ಸರ್ಕಾರದ ಧೋರಣೆ ಸರಿಯಿಲ್ಲ ಎಂದು ಕಾಮನ್ ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿರುವ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಗೆ ಮತ್ತು ಕ್ರೀಡಾಪಟುಗಳಿಗೆ ಸವಲತ್ತು ಕೊಡುವುದು ಬರೀ ಶೂನ್ಯ ಮಾತ್ರ. ಕ್ರೀಡೆ ಬಗ್ಗೆ ಧೋರಣೆ ಸರಿಯಿಲ್ಲ. ಮೂಲಸೌಲಭ್ಯ ಕೊಡುವಲ್ಲಿ ನಾವು ಎಡವಿದ್ದೇವೆ. ಇನ್ನಾದರೂ ಕ್ರೀಡಾ ಕ್ಷೇತ್ರವನ್ನು ದೇಶ ಆದ್ಯತೆ ಮೇರೆಗೆ ತೆಗೆದುಕೊಂಡು ಹೋಗಬೇಕು. ಕ್ರೀಡೆಗೆ ಉತ್ತೇಜನ ಸಿಕ್ಕಿದರೆ ಆರೋಗ್ಯಕ್ಕೆ ಉತ್ತೇಜನ ಸಿಕ್ಕಿದಂತೆ ಎಂದರು.

ಭಾರ ಎತ್ತುವ ಸ್ಪರ್ಧೆ ತುಂಬಾ ಕಠಿಣವಾದ ಕ್ರೀಡೆ. ಅದನ್ನು ಕಷ್ಟಪಟ್ಟು ಪೋಷಿಸಬೇಕು. ಮೈಸೂರು ಸಂಸ್ಥೆಯು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಸ್ಪರ್ಧೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ಆಯೋಜಿಸುವ ಮೂಲಕ ಉತ್ತಮ ಕೆಲಸ ಮಾಡಿದೆ ಎಂದು ಅವರು ಶ್ಲಾಘಿಸಿದರು.

ಪ್ರತಿಯೊಬ್ಬರೂ ಕೂಡ ಓದಿನ ಜೊತೆಗೆ ಒಂದು ಗಂಟೆ ವ್ಯಾಯಾಮಕ್ಕೆ ಮೀಸಲಿಡಬೇಕು. ಇದರಿಂದ ಆರೋಗ್ಯಕರ ಜೀವನ ಸಾಗಿಸಬಹುದು ಎಂದ ಅವರು, ಭಾರ ಎತ್ತುವ ಸ್ಪರ್ಧೆಗೆ ತರಬೇತುದಾರರ ಕೊರತೆ ಇದೆ. ಬೆಳಗಾವಿ, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಮಾತ್ರ ತಲಾ ಒಬ್ಬರು ತರಬೇತುದಾರರಿದ್ದಾರೆ. ಈ ಸಂಖ್ಯೆ ಹೆಚ್ಚಾಗಬೇಕು. ಸಂಬಂಧಪಟ್ಟ ಇಲಾಖೆಯ ಗಮನ ಸೆಳೆಯಬೇಕು ಎಂದು ಹೇಳಿದರು.

ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಶಾಖೆ ಗೌರವ ಕಾರ್ಯದರ್ಶಿ ಎಸ್.ಎಚ್.ಆನಂದೇಗೌಡ ಮಾತನಾಡಿ, ಇಡೀ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಇತಿಹಾಸದಲ್ಲಿ ಉಳಿಯುವ ರೀತಿಯಲ್ಲಿ ಭಾರ ಎತ್ತುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಈ ಕ್ರೀಡೆಯನ್ನು ಬೆಳೆಸಬೇಕು. ಕ್ರೀಡೆಯಲ್ಲಿ ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ ಎಂದರು.

ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆಯ ಗೌರವಾಧ್ಯಕ್ಷೆ ಪ್ರೊ.ಕೆ. ಸೌಮ್ಯಾ ಈರಪ್ಪ ಮಾತನಾಡಿ, ಕ್ರೀಡೆಯಲ್ಲಿ ಶಿಸ್ತು ಮತ್ತು ತಾಳ್ಮೆ ಮುಖ್ಯ ಎಂದರು.

ಮಹಾಜನ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಮೈವ ಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಸಿ. ಕೃಷ್ಣ, ರಾಜ್ಯ ವೇಟ್ ಲಿಫ್ಟರ್ಸ್ ಸಂಸ್ಥೆ ಕಾರ್ಯಾಧ್ಯಕ್ಷೆ ಶ್ಯಾಮಲಾ ಶೆಟ್ಟಿ, ಮಹಾಜ ಶಿಕ್ಷಣ ಸಂಸ್ಥೆಯ ಸಿಇಒ ಡಾ.ಎಸ್.ಆರ್. ರಮೇಶ್, ಎಂಪವರ್ ಟಾಕ್ ಸ್ಥಾಪಕ ಕಿಶೋರ್ ರಾಚಯ್ಯ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವೇಟ್ ಲಿಫ್ಟಿಂಗ್ ತರಬೇತುದಾರ ಸುಬ್ರಹ್ಮಣ್ಯ ಕುಂಬಾಶಿ ಮುಖ್ಯ ಅತಿಥಿಗಳಾಗಿದ್ದರು.

THE HINDU
INDIA'S NATIONAL NEWSPAPER SINCE 1878

Sunday, August 18, 2024

KARNATAKA ROUND-UP



The women's 49kg winner B. Lakshmi (Sanjeevi Shetty SC, Bengaluru). SPECIAL ARRANGEMENT

Prashath Sinha and Lakshmi clinch gold

MYSURU: Prashath Sinha of Alva's College (Moodabidri) won the men's 55kg gold with a total lift of 223kg (97+126) while B. Lakshmi of Sanjeevi Shetty Sports Club (Bengaluru) won the women's 49kg title with a total lift of 156kg (71+85) on the inaugural day of the two- day State weightlifting championships, hosted by MDWLLA, at SBRR Mahajana FGC's Dr. A.P.J. Abdul Kalam indoor stadium on Saturday.

The results: Men: 55kg: 1. Prashath Sinha (Alva's, 97, 126, 223), 2. B.R. Manoj (SDM, Ujire, 92, 115, 207). **61kg:** 1.Subramanya (SDM, Ujire, 105, 135, 240), 2. Nagaraj Kanni.(Alvas', 93, 135, 228). **67kg:** 1. Chiranjeevi (Alva's, 105, 136, 241), 2. K. Kavan (SDM, Ujire, 104, 125, 229), 3. Devendra (Sanjeevi Shetty SC, Bengaluru, 98, 130, 228).

Boys, junior: 55kg: 1. Mohammed Ameer (76, 102, 178); **61kg:** 1. V. Ganesh (CMC Gym, D'gere, 91, 119, 210), 2. Mahammed Munaf Rehaman (St. Philomena, Puttur, 90, 117, 207), 3. Rahifan (Mangala Throwers Academy, 70, 90, 160). **67kg:** 1. Devendra (Sanjeevi Shetty SC, 98, 130, 228), 2. Kenchappa Gaddi (Alvas, 93, 122, 215), 3. Rahul Sharma (DCC, Mangaluru, 85, 115, 200).

Youth: 55kg: 1. Rohit K. Murkute (DYES, Belgavi, 60, 75, 135), 2. Dhruva Jagadeesh Bandari (St. Philomina, Puttur, 60, 75, 135). 49kg: B. Hemadri (Sanjeevi Shetty SC, 63, 75, 138), 2. Prajwal (Mangala Throwers Academy, 54, 78, 132), 3. Aditi S. Patil (DYES, Belgavi, 27, 35, 62). **61kg:** 1. V. Ganesh (CMC Gym, D'gere, 91. 119. 210). 2. Yajath (Jain JC, 62, 67, 129), 3. R.K. Ranjan (Jain JC, 61, 66, 127). **67kg:** 1. R. Sree Raag (DCM, Mangaluru, 71, 89, 160), 2. K.A. Manjunath (CMC Gym, D'gere, 65, 81, 146), 3. M. Dishan (St. Philomena, Puttur, 65, 72, 137).

Women: 49kg: 1. B. Lakshmi (Sanjeevi Shetty SC, Bengaluru, 71, 85, 156), 2. Yasmeen Sheik (Alva's, 40, 60, 100), 3. S.R. Amrutha (SDM, Ujire, 40, 50, 90). **45kg:** K. Spandana (St. Philomena, Puttur, 59, 73, 132), 2. Shravya (Alva's, 61, 70, 131), 3. Pallavi (DYES, Bengaluru, 54, 71, 125).

Girls, junior: 49kg: 1. S.R. Amrutha (SDM, Ujire, 40, 50, 90), 2. Vanajakshi (Alva's, 38, 43, 81), 3. Lavanya Bhat (Mysore District WLA, 32, 36, 68).

Youth: 45kg: 1. Sanjana (Alva's, 35, 50, 85), 2. Saisha S. Goundalkar (DYES, Belgavi, 25, 32, 57). **49kg:** 1. S.R. Amrutha (SDM, Ujire, 40, 50, 90), 2. Daksha R. Shetty (Sullia, 38, 45, 83), 3. Deepika (Alva's, 31, 40, 71). **40kg:** 1. Saanika (Sudheer Fitness Centre, 38, 49, 87), 2. Pallavi (Alva's, 25, 43, 68), 3. Aditi S. Patil (DYES, Belgavi, 27, 35, 62).



Prashath of Alva' (Moodabidri) on way to the men's 55kg gold.

THE TIMES OF INDIA

AUGUST 18, 2024

Prashath lifts gold

TIMES NEWS NETWORK

Bengaluru: Prashath Sinha from Alvas College, Moodabidri bagged gold in the men's 55kg category with a total lift of 223kg (97+126) on the inaugural day of the Karnataka sate weightlifting championship in Mysuru on Saturday.

In the men's 61kg section, Subramanya took gold with a lift of 240kgs, while Chiranjeevi turned in the best show in the 67kg category with a total lift of 241. In the women's 49kg category, B Lakshmi took top honours with a total lift of 156kg (71+85) . K Spandana clinched gold in the women's 45kg category, with a total of 132kgs.

WEIGHTLIFTING



CHAMPION: Prashath Sinha

Results (winners only): Men: 55kg: Prashath Sinha (Alvas, 97+126=223). **61kg:** Subramanya (SDM, Ujire, 105+135=240). **67kg:** Chiranjeevi (Alvas, 105+136=241).

Junior boys: 55kg: Mohammed Ameer (76+102=178). **61kg:** V.Ganesh (CMC Gym, D'gere, 91+119=210). **67kg:** Devendra (Sanjeevi Shetty SC, 98+130=228).

Youth boys: 55kg: Rohit Murkute (DYES, Belgavi, 60+75=135); **49kg:** B Hemadri (Sanjeevi Shetty SC, 63+75=138). **61kg:** V.Ganesh (CMC Gym, D'gere, 91+119=210). **67kg:** Sree Raag (DCM, M'lore, 71+89=160).

Women: 49kg: B Lakshmi (Sanjeevi Shetty SC, B'luru, 71+85=156). **45kg:** K Spandana (St Philomena, Puttur, 59+73=132).

Junior girls: 49kg: SR Amrutha (SDM, Ujire, 40+50=90).

Youth girls: 45kg: Sanjana (Alvas, 35+50=85). **49kg:** SR Amrutha (SDM, Ujire, 40+50=90). **40kg:** Saanika (Sudheer Fitness centre, 38+49=87).

ವಿಶ್ವವಾಣಿ
ವಿಶ್ವಾಸವೇ ವಿಶ್ವ

18.08.2024 ಭಾನುವಾರ

ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಪುಷ್ಪರಾಜ್ ಹೆಗ್ಡೆ ಚಾಲನೆ
ಕ್ರೀಡೆ ಬಗ್ಗೆ ಸರಕಾರದ ಧೋರಣೆ ಸರಿಯಿಲ್ಲ



ಮೈಸೂರು: ಕ್ರೀಡಾ ಕ್ಷೇತ್ರ ಹಾಗೂ ಕ್ರೀಡಾಪಟುಗಳ ಬಗ್ಗೆ ಸರಕಾರದ ಧೋರಣೆ ಸರಿಯಿಲ್ಲ ಎಂದು ಕಾಮನ್ ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ಹಾಗೂ ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿರುವ ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು. ಕ್ರೀಡೆಗೆ ಮತ್ತು ಕ್ರೀಡಾಪಟುಗಳಿಗೆ ಸವಲತ್ತು ಕೊಡುವುದು ಬರೀ ಶೂನ್ಯ ಮಾತ್ರ. ಕ್ರೀಡೆ ಬಗ್ಗೆ ಧೋರಣೆ ಸರಿಯಿಲ್ಲ, ಮೂಲಸೌಲಭ್ಯ ಕೊಡುವಲ್ಲಿ ನಾವು ಎಡವಿದ್ದೇವೆ.



ಇನ್ನಾದರೂ ಕ್ರೀಡಾ ಕ್ಷೇತ್ರವನ್ನು ದೇಶ ಆದ್ಯತೆ ಮೇರೆಗೆ ತೆಗೆದುಕೊಂಡು ಹೋಗಬೇಕು. ಕ್ರೀಡೆಗೆ ಉತ್ತೇಜನ ಸಿಕ್ಕಿದರೆ ಆರೋಗ್ಯಕ್ಕೆ ಉತ್ತೇಜನ ಸಿಕ್ಕಿದಂತೆ ಎಂದರು.

ಭಾರ ಎತ್ತುವ ಸ್ಪರ್ಧೆ ತುಂಬಾ ಕಠಿಣವಾದ ಕ್ರೀಡೆ. ಅದನ್ನು ಕಷ್ಟಪಟ್ಟು ಪೋಷಿಸಬೇಕು. ಮೆಸೂರು ಸಂಸ್ಥೆಯು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಸ್ಪರ್ಧೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ಆಯೋಜಿಸುವ ಮೂಲಕ ಉತ್ತಮ ಕೆಲಸ ಮಾಡಿದೆ ಎಂದು ಅವರು ಶ್ಲಾಘಿಸಿದರು. ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಶಾಖೆಯ ಗೌರವ ಕಾರ್ಯದರ್ಶಿ ಎಸ್.ಎಚ್. ಆನಂದೇಗೌಡ ಮಾತನಾಡಿ, ಇಡೀ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಭಾರ ಎತ್ತುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ.ಈ ಕ್ರೀಡೆಯನ್ನು ಬೆಳೆಸಬೇಕು ಎಂದರು. ಎರಡು ದಿನಗಳು ನಡೆಯುವ ಈ ಪಂದ್ಯಾವಳಿಯಲ್ಲಿ ರಾಜ್ಯದ ನಾನಾ ಕಡೆಯ 250 ಮಂದಿ ಪಾಲ್ಗೊಂಡಿದ್ದಾರೆ. ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆಯ ಅಧ್ಯಕ್ಷ ಪ್ರೊ.ಕೆ. ಸೌಮ್ಯಾ ಈರಪ್ಪ, ಮಹಾಜನ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಸಿ. ಕೃಷ್ಣ, ರಾಜ್ಯ ವೇಟ್ ಲಿಫ್ಟರ್ಸ್ ಸಂಸ್ಥೆ ಕಾರ್ಯಾಧ್ಯಕ್ಷೆ ಶ್ಯಾಮಲಾ ಶೆಟ್ಟಿ, ಮಹಾಜನ ಶಿಕ್ಷಣ ಸಂಸ್ಥೆಯ ಸಿಇಒ ಡಾ.ಎಸ್.ಆರ್.ರಮೇಶ್, ಎಂಪವರ್ ಟಾಕ್ ಸ್ಥಾಪಕ ಕಿಶೋರ ರಾಚಯ್ಯ, ಪತ್ರಕರ್ತ ಅಂಶಿ ಪ್ರಸನ್ನಕುಮಾರ, ವೇಟ್ ಲಿಫ್ಟಿಂಗ್ ತರಬೇತುದಾರ ಸುಬ್ರಹ್ಮಣ್ಯ ಕುಂಬಾಶಿ, ಜಿಲ್ಲಾ ಸಂಸ್ಥೆಯ ಅಧ್ಯಕ್ಷ, ಡಾ.ಬಿ. ಸದಾಶಿವ ಭಟ್, ಕಾರ್ಯದರ್ಶಿ ಪ್ರೊ.ಪಿ.ಆರ್. ಗುರುಮೂರ್ತಿ ಭಟ್, ಟೆರೇಷಿಯನ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಅಂಥೋನಿ ಮೋಸೆಸ್ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಭಾನುವಾರ 18 ಆಗಸ್ಟ್ 2024
18 AUGUST 2024



ವಿಜಯವಾಣಿ ಚಿತ್ರ

ವೇಟ್ ಲಿಫ್ಟಿಂಗ್ ಸ್ಪರ್ಧೆಗೆ ತರಬೇತುದಾರರ ಕೊರತೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

ದೇಶದಲ್ಲಿ ಕ್ರೀಡಾ ಕ್ಷೇತ್ರಕ್ಕೆ ಸರ್ಕಾರದಿಂದ ನಿರೀಕ್ಷಿತ ಪ್ರಮಾಣದಲ್ಲಿ ಉತ್ತೇಜನ ದೊರೆಯುತ್ತಿಲ್ಲ ಎಂದು ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್‌ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಬೇಸರವ್ಯಕ್ತಪಡಿಸಿದರು.

ರಾಜ್ಯ ಮತ್ತು ಜಿಲ್ಲಾ ವೇಟ್‌ಲಿಫ್ಟರ್ಸ್ ಸಂಸ್ಥೆ. ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಶನಿವಾರ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್ ಉದ್ಘಾಟಿಸಿ ಮಾತನಾಡಿದರು.

ಕ್ರೀಡಾಪಟುಗಳಿಗೆ ಮೂಲಸೌಲಭ್ಯ ಕಲ್ಪಿಸಲು ಸರ್ಕಾರಗಳು ವಿಫಲವಾಗಿದ್ದು, ಇನ್ನಾದರೂ ಕ್ರೀಡೆಗೆ ಸರ್ಕಾರದಿಂದ ಉತ್ತೇಜನ ದೊರೆಯಬೇಕು. ವೇಟ್ ಲಿಫ್ಟಿಂಗ್ ಅತ್ಯಂತ ಕಠಿಣವಾದ ಕ್ರೀಡೆಯಾಗಿದ್ದು, ಈ ಕ್ರೀಡೆಗೆ ಸರ್ಕಾರ ಉತ್ತೇಜನ ನೀಡಬೇಕು ಎಂದರು. ವೇಟ್ ಲಿಫ್ಟಿಂಗ್ ಸ್ಪರ್ಧೆಗೆ ರಾಜ್ಯದಲ್ಲಿ ತರಬೇತುದಾರರ ಕೊರತೆ ಇದೆ. ಬೆಳಗಾವಿ, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಮಾತ್ರ ತಲಾ ಒಬ್ಬರು ತರಬೇತುದಾರರು ಇದ್ದು, ಈ ಸಂಖ್ಯೆ ಹೆಚ್ಚಾಗಬೇಕು. ಕ್ರೀಡಾಪಟುಗಳು ಶಿಸ್ತಿನಿಂದ ಕ್ರೀಡೆಯಲ್ಲಿ ಭಾಗವಹಿಸಬೇಕು. ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿಲ್ಲ, ಅಡ್ಡದಾರಿಗಳಿಂದ ಬರುವ ಯಶಸ್ಸು ಅಲ್ಪಕಾಲದ್ದು ಎಂದು ಹೇಳಿದರು.

ಭಾರತೀಯ ವೇಟ್‌ಲಿಫ್ಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಸ್. ಎಚ್. ಆನಂದೇಗೌಡ, ರಾಜ್ಯ ವೇಟ್ ಲಿಫ್ಟರ್ಸ್ ಸಂಸ್ಥೆ ಕಾರ್ಯಾಧ್ಯಕ್ಷೆ ಶ್ಯಾಮಲಾ ಶೆಟ್ಟಿ, ಜಿಲ್ಲಾ ಗೌರವಾಧ್ಯಕ್ಷೆ ಪ್ರೊ.ಕೆ. ಸೌಮ್ಯಾ ಈರಪ್ಪ, ಮಹಾಜನ ಪದವಿ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಕಾಲೇಜಿನ ಸಿಇಒ ಡಾ.ಎಸ್. ಆರ್.ರಮೇಶ್, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಸಿ.ಕೃಷ್ಣ, ಎಂಪವರ್ ಟಾಕ್ ಸ್ಥಾಪಕ ಕಿಶೋರ್ ರಾಚಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವೇಟ್ ಲಿಫ್ಟಿಂಗ್ ತರಬೇತುದಾರ ಸುಬ್ರಹ್ಮಣ್ಯ ಕುಂಬಾಶಿ ಹಾಗೂ ಇತರರು ಇದ್ದರು.



ಪ್ರಜಾವಾಣಿ

ಶನಿವಾರ • ಆಗಸ್ಟ್ 17, 2024

ಮೈಸೂರು ಜಿಲ್ಲಾ ವೇಟ್‌ಲಿಫ್ಟರ್ಸ್ ಸಂಸ್ಥೆ: ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ಗೆ ಚಾಲನೆ- ರಾಜ್ಯ ವೇಟ್‌ಲಿಫ್ಟರ್ಸ್ ಸಂಸ್ಥೆ ಅಧ್ಯಕ್ಷ ಪಿ.ದಯಾನಂದ ಪೈ, ಸ್ಥಳ: ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣ, ಮಹಾಜನ ಕಾಲೇಜು, ಜಯಲಕ್ಷ್ಮೀಪುರಂ, ಬೆಳಿಗ್ಗೆ 10

ಸಂಯುಕ್ತ ಕರ್ನಾಟಕ

ದಿನ ಪತ್ರಿಕೆ

ಶನಿವಾರ, 17 ಆಗಸ್ಟ್ 2024

● **ರಾಜ್ಯ ವೇಯ್ಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್**

ಬೆಳಿಗ್ಗೆ 10ಕ್ಕೆ, ರಾಜ್ಯ ವೇಯ್ಟ್ ಲಿಫ್ಟರ್ಸ್ ಸಂಸ್ಥೆ ಬೆಂಗಳೂರು, ಜಿಲ್ಲಾ ವೇಯ್ಟ್ ಲಿಫ್ಟರ್ಸ್ ಸಂಸ್ಥೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಅತಿಥಿ-ರಾಜ್ಯ ವೇಯ್ಟ್ ಲಿಫ್ಟರ್ಸ್ ಸಂಸ್ಥೆ ಅಧ್ಯಕ್ಷ ಡಾ.ಪಿ.ದಯಾನಂದ ಪೈ, ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರಾದ ಪುಷ್ಪರಾಜ್ ಹೆಗ್ಡೆ, ಅಧ್ಯಕ್ಷತೆ-ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ, ಸ್ಥಳ-ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 3.08.2025

ದೊಡ್ಡ ದೊಡ್ಡ ಸಾಧನೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಿ

ನಿವೃತ್ತ ಎಲ್‌ಐಸಿ ಡೆವಲಪ್‌ಮೆಂಟ್ ಆಫೀಸರ್ ಎನ್.ಡಿ. ಯೋಗೇಶ್ ವಿದ್ಯಾರ್ಥಿಗಳಿಗೆ ಸಲಹೆ



ವಾರದ ಸಮಾವೇಶದಲ್ಲಿ ಮಡಿಕೇರಿಯ ನಿವೃತ್ತ ಎಲ್ ಐಸಿ ಡೆವಲಪ್‌ಮೆಂಟ್ ಆಫೀಸರ್ ಎನ್.ಡಿ. ಯೋಗೇಶ್‌ರನ್ನು ಸನ್ಮಾನಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರದ ಸಮಾವೇಶದಲ್ಲಿ ಮಡಿಕೇರಿಯ ನಿವೃತ್ತ ಎಲ್ ಐಸಿ ಡೆವಲಪ್‌ಮೆಂಟ್ ಆಫೀಸರ್‌ಎನ್.ಡಿ. ಯೋಗೇಶ್ ಅವರನ್ನು ಸನ್ಮಾನಿಸಲಾಯಿತು.

ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿ, ವಿದ್ಯಾರ್ಥಿಗಳು ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದರ ಮೂಲಕ ದೊಡ್ಡ ದೊಡ್ಡ ಸಾಧನೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಬೇಕು. ಎಲ್ಲಕ್ಕಿಂತ ಮೊದಲು ವಿದ್ಯಾರ್ಥಿಗಳು ಸಾಧನಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಯಲ್ಲಿ ಪೋಷಕರ ಪಾತ್ರ ಮೊದಲಾದರೆ ನಂತರ ಗುರುಗಳ ಪಾತ್ರವೇ ಹಿರಿದಾದದ್ದು. ವಿದ್ಯಾರ್ಥಿಗಳು ಪೋಷಕರ ಹಾಗೂ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದು ಸಾಧನೆ ಮಾಡಬೇಕು. ಮಹಾಜನ ವಿದ್ಯಾಸಂಸ್ಥೆಯ ಬಗ್ಗೆ ನನಗೆ ಉತ್ತಮ ಬಾಂಧವ್ಯ ಹಾಗೂ ಅಪಾರ ಗೌರವವಿದೆ. ಕಾರಣ ಶಿಸ್ತಿಗೆ, ಗುಣಮಟ್ಟದ ಶಿಕ್ಷಣದ ಜೊತೆ ಜೊತೆಗೆ ಅವರಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಇಂದಿನ ವಾರದ ಸಮಾವೇಶದಲ್ಲಿ ಅಭಿನಂದಿತರಾದ ವಿದ್ಯಾರ್ಥಿಗಳೇ ನಿದರ್ಶನ ಎಂದರು. ಐಕ್ಯೂಎಸಿ ಸಂಯೋಜಕಿ ಡಿ. ಗೀತಾ, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ್ ಹಾಗೂ ಹಿರಿಯ ಪ್ರಾಧ್ಯಾಪಕ ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು. ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸುನಿಲ್ ನಿರೂಪಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 15.09.2024

ಹವಾಮಾನ ಬದಲಾವಣೆ, ಸುಸ್ಥಿರತೆ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದಎಸ್.ಬಿ.ಆರ್.ಆರ್ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ಮತ್ತು ಭೂಗೋಳಶಾಸ್ತ್ರ ವಿಭಾಗಗಳು ಐಕ್ಯೂಎಸಿ ಸಹಯೋಗದಲ್ಲಿ ಹವಾಮಾನ ಬದಲಾವಣೆಯ ಕಾರಣ ಮತ್ತು ಪರಿಣಾಮ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಕ್ಲೈಮೆಟ್ ಫ್ರೆಸ್ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಗಿದ್ದ ಎಂಜಿನಿಯರ್ ರಾಜೇಂದ್ರಕುಮಾರ್ ಮಾತನಾಡಿ, ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಆಗುವ ಸಮಸ್ಯೆಗಳು ಮತ್ತು ಮನುಕುಲಕ್ಕೆ ಒದಗಬಹುದಾದ ಅಪಾಯದ ಬಗ್ಗೆ ಆಳವಾದ ತಿಳುವಳಿಕೆ ನೀಡುವಲ್ಲಿ ಈ ಕಾರ್ಯಾಗಾರವು ನಿರ್ಣಾಯಕ ಪಾತ್ರ ವಹಿಸಿದೆ ಎಂದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಯೋಜನಾ ವ್ಯವಸ್ಥಾಪಕ ಹಾಗೂ ಹವಾಮಾನ ರಾಯಭಾರಿ ವಿನಿತ್ ಮೆಹತಾ ಇದ್ದರು. ಸಹಯೋಗ ಮತ್ತು ಸೃಜನಶೀಲತೆಯನ್ನು ಒಳಗೊಂಡ ಈ ಕಾರ್ಯಾಗಾರವು ಕೃಷಿ, ಸಾರಿಗೆ, ಪಳೆಯುಳಿಕೆ ಇಂಧನ, ಏರುತ್ತಿರುವ ತಾಪಮಾನ ಮತ್ತು ಸಮುದ್ರಮಟ್ಟಗಳು, ಕರಗುವ ಹಿಮನದಿಗಳು ಮತ್ತು ಇಂಗಾಲದ ಹೊರಸೂಸುವಿಕೆ ವಿವರಗಳೊಂದಿಗೆ ಹವಾಮಾನ ಬದಲಾವಣೆಯ ವಿವಿಧ ವಿಷಯಗಳ ಕುರಿತು ಸಚಿತ್ರ ಫ್ಲ್ಯಾಷ್ ಕಾರ್ಡ್ ನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಭೂಗೋಳಶಾಸ್ತ್ರ ವಿಭಾಗ ಮತ್ತು ಆಂಗ್ಲಭಾಷಾ ವಿಭಾಗಗಳನ್ನು ಅಭಿನಂದಿಸಿ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳು ಶ್ಲಾಘನೀಯ ಮತ್ತು ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಒಳ್ಳೆಯ ಬೆಳವಣಿಗೆ ಎಂದರು. ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಿ. ಗೀತಾ ಸ್ವಾಗತಿಸಿದರು. ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ.ಸೋಮಶೇಖರವಂದಿಸಿದರು. ನಿಹಾರಿಕ ಹೆಗ್ಡೆ ಪ್ರಾರ್ಥಿಸಿದರು. ಆಂಗ್ಲ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎಂ.ಆರ್. ಇಂದ್ರಾಣಿ ನಿರೂಪಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 12.09.2024

ವಿಶೇಷ ಉಪನ್ಯಾಸ ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ. ನವಿತಾ ತಿಮ್ಮಯ್ಯ

ಯುವಕರ ಸಮರ್ಪಕ ಬಳಕೆಯಿಂದ ಸದೃಢ ಭಾರತ ನಿರ್ಮಾಣ

• ಕನ್ನಡಪ್ರಭ ವಾರ್ತೆ ಮೈಸೂರು

ಯುವ ಜನಾಂಗದ ಸಮರ್ಪಕ ಬಳಕೆಯಿಂದ ಸದೃಢ ಭಾರತ ನಿರ್ಮಾಣ ಸಾಧ್ಯ ಎಂದು ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ. ನವಿತಾ ತಿಮ್ಮಯ್ಯ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು, ಪ್ರಪಂಚದ 4ನೇ ದೊಡ್ಡ ಆರ್ಥಿಕತೆಯಾಗಿ ಭಾರತ ಇಂದು ಹೊರಹೊಮ್ಮಿದೆ ಮತ್ತು ಅದರ ಒಟ್ಟು



ದೇಶೀಯ ಉತ್ಪನ್ನ 3.41 ಟ್ರಿಲಿಯನ್ ಆಗಿದ್ದು, ಭಾರತದ ಆರ್ಥಿಕ ಬೆಳವಣಿಗೆಗೆ ಇದು ದೊಡ್ಡ ಲಾಭಾಂಶವಾಗಿದೆ ಎಂದರು.

ಪ್ರಸ್ತುತ ಭಾರತದಲ್ಲಿ ಯುವ ಪೀಳಿಗೆ ಎದುರಿಸುತ್ತಿರುವ ನಿರುದ್ಯೋಗದ ಸಮಸ್ಯೆಯನ್ನು ತಗ್ಗಿಸಲು ಸೂಕ್ತವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನ ಅವಕಾಶಗಳನ್ನು ವಿಸ್ತರಿಸಲು ಹೆಚ್ಚು ಒತ್ತು ಕೊಡಬೇಕು. ಬೆಳೆಯುತ್ತಿರುವ ಜನಸಂಖ್ಯೆಯೊಂದಿಗೆ ಭಾರತ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು, ಕೃಷಿ ಉತ್ಪಾದನೆ, ಕೈಗಾರಿಕೆ ಅಭಿವೃದ್ಧಿಯನ್ನು ಸೇನಾ ಕ್ಷೇತ್ರದ ಜೊತೆಯಲ್ಲಿ ಬಲಪಡಿಸಬೇಕು. ಹಾಗೆ ಬಡತನ ಮತ್ತು ನಿರುದ್ಯೋಗಗಳನ್ನು ತಗ್ಗಿಸಲು ಎಂಎಸ್‌ಎಂಇ ಕ್ಷೇತ್ರಗಳನ್ನು ವಿಸ್ತರಿಸಬೇಕು ಮತ್ತು ಅದರ ಪ್ರಯೋಜನಗಳನ್ನು ಯುವ ಜನಾಂಗಕ್ಕೆ ತಲುಪಿಸುವಂತಾಗಬೇಕು ಎಂದು ಅವರು ಹೇಳಿದರು.

ಬಲಿಷ್ಠ ಜೀವನ ಮಟ್ಟ, ಆರೋಗ್ಯ, ಶಿಕ್ಷಣ, ತರಬೇತಿ, ಡಿಜಿಟಲ್ ಸರಕು ಸೇವೆಗಳ ವ್ಯಾಪಾರದ ವಿಸ್ತರಣೆ ಇವೆಲ್ಲವೂ ಭಾರತದ ಆರ್ಥಿಕತೆಯ ಸಾಧನಗಳಾಗಬೇಕು. ವಿಶ್ವದಲ್ಲಿ 4ನೇ ದೊಡ್ಡ ಆರ್ಥಿಕತೆಯಾಗಿ ಭಾರತ ಇಂದು ಹೊರಹೊಮ್ಮಿದ್ದು, ಸ್ವದೇಶಿ ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಬಡತನ, ನಿರುದ್ಯೋಗ ಮತ್ತು ಅಸಮಾನತೆಯ ಪ್ರಮಾಣಗಳನ್ನು ತಗ್ಗಿಸುವಲ್ಲಿ ಭಾರತದ ಆರ್ಥಿಕತೆ ದಾಪುಗಾಲು ಇಡುತ್ತಿದೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ಎಂ. ಎನ್.ವೆಂಕಟಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕರಾದ ಡಾ.ಪಿ.ಜೆ. ಪುಷ್ಪರಾಣಿ, ಎಸ್.ಎಂ. ಚಲುವೇಗೌಡ ಇದ್ದರು. ಆರ್. ಸಿದ್ದಪ್ಪ ಸ್ವಾಗತಿಸಿದರು. ಕೀರ್ತನಾ ವಂದಿಸಿದರು.

ಆರಾಧನ
ದಿನ ಪತ್ರಿಕೆ

ಗುರುವಾರ, 19 ಸೆಪ್ಟೆಂಬರ್ 2024

'ನಿಷ್ಠುರ ವಿಮರ್ಶಕರಾಗಿದ್ದ ಜಿ.ಎಚ್.ನಾಯಕ'

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದರಾಜ್ ಬಣ್ಣನೆ

ಮೈಸೂರು: ಪ್ರೊ.ಜಿ.ಎಚ್.ನಾಯಕ ಅವರು ಆಧುನಿಕ ಕನ್ನಡ ಸಾಹಿತ್ಯದ ನಿಷ್ಠುರ ಹಾಗೂ ದಿಟ್ಟತನದ ವಿಮರ್ಶಕರಾಗಿದ್ದರು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಬಣ್ಣಿಸಿದರು.

ನಗರದ ಜಯಲಕ್ಷ್ಮಿಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಚಿಂತನ ಚಿತ್ತಾರ ಪ್ರಕಾಶನವು ಬುಧವಾರ ಆಯೋಜಿಸಿದ್ದ ಸಮಾರಂಭದಲ್ಲಿ ವಿಮರ್ಶಕ ಜಿ.ಎಚ್. ನಾಯಕ ಅವರ ೪೯ನೇ ಜನ್ಮದಿನದ ನಿಮಿತ್ತ ಅವರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆ. ಮೂರು ದಶಕಗಳ ಹಿಂದೆ ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ ಅವರಂಥ ಪ್ರಖರ ವಿಮರ್ಶಕರಿದ್ದರು. ಇದೀಗ ಅಂತಹವರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಗಂಭೀರವಾಗಿ ವಿಮರ್ಶೆಯನ್ನೇ ಓದುವ ಹವ್ಯಾಸ ಬಹುತೇಕರಿಗೆ ಇಲ್ಲವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಪ್ರಸ್ತುತ ಲೇಖಕನೇ ತನ್ನ ಕೃತಿಗಳಿಗೆ ಅನುವಾದಕರು, ವಿಮರ್ಶಕರನ್ನು ಹುಡುಕುವ ಪರಿಸ್ಥಿತಿ ಬಂದಿದೆ. ಇದನ್ನು ಹಿಂದೆಯೇ ವಿದ್ವಾಂಸ ಎಲ್.ಬಸವರಾಜ ಅವರೂ ಹೇಳಿದ್ದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಚಿಂತನ ಚಿತ್ತಾರ ಪ್ರಕಾಶನವು ಬುಧವಾರ ಆಯೋಜಿಸಿದ್ದ ವಿಮರ್ಶಕ ಜಿ.ಎಚ್.ನಾಯಕ ಅವರ 89ನೇ ಜನ್ಮದಿನದ ನಿಮಿತ್ತ ಅವರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಬಿಡುಗಡೆ ಮಾಡಿದರು.

ಹೊಸ ವಿಮರ್ಶೆ ಮಾರ್ಗ ತೋರಿಸಿದ 'ನಾಯಕ': 'ಜಿ.ಎಚ್.ನಾಯಕರ ವಿಮರ್ಶೆ ಮತ್ತು ವಿಮರ್ಶಕ ತಾನಾಗಿಯೇ ಕೃತಿ ವಿಮರ್ಶೆ ಬರೆದರೆ ಅದು ದೊಡ್ಡತನವಾಗಿದೆ ಎಂದರು.

ಲೇಖಕನ ಆಲೋಚನೆಯ ಆಳ- ಅಗಲವನ್ನು ಚೆನ್ನಾಗಿ ಗ್ರಹಿಸಿ ಓದುಗನಿಗೆ ತಿಳಿಸುವವನು ವಿಮರ್ಶಕ. ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶಾ ಪ್ರಕಾರವೇ ಹೊಸತು. ಅದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಾಗಿ ಅಸ್ತಿತ್ವಕ್ಕೆ ಬಂದಿತು. ಹಿಂದೆ ಪಂಪ, ರನ್ನ, ಕುಮಾರವ್ಯಾಸರು ತಮ್ಮ ಕಾವ್ಯಗಳನ್ನು ಸ್ವವಿಮರ್ಶೆ ಮಾಡಿಕೊಳ್ಳುತ್ತಿದ್ದರು ಎಂದರು.

ವರ್ತಮಾನದ ಬದುಕು ಎಷ್ಟು ಭಯಾನಕವಾಗುತ್ತಿದೆ: ಬದುಕು' ವಿಷಯ ಕುರಿತು ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ ಮಾತನಾಡಿ, ನಾಯಕರು ಕಟು ಬರಹಗಳಿಂದ ಸಾಂಪ್ರದಾಯಿಕ ವಿಮರ್ಶೆಯ ಗ್ರಹಣ ಬಿಡಿಸಿದರು. ಕನ್ನಡ ವಿಮರ್ಶಾ ಲೋಕಕ್ಕೆ ಹೊಸ ಮಾರ್ಗವನ್ನು ತೋರಿಸಿದರು. ಅವರ ವಿಮರ್ಶಾ ಕೃತಿಗಳ ಬಗ್ಗೆ ಆಲೋಚನೆ ಮಾಡಿದಾಗ, ಇತರರು ಮಾತನಾಡಿದಾಗ ಕೇಳಿಸಿಕೊಂಡಾಗ ಶುದ್ಧ ಜಲದಲ್ಲಿ ಮಿಂದೆದ್ದು ಬಂದಂತಾಗುತ್ತದೆ ಎಂದರು.

ವರ್ತಮಾನದ ಬದುಕು ಅತ್ಯಂತ ಕ್ರೂರವಾಗಿದೆ. ಇಂಥ ಸಮಯದಲ್ಲಿ ನಾಯಕರ ಬದುಕು-ಬರಹದ ಬಗ್ಗೆ ಮಾತನಾಡುವುದು ಮಾನವೀಯವಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಕಾಲದಲ್ಲಿ ಜಿ.ಎಚ್. ನಾಯಕರು ಬಂದಿರದೇ ಇದ್ದಿದ್ದರೆ ಸಾಹಿತ್ಯ ಲೋಕಕ್ಕೆ ಬಹುದೊಡ್ಡ ನಷ್ಟವಾಗುತ್ತಿತ್ತು ಎಂದು ಹೇಳಿದರು.

ಲೇಖಕ ಜೆ.ಪಿ.ಬಸವರಾಜು, ಕೀರ್ತಿಶ್ರೀ ನಾಯಕ, ಪ್ರಕಾಶಕ ನಿಂಗರಾಜು ಚಿತ್ತಣ್ಣನವರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶು ಪಾಲರಾದ ಪ್ರೊ.ಬಿ.ಆರ್.ಜಯಕುಮಾರಿ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾಯಕರು ಅವರ ಕಾಲಘಟ್ಟದಲ್ಲಿ ಬಹುತೇಕ ಎಲ್ಲ ಲೇಖಕರ ಕೃತಿಗಳನ್ನು ನಿಷ್ಪಕ್ಷಪಾತದಿಂದ ನಿಷ್ಠುರವಾಗಿ ವಿಮರ್ಶೆ ಮಾಡಿದವರು. ಆ ಮೂಲಕ ವಿಮರ್ಶಾ ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿದರು. ಶಿವರಾಮ ಕಾರಂತರ ಕಾದಂಬರಿಗಳನ್ನು ಕೂಡ ನೇರವಾಗಿ ಟೀಕಿಸಿದ್ದರು. ಕಾರಂತರೂ ತಾಳ್ಮೆಯಿಂದಲೇ ಅದನ್ನು ಸ್ವೀಕರಿಸಿದ್ದರು. ನಾಯಕರು, ಕಾರಂತರ ಕೃತಿಗಳ ಬಗ್ಗೆಯೇ ಸ್ವಂತ ಆಸಕ್ತಿಯಿಂದ ಹೆಚ್ಚಾಗಿ ವಿಮರ್ಶೆ ಬರೆದರು.

■ ಎಲ್.ಎನ್.ಮುಕುಂದರಾಜ್, ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 19.09.2024

ಕನ್ನಡದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆ ಆಗುತ್ತಿದೆ

ನವ್ಯ ವಿಮರ್ಶೆ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು: ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎಸ್.ಮುಕುಂದರಾಜ್

• **ಕನ್ನಡಪ್ರಭ ವಾರ್ತೆ** ಮೈಸೂರು

ನವ್ಯ ವಿಮರ್ಶೆ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಇತ್ತೀಚೆಗೆ ವಿಮರ್ಶಕರ ಸಂಖ್ಯೆ ಕಡಿಮೆ ಯಾಗುತ್ತಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎಸ್.ಮುಕುಂದರಾಜ್ ತಿಳಿಸಿದರು.

ನಗರದ ಎಸ್.ಬಿ.ಆರ್.ಆರ್.ಮಹಾಜನ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಿಂತನ ಚಿತ್ತಾರ ಸಹಯೋಗದಲ್ಲಿ ಪ್ರೊ.ಜಿ.ಎಚ್. ನಾಯಕ 89 ಕಾರ್ಯಕ್ರಮದಲ್ಲಿ ಪ್ರೊ.ಜಿ.ಎಚ್.ನಾಯಕರ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಪುಸ್ತಕ ಲೋಕಾರ್ಪಣೆ ಮತ್ತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ಕನ್ನಡ ಸಾಹಿತ್ಯ ಲೋಕದ ವಿಮರ್ಶನ ಕೈಂಕರ್ಯದಲ್ಲಿ ಪ್ರೊ.ಜಿ.ಎಚ್. ನಾಯಕರ ಸ್ಥಾನ ಬಹಳ ದೊಡ್ಡದು. ಕನ್ನಡದಲ್ಲಿ ವಿಮರ್ಶೆ ಎಂಬ ಪ್ರಕಾರ ವಿಭಿನ್ನ ಸ್ವರೂಪದಲ್ಲಿತ್ತು. ವಿಮರ್ಶೆಯ ಪರಿಕಲ್ಪನೆ ಪ್ರಾಚೀನ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ಮಚಿಹಾರರು ಹಾಗೂ ಮೊದಲಾದವರ ಎಲ್ಲರಲ್ಲಿ ಯೂ ಇದೇ ಇತ್ತು. ಆದರೆ ನವ್ಯ ವಿಮರ್ಶೆ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಇತ್ತೀಚೆಗೆ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದರು.

ಪ್ರೊ.ಜಿ.ಎಚ್. ನಾಯಕರ ವಿಮರ್ಶೆ ಮತ್ತು ಬದುಕು ಕುರಿತು ಪ್ರೊ. ಮೈಸೂರು ಕೃಷ್ಣಮೂರ್ತಿ ಮಾತನಾಡಿ, ಜಿ.ಎಚ್. ನಾಯಕರ ವಿಮರ್ಶೆ ಬದುಕು ಶುದ್ಧ ಜಲದಲ್ಲಿ ಮಿಂದೆದ್ದು ಬಂದ ಹಾಗೆ. ಆದರ್ಶಗಳ ಗೈರು ಹಾಜರಿಯಲ್ಲಿ ವರ್ತಮಾನದ ಬದುಕು ಭೀಕರವಾಗುತ್ತದೆ. ಹಾಗಾಗಿ ಬದುಕಿಗೆ ಆದರ್ಶದ ಅಗತ್ಯತೆ ಇದೆ ಎಂದರು.

ಆದರ್ಶ ಮಾದರಿ ವ್ಯಕ್ತಿತ್ವ, ನಾವು ಸಮಾಜದಲ್ಲಿ ಬದುಕುವಾಗ ಆದರ್ಶ ಮಾದರಿಗಳನ್ನು ಅಳವಡಿಸಿಕೊಳ್ಳಬೇಕು. ಬಹುಶಃ ಪ್ರೊ.ಜಿ.ಎಚ್. ನಾಯಕ ಅವರು ಅಧ್ಯಾಪಕ ಹಾಗೂ ವಿಮರ್ಶಕರಾಗದೆ ಇದ್ದಿದ್ದರೆ ಕನ್ನಡ ಭಾಷ ಮತ್ತು ಸಾಹಿತ್ಯ ವಿಮರ್ಶೆಯ ಸತ್ವ ಪರಿಪಕ್ವವಾಗುತ್ತಿರಲಿಲ್ಲ ಎಂದರು.

ಸಾಂಪ್ರದಾಯಿಕ ವಿಮರ್ಶೆಗೆ ಹಿಡಿದಿದ್ದ ಗ್ರಹಣವನ್ನು ಬಿಟ್ಟು ತಮ್ಮದೇ ಆದ ನವ್ಯ ವಿಮರ್ಶ ಮಾರ್ಗವನ್ನು ರೂಪಿಸಿದವರು ಪ್ರೊ.ಜಿ.ಎಚ್. ನಾಯಕ. ಅವರ ವಿಮರ್ಶೆಯನ್ನು ಓದಿದಾಗ ಅದು ಧ್ಯಾನಸ್ಥ ರೀತಿಯ ಓದು. ಸಾಹಿತ್ಯ ಕೃತಿಯೊಂದರ ಗಂಭೀರ ಚಿಂತನೆಗೆ ಒಂದು ಶ್ರೇಷ್ಠವಾದ ದಾರಿ. ಒಂದು ಕೃತಿಯನ್ನು ನಿಧಾನವಾಗಿ, ಆಮೂಲಾಗ್ರವಾಗಿ ಸ್ವಾಧೀನಪಡಿಸಿಕೊಳ್ಳುವ ನೈಪುಣ್ಯತೆ ಪ್ರೊ.ಜಿ.ಎಚ್. ನಾಯಕರಿಗಿತ್ತು ಎಂಬ ನವ್ಯ ಸಾಹಿತ್ಯದ ಪ್ರಸಿದ್ಧ ಕವಿ ಎಂ. ಗೋಪಾಲಕೃಷ್ಣ ಅಡಿಗರ ಮಾತುಗಳನ್ನು ಉಲ್ಲೇಖಿಸಿದರು.

ಒಂದು ಕೃತಿ ಪರೀಕ್ಷೆಯಲ್ಲಿ ನೈತಿಕ ನೆಲೆ ಮುಖ್ಯ. ಒಟ್ಟು ಸಾಹಿತ್ಯ ವಿಮರ್ಶೆಯ ಒಳಗೆ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾ, ಮಾನವೀಯ ಸಂಬಂಧವನ್ನು ಗಟ್ಟಿಗೊಳಿಸಿದವರು ಪ್ರೊ.ಜಿ.ಎಚ್. ನಾಯಕ. ದ್ವೇಷ ಬಿಟ್ಟು-ದೇಶಕಟ್ಟು ಎಂಬ ಧ್ಯೇಯವಾಕ್ಯ ಅವರದ್ದು. ವಿದ್ಯಾರ್ಥಿಗಳೊಂದಿಗಿನ ಅವರ ಬದ್ಧತೆ ನೇರ ಹಾಗೂ ನಿಷ್ಠುರವಾದದ್ದು. ಜೀವನ ಪ್ರೀತಿ ಹಾಗೂ ಮನುಷ್ಯ ಪ್ರೇಮ ತೋರಿಸುವುದರಲ್ಲಿ ಅವರದು ಎತ್ತಿದ ಕೈ ಎಂದರು.

ಅವರ ಜೀವನದ ಉದ್ದಕ್ಕೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಬದುಕು ನಡೆಸಿದವರು. ವ್ಯಕ್ತಿ ವ್ಯಕ್ತಿಗಳ ಭಿನ್ನಾಭಿಪ್ರಾಯಗಳ ನಡುವೆ ಮನುಷ್ಯ ಸಂಬಂಧ ಹೇಗೆ ಉಳಿಸಿಕೊಳ್ಳಬೇಕು ಎಂಬುದನ್ನು ಕಲಿಸಿಕೊಟ್ಟವರು. ಹಾಗೆಯೇ ಮನುಷ್ಯನಾಗಿ ಒಳ್ಳೆಯವನಾಗಿರುವುದೇ ಎಲ್ಲಾ ಸಾಧನೆಗಿಂತ ಶ್ರೇಷ್ಠ ಎಂಬ ಧೋರಣೆ ಪ್ರೊ.ಜಿ.ಎಚ್. ನಾಯಕರದು ಎಂದರು.

ಜಿ.ಪಿ. ಬಸವರಾಜು ಅವರು ಮಾತನಾಡಿ, ನಾಯಕರಿಗೆ ಇಡೀ ಕನ್ನಡ ಸಾಹಿತ್ಯದ ಎಲ್ಲಾ ಪ್ರಧಾನ ಸಾಹಿತಿಗಳ ಬಗ್ಗೆ ತಿಳಿದಿತ್ತು. ಒಂದು ಕೃತಿ ಓದುವಾಗ ಯಾವ ಪೂರ್ವಾಗ್ರಹವಿಲ್ಲದೆ ತಿಳಿ ಮನಸ್ಸಿನಿಂದ ಓದಿ ಅಲ್ಲಿ ತಮ್ಮ ನಿಲುವನ್ನು ಸಷ್ಟವಾಗಿ ಅಲ್ಲದೇ ತಮಗೆ ಸತ್ಯ ಎಂದು ಕಂಡಿದ್ದನ್ನು ನಿಷ್ಠಾರಣವಾಗಿ ಹೇಳಬೇಕು. ಇದಕ್ಕೆ ನಿದರ್ಶನ ಪ್ರೊ.ಜಿ.ಎಚ್. ನಾಯಕರು.

ಕುವೆಂಪು ಅವರ ಕಲವು ಮಿತಿಗಳನ್ನು ಕುರಿತು ಅತಿ ಗಟ್ಟಿಯಾಗಿ ನಿಂತು ಸತ್ಯ ಹೇಳುತ್ತಿದ್ದುದ್ದು. ರನ್ನನ ಬಗೆಗಿನ ವಿಮರ್ಶೆ ಮಾಡಿ, ಅವರ ಗುರುಗಳಾದ ಬಿಎಂಶ್ರೀ, ತೀ.ನಂ.ಶ್ರೀ ಮೊದಲಾದವರನ್ನು ವಿರೋಧ ಕಟ್ಟಿಕೊಂಡದ್ದು ಉಂಟು ಅಂದರೆ ಅವರ ಮಿತಿಗಳನ್ನು ಅತ್ಯಂತ ಸತ್ಯ ಹಾಗೂ ದಿಟ್ಟತನದಿಂದ ಗುರುತಿಸಿದವರು. ನಾಯಕರು ಅಂದರೆ ಅವರ ಸಾಹಿತ್ಯ ವಿಮರ್ಶೆ ಮತ್ತು ಬದುಕು ಎರಡು ಒಂದೇ ಆಗಿತ್ತು ಎಂದು ಅವರು ವಿವರಿಸಿದರು.

ಚಿಂತನ ಚಿತ್ತಾರದ ಸಂಚಾಲಕ ನಿಂಗರಾಜು ಚಿತ್ತಣ್ಣನವರ್ ಆಶಯ ನುಡಿಗಳನ್ನಾಡಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರೊ.ಜಿ.ಎಚ್. ನಾಯಕರ ಕುಟುಂಬ ತಮ್ಮ ವಿದ್ಯಾರ್ಥಿಗಳಿಗೆ ನೈತಿಕ ಪಾಠವನ್ನು ಬದುಕಿ ತೋರಿಸಿಕೊಟ್ಟವರು. ಸಾಹಿತ್ಯ ಬೇರೆ ಅಲ್ಲ, ಬದುಕು ಬೇರೆ ಅಲ್ಲ ಎಂದು ಬಾಳಿದವರು. ಸದಾ ಎಚ್ಚರ, ಕಾಳಜಿ, ಪ್ರಾಮಾಣಿಕತನ, ನೇರ ನಿಷ್ಠುವಾದ ವ್ಯಕ್ತಿತ್ವ ಅದು ಅವರ ಬದುಕಿನಿಂದ ಬಂದದ್ದು. ಆದ್ದರಿಂದ ವಿದ್ಯಾರ್ಥಿಗಳು ಒಳ್ಳೆಯ ತನವನ್ನು ರೂಢಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಈ ವೇಳೆ ಜಿ.ಎಚ್. ನಾಯಕರ ಪುತ್ರಿ ಕೀರ್ತಿನಾಯಕ ಮತ್ತು ಆಳಿಯ ಮದನ್ ನಾಯಕ ಇದ್ದರು.

ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ವಿನೋದಮ್ಮ ವಂದಿಸಿದರು. ಕಿರಣ್ ಕುಮಾರ್‌ನಿರೂಪಿಸಿದರು. ಎಂ. ನಾಗೇಶ, ಮನೋಜ್ ಕುಮಾರ್, ಪ್ರೊ. ಜಿ.ಎಚ್. ನಾಯಕರ ಶಿಷ್ಯರು, ಅಭಿಮಾನಿ ಬಳಗ ಮತ್ತು ಸಂಶೋಧನಾ ವಿದ್ಯಾರ್ಥಿಗಳು, ಪ್ರಥಮ ವರ್ಷದ ಬಿಸಿಎ ವಿದ್ಯಾರ್ಥಿಗಳು ಇದ್ದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರೊ.ಜಿ.ಎಚ್. ನಾಯಕ 89 ಕಾರ್ಯಕ್ರಮದಲ್ಲಿ ಪ್ರೊ.ಜಿ.ಎಚ್.ನಾಯಕರ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಪುಸ್ತಕವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎಸ್. ಮುಕುಂದರಾಜ್ ಲೋಕಾರ್ಪಣೆಗೊಳಿಸಿದರು. ಡಾ.ಬಿ.ಆರ್. ವಿಜಯಕುಮಾರಿ, ಪ್ರೊ. ಮೈಸೂರು ಕೃಷ್ಣಮೂರ್ತಿ, ಕರಿಯಪ್ಪ, ಮೀರಾ ನಾಯಕ, ಬಿ.ಪಿ. ಬಸವರಾಜು, ನಿಂಗರಾಜು ಚಿತ್ತಣ್ಣನವರ್ ಇದ್ದಾರೆ.

ಕವಿಯಾದವನೇ ಒಬ್ಬ ವಿಮರ್ಶಕನನ್ನು ತಯಾರು ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶಿವರಾಮ ಕಾರಂತರಿಂದ ಕಲಿತ ಪಾಠವನ್ನು ಪ್ರೊ. ಜಿ.ಎಚ್. ನಾಯಕ ಅವರು ಕಾರಂತರ ಕೃತಿಗಳ ಬಗ್ಗೆ ವಿಮರ್ಶಿಸಿದರು. ನವೋದಯ ಕಾವ್ಯ ಪರಂಪರೆಗೆ ಪ್ರತಿಯಾಗಿ ಬಂದ ನವ್ಯ ಪರಂಪರೆಯ ಸಾಹಿತ್ಯ ವಿಮರ್ಶೆಯಲ್ಲಿ ಪ್ರೊ.ಜಿ.ಎಚ್. ನಾಯಕರ ವಿಮರ್ಶನ ಕಾರ್ಯ ಮಹತ್ವದ್ದು.

• **ಎಲ್.ಎಸ್.ಮುಕುಂದರಾಜ್**
ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 19 ಸೆಪ್ಟೆಂಬರ್ 2024

ಪ್ರೊ.ಜಿ.ಹೆಚ್.ನಾಯಕ ನಿಷ್ಠೂರ, ದಿಟ್ಟತನದ ವಿಮರ್ಶಕರಾಗಿದ್ದರು

ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅಭಿಮತ



ಮೈಸೂರಿನ ಮಹಾಜನ ಕಾಲೇಜಿನಲ್ಲಿ ವಿಮರ್ಶಕ ಜಿ.ಹೆಚ್.ನಾಯಕ ಅವರ 89ನೇ ಜನ್ಮದಿನದ ಹಿನ್ನೆಲೆಯಲ್ಲಿ ಬುಧವಾರ ಆಯೋಜಿಸಿದ್ದ 'ಜಿ.ಹೆಚ್.ನಾಯಕರ– ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿಯನ್ನು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಬಿಡುಗಡೆ ಮಾಡಿದರು.

ಮೈಸೂರು, ಸೆ.18(ಎಂಟಿವೈ)– ವಿಮರ್ಶೆ ಮಾಡುವುದು ಸುಲಭದ ಮಾತಲ್ಲ. ಆದರೆ, ವಿಮರ್ಶಕ ಪ್ರೊ.ಜಿ.ಹೆಚ್.ನಾಯಕ ಆಧುನಿಕ ಕನ್ನಡ ಸಾಹಿತ್ಯದ ನಿಷ್ಠುರ ಹಾಗೂ ದಿಟ್ಟತನದ ವಿಮರ್ಶಕರಾಗಿದ್ದರು ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾಜನ ಕಾಲೇಜಿನಲ್ಲಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಹಾಗೂ 'ಚಿಂತನ ಚಿತ್ತಾರ' ಪ್ರಕಾಶನ ಸಂಸ್ಥೆ ವಿಮರ್ಶಕ ಜಿ.ಹೆಚ್.ನಾಯಕ–89ನೇ ಜನ್ಮದಿನದ ಹಿನ್ನೆಲೆಯಲ್ಲಿ ಬುಧವಾರ ಆಯೋಜಿಸಿದ್ದ 'ಜಿ.ಹೆಚ್.ನಾಯಕರ– ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಲೋಕದ ವಿಮರ್ಶಾ ಕೈಂಕರ್ಯದಲ್ಲಿ ಪ್ರೊ.ಜಿ.ಹೆಚ್. ನಾಯಕರು ಕೊಟ್ಟ ಕೊಡುಗೆ ಅಪಾರ. ಕನ್ನಡದಲ್ಲಿ ವಿಮರ್ಶೆ ಎನ್ನುವುದು ವಿಭಿನ್ನ ಸ್ವರೂಪದಲ್ಲಿದೆ. ವಿಮರ್ಶೆಯ ಪರಿಕಲ್ಪನೆ ಪ್ರಾಚೀನ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ವಚನಕಾರರಲ್ಲಿಯೂ ಇತ್ತು. ಆದರೆ ನವ್ಯ ವಿಮರ್ಶೆ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಇತ್ತೀಚೆಗೆ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆ. ಕವಿಯಾದವನೇ ಒಬ್ಬ ವಿಮರ್ಶಕನನ್ನು ತಯಾರು ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶಿವರಾಮ ಕಾರಂತರಿಂದ ಕಲಿತ ಪಾಠವನ್ನು ಪ್ರೊ.ಜಿ.ಹೆಚ್.ನಾಯಕ ಅವರು ಕಾರಂತರ ಕೃತಿಗಳ ಬಗ್ಗೆ ವಿಮರ್ಶಿಸಿದರು. ನವೋದಯ ಕಾವ್ಯ ಪರಂಪರೆಗೆ ಪ್ರತಿಯಾಗಿ ಬಂದ ನವ್ಯ ಪರಂಪರೆಯ ಸಾಹಿತ್ಯ ವಿಮರ್ಶೆಯಲ್ಲಿ ಪ್ರೊ.ಜಿ.ಹೆಚ್.ನಾಯಕರ ವಿಮರ್ಶನ ಕಾರ್ಯ ಮಹತ್ವದ್ದಾಗಿದೆ ಎಂದರು.

ಎಲ್ಲ ಲೇಖಕರ ಕೃತಿಗಳ ಬಗ್ಗೆ ನಿಷ್ಠುರವಾಗಿ ವಿಮರ್ಶೆ ಬರೆದ ಅವರು ವಿಮರ್ಶಾ ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿದರು. ಶಿವರಾಮ ಕಾರಂತರ ಕಾದಂಬರಿಗಳ ಕುರಿತು ನೇರವಾಗಿ ಟೀಕಿಸಿದ್ದರು. ಕಾರಂತರೂ ತಾಳ್ಮೆಯಿಂದ ನಾಯಕರ ಕಟು ವಿಮರ್ಶೆಯನ್ನು ಸಹಿಸಿದ್ದರು. ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆ. ಮೂರು ದಶಕದ ಹಿಂದೆ ಕಿ.ರಂ. ನಾಗರಾಜ, ಡಿ.ಆರ್.ನಾಗರಾಜ ಅವರಂಥ ಪ್ರಖರ ವಿಮರ್ಶಕರಿದ್ದರು. ಇದೀಗ ಅಂತಹವರ ಸಂಖ್ಯೆ ಬೆರಳೆಣಿಕೆಯಾಗಿದೆ. ಗಂಭೀರವಾಗಿ ವಿಮರ್ಶೆಯನ್ನೇ ಓದುವ ಹವ್ಯಾಸ ಬಹುತೇಕರಿಗೆ ಇಲ್ಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಜಿ.ಎಚ್.ನಾಯಕರ ವಿಮರ್ಶೆ ಮತ್ತು ಬದುಕು ಕುರಿತು ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ, ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು ಮಾತನಾಡಿದರು.

ಚಿಂತನ ಚಿತ್ತಾರದ ಸಂಚಾಲಕ ನಿಂಗರಾಜು ಚಿತ್ತಣ್ಣನವರ್ ಆಶಯ ನುಡಿಗಳನ್ನಾಡಿದರು. ಜಿ.ಹೆಚ್ ನಾಯಕರ ಪುತ್ರಿ ಕೀರ್ತಿ ನಾಯಕ ಮತ್ತು ಅಳಿಯ ಮದನ್ ನಾಯಕ ಅವರು ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ ಸ್ವಾಗತಿಸಿದರೆ, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ವಿನೋದಮ್ಮ ವಂದಿಸಿದರು. ಕಿರಣ್‌ಕುಮಾರ್ ನಿರೂಪಿಸಿದರು.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಶುಕ್ರವಾರ,20 ಸೆಪ್ಟೆಂಬರ್ 2024

ಪ್ರೊ.ಜಿ.ಎಚ್.ನಾಯಕ್ ದಿಟ್ಟ ವಿಮರ್ಶಕ

ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಭಿಮತ



ಜಯಲಕ್ಷ್ಮಿಪುರಂನ ಮಹಾಜನ ಕಾಲೇಜಿನಲ್ಲಿ ವಿಮರ್ಶಕ ಜಿ.ಎಚ್.ನಾಯಕ್ ಅವರ 89ನೇ ಜನ್ಮದಿನದ ಪ್ರಯುಕ್ತ ಅವರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿಯನ್ನು ಗಣ್ಯರು ಬಿಡುಗಡೆ ಮಾಡಿದರು.

ಮೈಸೂರು: ಪ್ರೊ.ಜಿ.ಎಚ್.ನಾಯಕ್ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಟ್ಟತನದ ವಿಮರ್ಶಕ ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಬಣ್ಣಿಸಿದರು.

ಜಯಲಕ್ಷ್ಮಿಪುರಂನ ಮಹಾಜನ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಚಿಂತನ ಚಿತ್ತಾರ ಪ್ರಕಾಶನವು ಬುಧವಾರ ವಿಮರ್ಶಕ ಜಿ.ಎಚ್.ನಾಯಕ್ ಅವರ 89ನೇ ಜನ್ಮದಿನದ ಪ್ರಯುಕ್ತ ಅವರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

''ಎಲ್ಲ ಲೇಖಕರ ಕೃತಿಗಳ ಬಗ್ಗೆ ನಿಷ್ಠುರವಾಗಿ ವಿಮರ್ಶೆ ಬರೆದ ಅವರು ವಿಮರ್ಶಾ ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿದರು. ಶಿವರಾಮ ಕಾರಂತರ ಕಾದಂಬರಿಗಳ ಕುರಿತು ನೇರವಾಗಿ ಟೀಕಿಸಿದ್ದರು. ಕಾರಂತರೂ ತಾಳ್ಮೆಯಿಂದ ನಾಯಕರ ಕಟು ವಿಮರ್ಶೆಯನ್ನು ಸಹಿಸಿದ್ದರು. ಕಾರಂತರ ಕೃತಿಗಳ ಬಗ್ಗೆಯೇ ಸ್ವಂತ ಆಸಕ್ತಿಯಿಂದ ಹೆಚ್ಚಾಗಿ ವಿಮರ್ಶೆ ಬರೆದರು,'' ಎಂದರು.

''ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆ. ಮೂರು ದಶಕದ ಹಿಂದೆ ಕ.ರಂ.ನಾಗರಾಜ, ಡಿ.ಆರ್.ನಾಗರಾಜ ಅವರಂಥ ಪ್ರಖರ ವಿಮರ್ಶಕರಿದ್ದರು. ಇದೀಗ ಅಂತಹವರ ಸಂಖ್ಯೆ ಕಡಿಮೆಯಾಗಿದೆ. ಗಂಭೀರವಾಗಿ ವಿಮರ್ಶೆಯನ್ನೇ ಓದುವವರ ಸಂಖ್ಯೆ ಬಹುತೇಕರಿಗೆ ಇಲ್ಲವಾಗಿದೆ,'' ಎಂದು ಬೇಸರ ವ್ಯಕ್ತಪಡಿಸಿದರು.

''ಪ್ರಸ್ತುತ ಲೇಖಕನೇ ತನ್ನ ಕೃತಿಗಳ ಅನುವಾದಕರು, ವಿಮರ್ಶಕರನ್ನು ಹುಡುಕುವ, ತಯಾರು ಮಾಡುವ ಪರಿಸ್ಥಿತಿ ಬಂದಿದೆ. ಇದನ್ನು ಹಿಂದೆಯೇ ವಿದ್ವಾಂಸ ಎಲ್.ಬಸವರಾಜ ಅವರೂ ಹೇಳಿದ್ದರು. ವಿಮರ್ಶಕ ತಾನಾಗಿಯೇ ಕೃತಿ ವಿಮರ್ಶೆ ಬರೆದರೆ ಅದು ದೊಡ್ಡತನವಾಗಿದೆ,'' ಎಂದರು.

ಪ್ರೊ.ಮೈಸೂರು ಕೃಷ್ಣಮೂರ್ತಿ ಅವರು ಜಿ.ಎಚ್.ನಾಯಕರ ವಿಮರ್ಶೆ ಮತ್ತು ಬದುಕು ಕುರಿತು ಮಾತನಾಡಿ, ''ಜಿ.ಎಚ್.ನಾಯಕರು ಕಟು ಬರಹಗಳಿಂದ ಸಾಂಪ್ರದಾಯಿಕ ವಿಮರ್ಶೆಯ ಗ್ರಹಣ ಬಿಡಿಸಿದರು. ಅವರ ವಿಮರ್ಶಾ ಕೃತಿಗಳ ಬಗ್ಗೆ ಆಲೋಚನೆ ಮಾಡುವುದಾಗಲಿ, ಇತರರು ಮಾತನಾಡಿದಾಗ ಕೇಳಿಸಿಕೊಳ್ಳುವಾಗ ಶುದ್ಧ ಜಲದಲ್ಲಿ ಮಿಂದೆದ್ದ ಅನುಭವವಾಗುತ್ತದೆ,'' ಎಂದರು. ಲೇಖಕ ಜಿ.ಪಿ.ಬಸವರಾಜು, ಕೀರ್ತಿಶ್ರೀ ನಾಯಕ, ಪ್ರಕಾಶಕ ನಿಂಗರಾಜು ಚಿತ್ತಣ್ಣನವರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲೆ ಪ್ರೊ.ಬಿ.ಆರ್.ಜಯಕುಮಾರಿ ಹಾಜರಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಗುರುವಾರ 19 ಸೆಪ್ಟೆಂಬರ್ 2024
19 SEPTEMBER 2024

ದಿಟ್ಟತನದ ವಿಮರ್ಶಕ ಪ್ರೊ.ಜಿ.ಎಚ್.ನಾಯಕ



ವಿಜಯವಾಣಿ ಚಿತ್ರ

ನಗರದ ಜಯಲಕ್ಷ್ಮೀಪುರಂನ ಮಹಾಜನ ಕಾಲೇಜಿನಲ್ಲಿ ಬುಧವಾರ ಜಿ.ಎಚ್. ನಾಯಕ್ ರಚನೆಯ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕುಂದರಾಜ್ ಬಿಡುಗಡೆ ಮಾಡಿದರು. ಪ್ರೊ. ಮೈಸೂರು ಕೃಷ್ಣಮೂರ್ತಿ, ಜಿ.ಪಿ.ಬಸವರಾಜು, ನಿಂಗರಾಜು ಚಿತ್ತಣ್ಣನವರ್, ಪ್ರೊ.ಬಿ.ಆರ್. ಜಯಕುಮಾರಿ ಇದ್ದರು.

ಮೈಸೂರು: ಸಾಹಿತಿ ಪ್ರೊ.ಜಿ.ಎಚ್.ನಾಯಕ ಆಧುನಿಕ ಕನ್ನಡ ಸಾಹಿತ್ಯದ ನಿಷ್ಠೂರ ಹಾಗೂ ದಿಟ್ಟತನದ ವಿಮರ್ಶಕ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದ ರಾಜ್ ಬಣ್ಣಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಚಿಂತನ ಚಿತ್ತಾರ ಪ್ರಕಾಶನ ಬುಧವಾರ ನಗರದ ಜಯಲಕ್ಷ್ಮೀಪುರಂನ ಮಹಾಜನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಾಹಿತಿ ಜಿ.ಎಚ್.ನಾಯಕ ಜನ್ಮ ದಿನಾಚರಣೆ ಹಾಗೂ ಜಿ.ಎಚ್. ನಾಯಕ ರಚನೆಯ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಕೃತಿ ಬಿಡುಗಡೆ ಮಾಡಿ ಮಾತನಾಡಿದರು. ಎಲ್ಲ ಲೇಖಕರ ಕೃತಿಗಳ ಬಗ್ಗೆ ಜಿ.ಎಚ್.ನಾಯಕ ಅವರು ನಿಷ್ಠೂರವಾಗಿ ವಿಮರ್ಶೆ ಬರೆದರು. ಶಿವರಾಮ ಕಾರಂತರ ಕಾದಂಬರಿಗಳ ಕುರಿತು ಸಹ ಟೀಕಿಸಿದ್ದರು. ಕಾರಂತರು ತಾಳ್ಮೆಯಿಂದ ಇವರ ವಿಮರ್ಶೆಯನ್ನು ಸ್ವೀಕರಿಸಿದ್ದರು ಎಂದರು. ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ, ಲೇಖಕ ಜಿ.ಪಿ.ಬಸವರಾಜು, ಪ್ರಕಾಶಕ ನಿಂಗರಾಜು ಚಿತ್ತಣ್ಣನವರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲೆ ಪ್ರೊ.ಬಿ.ಆರ್. ಜಯಕುಮಾರಿ ಇದ್ದರು.

ಆಂದೋಲನ

ದಿನ ಪತ್ರಿಕೆ





ಬುಧವಾರ, 18 ಸೆಪ್ಟೆಂಬರ್ 2024

• ಕೃತಿ ಲೋಕಾರ್ಪಣೆ

ಬೆಳಿಗ್ಗೆ 10ಕ್ಕೆ, ಕನ್ನಡ ಸಾಹಿತ್ಯ ಅಕಾಡೆಮಿ, ಮಹಾಜನ ಪ್ರಥಮ ದರ್ಜೆ ಕಾಲೇಜು, ಚಿಂತನಾ ಚಿತ್ತಾರ, ಕೃತಿ-ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ, ರಚನೆ-ಪ್ರೊ.ಜಿ.ಎಚ್.ನಾಯಕ, ಕೃತಿ ಬಿಡುಗಡೆ-ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ವಿಶೇಷ ಉಪನ್ಯಾಸ-ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ, ಅತಿಥಿಗಳು-ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ, ಅಧ್ಯಕ್ಷತೆ-ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸ್ಥಳ-ಎವಿಸಿ-2 ಸಭಾಂಗಣ, ಮಹಾಜನ ಪ್ರಥಮ ದರ್ಜೆ ಕಾಲೇಜು.

ಪ್ರಜಾವಾಣಿ

ಬುಧವಾರ • ಸೆಪ್ಟೆಂಬರ್ 18, 2024

ಕರ್ನಾಟಕ ಸಾಹಿತ್ಯ ಅಕಾಡೆಮಿ, ಎಸ್.ಬಿ.ಆರ್. ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಚಿಂತನ ಚಿತ್ತಾರ: ಪ್ರೊ.ಜಿ.ಎಚ್.ನಾಯಕ 89, ಜಿ.ಎಚ್.ನಾಯಕ ಅವರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಕೃತಿ ಬಿಡುಗಡೆ, ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, 'ಜಿ.ಎಚ್.ನಾಯಕರ ವಿಮರ್ಶೆ ಮತ್ತು ಬದುಕು' ಉಪನ್ಯಾಸ- ಸಾಹಿತಿ ಪ್ರೊ. ಮೈಸೂರು ಕೃಷ್ಣಮೂರ್ತಿ, ಅತಿಥಿ- ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ, ಉಪಸ್ಥಿತಿ- ಮೀರಾ ನಾಯಕ್, ಕೀರ್ತಿಶ್ರೀ ನಾಯಕ, ಜಿ.ಪಿ.ಬಸವರಾಜು, ಆಶಯ ನುಡಿ- 'ಚಿಂತನ ಚಿತ್ತಾರ ಸಂಚಾಲಕ ನಿಂಗರಾಜು ಚಿತ್ತಣ್ಣನವರ್, ಅಧ್ಯಕ್ಷತೆ- ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಸ್ಥಳ- ಕಾಲೇಜು, ಜಯಲಕ್ಷ್ಮಿಪುರಂ, ಬೆಳಿಗ್ಗೆ 10

ವಿಜಯವಾಣಿ

ಕನ್ನಡಿಗರ ಧ್ವನಿ

ಬುಧವಾರ 18 ಸೆಪ್ಟೆಂಬರ್ 2024

» 18 SEPTEMBER 2024

ಪುಸ್ತಕ ಲೋಕಾರ್ಪಣೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಚಿಂತನ ಚಿತ್ತಾರ. ಪ್ರೊ.ಜಿ.ಎಚ್.ನಾಯಕರ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಪುಸ್ತಕ ಲೋಕಾರ್ಪಣೆ, ವಿಶೇಷ ಉಪನ್ಯಾಸ. ಕೃತಿ ಬಿಡುಗಡೆ: ಎಲ್. ಎನ್.ಮುಕುಂದರಾಜ್. ಉಪನ್ಯಾಸಕರು: ಪ್ರೊ.ಮೈಸೂರು ಕೃಷ್ಣಮೂರ್ತಿ. ಅತಿಥಿಗಳು: ಕರಿಯಪ್ಪ, ಮೀರಾ ನಾಯಕ, ಕೀರ್ತಿಶ್ರೀ ನಾಯಕ, ಜಿ.ಪಿ.ಬಸವರಾಜು, ನಿಂಗಣ್ಣ ಚಿತ್ತಣ್ಣನವರ್. ಅಧ್ಯಕ್ಷತೆ: ಡಾ.ಬಿ.ಆರ್.ವಿಜಯಕುಮಾರಿ. ಸ್ಥಳ: ಎವಿಸಿ-2, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ. ಬೆ.10

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 18.09.2024

- ಕರ್ನಾಟಕ ಸಾಹಿತ್ಯ ಅಕಾಡೆಮಿ, ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ಚಿಂತನ ಚಿತ್ತಾರ: ಪ್ರೊ.ಜಿ.ಎಚ್. ನಾಯಕ -89, ಪ್ರೊ.ಜಿ.ಎಚ್. ನಾಯಕರ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಪುಸ್ತಕ ಲೋಕಾರ್ಪಣೆ ಮತ್ತು ವಿಶೇಷ ಉಪನ್ಯಾಸ, ಕೃತಿ ಬಿಡುಗಡೆ, ಉದ್ಘಾಟನೆ- ಎಲ್.ಎನ್. ಮುಕಂದರಾಜ್, ಉಪನ್ಯಾಸ- ಮೈಸೂರು ಕೃಷ್ಣಮೂರ್ತಿ, ಅತಿಥಿ- ಕರಿಯಪ್ಪ, ಮೀರಾ ನಾಯಕ, ಕೀರ್ತಿಶ್ರೀ ನಾಯಕ, ಜಿ.ಪಿ. ಬಸವರಾಜು, ನಿಂಗರಾಜು ಚಿತ್ತಣ್ಣನವರ್, ಅಧ್ಯಕ್ಷತೆ- ಡಾ.ಬಿ.ಆರ್. ಜಯಕುಮಾರಿ, ಎವಿಸಿ -1 ಸಭಾಂಗಣ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಬೆಳಗ್ಗೆ 10.

ವಿಜಯ ಕರ್ನಾಟಕ

ಸಮಾಜ ಕನ್ನಡಿಗರ ಪಷ್ಟೆ

ಬುಧವಾರ,18 ಸೆಪ್ಟೆಂಬರ್ 2024

- **ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ಪ್ರೊ.ಜಿ.ಎಚ್.ನಾಯಕರ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಪುಸ್ತಕ ಲೋಕಾರ್ಪಣೆ ಮತ್ತು ವಿಶೇಷ ಉಪನ್ಯಾಸ, ಉದ್ಘಾಟನೆ- ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಉಪನ್ಯಾಸ-ಪ್ರೊ.ಮೈಸೂರು ಕೃಷ್ಣಮೂರ್ತಿ, ಎವಿಸಿ-2 ಸಭಾಂಗಣ, ಮಹಾಜನ ಪ್ರಥಮ ದರ್ಜೆ ಕಾಲೇಜು, ಬೆ.10ಕ್ಕೆ

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 11 ಸೆಪ್ಟೆಂಬರ್ 2024

ಯುವ ಜನಾಂಗದ ಸಮರ್ಪಕ ಬಳಕೆಯಿಂದ ಸದೃಢ ಭಾರತ ನಿರ್ಮಾಣ ಸಾಧ್ಯ

ಉಪನ್ಯಾಸಕಿ ಡಾ.ನಮಿತಾ ತಿಮ್ಮಯ್ಯ ಅಭಿಮತ

ಮೈಸೂರು, ಸೆ. 10– ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ವಿಶೇಷ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಡಾ.ನವಿತಾ ತಿಮ್ಮಯ್ಯ ಅವರು, ಪ್ರಪಂಚದ 4ನೇ ದೊಡ್ಡ ಆರ್ಥಿಕತೆಯಾಗಿ ಭಾರತ ಇಂದು ಹೊರಹೊಮ್ಮಿದೆ ಮತ್ತು ಅದರ ಒಟ್ಟು ದೇಶೀಯ ಉತ್ಪನ್ನ $3.41 ಟ್ರಿಲಿಯನ್ ಆಗಿದ್ದು, ಭಾರತದ ಆರ್ಥಿಕ ಬೆಳವಣಿಗೆಗೆ ಇದು ದೊಡ್ಡ ಲಾಭಾಂಶವಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಭಾರತದಲ್ಲಿ ಯುವ ಪೀಳಿಗೆ ಎದುರಿಸುತ್ತಿರುವ ನಿರುದ್ಯೋಗದ ಸನ್ನಿವೇಶವನ್ನು ತಗ್ಗಿಸಲು ಸೂಕ್ತವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನಾ ಅವಕಾಶಗಳನ್ನು ವಿಸ್ತರಿಸಲು ಹೆಚ್ಚು ಒತ್ತುಕೊಡಬೇಕೆಂದರು. ಬೆಳೆಯುತ್ತಿರುವ ಜನಸಂಖ್ಯೆಯೊಂದಿಗೆ ಭಾರತ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು, ಕೃಷಿ ಉತ್ಪಾದನೆ, ಕೈಗಾರಿಕೆ ಅಭಿವೃದ್ಧಿಯನ್ನು ಸೇನಾ ಕ್ಷೇತ್ರದ ಜೊತೆಯಲ್ಲಿ ಬಲಪಡಿಸ



ಬೇಕೆಂದರು. ಹಾಗೆ ಬಡತನ ಮತ್ತು ನಿರುದ್ಯೋಗಗಳನ್ನು ತಗ್ಗಿಸಲು ಎಂಎಸ್ ಎಂಇ ಕ್ಷೇತ್ರಗಳನ್ನು ವಿಸ್ತರಿಸಬೇಕು ಮತ್ತು ಅದರ ಪ್ರಯೋಜನಗಳನ್ನು ಯುವ ಜನಾಂಗಕ್ಕೆ ತಲುಪಿಸುವಂತಾಗಬೇಕೆಂದು ಅಭಿಪ್ರಾಯಪಟ್ಟರು. ಬಲಿಷ್ಠ ಜೀವನ ಮಟ್ಟ, ಆರೋಗ್ಯ, ಶಿಕ್ಷಣ, ತರಬೇತಿ, ಡಿಜಿಟಲ್ ಸರಕು ಸೇವೆಗಳ ವ್ಯಾಪಾರದ ವಿಸ್ತರಣೆ ಇವೆಲ್ಲವೂ ಭಾರತದ ಆರ್ಥಿಕತೆಯ ಸಾಧನಗಳಾಗಬೇಕೆಂದು ವಿವರಿಸಿದರು.

ವಿಶ್ವದಲ್ಲಿ 4ನೇ ದೊಡ್ಡ ಆರ್ಥಿಕತೆಯಾಗಿ ಭಾರತ ಇಂದು ಹೊರಹೊಮ್ಮಿದ್ದು, ಸ್ವದೇಶಿ ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಬಡತನ, ನಿರುದ್ಯೋಗ ಮತ್ತು ಅಸಮಾನತೆಯ ಪ್ರಮಾಣಗಳನ್ನು ತಗ್ಗಿಸುವಲ್ಲಿ ಭಾರತದ ಆರ್ಥಿಕತೆ ದಾಪುಗಾಲು ಇಡುತ್ತಿದೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ವೆಂಕಟಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕರಾದ ಡಾ.ಪುಷ್ಪರಾಣಿ ಪಿ.ಜಿ., ಚಲುವೇಗೌಡ ಎಸ್.ಎಂ ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 19.09.2024

ಮಹಾಜನ ಕಾಲೇಜಿನಲ್ಲಿ ಸ್ವಚ್ಛತಾ ಐ ಸೇವಾ ಕಾರ್ಯಕ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ಜಯಲಕ್ಷ್ಮೀಪುರಂನ ಉದ್ಯಾನವನದಲ್ಲಿ ಸ್ವಭಾವ ಸ್ವಚ್ಛತಾ - ಸಂಸ್ಕಾರ ಸ್ವಚ್ಛತಾ ಧ್ಯೇಯದಡಿ ಸ್ವಚ್ಛತಾ ಐ ಸೇವಾ ಕಾರ್ಯಕ್ರಮ ಆಯೋಜಿಸಿ ಸ್ವಯಂ ಸೇವಕ, ಸೇವಕಿಯರು ಹಾಗೂ ಘಟಕದ ಕಾರ್ಯಕ್ರಮಾಧಿಕಾರಿಗಳು ಶ್ರಮದಾನ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ರಂಗಕರ್ಮಿ ಸಿ. ಬಸವಲಿಂಗಯ್ಯ ಮಾತನಾಡಿ, ಸಾಹಿತಿಗಳು, ರಂಗಭೂಮಿ ಕಲಾವಿದರು ಇರುವ ಭೂಮಿ ಸ್ವಚ್ಛವಾಗಿಯೇ ಇದೆ. ಆದರೆ ಮಾನವನ ಮನಸ್ಸು ಸ್ವಚ್ಛವಾಗಿಲ್ಲ ತಿಪ್ಪೆಯಾಗಿದೆ. ನಾವು ಆರೋಗ್ಯವಾಗಿರಲು ಮನಸ್ಸನ್ನು ಶುದ್ಧವಾಗಿಡಬೇಕು. ಶುದ್ಧವಾದ ನೀರು, ಆಹಾರಸೇವಿಸುತ್ತೇವೆ. ಆದರೆಭೂಮಿಯನ್ನುಆರೋಗ್ಯವಾಗಿರಲು ಬಿಡದೆ ಅದಕ್ಕೆ ನಾವು ಮಾರಕವಾಗಿದ್ದೇವೆ ಎಂದರು.

ನಿಸರ್ಗದತತ್ವದೊಂದಿಗೆನಾವುಜೀವಿಸಿದರೆಮಾನವರುನೆಮ್ಮದಿಯಿಂದ ಬದುಕಬಹುದು. ಕಾಡನ್ನು ಕಡಿದು ಅದನ್ನು ಅಭಿವೃದ್ಧಿ ಎಂದು ಕರೆಯುತ್ತೇವೆ. ಆದರೆ ಮತ್ತೆ ಕಾಡನ್ನು, ಮರಗಿಡಗಳನ್ನು ಬೆಳೆಸುವುದರ ಕಡೆಗೆ ಗಮನ ಕೊಡುವುದಿಲ್ಲ. ಆದ್ದರಿಂದ ಭೂಮಿಯ ಸಮತೋಲನ ನಾಶವಾಗುತ್ತಿದೆ. ಭೂಮಿ ನಮ್ಮನ್ನು ಉಳಿಸುತ್ತದೆ ಅದೇ ಸಹಕಾರ ತತ್ವದೊಂದಿಗೆ ಸಂರಕ್ಷಿಸುವ ಹೊಣೆ ನಮ್ಮದಾಗಿದೆ. ಈ ವೇಳೆ 380 ಮರಗಳನ್ನು ಮಕ್ಕಳಂತೆ ಸಲುಹಿದ ವೃಕ್ಷದೇವತೆ ಸಾಲುಮರದ ತಿಮ್ಮಕ್ಕರನ್ನು ನೆನಪಿಸಿ ಸ್ವಯಂ ಸೇವಕರಿಗೆ ಅವರ ಸಮಾಜಸೇವೆಯ ಗುಣವನ್ನು ಅಳವಡಿಸಿಕೊಳ್ಳಲು ಕರೆ ನೀಡಿದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮಹಿಳಾ ಹೋರಾಟಗಾರ್ತಿ ಕೀರ್ತಿಶ್ರೀ ನಾಯಕ್, ಸುಶೀಲ ಬಸವಲಿಂಗಯ್ಯ ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಸಿ.ಎಸ್. ಸಿದ್ದರಾಜು, ಡಾ.ಜೆ. ದೊಡ್ಡರಸಯ್ಯ ಇದ್ದರು.

ಅಂಕೋಲಾ
ದಿನ ಪತ್ರಿಕೆ

ಶುಕ್ರವಾರ, 20 ಸೆಪ್ಟೆಂಬರ್ 2024

ರಾಮಕೃಷ್ಣ ವಿದ್ಯಾನಿಕೇತನದಲ್ಲಿ ಹಿಂದಿ ದಿನಾಚರಣೆ



ಮೈಸೂರು: ನಮ್ಮ ದೇಶದಲ್ಲಿ ಬೇರೆ ಬೇರೆ ಸಮುದಾಯದ ಸಂಸ್ಕೃತಿಯ ಜನರಿದ್ದು ಅವರ ಮಾತೃಭಾಷೆ ಬೇರೆಯಾಗಿದ್ದರೂ ಕೂಡ ವ್ಯಾವಹಾರಿಕವಾಗಿ ಹಿಂದಿ ಭಾಷೆಯನ್ನು ಅವಲಂಬಿಸಿದ್ದಾರೆ ಎಂದು ಮಹಾಜನ ಪದವಿ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥರಾದ ಪ್ರೊ. ಪರಮೇಶ್ವರ ಹೆಗಡೆ ಹೇಳಿದರು.

ನಗರದ ರಾಮಕೃಷ್ಣ ನಗರದ ದಕ್ಷಿಣೇಶ್ವರ ಮಾರ್ಗದಲ್ಲಿರುವ ಶ್ರೀ ರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ ಹಾಗೂ ಆರ್.ವಿ.ಕೆ. ಸಂಯುಕ್ತ ಪದವಿಪೂರ್ವ ಕಾಲೇಜು, ಹಾಗೂ ಶ್ರೀ ಪ್ರಣಮ್ಯ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಿದ್ದ ಹಿಂದಿ ದಿನಾಚರಣೆ 2024 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಹಿಂದಿ ಭಾಷೆಯು ರಾಷ್ಟ್ರ ಭಾಷೆ, ರಾಜ್ಯ ಭಾಷೆ ಹಾಗೂ ಸಂಪರ್ಕ ಭಾಷೆಯಾಗಿ ಮಾನ್ಯತೆಯನ್ನು ಪಡೆದಿದೆ ಎಂದರು.

ರಾಮಕೃಷ್ಣ ವಿದ್ಯಾಕೇಂದ್ರದ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಜಿ.ಚಂದ್ರಶೇಖರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಆರ್.ವಿ.ಕೆ. ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸಿ.ಶಿವಪ್ಪ, ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್, ಪ್ರಾಥಮಿಕ ಶಾಲಾ ವಿಭಾಗದ ಮುಖ್ಯೋಪಾಧ್ಯಾಯರಾದ ವೀಣಾ ಕೆ.ಹೆಗಡೆ, ಆರ್‌ಕೆವಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಹಿಂದಿ ಪ್ರಾಧ್ಯಾಪಕ ಎಸ್.ಚಿದಂಬರ, ಹಿಂದಿ ಸಹ ಶಿಕ್ಷಕಿ ಮಹಾಲಕ್ಷ್ಮೀ ಹಾಗೂ ಆಡಳಿತ ಮಂಡಳಿ ಸದಸ್ಯರು, ಅಧ್ಯಾಪಕ ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶನಿವಾರ, 14 ಸೆಪ್ಟೆಂಬರ್ 2024



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗ, ಯುವ ರೆಡ್‌ಕ್ರಾಸ್ ಸಮಿತಿ ಹಾಗೂ ಐಕ್ಯೂಎಸಿಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುವ ರೆಡ್‌ಕ್ರಾಸ್ ಸಮಿತಿಯ ಪದಾಧಿಕಾರಿಗಳ ಅನುಸ್ಥಾಪನಾ ಸಮಾರಂಭ ನಡೆಯಿತು. ಮೈಸೂರು ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಾಕ್ಷರಾದ ಡಾ.ಲಕ್ಷ್ಮೀ ದೇವಿ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಮೈಸೂರು ರೆಡ್‌ಕ್ರಾಸ್ ಸಂಸ್ಥೆ ನಿರ್ದೇಶಕ ಕೆ.ಎಂ.ವೀರಯ್ಯ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಬಿ.ಜಿ.ದೀಪು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 17.09.2024

ಜೀವ ಉಳಿಸುವ ಕೆಲಸ ಸಾವಿರ ಸನ್ಮಾನಗಳಿಗೆ ಸಮ

ಮೈಸೂರು ರೆಡ್ ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷೆ ಡಾ. ಲಕ್ಷ್ಮಿದೇವಿ ಅಭಿಮತ | ಅನುಸ್ಥಾಪನಾ ಸಮಾರಂಭ

• **ಕನ್ನಡಪ್ರಭ ವಾರ್ತೆ** ಮೈಸೂರು

ಜೀವ ಉಳಿಸುವ ಕೆಲಸ ಮಾಡಿದರೆ ಅದು ಸಾವಿರ ಸನ್ಮಾನಗಳಿಗೆ ಸಮ. ಇದು ದೇವರು ಮೆಚ್ಚುವ ಕೆಲಸವಾಗಿದೆ. ಇಂತಹ ಸಮಾಜಮುಖಿ ಕೆಲಸಗಳನ್ನು ನಮ್ಮ ಯುವಕರು ಮಾಡಬೇಕಾಗಿದೆ ಎಂದು ಮೈಸೂರು ರೆಡ್ ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷೆ ಡಾ. ಲಕ್ಷ್ಮಿದೇವಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗ, ಯುವ ರೆಡ್ ಕ್ರಾಸ್ ಸಮಿತಿ ಹಾಗೂ ಐಕ್ಯೂಎಸಿ ಸಹಭಾಗಿತ್ವದೊಂದಿಗೆ ಆಯೋಜಿಸಿದ್ದ ಯುವ ರೆಡ್ ಕ್ರಾಸ್ ಸಮಿತಿಯ ಪದಾಧಿಕಾರಿಗಳ ಅನುಸ್ಥಾಪನಾ ಸಮಾರಂಭವನ್ನು ಅವರು



ಉದ್ಘಾಟಿಸಿ ಮಾತನಾಡಿದರು.

ಯುವಕರು ಸಮಾಜದ ಉತ್ತಮ ಪ್ರಜೆಗಳಾಗಬೇಕು, ಮನುಷ್ಯತ್ವವನ್ನು ಪ್ರೋತ್ಸಾಹಿಸುವುದು ಮನುಷ್ಯನ ಆದ್ಯ ಕರ್ತವ್ಯವಾಗಿದೆ. ನಾವು ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ, ಸಮಾಜವನ್ನು ಉತ್ತಮ ರೀತಿಯಲ್ಲಿ ಬದಲಾಯಿಸುವ ಪ್ರಯತ್ನಿಸಬೇಕು. ಇದರ ಜೊತೆಗೆ ದೇಶದ ಮುಖ್ಯ ಆಧಾರ ಸ್ತಂಭಗಳಾದ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಇವುಗಳ ಆಧಾರದ ಮೇಲೆ ಈಗಿನ ಯುವಜನತೆ ಇಂತಹ ಸಮಾಜಮುಖಿ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ಅವರು ಕರೆ ನೀಡಿದರು.

ಇದೇ ವೇಳೆ ಅಂತಾರಾಷ್ಟ್ರೀಯ ಯುವಕರದಿನದಂದುಏರ್ಪಡಿಸಲಾಗಿದ್ದ ಭಿತ್ತಿಚಿತ್ರ ತಯಾರಿಕ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ನಂತರ ಎಲ್ಲಾ ವಿದ್ಯಾರ್ಥಿಗಳು ಸಾಮಾಜಿಕ ಜವಬ್ದಾರಿಗಳನ್ನು ಅರಿತು ಬಾಳುವುದಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮೈಸೂರು ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಕೆ.ಎಂ. ವೀರಯ್ಯ, ಕಾಲೇಜಿನ ರೆಡ್ ಕ್ರಾಸ್ ಸಮಿತಿಯ ಸಂಚಾಲಕಿ ಬಿ.ಜಿ. ದೀಪು ಇದ್ದರು. ಅಧಿತಿ ಎನ್. ತೇಜಸ್ವಿ ನಿರೂಪಿಸಿದರು. ಎಸ್.ಕೆ. ಕೀರ್ತನಾ ಸ್ವಾಗತಿಸಿದರು. ಎ. ಮೇಘಾ ವಂದಿಸಿದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶನಿವಾರ 14 ಸೆಪ್ಟೆಂಬರ್ 2024
» 14 SEPTEMBER 2024

ಸಮಾಜಮುಖಿ ಕೆಲಸಗಳಲ್ಲಿ ಯುವಕರು ತೊಡಗಿಸಿಕೊಳ್ಳಲಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಜೀವ ಉಳಿಸುವ ಕೆಲಸ ಮಾಡಿದರೆ, ಅದು ಸಾವಿರ ಸನ್ಮಾನಗಳಿಗೆ ಸಮ. ಇಂತಹ ಸಮಾಜಮುಖಿ ಕೆಲಸಗಳನ್ನು ನಮ್ಮ ಯುವಕರು ಮಾಡಬೇಕಾಗಿದೆ ಎಂದು ರೆಡ್‌ಕ್ರಾಸ್ ಸಂಸ್ಥೆಯ ಮೈಸೂರು ಉಪಾಧ್ಯಕ್ಷೆ ಡಾ.ಲಕ್ಷ್ಮೀದೇವಿ ಹೇಳಿದರು. ಯುವ ರೆಡ್‌ಕ್ರಾಸ್ ಸಮಿತಿ ಹಾಗೂ ಐಕ್ಯೂಎಸಿ ಸಹಭಾಗಿತ್ವದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಯುವ ರೆಡ್‌ಕ್ರಾಸ್ ಸಮಿತಿಯ ಪದಾಧಿಕಾರಿಗಳ ಅನುಸ್ಥಾಪನಾ ಕಾರ್ಯಕ್ರಮದಲ್ಲಿ ಮಾತನಾಡಿ, ಯುವಕರು ಸಮಾಜದ ಉತ್ತಮ ಪ್ರಜೆಗಳಾಗಬೇಕು. ಮನುಷ್ಯತ್ವವನ್ನು ಪ್ರೋತ್ಸಾಹಿಸುವುದು ಮನುಷ್ಯನ ಆದ್ಯ ಕರ್ತವ್ಯವಾಗಿದೆ ಎಂದರು.

» ರೆಡ್‌ಕ್ರಾಸ್ ಸಂಸ್ಥೆ ಉಪಾಧ್ಯಕ್ಷೆ ಡಾ.ಲಕ್ಷ್ಮೀದೇವಿ ಸಲಹೆ

ನಾವು ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ಸಮಾಜವನ್ನು ಉತ್ತಮ ರೀತಿಯಲ್ಲಿ ಬದಲಾಯಿಸುವ ಪ್ರಯತ್ನ ಮಾಡಬೇಕು. ಇದರ ಜತೆಗೆ ದೇಶದ ಮುಖ್ಯ ಆಧಾರಸ್ತಂಭಗಳಾದ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಇವುಗಳ ಆಧಾರದ ಮೇಲೆ ಈಗಿನ ಯುವಜನತೆ ಇಂತಹ ಸಮಾಜಮುಖಿ ಚಟುವಟಿಕೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, ವಿಪತ್ತು ಕಾಲದಲ್ಲಿ ಯುವಕರು ರಕ್ಷಣಾ ಕಾರ್ಯದಲ್ಲಿ ಭಾಗವಹಿಸಬೇಕು. ಒಳ್ಳೆಯ ಯೋಜನೆ, ಕೆಲಸ ಮತ್ತು ಉತ್ತಮ ಸಮಾಜ ನಿರ್ಮಿಸುವಲ್ಲಿ ಜತೆಗೂಡಬೇಕು ಎಂದು ಹೇಳಿದರು.

ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕ ಕೆ.ಎಂ.ವೀರಯ್ಯ ಅವರು ಯುವ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು. ಅಂತಾರಾಷ್ಟ್ರೀಯ ಯುವಕರ ದಿನದಂದು ಏರ್ಪಡಿಸಲಾಗಿದ್ದ ಭಿತ್ತಿಚಿತ್ರ ತಯಾರಿಕ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು. ಕಾಲೇಜಿನ ರೆಡ್‌ಕ್ರಾಸ್ ಸಮಿತಿ ಸಂಚಾಲಕಿ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಬಿ.ಜಿ.ದೀಪು ಉಪಸ್ಥಿತರಿದ್ದರು.

ವಿಜಯವಾಣಿ ಚಿತ್ರ



ರೆಡ್‌ಕ್ರಾಸ್ ಸಂಸ್ಥೆಯಿಂದ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಸೋಮವಾರ 16 ಸೆಪ್ಟೆಂಬರ್ 2024
16 SEPTEMBER 2024

ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ


ವಿಜಯವಾಣಿ ಚಿತ್ರ

ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಮೈಸೂರು ಉಪಾಧ್ಯಾಕ್ಷೆ ಡಾ.ಲಕ್ಷ್ಮೀದೇವಿ ಮಾತನಾಡಿದರು. ಡಾ.ಬಿ.ಆರ್. ಜಯಕುಮಾರಿ, ಬಿ.ಜಿ.ದೀಪು ಇದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ಜೀವ ಉಳಿಸುವ ಕೆಲಸ ಮಾಡಿದರೆ, ಅದು ಸಾವಿರ ಸನ್ಮಾನಗಳಿಗೆ ಸಮ. ಇಂತಹ ಸಮಾಜಮುಖಿ ಕೆಲಸಗಳನ್ನು ನಮ್ಮ ಯುವಕರು ಮಾಡಬೇಕಾಗಿದೆ ಎಂದು ರೆಡ್‌ಕ್ರಾಸ್ ಸಂಸ್ಥೆಯ ಮೈಸೂರು ಉಪಾಧ್ಯಕ್ಷೆ ಡಾ.ಲಕ್ಷ್ಮೀದೇವಿ ಹೇಳಿದರು.

ಯುವ ರೆಡ್‌ಕ್ರಾಸ್ ಸಮಿತಿ ಹಾಗೂ ಐಕ್ಯೂಎಸಿ ಸಹಭಾಗಿತ್ವದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚಿಗೆ ಆಯೋಜಿಸಿದ್ದ ಯುವ ರೆಡ್‌ಕ್ರಾಸ್ ಸಮಿತಿಯ ಪದಾಧಿಕಾರಿಗಳ ಅನುಸ್ಥಾಪನಾ ಕಾರ್ಯಕ್ರಮದಲ್ಲಿ ಮಾತನಾಡಿ, ಯುವಕರು ಸಮಾಜದ ಉತ್ತಮ ಪ್ರಜೆಗಳಾಗಬೇಕು. ಮನುಷ್ಯತ್ವವನ್ನು ಪ್ರೋತ್ಸಾಹಿಸುವುದು ಮನುಷ್ಯನ ಆದ್ಯ ಕರ್ತವ್ಯವಾಗಿದೆ ಎಂದರು. ನಾವು ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ಸಮಾಜವನ್ನು ಉತ್ತಮ ರೀತಿಯಲ್ಲಿ ಬದಲಾಯಿಸುವ ಪ್ರಯತ್ನ ಮಾಡಬೇಕು. ಇದರ ಜತೆಗೆ ದೇಶದ ಮುಖ್ಯ ಆಧಾರಸ್ತಂಭಗಳಾದ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಇವುಗಳ ಆಧಾರದ ಮೇಲೆ ಈಗಿನ ಯುವಜನತೆ ಇಂತಹ ಸಮಾಜಮುಖಿ ಚಟುವಟಿಕೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು. ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, ವಿಪತ್ತು ಕಾಲದಲ್ಲಿ ಯುವಕರು ರಕ್ಷಣಾ ಕಾರ್ಯದಲ್ಲಿ ಭಾಗವಹಿಸಬೇಕು.

» ಯುವ ಸಮೂಹಕ್ಕೆ ರೆಡ್ ಕ್ರಾಸ್ ಸಂಸ್ಥೆ ಉಪಾಧ್ಯಕ್ಷೆ ಡಾ.ಲಕ್ಷ್ಮೀದೇವಿ ಸಲಹೆ

ಒಳ್ಳೆಯ ಯೋಜನೆ, ಕೆಲಸ ಮತ್ತು ಉತ್ತಮ ಸಮಾಜ ನಿರ್ಮಿಸುವಲ್ಲಿ ಜತೆಗೂಡಬೇಕು ಎಂದು ಹೇಳಿದರು. ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕ ಕೆ.ಎಂ.ವೀರಯ್ಯ ಅವರು ಯುವ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು. ಅಂತಾರಾಷ್ಟ್ರೀಯ ಯುವಕರ ದಿನದಂದು ಏರ್ಪಡಿಸಲಾಗಿದ್ದ ಭಿತ್ತಿಚಿತ್ರ ತಯಾರಿಕ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು. ಕಾಲೇಜಿನ ರೆಡ್‌ಕ್ರಾಸ್ ಸಮಿತಿ ಸಂಚಾಲಕಿ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಬಿ.ಜಿ.ದೀಪು ಉಪಸ್ಥಿತರಿದ್ದರು.

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 20 ಸೆಪ್ಟೆಂಬರ್ 2024

ಮಹಾಜನ ಕಾಲೇಜಿನಲ್ಲಿ ರೋಟರ್ಯಾಕ್ಟ್ ಪದಗ್ರಹಣ



ಮೈಸೂರು: ನಗರದ ಜಯಲಕ್ಷ್ಮೀಪುರಂನಲ್ಲಿ ರುವ ಮಹಾಜನ ಶಿಕ್ಷಣ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ರೋಟರ್ಯಾಕ್ಟ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ರೋಟರಿ 3181 ವಲಯ 7ರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್ ಅವರು ಮುಖ್ಯ ಅತಿಥಿಗಳಾಗಿ, ಸಹಾಯಕ ಗವರ್ನರ್ ಡಾ.ಕೆ.ಎ.ಪ್ರಹ್ಲಾದ ಅವರು ಅತಿಥಿಗಳಾಗಿ ಭಾಗವಹಿಸಿದ್ದರು.

ಯಶೋಮತಿ ರವೀಂದ್ರನಾಥ ಅವರು ಸಮಾರಂಭದಲ್ಲಿ ಪದಗ್ರಹಣ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ರೋಟರ್ಯಾಕ್ಟ್ ಕ್ಲಬ್ ಹಿಂದಿನ ಅಧ್ಯಕ್ಷ ಎಂ.ಎಸ್.ಶಶಾಂಕ್‌ಗೌಡ ಅವರು ನೂತನವಾಗಿ ಆಯ್ಕೆಯಾದ ಮೋಹಿತ್ ಪುರೋಹಿತ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ನೂತನ ಕಾರ್ಯದರ್ಶಿಯಾಗಿ ಅರ್ಮಾನ್ ಬಲಾಲ್ ಅಧಿಕಾರ ಸ್ವೀಕರಿಸಿದರು. ಸಂಜನಾ ವಿಶಾಖಾಪುರ ಅವರು ಉಪಾಧ್ಯಕ್ಷರಾಗಿ, ಅಭಯ್ ಮುರಳಿಧರ್ ಅವರು ಸಂಯುಕ್ತ ಕಾರ್ಯದರ್ಶಿ ಯಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಮೋಹಿತ್ ಪುರೋಹಿತ್ ಅವರು, ಸಮಾರಂಭದಲ್ಲಿ ಮುಂದಿನ ವರ್ಷದ ಪ್ರಜ್ಞಾವಂತ ಯೋಜನೆಗಳು, ಸಮಾಜಸೇವೆ ಮತ್ತು ನಾಯಕತ್ವದ ಉತ್ತೇಜನ ಕುರಿತ ತಮ್ಮ ದೃಷ್ಟಿಕೋನವನ್ನು ವಿವರಿಸಿದರು.

ಅತಿಥಿಗಳಾದ ಜಿಲ್ಲಾ ರೋಟರ್ಯಾಕ್ಟ್ ಪ್ರತಿನಿಧಿ ಸಂಜಯ್ ಆರ್. ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಆರ್. ಜಯಕುಮಾರಿ ಅವರು ಕ್ಲಬ್‌ನ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 20.09.2024

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರೋಟ್ರಾಕ್ಟ್ ಕ್ಲಬ್ ಪದಗ್ರಹಣ ಸಂಪನ್ನ



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರೋಟ್ರಾಕ್ಟ್ ಕ್ಲಬ್ ಪದಗ್ರಹಣ ಸಮಾರಂಭ ನಡೆಯಿತು.

• **ಕನ್ನಡಪ್ರಭ ವಾರ್ತೆ** ಮೈಸೂರು ನಗರದ ಜಯಲಕ್ಷ್ಮೀಪುರಂನ ಮಹಾಜನ ಶಿಕ್ಷಣ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರೋಟ್ರಾಕ್ಟ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ವಲಯ 70 ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಹಾಯಕ ಗವರ್ನರ್ ಡಾ.ಕೆ.ಎ. ಪ್ರಹ್ಲಾದ ಅತಿಥಿಗಳಾಗಿದ್ದು, ಯಾಶೋಮತಿ ರವೀಂದ್ರನಾಥ ಪದಗ್ರಹಣ ಅಧಿಕಾರಿ ಆಗಿ ಕಾರ್ಯನಿರ್ವಹಿಸಿದರು.

ಹಿಂದಿನ ಅಧ್ಯಕ್ಷ ಎಂ.ಎಸ್. ಶಶಾಂಕ್ ಗೌಡ ಅವರು ನೂತನ ಅಧ್ಯಕ್ಷ ಮೊಹಿತ್ ಪುರೋಹಿತ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಪೂರ್ವ ಕಾರ್ಯದರ್ಶಿ ಜೆ. ರಕ್ಷಿತಾ ಅವರನ್ನು ಅನುಸರಿಸಿ, ನೂತನ ಕಾರ್ಯದರ್ಶಿಯಾಗಿ ಅರ್ಮಾನ್ ಬಿಲಾಲ್ ಅಧಿಕಾರ ಸ್ವೀಕರಿಸಿದರು. ಸಂಜನಾ ವಿ. ಶಖಾಪುರ ಅವರನ್ನು ಉಪಾಧ್ಯಕ್ಷೆಯಾಗಿ ನೇಮಕ ಮಾಡಲಾಯಿತು, ಹಾಗೂ ಅಭಯ್ ಮುರಳಿಧರ್ ಅವರು ಸಂಯುಕ್ತ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ.

ಯಾಶೋಮತಿ ರವೀಂದ್ರನಾಥ ಅವರ ನೇತೃತ್ವದಲ್ಲಿ ನೂತನ ಪದಾಧಿಕಾರಿಗಳನ್ನು ಅವರ ಪದವಿಯಲ್ಲಿ ಅಧಿಕೃತವಾಗಿ ನೇಮಿಸಲಾಯಿತು. ನೂತನ ಅಧ್ಯಕ್ಷರಾದ ಮೋಹಿತ್ ಪುರೋಹಿತ್ ಅವರು ಸಮಾರಂಭದಲ್ಲಿ ಮುಂದಿನ ವರ್ಷದ ಪ್ರಜ್ಞಾವಂತ ಯೋಜನೆಗಳು, ಸಮಾಜಸೇವೆ ಮತ್ತು ನಾಯಕತ್ವದ ಉತ್ತೇಜನದ ಕುರಿತ ತಮ್ಮ ದೃಷ್ಟಿಕೋನವನ್ನು ವಿವರಿಸಿದರು.

ಅತಿಥಿಗಳಾದ ಆರ್. ಸಂಜಯ್ ಮತ್ತು ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಅವರು ಕ್ಲಬ್‌ನ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಸಮಾಜದ ಮೇಲಿನ ಸಕಾರಾತ್ಮಕ ಪ್ರಭಾವವನ್ನು ಮುಂದುವರಿಸಲು ಸದಸ್ಯರನ್ನು ಪ್ರೋತ್ಸಾಹಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 01.09.2024

ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶ: ಉಪನ್ಯಾಸ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ, ಜೀವತಂತ್ರಜ್ಞಾನಶಾಸ್ತ್ರ, ಎಂಟ್ರಿ ಟು ಸರ್ವೀಸ್, ಐಕ್ಯೂಎಸಿ ಹಾಗೂ ಎಚ್ ಕ್ಯಾಸ್ ಸಂಸ್ಥೆ ಸಹಯೋಗದಲ್ಲಿ ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಎಚ್ ಕ್ಯಾಸ್ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಶೇಷಗಿರಿರಾವ್ ಮಾತನಾಡಿ, ಬಿ.ಎಸ್ಸಿ ಪದವಿಯ ನಂತರ ಇರುವ ವಿಪುಲ ಅವಕಾಶಗಳು, ಉನ್ನತ ಅಧ್ಯಯನದ ಎಂಎಸ್ಸಿ, ಎಂ.ಎಸ್ ಹಾಗೂ ಇಂಟಿಗ್ರೇಟೆಡ್ ಪಿಎಚ್.ಡಿ ಪದವಿ ಸೇರಿದಂತೆ ರಾಜ್ಯ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳು ನಡೆಸುವ ಪ್ರವೇಶ ಪರೀಕ್ಷೆಗಳಾದ ಜೆಎಎಂ, ಜೆಇಎಸ್ ಟಿ, ಸಿಯುಸಿಇಟಿ ಪರೀಕ್ಷೆಗಳ ಕಡೆಗೂ ವಿದ್ಯಾರ್ಥಿಗಳು ಗಮನ ಹರಿಸುವಂತೆ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಭೌತಶಾಸ್ತ್ರ ಮುಖ್ಯಸ್ಥೆ ಡಾ.ಎಸ್. ಪೂರ್ಣಿಮಾ, ಜೀವತಂತ್ರಜ್ಞಾನಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರಿಯಾಂಕ ಶೆಣೈ ಮೊದಲಾದವರು ಇದ್ದರು.



ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 2 ಸೆಪ್ಟೆಂಬರ್ 2024

ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು; ವಿಶೇಷ ಉಪನ್ಯಾಸ



'ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು' ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿ ಡಾ.ಶೇಷಗಿರಿರಾವ್ ಮಾತನಾಡಿದರು.

ಮೈಸೂರು,ಸೆ.1–ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಭೌತಶಾಸ್ತ್ರ, ಜೀವ ತಂತ್ರಜ್ಞಾನಶಾಸ್ತ್ರ, ಎಂಟ್ರಿ–ಟು–ಸರ್ವೀಸ್, ಐಕ್ಯೂಎಸಿ ಹಾಗೂ H Cross ಸಂಸ್ಥೆ ಸಹಯೋಗದಲ್ಲಿ ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ H Cross ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿ ಡಾ.ಶೇಷಗಿರಿರಾವ್ ಮಾತನಾಡಿ, ಬಿ.ಎಸ್ಸಿ ಪದವಿಯ ನಂತರ ವಿದ್ಯಾರ್ಥಿಗಳಿಗಿರುವ ವಿಫುಲ ಅವಕಾಶಗಳ ತಿಳಿಸುತ್ತಾ, ಉನ್ನತ ಅಧ್ಯಯನದ ಎಂಎಸ್ಸಿ, ಎಂ.ಎಸ್ ಹಾಗೂ ಇಂಟಿಗ್ರೇಟೆಡ್ ಪಿಹೆಚ್.ಡಿ ಪದವಿ ಸೇರಿದಂತೆ ರಾಜ್ಯ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳು ನಡೆಸುವ ಪ್ರವೇಶ ಪರೀಕ್ಷೆಗಳಾದ JAM, JEST, CUCET ಪರೀಕ್ಷೆಗಳ ಕಡೆಗೂ ವಿದ್ಯಾರ್ಥಿಗಳು ಗಮನಹರಿಸುವಂತೆ ತಿಳಿಸಿದರು.

ಈ ಪರೀಕ್ಷೆಗಳು ನಡೆಯುವ ಸಂಭವನೀಯ ದಿನಾಂಕಗಳು ಹಾಗೂ ಈ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹೇಗೆ ಸಿದ್ಧತೆ ನಡೆಸಿಕೊಳ್ಳಬೇಕೆಂಬ ಮಾಹಿತಿ ಹಂಚಿಕೊಂಡರು. ಇದರ ಜೊತೆಗೆ ವಿಸ್ತಾರವಾದ ಉದ್ಯೋಗದ ಅವಕಾಶಗಳನ್ನು ಪಡೆಯಲು ವಿದ್ಯಾರ್ಥಿಗಳು ISRO, DRDO, NRSA, BEL ನಂತಹ ಸುಪ್ರಸಿದ್ಧ ಸಂಸ್ಥೆಗಳನ್ನು ನಡೆಸುವ ಪರೀಕ್ಷೆಗಳಿಗೆ ಹಾಜರಾಗಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. 2000 ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್ ಕಂಪನಿಗಳಿಗೂ ಅರ್ಜಿ ಹಾಕುವಂತೆ ಸೂಚಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಹೆಚ್, ಭೌತಶಾಸ್ತ್ರ ಮುಖ್ಯಸ್ಥ ಡಾ.ಪೂರ್ಣಿಮಾ, ಜೀವ ತಂತ್ರಜ್ಞಾನ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರಿಯಾಂಕ ಶೆಣೈ, ವಿಜ್ಞಾನ ವಿಭಾಗಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿ ಹಾಜರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಸೆಪ್ಟೆಂಬರ್ 19, 2024

ಥ್ರೋಬಾಲ್ ಟೂರ್ನಿ: ಜೆಎಸ್ಎಸ್ ಕಾಲೇಜು ರನ್ನರ್ ಅಪ್

ಮಹಾಜನ ಕಾಲೇಜಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ತಂಡವು ಬುಧವಾರ ನಡೆದ ಮೈಸೂರು ನಗರ ಮಟ್ಟದ ಅಂತರ ಕಾಲೇಜು ಥ್ರೋಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಎತ್ತಿ ಹಿಡಿಯಿತು.

ಸರಸ್ವತಿಪುರಂನ ಜೆಎಸ್ಎಸ್ ಮಹಿಳಾ ಕಾಲೇಜು ದೈಹಿಕ ಶಿಕ್ಷಣ ವಿಭಾಗವು ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಟೂರ್ನಿಯ ಫೈನಲ್‌ನಲ್ಲಿ ಮಹಾಜನ ಕಾಲೇಜು ಜೆಎಸ್ಎಸ್ ಪಿ.ಯು. ಕಾಲೇಜು ತಂಡವನ್ನು 25-20, 25-23ರ ಅಂತರದಲ್ಲಿ ಮಣಿಸಿ ಪ್ರಶಸ್ತಿ ಎತ್ತಿ ಹಿಡಿಯಿತು. ಟೂರ್ನಿಯಲ್ಲಿ ಮೈಸೂರು ನಗರ ವ್ಯಾಪ್ತಿಯ ವಿವಿಧ ಕಾಲೇಜುಗಳ 20 ಮಹಿಳಾ ತಂಡಗಳು ಪಾಲ್ಗೊಂಡವು.

ಚಾಲನೆ: ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ ಹಾಗೂ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ನಡೆದ ಟೂರ್ನಿಗೆ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಬಿ. ಹುಚಗೊಂಡರ ಚಾಲನೆ ನೀಡಿದರು.



ಜೆಎಸ್ಎಸ್ ಮಹಿಳಾ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ಆಂತರ ಕಾಲೇಜು ಥ್ರೋಬಾಲ್ ಟೂರ್ನಿಗೆ ಎಂ.ಬಿ. ಹುಚಗೊಂಡರ ಚಾಲನೆ ನೀಡಿದರು. ಬಿ. ನಿರಂಜನ ಮೂರ್ತಿ, ಎಂ. ಪೂರ್ಣಿಮಾ, ರೇಚಣ್ಣ, ಶಿವಶಂಕರಪ್ಪ, ಎ. ರಶ್ಮಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಬಳಿಕ ಮಾತನಾಡಿದ ಅವರು, 'ದೈಹಿಕ ಹಾಗೂ ಮಾನಸಿಕ ಸದೃಢತೆ ಕಾಪಾಡಿಕೊಳ್ಳಲು ಕ್ರೀಡೆ ಸಹಕಾರಿ. ಪ್ರತಿ ವಿದ್ಯಾರ್ಥಿನಿಯೂ ತಮಗಿಷ್ಟದ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು' ಎಂದು ಸಲಹೆ ನೀಡಿದರು.

ಜೆಎಸ್ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲೆ ಎಂ. ಪೂರ್ಣಿಮಾ, ಶೈಕ್ಷಣಿಕ ವಿಭಾಗದ ಡೀನ್ ರೇಚಣ್ಣ, ಅಧೀಕ್ಷಕ ಶಿವಶಂಕರಪ್ಪ, ದೈಹಿಕ ಶಿಕ್ಷಣ ನಿರ್ದೇಶಕಿ ಎ.ರಶ್ಮಿ ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 24.09.2024

ಥ್ರೋಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು: ಸರಸ್ವತಿಪುರಂನ ಜೆಎಸ್‌ಎಸ್ ಮಹಿಳೆಯರ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದ್ದಾರೆ. ವಿಜೇತ ವಿದ್ಯಾರ್ಥಿನಿಯರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ದೈಹಿಕ ಶಿಕ್ಷಣ ನಿರ್ದೇಶಕ ಪಿ. ಎಸ್. ಮಧುಸೂಧನ, ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ಡಾ.ಎಚ್.ಎನ್. ಭಾಸ್ಕರ್‌ಹಾಗೂ ತಂಡದ ನಾಯಕಿ ಪರಿಣಿತ, ಕೆ. ಸೋಮಶೇಖರ್, ಸಾಗರಿ ಪೊನ್ನಮ್ಮ, ಎಂ.ಕೆ. ಸಂಜನಾ, ದುರ್ಗಾಶ್ರೀ, ಅನ್ವಿತಾ, ಟಿ.ಜಿ. ಹರ್ಷಿತಾ, ಅನುಶ್ರೀ, ಬಿ. ಸ್ಮಿತಾ, ಎಂ.ಕೆ. ಸ್ಪಂದನಾ, ಸ್ಮಿತಾ ಹಾಗೂ ಬಿ. ಹರ್ಷಿತಾ ಇದ್ದಾರೆ.

STAR OF MYSORE

Tuesday 24th September 2024

Mysuru City Throwball Champs



The Women's Throwball Team of SBRR Mahajana First Grade College (FGC), Jayalakshmipuram, Mysuru, bagged first place in Mysuru City Inter-Collegiate Women Throwball Tournament 2024-25 organised by JSS Women's College, Saraswathipuram, Mysuru, recently. Seen are (sitting from left) Physical Education Director P.S. Madhusudhana, Principal Dr. B.R. Jayakumari, Physical Education Director Dr. H.N. Bhaskar and Team Captain Parinitha; (standing from left) K. Somashekar, Sagari Ponnamma, M.K. Sanjana, Durgashree, Anvitha, T.G. Harshitha, Anushree, B. Smitha, M.K. Spandana, Smitha and B. Harshitha.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಸೋಮವಾರ 23.09.2024

ಜೀವನದಲ್ಲಿ ಯಶಸ್ಸು ಎಂಬುದು ಸುದೀರ್ಘವಾದ ತಪಸ್ಸಾಗಿದೆ

ನಟ, ನಿರ್ದೇಶಕ ಅವಿನಾಶ್ ಶಠಮರ್ಷಣ ಅಭಿಮತ



• **ಕನ್ನಡಪ್ರಭ ವಾರ್ತೆ** ಮೈಸೂರು

ಯಶಸ್ಸು ಎಂಬುದು ಸುದೀರ್ಘವಾದ ತಪಸ್ಸು, ಸೋಲೆ ಗೆಲುವಿನ ಮೆಟ್ಟಿಲು ಎಂದು ನಟ, ನಿರ್ದೇಶಕ ಅವಿನಾಶ್ ಶಠಮರ್ಷಣ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಈ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ನಾಟಕ, ನಿರ್ದೇಶನ ಮಾಡಿ ಬಹುಮಾನವನ್ನು ಪಡೆದುಕೊಂಡಿದ್ದೆ ಎಂದು ಭಾವುಕರಾದರು.

ನಾಯಕತ್ವದ ಗುಣ ಎಂದರೆ, ನಾಯಕನಾಗಿ ತಾನು ಬೆಳೆಯುವುದು ಮಾತ್ರವಲ್ಲ, ತನ್ನ ಜೊತೆ ಇರುವವರನ್ನು ಬೆಳೆಸಬೇಕಾಗಿದೆ. ವ್ಯಕ್ತಿ ಎಷ್ಟು ಮುಖ್ಯವೋ ಸುತ್ತಲಿನ ಸಮಾಜ ಅಷ್ಟೇ ಮುಖ್ಯ. ಸುತ್ತಮುತ್ತಲಿನ ಸಂಗತಿಗಳನ್ನು ನಾವು ಅರಿಯಲಿಲ್ಲವೆಂದರೆ ನಮ್ಮ ವಿವೇಚನೆ ಬೆಳೆಯಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ನಟಿ ಪ್ರಿಯಾ ಶಠಮರ್ಷಣ ಮಾತನಾಡಿ, ಪ್ರತಿಯೊಬ್ಬರಿಗೂ ಉಸಿರು ಇರುವಷ್ಟೇ ಸತ್ಯವಾಗಿ ಅವರದೇ ಆದ ಪ್ರತಿಭೆ ಇರುತ್ತದೆ. ನಾಟಕ, ಹಾಡು, ನೃತ್ಯ, ಅಭಿನಯ ಇವಷ್ಟೇ ಪ್ರತಿಭೆಯಲ್ಲ. ನಮ್ಮ ಜೀವನದಲ್ಲಿ ಏನೇ ಸಮಸ್ಯೆ ಬಂದರೂ ಅದನ್ನು ನಿಭಾಯಿಸುವ ಸಾಮರ್ಥ್ಯ ಬೆಳೆಸಿಕೊಳ್ಳುವುದಾಗಿದೆ. ನಮ್ಮಲ್ಲಿರುವ ಕೀಳರಿಮೆಯನ್ನು ಬಿಟ್ಟು, ನಮ್ಮನ್ನು ನಾವು ಪ್ರಶ್ನಿಸಿಕೊಂಡು ಸುಧಾರಿಸಿಕೊಳ್ಳಬೇಕು ಎಂದರು. ನಮ್ಮ ಸುತ್ತಮುತ್ತಲಿನಲ್ಲಿ ನಡೆಯುವ ಸಮಸ್ಯೆಗಳಿಗೆ ದನಿ ಎತ್ತುವ ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು. ನಿಮ್ಮ ಆಸಕ್ತಿಗೆ ಅನುಗುಣವಾಗಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ನೀವು ನಿಮ್ಮನ್ನು ರೂಪಿಸಿಕೊಂಡು ದೇಶಕ್ಕೆ ಒಳ್ಳೆಯ ಪ್ರಜೆಯಾಗಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಸತ್ ಸಂಚಾಲಕಿ ಡಾ.ಪಿ.ಜಿ. ಪುಷ್ಪರಾಣಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್ ಇದ್ದರು. ಪತ್ರಿಭಾ ವೇದಿಕೆಯ ಸಂಚಾಲಕ ಎಂ. ನಾಗೇಶ ವಂದಿಸಿದರು. ಸುನೀಲ್ ನಿರೂಪಿಸಿದರು.

ಪ್ರಜಾವಾಣಿ

ಶನಿವಾರ • ಸೆಪ್ಟೆಂಬರ್ 21, 2024

ಮಹಾಜನ ವಿದ್ಯಾಸಂಸ್ಥೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನೆ- ಪ್ರಿಯಾ ಶಠಮರ್ಷಣ, ಅವಿನಾಶ್ ಶಠಮರ್ಷಣ, ಅಧ್ಯಕ್ಷತೆ- ಮುರಳೀಧರ್ ಭಾಗವತ್, ಸ್ಥಳ: ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮಿಪುರಂ, ಬೆ.10.30

ವಿಜಯ ಕರ್ನಾಟಕ

ಶನಿವಾರ,21 ಸೆಪ್ಟೆಂಬರ್ 2024

- **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿಗಳ ಪಾರ್ಲಿಮೆಂಟ್ ಪ್ರತಿಭಾ ಸಮಾರಂಭ, ಉದ್ಘಾಟನೆ-ನಟ ಅವಿನಾಶ್ ಶಾತಮಾರ್ಷನ್, ಪ್ರಿಯಾ ಶಾತಮಾರ್ಷನ್, ಅಧ್ಯಕ್ಷತೆ-ಮಹಾಜನ ಎಜುಕೇಷನ್ ಸೊಸೈಟಿ ಟಿ.ಮುರುಳಿಧರ್ ಭಾಗವತ್, ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆ.11ಕ್ಕೆ

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶನಿವಾರ 21.09.2024

- ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್ ಮತ್ತು ಪ್ರಿತಭಾ ವೇದಿಕೆ ಉದ್ಘಾಟನಾ ಸಮಾರಂಭ, ವಿದ್ಯಾರ್ಥಿ ಸಂಸತ್ ಉದ್ಘಾಟನೆ- ಅವಿನಾಶ್ ಶಠಮರ್ಷಣ, ಪ್ರತಿಭಾ ವೇದಿಕೆ ಉದ್ಘಾಟನೆ- ಪ್ರಿಯಾ ಶಠಮರ್ಷಣ, ಅಧ್ಯಕ್ಷತೆ- ಟಿ. ಮುರಳೀಧರ್ ಭಾಗವತ್, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮೀಪುರಂ, ಬೆಳಗ್ಗೆ 10.30.



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 21 ಸೆಪ್ಟೆಂಬರ್ 2024

■ ಮಹಾಜನ ಪ್ರಥಮ ದರ್ಜೆ ಕಾಲೇಜು : ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಹಿರಿಯ ವಿದ್ಯಾರ್ಥಿ ಅವಿನಾಶ್ ಶಠಮರ್ಷಣ, ಪ್ರತಿಭಾ ವೇದಿಕೆ ಉದ್ಘಾಟನೆ : ಚಲನಚಿತ್ರ ನಟಿ ಶ್ರೀಮತಿ ಪ್ರಿಯಾ ಶಟಮರ್ಷಣ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಸ್ಥಳ: ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

ವಿಜಯವಾಣಿ

ಕನ್ನಡಿಗರ ಧ್ವನಿ

ಶನಿವಾರ 21 ಸೆಪ್ಟೆಂಬರ್ 2024
21 SEPTEMBER 2024

■ **ವೇದಿಕೆ ಉದ್ಘಾಟನೆ:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ವಿದ್ಯಾರ್ಥಿ ಸಂಪತ್, ಪ್ರತಿಭಾ ವೇದಿಕೆ ಉದ್ಘಾಟನೆ: ಅವಿನಾನ್ ಶಠಮರ್ಷಣ, ಪ್ರಿಯಾ ಶಠಮರ್ಷಣ. ಅಧ್ಯಕ್ಷತೆ: ಟಿ.ಮುರಳೀಧರ್ ಭಾಗವತ್. ಸ್ಥಳ: ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣ. ಬೆ.10.30

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 2.10.2024

ಮಹಾಜನ ಕಾಲೇಜಿನಲ್ಲಿ ಭಗತ್ ಸಿಂಗ್ ಜನ್ಮ ದಿನಾಚರಣೆ



ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎನ್.ಸಿ.ಸಿ ಘಟಕದ ವತಿಯಿಂದ ಭಗತ್ ಸಿಂಗ್ ಅವರ 117ನೇ ಜನ್ಮ ದಿನವನ್ನು ಆಚರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಎನ್.ಸಿ.ಸಿ ಅಧಿಕಾರಿ ಡಾ.ಎಂ.ಆರ್. ಇಂದ್ರಾಣಿ, ಕೇರ್‌ಟೇಕರ್ ಗಾಯತ್ರಿ, 13 ಕಾರ್‌ಬೆಟಾಲಿಯನ್ ಹವಾಲ್ ದಾರ್‌ಗಳಾದ ಸಂಜಯ್ ಸಾಹ, ಸಂಜಯ್ ಕುಮಾರ್, 1 ಕರ್ನಾಟಕ ಆರ್ಟಿಲರಿ ಎನ್.ಸಿ.ಸಿ ಸ್ಟಾಫ್ ಮತ್ತು 1 ಕರ್ನಾಟಕ ಆರ್ಟಿಲರಿ ಬ್ಯಾಟರಿ, 13 ಕರ್ನಾಟಕ ಬೆಟಾಲಿಯನ್ ಮತ್ತು 4 ಏರ್‌ಸ್ ಕ್ವಾರ್ಡನ್, ಎಲ್ಲಾ ವಿಭಾಗದ ಎನ್.ಸಿ.ಸಿ ಕ್ಯಾಡೆಟ್ಸ್‌ಗಳು ಭಾಗವಹಿಸಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಸೋಮವಾರ, 7 ಅಕ್ಟೋಬರ್ 2024

ಮಹಾಜನ ಕಾಲೇಜು: ಪಠ್ಯಪುಸ್ತಕಗಳ ಬಿಡುಗಡೆ

ರಾಜ್ಯ ಶಿಕ್ಷಣ ನೀತಿಗೆ ತಕ್ಕಂತೆ ಪಠ್ಯಪುಸ್ತಕಗಳ ರಚನೆ



ಮೈಸೂರು: 2024ರ ರಾಜ್ಯ ಶಿಕ್ಷಣ ನೀತಿಗೆ ಸಂಬಂಧಪಟ್ಟ ಕನ್ನಡ ವಿಭಾಗದ ಪಠ್ಯಪಸ್ತಕಗಳನ್ನು ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್ ಅವರು ಲೋಕಾರ್ಪಣೆ ಮಾಡಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ವಾರದ ಸಮಾವೇಶದ'ಲ್ಲಿ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಯಾವುದೇ ಶೈಕ್ಷಣಿಕ ಸಂಸ್ಥೆಯ ಯಶಸ್ಸು ಆದರ ಭೌತಿಕ ಸ್ವರೂಪವನ್ನಷ್ಟೇ ಅವಲಂಬಿಸಿರುವುದಿಲ್ಲ. ಸ್ವಾಯತ್ತತೆ ಹೊಂದಿದ ಕಾಲೇಜುಗಳಲ್ಲೇ ನಮ್ಮ ಕಾಲೇಜಿನ ಕನ್ನಡ ವಿಭಾಗವು, ರಾಷ್ಟ್ರೀಯ ಹೊಸ ಶಿಕ್ಷಣ ನೀತಿ ಜಾರಿಗೆ ಬಂದಾಗಲೂ ಇಡೀ ಕಾಲೇಜಿನಲ್ಲೇ ಮೊದಲ ಬಾರಿಗೆ ಪಠ್ಯಪುಸ್ತಕಗಳನ್ನು ಪ್ರಕಟಿಸಿ ಪ್ರಶಂಸೆಗೆ ಪಾತ್ರವಾಗಿತ್ತು ಎಂದು ಹೇಳಿದರು.

ಪ್ರಸ್ತುತ 2024ರ ರಾಜ್ಯ ಶಿಕ್ಷಣ ನೀತಿಗೆ ತಕ್ಕಂತೆ ವಿನೂತನವಾಗಿ, ವೈವಿಧ್ಯಮಯವಾದ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿಬಿಎ, ಬಿಎಸ್ಸಿ ಮತ್ತು ಬಿಸಿಎ ತರಗತಿಗಳಿಗೆ ಅನುಕ್ರಮವಾಗಿ, ಕಲಾ ಸೌರಭ-1, ವಾಣಿಜ್ಯ ಸೌರಭ-1. ನಿರ್ವಹಣಾ ಸೌರಭ-1, ವಿಜ್ಞಾನ ಸೌರಭ-1 ಹಾಗೂ ಗಣಕ ಸೌರಭ-1 ಎಂಬ ಶೀರ್ಷಿಕೆ ಇರುವ ತಮ್ಮದೇ ಆದ ಪಠ್ಯಪುಸ್ತಕಗಳನ್ನು ಸ್ವಾಯತ್ತತೆ ಪಡೆದ ಕಾಲೇಜುಗಳಲ್ಲೇ ಪ್ರಪ್ರಥಮ ಬಾರಿಗೆ ಪ್ರಕಟಿಸುತ್ತಿರುವುದು ಸಂತೋಷವನ್ನು ಇಮ್ಮಡಿಗೊಳಿಸಿದೆ ಎಂದರು.

ಉತ್ತಮ ಶಿಕ್ಷಕ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಎಚ್.ಎನ್.ಗಿರೀಶ್ ಮಾತನಾಡಿ, ಇಂದಿನ ಡಿಜಿಟಲ್ ಯುಗದಲ್ಲಿ ವಿದ್ಯಾರ್ಥಿಗಳು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇಂದಿನ ಜಗತ್ತೇ ಒಂದು ಸ್ಪರ್ಧಾ ಜಗತ್ತು. ಈ ಹಂತದಲ್ಲಿ ವಿದ್ಯಾರ್ಥಿಗಳು ಭವ್ಯವಾದ ಭವಿಷ್ಯದ ಕನಸನ್ನು ಕಾಣಬೇಕು. ಈ ಕನಸು ಈಡೇರಬೇಕಾದರೆ ಈ ಪದವಿ ವಿದ್ಯಾಭ್ಯಾಸದ ಹಂತದಲ್ಲೇ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್.ಆರ್.ರಮೇಶ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್. ತಿಮ್ಮೇಗೌಡ, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ವಿನೋದಮ್ಮ ಸಹಾಯಕ ಪ್ರಾಧ್ಯಾಪಕರಾದ ಎಂ.ನಾಗೇಶ, ಸಿ.ಎಂ.ಕಿರಣ್ ಕುಮಾರ್, ಜಿ.ಮನೋಜ್ ಕುಮಾರ್, ವಿವಿಧ ವಿಭಾಗಗಳ ಮುಖ್ಯಸ್ಥರುಗಳು, ಅಧ್ಯಾಪಕರುಗಳು, ಅಧ್ಯಾಪಕೇತರರು, ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 24.10.2024

ಸ್ತನ ಕ್ಯಾನ್ಸರ್ ಬಗ್ಗೆ ಜನರಿಗೆ ಜಾಗೃತಿ ಅತೀ ಅಗತ್ಯ: ಡಾ.ರಮ್ಯ ಯೆತ್ತಡ್ಕ



• **ಕನ್ನಡಪ್ರಭ ವಾರ್ತೆ** ಮೈಸೂರು

ಸ್ತನ ಕ್ಯಾನ್ಸರ್‌ಬಗ್ಗೆ ಜನರಿಗೆ ಜಾಗೃತಿಯ ಅವಶ್ಯಕತೆ ಇದೆ ಎಂದು ಅಪೋಲೋ ಬಿಜಿಎಸ್ ಆಸ್ಪತ್ರೆಯ ಆಂಕೊಲಾಜಿ ಸಲಹೆಗಾರ್ತಿ ಡಾ. ರಮ್ಯ ಯೆತ್ತಡ್ಕ ಹೇಳಿದರು.

ನಗರದ ಎಸ್.ಬಿ.ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಪರ್ಶ, ಫೋರಮ್ ಫಾರ್‌ವುಮೆನ್ ಎಂಪವರ್ಮೆಂಟ್, ವೆಲ್ಸ್ ಸೆಂಟರ್‌ಮತ್ತು ಹೈಜೀನ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ, ಇನ್ನರ್‌ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರಿಗೆ ಏರ್ಪಡಿಸಿದ್ದ ಸ್ತನ ಕ್ಯಾನ್ಸರ್‌ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕ್ಯಾನ್ಸರ್‌ದೊಡ್ಡ ಕಾಯಿಲೆಯಲ್ಲ. ಆದರೆ, ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಮಾತ್ರ ಅದು ಸಾವಿಗೆ ಕಾರಣವಾಗುತ್ತದೆ. ಶೇ. 26 ರಿಂದ ಶೇ. 28 ರಷ್ಟು ಜನರು ಸ್ತನ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಮಹಿಳೆಯರು ಮಾತ್ರವಲ್ಲದೇ 100 ರಲ್ಲಿ ಒಬ್ಬ ಪುರುಷನಿಗೂ ಸ್ತನ ಕ್ಯಾನ್ಸರ್‌ಬರುತ್ತದೆ. ಸ್ತನ ಕ್ಯಾನ್ಸರ್‌ನಿಂದ ಮೃತಪಡುವವರ ಸಂಖ್ಯೆ ಮೊದಲನೇ ಸ್ಥಾನದಲ್ಲಿದೆ. ಸ್ತನದ ಕ್ಯಾನ್ಸರ್‌ಯಾರಿಗೆ ಬೇಕಾದರೂ ಹಾಗೂ ಎಲ್ಲ ವಯಸ್ಸಿನವರಿಗೂ ಬರಬಹುದು. 35 ವರ್ಷದ ನಂತರ ಮಗುವಿಗೆ ಜನ್ಮ ನೀಡಿದರೆ, ಅವರಿಗೆ ಸ್ತನ ಕ್ಯಾನ್ಸರ್ ಬರುವ ಸಾಧ್ಯತೆ ಎರಡು ಪಟ್ಟು ಇರುತ್ತದೆ. ಮಗುವಿಗೆ ಎದೆಹಾಲು ಉಣಿಸದಿದ್ದರೆ ಸ್ತನ ಕ್ಯಾನ್ಸರ್‌ಬರುವುದಕ್ಕೆ ಮತ್ತೊಂದು ಕಾರಣವಾಗಿದೆ. ಅನುವಂಶಿಕವಾಗಿ ಶೇ.5 ರಷ್ಟು ಸ್ತನ ಕ್ಯಾನ್ಸರ್‌ಬರುವ ಸಂಭವ ಹೆಚ್ಚಿರುತ್ತದೆ. 40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ವರ್ಷಕ್ಕೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ ಮತ್ತು 21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು 2 ರಿಂದ 3 ತಿಂಗಳಿಗೊಮ್ಮೆ ಸ್ವಯಂಪರೀಕ್ಷೆ ಮಾಡಿಕೊಳ್ಳಬೇಕು ಎಂದು ವಿವರಿಸಿದರು.

ಕ್ಯಾನ್ಸರ್‌ರೋಗಿಗಳಿಗೆ ಖಾಸಗಿ ಆರೋಗ್ಯ ವಿಮಾ ಸೌಲಭ್ಯಗಳು ಸೇರಿದಂತೆ, ಸರ್ಕಾರಿ ವಿಮಾ ಸೌಲಭ್ಯಗಳ ಲಭ್ಯವಿದೆ. ಕ್ಯಾನ್ಸರ್‌ಬರುವುದನ್ನು ತಡೆಯಲು ಸಾಧ್ಯವಿಲ್ಲ. ಆದರೆ, ಬರುವಪ್ರಮಾಣವನ್ನು ಆರೋಗ್ಯಕರ ಆಹಾರ, ಧ್ಯಾನ, ಮಿತವಾದ ವ್ಯಾಯಾಮ ಸೇರಿದಂತೆ ಉತ್ತಮ ಅಭ್ಯಾಸಗಳಿಂದ ಕಡಿಮೆ ಮಾಡಿಕೊಳ್ಳಬಹುದು. ಮುಂಜಾಗ್ರತ ಆರೋಗ್ಯ ತಪಾಸಣೆ ಮಾಡಿಸುವುದರಿಂದ ಮೊದಲ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿಗುಣಪಡಿಸಬಹುದು. ಕ್ಯಾನ್ಸರ್ ಒಬ್ಬರಿಂದ ಒಬ್ಬರಿಗೆ ಹರಡುವ ರೋಗವಲ್ಲ ಎಂದು ಅವರು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರುಳಿಧರ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ. ಎಚ್. ಶ್ರೀಧರ, ಇನ್ನರ್‌ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷೆ ಶಶಿಕಲಾ ಸುರೇಶ್, ಕಾರ್ಯದರ್ಶಿ ಭವಾನಿ ಚಂದ್ರ, ಸ್ಪರ್ಶ ಮತ್ತು ಫೋರಮ್ ಫಾರ್‌ವುಮೆನ್ ಎಂಪವರ್‌ಮೆಂಟ್ ಸಂಯೋಜಕ ರಾಧಿಕಾರಾಣಿ, ವೆಲ್ಸ್ ಸೆಂಟರ್‌ಮತ್ತು ಹೈಜೀನ್ ಸಂಯೋಜಕ ಡಾ.ಎಸ್. ಪೂರ್ಣಿಮಾ ಮತ್ತು ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಇದ್ದರು.

MFGE In the Eyes of the Press.....

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 24 ಅಕ್ಟೋಬರ್ 2024

ಸ್ತನ ಕ್ಯಾನ್ಸರ್ ವಾಸಿಯಾಗುವ ಕಾಯಿಲೆ, ಆದರೆ ಜಾಗೃತಿ ಅವಶ್ಯ

ಮೈಸೂರು, ಅ.23– ಸ್ತನ ಕ್ಯಾನ್ಸರ್ ವಾಸಿಯಾಗುವ ಕಾಯಿಲೆ. ಈ ಬಗ್ಗೆ ಜನರಿಗೆ ಜಾಗೃತಿಯ ಅವಶ್ಯಕತೆ ಇದೆ ಎಂದು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯ ಆಂಕೊಲಜಿ ಸಲಹೆಗಾರ್ತಿ ಡಾ.ರಮ್ಯ ಯೆತ್ತಡ್ಕ ತಿಳಿಸಿದರು.

ಸ್ವರ್ಶ, ಫೋರಮ್ ಫಾರ್ ವುಮೆನ್ ಎಂಪವರ್‌ಮೆಂಟ್, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ, ಇನ್ನರ್–ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರಿಗೆ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಡಾ.ರಮ್ಯ ಯೆತ್ತಡ್ಕ ಮಾತನಾಡಿ, ಕ್ಯಾನ್ಸರ್ ದೊಡ್ಡ ಕಾಯಿಲೆಯಲ್ಲ. ಆದರೆ, ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಮಾತ್ರ ಅದು ಸಾವಿಗೆ ಕಾರಣವಾಗುತ್ತದೆ. ಶೇ.26ರಿಂದ ಶೇ.28ರಷ್ಟು ಜನರು ಸ್ತನ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಮಹಿಳೆಯರು ಮಾತ್ರ ವಲ್ಲದೇ 100ರಲ್ಲಿ ಒಬ್ಬ ಪುರುಷನಿಗೂ

ಅಪೋಲೋ ಬಿಜಿಎಸ್ ಆಸ್ಪತ್ರೆ ಆಂಕೊಲಜಿ ಸಲಹೆಗಾರರಾದ ಡಾ.ರಮ್ಯ ಯೆತ್ತಡ್ಕ



ಸ್ವರ್ಶ, ಫೋರಮ್ ಫಾರ್ ವುಮೆನ್ ಎಂಪವರ್‌ಮೆಂಟ್, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ, ಇನ್ನರ್–ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರಿಗೆ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸ್ತನ ಕ್ಯಾನ್ಸರ್ ಬರುತ್ತದೆ. ಸ್ತನ ಕ್ಯಾನ್ಸರ್ ನಿಂದ ಮೃತಪಡುವವರ ಸಂಖ್ಯೆ ಮೊದಲನೇ ಸ್ಥಾನದಲ್ಲಿದೆ. ಸ್ತನದ ಕ್ಯಾನ್ಸರ್ ಯಾರಿಗೆ ಬೇಕಾದರೂ ಹಾಗೂ ಎಲ್ಲಾ ವಯಸ್ಸಿನವರಿಗೂ ಬರಬಹುದು.

35 ವರ್ಷದ ನಂತರ ಮಗುವಿಗೆ ಜನ್ಮ ನೀಡಿದರೆ, ಅವರಿಗೆ ಸ್ತನ ಕ್ಯಾನ್ಸರ್ ಬರುವ ಸಾಧ್ಯತೆ ಎರಡುಪಟ್ಟು ಇರುತ್ತದೆ. ಮಗುವಿಗೆ ಎದೆಹಾಲು ಉಣಿಸದಿದ್ದರೆ ಸ್ತನ ಕ್ಯಾನ್ಸರ್ ಬರುವುದಕ್ಕೆ ಮತ್ತೊಂದು ಕಾರಣ. ಅಸುವಂಶಿಕವಾಗಿ ಶೇ.5ರಷ್ಟು ಸ್ತನ ಕ್ಯಾನ್ಸರ್ ಬರುವ ಸಂಭವ ಹೆಚ್ಚಿರುತ್ತದೆ. 40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ವರ್ಷಕ್ಕೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ ಮತ್ತು 21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು 2–3 ತಿಂಗಳಿಗೊಮ್ಮೆ ಸ್ವಯಂ ಪರೀಕ್ಷೆ ಮಾಡಿಕೊಳ್ಳಬೇಕು ಎಂದು ವಿವರಿಸಿದರು.

ಕ್ಯಾನ್ಸರ್ ರೋಗಿಗಳಿಗೆ ಖಾಸಗಿ ಆರೋಗ್ಯ ವಿಮಾ ಸೌಲಭ್ಯಗಳು ಸೇರಿದಂತೆ, ಸರ್ಕಾರಿ ವಿಮಾ ಸೌಲಭ್ಯಗಳ ಲಭ್ಯವಿದೆ. ಕ್ಯಾನ್ಸರ್ ಬರುವುದನ್ನು ತಡೆಯಲು ಸಾಧ್ಯವಿಲ್ಲ. ಆದರೆ, ಬರುವ ಪ್ರಮಾಣವನ್ನು ಆರೋಗ್ಯಕರ ಆಹಾರ, ಧ್ಯಾನ, ಮಿತವಾದ ವ್ಯಾಯಾಮ ಸೇರಿದಂತೆ ಉತ್ತಮ ಅಭ್ಯಾಸಗಳಿಂದ ಕಡಿಮೆ ಮಾಡಿಕೊಳ್ಳಬಹುದು. ಮುಂಜಾಗ್ರತಾ ಆರೋಗ್ಯ ತಪಾಸಣೆ ಮಾಡಿಸುವುದರಿಂದ ಮೊದಲ ಹಂತದಲ್ಲೇ ರೋಗವನ್ನು ಪತ್ತೆಹಚ್ಚಿ ಗುಣಪಡಿಸಬಹುದು. ಕ್ಯಾನ್ಸರ್ ಒಬ್ಬರಿಂದ ಒಬ್ಬರಿಗೆ ಹರಡುವ ರೋಗವಲ್ಲ ಎಂದು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರುಳಿಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಅಧ್ಯಕ್ಷೆ ಶ್ರೀಮತಿ ಶಶಿಕಲಾ ಸುರೇಶ್, ಕಾರ್ಯದರ್ಶಿ ಶ್ರೀಮತಿ ಭವಾನಿ ಚಂದ್ರ, ಸ್ವರ್ಶ ಮತ್ತು ಫೋರಮ್ ಫಾರ್ ವುಮೆನ್ ಎಂಪವರ್‌ಮೆಂಟ್ ಸಂಯೋಜಕರಾದ ಶ್ರೀಮತಿ ರಾಧಿಕಾ ರಾಣಿ, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಸಂಯೋಜಕರಾದ ಡಾ.ಪೂರ್ಣಿಮಾ .ಎಸ್, ಅಧ್ಯಾಪಕರು, ಅಧ್ಯಾಪಕೇತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಅಕ್ಟೋಬರ್ 24, 2024

ನಿಯಮಿತ ತಪಾಸಣೆ ಮಾಡಿಸುವಂತೆ ಡಾ.ರಮ್ಯಾ ಯೆತ್ತಡ್ಕ ಸಲಹೆ

'ಸ್ತನ ಕ್ಯಾನ್ಸರ್: ನಿರ್ಲಕ್ಷ್ಯ ವಹಿಸಿದರೆ ಅಪಾಯ'

ಪ್ರಜಾವಾಣಿ ವಾರ್ತೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ 'ಸ್ತನ ಕ್ಯಾನ್ಸರ್ ಜಾಗೃತಿ' ಕಾರ್ಯಕ್ರಮದಲ್ಲಿ ಡಾ.ರಮ್ಯಾ ಯೆತ್ತಡ್ಕ ಅವರೊಂದಿಗೆ ವಿವಿಧ ವಿಭಾಗದವರು ಪಾಲ್ಗೊಂಡಿದ್ದರು

ಮೈಸೂರು: 'ಸ್ತನ ಕ್ಯಾನ್ಸರ್ ವಾಸಿಯಾಗುವ ಕಾಯಿಲೆಯಾಗಿದ್ದು, ಈ ಬಗ್ಗೆ ಜಾಗೃತಿ ಮೂಡಬೇಕು' ಎಂದು ತಜ್ಞ ವೈದ್ಯೆ ಡಾ.ರಮ್ಯಾ ಯೆತ್ತಡ್ಕ ತಿಳಿಸಿದರು.

ಇಲ್ಲಿನ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಪರ್ಶ ಹಾಗೂ ಮಹಿಳಾ ಸಬಲೀಕರಣ ವೇದಿಕೆ, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್, ಐಕ್ಯೂಎಸಿ ಮತ್ತು ಇನ್ನರ್‌ವೀಲ್ ಕ್ಲಬ್ ಆಫ್ ಮೈಸೂರು ಪಶ್ಚಿಮ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 'ಸ್ತನ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು.

'ಕ್ಯಾನ್ಸರ್ ದೊಡ್ಡ ಕಾಯಿಲೆಯಲ್ಲ. ಆದರೆ, ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಮಾತ್ರ ಅದು ಸಾವಿಗೆ ಕಾರಣವಾಗುತ್ತದೆ. ಶೇ 26ರಿಂದ 28ರಷ್ಟು ಮಂದಿ ಸ್ತನ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಮಹಿಳೆಯರಷ್ಟೇ ಅಲ್ಲದೇ 100ರಲ್ಲಿ ಒಬ್ಬ ಪುರುಷನಿಗೂ ಸ್ತನ ಕ್ಯಾನ್ಸರ್ ಬರುತ್ತದೆ' ಎಂದು ಹೇಳಿದರು.

'ಸ್ತನ ಕ್ಯಾನ್ಸರ್ ಯಾರಿಗೆ ಬೇಕಾದರೂ ಹಾಗೂ ಎಲ್ಲಾ ವಯಸ್ಸಿನವರಿಗೂ ಬರಬಹುದು. 35 ವರ್ಷದ ನಂತರ ಮಗುವಿಗೆ ಜನ್ಮ ನೀಡಿದ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಬರುವ ಸಾಧ್ಯತೆ ಎರಡುಪಟ್ಟು ಜಾಸ್ತಿ ಇರುತ್ತದೆ. ಮಗುವಿಗೆ ಎದೆಹಾಲು ಉಣಿಸದಿರುವುದು ಈ ಕಾಯಿಲೆ ಬರುವುದಕ್ಕೆ ಮತ್ತೊಂದು ಕಾರಣವಾಗಿದೆ. ಅನುವಂಶಿಕವಾಗಿ ಶೇ 5ರಷ್ಟು ಬರುವ ಸಂಭವ ಹೆಚ್ಚಿರುತ್ತದೆ' ಎಂದರು.

ಸ್ವಯಂ ಪರೀಕ್ಷೆ ಮಾಡಿಕೊಳ್ಳಬಹುದು: '40 ವರ್ಷಕ್ಕಿಂತ ಮೇಲಿನ ಮಹಿಳೆಯರು ವರ್ಷಕ್ಕೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವತಿಯರು, ಮಹಿಳೆಯರು 2-3 ತಿಂಗಳಿಗೊಮ್ಮೆ ಸ್ವಯಂ ಪರೀಕ್ಷೆ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಕ್ಯಾನ್ಸರ್ ರೋಗಿಗಳಿಗೆ ಖಾಸಗಿ ಹಾಗೂ ಸರ್ಕಾರಿ ಆರೋಗ್ಯ ವಿಮಾ ಸೌಲಭ್ಯಗಳಿವೆ. ಅವುಗಳನ್ನು ಬಳಸಿಕೊಳ್ಳಬಹುದು. ಕ್ಯಾನ್ಸರ್ ಬರುವುದನ್ನು ತಡೆಯಲು ಸಾಧ್ಯವಿಲ್ಲ. ಆದರೆ, ಬರುವ ಪ್ರಮಾಣವನ್ನು ಆರೋಗ್ಯಕರ ಆಹಾರ, ಧ್ಯಾನ, ವ್ಯಾಯಾಮ ಸೇರಿದಂತೆ ಉತ್ತಮ ಅಭ್ಯಾಸಗಳಿಂದ ಕಡಿಮೆ ಮಾಡಿಕೊಳ್ಳಬಹುದು. ಮುಂಜಾಗ್ರತಾ ಕ್ರಮವಾಗಿ ತಪಾಸಣೆ ಮಾಡಿಸುವುದರಿಂದ ಮೊದಲ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಗುಣಪಡಿಸಬಹುದು. ಕ್ಯಾನ್ಸರ್ ಒಬ್ಬರಿಂದ ಒಬ್ಬರಿಗೆ ಹರಡುವ ರೋಗವಲ್ಲ; ಅನವಶ್ಯ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ' ಎಂದು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಎಚ್. ಶ್ರೀಧರ್, ಇನ್ನರ್‌ವೀಲ್ ಕ್ಲಬ್ ಪಶ್ಚಿಮದ ಅಧ್ಯಕ್ಷೆ ಶಶಿಕಲಾ ಸುರೇಶ್, ಕಾರ್ಯದರ್ಶಿ ಭವಾನಿ ಚಂದ್ರ, ಸ್ಪರ್ಶ ಮತ್ತು ಮಹಿಳಾ ಸಬಲೀಕರಣ ವೇದಿಕೆ ಸಂಯೋಜಕಿ ರಾಧಿಕಾ ರಾಣಿ, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಸಂಯೋಜಕಿ ಎಸ್. ಪೂರ್ಣಿಮಾ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜನೆ
- ವಿವಿಧ ವಿಭಾಗಗಳ ಸಹಯೋಗ
- ಆರಂಭದಲ್ಲೇ ಪತ್ತೆ ಹಚ್ಚಿದರೆ ಗುಣಪಡಿಸಬಹುದು

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಮಂಗಳವಾರ, 22 ಅಕ್ಟೋಬರ್ 2024



ಮಹಾಜನದಲ್ಲಿ ಕ್ಲಸ್ಟರ್ಸ್ ಕಾರ್ಯಕ್ರಮ...ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ವತಿಯಿಂದ ವಿದ್ಯಾರ್ಥಿಗಳಿಗೆ ನಿರ್ವಹಣಾ ಕೌಶಲಗಳನ್ನು ಪ್ರದರ್ಶಿಸಲು ವೇದಿಕೆ ಒದಗಿಸುವ ಗುರಿ ಹಾಗೂ ಸೃಜನಶೀಲತೆ ಮತ್ತು ವೃತ್ತಿಪರರೊಂದಿಗೆ ನೆಟ್‌ವರ್ಕ್‌ನ್ನು ಬೆಳೆಸುವಲ್ಲಿ ಸಹಾಯಕವಾದ ಕ್ಲಸ್ಟರ್ಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಮುಖ್ಯ ಅತಿಥಿ ಮ್ಯಾಜಿಕ್ ರಾಜ್‌ಭಟ್ ಕಾರ್ಯಕ್ರಮ ಉದ್ಘಾಟಿಸಿದರು. ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ.ಶಿವಕುಮಾರ್, ಕಾರ್ಯಕ್ರಮದ ಸಂಯೋಜಕರಾದ ರೇಖಾ, ಸುನಿಲ್, ಕೀರ್ತಿರಾಜ್‌ಕಮಲ್, ವಿದ್ಯಾರ್ಥಿ ಸಂಯೋಜಕರಾದ ಅರ್ಮಾನ್ ಬಿಲ್ಲಾಲ್, ಧನುಷ್, ರಾಕೇಶ್, ಮೋಹಿತ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ 200ಕ್ಕೂ ಹೆಚ್ಚು ಬಿ.ಕಾಂ. ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 22.10.2024

ಮಹಾಜನ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದ ಕ್ಲಸ್ಟರ್ಸ್ ಉದ್ಘಾಟನೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಕ್ಲಸ್ಟರ್ಸ್ ಚಟುವಟಿಕೆಯನ್ನು ಮ್ಯಾಜಿಕ್ ರಾಜ್ ಭಟ್ ಮತ್ತು ಇತರೆ ಗಣ್ಯರು ಉದ್ಘಾಟಿಸಿದರು.

ಈ ವೇಳೆ ಮ್ಯಾಜಿಕ್ ರಾಜ್ ಭಟ್ ಅವರು, ವಿದ್ಯಾರ್ಥಿಗಳು ಯಶಸ್ಸನ್ನು ಹೇಗೆ ಸಾಧಿಸುವುದು, ಸದೃಢವಾದ ಕೆಲಸದ ನೀತಿಗಳನ್ನು ಅಭಿವೃದ್ಧಿಪಡಿಸುವುದು, ಸಮಯ ನಿರ್ವಹಣೆ, ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಸವಾಲುಗಳನ್ನು ಹೇಗೆ ಸ್ವೀಕರಿಸಬೇಕು ಎಂಬುದನ್ನು ವಿವರಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್‌ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಮಯ ಪಾಲನೆ, ಪ್ರಾಮಾಣಿಕತೆಯ ಬಗ್ಗೆ ತಿಳಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಕಾಲೇಜು ನೀಡುವ ಅವಕಾಶಗಳನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಂಡು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ, ಅವುಗಳಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್, ಕಾರ್ಯಕ್ರಮದ ಸಂಯೋಜಕರಾದ ಬಿ. ರೇಖಾ, ಎನ್. ಸುನಿಲ್; ಕೀರ್ತಿ ರಾಜ್ ಕಮಲ್, ವಿದ್ಯಾರ್ಥಿ ಸಂಯೋಜಕರಾದ ಅರ್ಮಾನ್ ಬಿಲ್ಲಾಲ್, ಧನುಷ್, ರಾಕೇಶ್, ಮೋಹಿತ್ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 23.10.2024

ಮಹಾಜನ ಕಾಲೇಜಿನಲ್ಲಿ ಕೈಜನ್ ವೇದಿಕೆ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜಿನ ವ್ಯವಹಾರ ನಿರ್ವಹಣಾ ವಿಭಾಗ ವತಿಯಿಂದ ಕೈಜನ್ ವೇದಿಕೆಯನ್ನು ಉದ್ಘಾಟಿಸಲಾಯಿತು.

ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೇದಿಕೆಯನ್ನು ಉದ್ಘಾಟಿಸಿದ ಇನ್ಫೋಸಿಸ್ ಬಿಪಿಎಂ ಲಿಮಿಟೆಡ್ ಎಚ್‌ಆರ್- ಸೀನಿಯರ್‌ಆಪರೇಷನ್ಸ್‌ಮ್ಯಾನೇಜರ್‌ಎಲ್. ಲಕ್ಷ್ಮೀಮಾತನಾಡಿ, ವಿದ್ಯಾರ್ಥಿಗಳು ಜ್ಞಾನ, ಯಶಸ್ಸು ಹೇಗೆ ಸಾಧಿಸುವುದು ಹಾಗೂ ವಿದ್ಯಾರ್ಥಿಗಳ ಸರ್ವೋತೋಮುಖ ಬೆಳವಣಿಗೆಗೆ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು. ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥ ಡಾ. ಶಿವ ಕುಮಾರ್, ಕಾರ್ಯಕ್ರಮದ ಸಂಯೋಜಕರಾದ ಡಾ.ಬಿ.ಆರ್. ಆನಿತಾ, ಡಾ.ಎನ್. ನಿರ್ಮಲಾ, ಕಾವ್ಯಶ್ರೀ, ಕಾರ್ಯಕ್ರಮದ ವಿದ್ಯಾರ್ಥಿ ಸಂಯೋಜಕರಾದ ಆನ್ವಿತಾ; ಮನೋಜ್‌ಕುಮಾರ್, ಮೊಹಮ್ಮದ್ ಸುಹೇಲ್ ಇದ್ದರು.



ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 23 ಅಕ್ಟೋಬರ್ 2024

ಮಹಾಜನ ಕಾಲೇಜಲ್ಲಿ ಕೈಜೆನ್ ಕಾರ್ಯಕ್ರಮ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕೈಜೆನ್ ಕಾರ್ಯಕ್ರಮ ನಡೆಯಿತು.

ಮೈಸೂರು,ಅ.22–ಮಹಾಜನ ಪ್ರಥಮ ದರ್ಜೆ ಕಾಲೇಜಿನ ವ್ಯವಹಾರ ನಿರ್ವಹಣಾ ವಿಭಾಗವು ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕೈಜೆನ್ (KAIZEN) ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವು ಶೈಕ್ಷಣಿಕ ವರ್ಷದ ವಿಭಾಗದ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.

ಇದು ವಿದ್ಯಾರ್ಥಿಗಳಿಗೆ ನಿರ್ವಹಣಾ ಕೌಶಲಗಳನ್ನು ಪ್ರದರ್ಶಿಸಲು ವೇದಿಕೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ ಹಾಗೂ ಸೃಜನಶೀಲತೆ ಮತ್ತು ವೃತ್ತಿಪರರೊಂದಿಗೆ ನೆಟ್‌ವರ್ಕ್ ಅನ್ನು ಬೆಳೆಸುವಲ್ಲಿ ಸಹಾಯಕವಾಗಿದೆ.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಲ್.ಲಕ್ಷ್ಮೀ, ಸೀನಿಯರ್ ಆಪರೇಷನ್ಸ್ ಮ್ಯಾನೇಜರ್–ಹೆಚ್‌ಆರ್, ಇನ್‌ಫೋಸಿಸ್ ಬಿಪಿಎಂ ಲಿ. ಮತ್ತು ಇತರ ಗಣ್ಯರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಇದು ಒಂದು ವೇದಿಕೆಯಾಗಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕಾಲೇಜು ನೀಡುವ ಅವಕಾಶಗಳನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಂಡು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥ ಡಾ.ಶಿವಕುಮಾರ್, ಕಾರ್ಯಕ್ರಮದ ಸಂಯೋಜಕರಾದ ಡಾ.ಅನಿತ, ಡಾ.ನಿರ್ಮಲ, ಕಾವ್ಯಶ್ರೀ, ಕಾರ್ಯಕ್ರಮದ ವಿದ್ಯಾರ್ಥಿ ಸಂಯೋಜಕರಾದ ಅನ್ವಿತ, ಮನೋಜ್‌ಕುಮಾರ್, ಮೊಹಮ್ಮದ್ ಸುಹೇಲ್ ಹಾಜರಿದ್ದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ 70ಕ್ಕೂ ಹೆಚ್ಚು ಬಿಬಿಎ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆಯೋಲನ
ದಿನ ಪತ್ರಿಕೆ
ಶನಿವಾರ, 5 ಅಕ್ಟೋಬರ್ 2024

'ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸೂಕ್ತ ತರಬೇತಿ ಅಗತ್ಯ'



ಮೈಸೂರು: ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆದು ಆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಮೂಲಕ ಬದುಕು ಕಟ್ಟಿಕೊಳ್ಳಬೇಕು ಎಂದು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಹೇಳಿದರು.

ನಗರದ ಜಯಲಕ್ಷ್ಮೀ ಪುರಂನಲ್ಲಿರು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದಿಂದ ಶುಕ್ರವಾರ ಆಯೋಜಿಸಿದ್ದ ಎಂಟ್ರಿ ಟು ಸರ್ವೀಸ್ ಮತ್ತು ಐಕ್ಯೂಎಸಿ ಘಟಕಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನ ಸೂತ್ರಗಳು ಮತ್ತು ಮಾರ್ಗೋಪಾಯಗಳ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ವಿಭಾಗಗಳಿಗಿಂತ ಸ್ಪರ್ಧಾತ್ಮಕ ವಿಭಾಗ ಬಹು ಕಠಿಣವಾಗಿದೆ. ವಿದ್ಯಾರ್ಥಿಗಳು ಅನಗತ್ಯ ವಿಚಾರಗಳನ್ನು ಬದಿಗಿಟ್ಟು ಸೂಕ್ತ ತರಬೇತಿ ಪಡೆದರೆ ಮಾತ್ರ ಯಶಸ್ಸುಗಳಿಸಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಸಮಯ ಅತ್ಯಮೂಲ್ಯವಾಗಿದ್ದು, ಯುವ ಜನರು ಸಮಯವನ್ನು ಮೌಲ್ಯಯುತ ಕಾರ್ಯಗಳಿಗೆ ಮೀಸಲಿಡಬೇಕು. ಉತ್ತಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.

ನಿರಂತರ ಅಭ್ಯಾಸಕ್ಕಾಗಿ ಮೊದಲು ದೇಹದ ಸ್ಥಿರತೆ ಮುಖ್ಯ. ಅದಕ್ಕಾಗಿ ಯೋಗ, ಧ್ಯಾನ, ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ದೇಹದ ಸದೃಢತೆಯನ್ನು ಕಾಪಾಡಿಕೊಳ್ಳಬೇಕು ಎಂದರು.

ಎಸ್‌ಯುಎಂಎಂಐಟಿ ಅಕಾಡೆ ಮಿಯ ಮ್ಯಾನೇಜಿಂಗ್ ಡೈರೆಕ್ಟರ್ ಜಿ.ಸಿ ಶೋಭಾ ಅವರು ಸಮಾನ್ಯ ಜ್ಞಾನ ವಿಷಯ ದಲ್ಲಿ ಪ್ರಚಲಿತ ಘಟನೆಗಳ ಕುರಿತು ಉಪನ್ಯಾಸ ನೀಡಿದರು. ಕರ್ನಾಟಕ ರಾಜ್ಯ ಮುಕ್ತ ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ. ಆರ್. ಎಚ್ ಪವಿತ್ರ, ಸರ್ಕಾರಿ ಪದವಿಪೂರ್ವ ಕಾಲೇಜಿನ ಜೀವಶಾಸ್ತ್ರ ವಿಭಾಗದ ಶಿಕ್ಷಕಾರ ಎಚ್.ಎನ್.ಗಿರೀಶ್, ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಪ್ರಾಂಶುಪಾಲರಾದ ಡಿ. ನವೀನ್ ಪ್ರಸಾದ್ ಅವರು ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಗಳನ್ನು ಎದುರಿಸುವ ಬಗ್ಗೆ ಬಗ್ಗೆ ಉಪನ್ಯಾಸ ನೀಡಿದರು

ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್ ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎಚ್.ಶ್ರೀಧರ್, ಐಕ್ಯೂಎಸಿ ಸಂಚಾಲಕರಾದ ಡಿ. ಗೀತಾ ಹಾಜರಿದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶನಿವಾರ 5.10.2024



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಅರಿವು ಕಾರ್ಯಕ್ರಮದಲ್ಲಿ ಐಸಿಎಸ್‌ಐನ ಪ್ರಚೇತಾ ಮಾತನಾಡಿದರು.

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಶನಿವಾರ 26.10.2024

ಕಿವಿಮಾತು | ಗ್ರಾಪ್ಹೊ ಅನಾಲಿಟಿಕಲ್ ಥೆರಪಿಸ್ಟ್ ಎನ್. ಮಮತಾಮಯಿ ಸಲಹೆ

ಮಲಗುವ 2 ಗಂಟೆ ಮೊದಲು ಮೊಬೈಲ್ ಬಿಡಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್.ಬಿ.ಆರ್.ಆರ್ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿವೈಯಕ್ತಿಕ ಬೆಳವಣಿಗೆ ಮತ್ತು ವ್ಯಕ್ತಿತ್ವ ಅಭಿವೃದ್ಧಿ ವಿಷಯ ಕುರಿತು ವಿದ್ಯಾರ್ಥಿ ಸಂಸತ್ತು ಮತ್ತು ಐ.ಕ್ಯೂ.ಎಸ್.ಸಿ ಸಹಭಾಗಿತ್ವದಲ್ಲಿ ಕಾರ್ಯಾಗಾರ ಆಯೋಜಿಸಲಾಗಿತ್ತು.



ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಗ್ರಾಪ್ಹೊ ಅನಾಲಿಟಿಕಲ್ ಥೆರಪಿಸ್ಟ್ ಎನ್. ಮಮತಾಮಯಿ ಅವರು,ತಮ್ಮ ಎಡಮೂಗಿನಲ್ಲಿಉಸಿರಾಡುವುದರಿಂದ ನಮ್ಮ ಮೆದುಳನ್ನು ಪ್ಯಾರಾಸೈಂಥೆಸಿಸ್ ಮೋಡ್ ಗೆ ಬದಲಾಯಿಸಲು ಸಹಾಯ ಮಾಡುತ್ತದೆ. ಇದು ಒತ್ತಡವನ್ನು ಕಡಿಮೆ ಮಾಡುತ್ತದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಶಾಂತಗೊಳಿಸಲು ಸಹಾಯ ಮಾಡುತ್ತದೆ. ಇದು ಆತಂಕ, ಆಗಾಧ ಇತ್ಯಾದಿಗಳ ಸಮಯದಲ್ಲಿ ಸಹಾಯ ಮಾಡುತ್ತದೆ ಎಂದು ಅವರು ತಿಳಿಸಿದರು.

ನಾವು ಮಲಗುವ 2 ಗಂಟೆಗಳ ಮೊದಲು ಸೆಲ್ ಫೋನ್ ಬಳಸಬಾರದು. ನೀವು ಕಾಣುವ ತರ್ಕಬದ್ಧವಲ್ಲದ ಕನಸುಗಳು ನಿಮ್ಮ ಮೆದುಳನ್ನು ಹಾಳು ಮಾಡುತ್ತದೆ. ಆಳವಾದ ನಿದ್ರೆ ಉತ್ತಮ ಆರೋಗ್ಯದ ಸಂಕೇತ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ನಂತರ ವಿದ್ಯಾರ್ಥಿಗಳಿಗೆ ಜೀವನ, ವೃತ್ತಿ, ಹಣಕಾಸು, ಸಂಬಂಧ, ಆರೋಗ್ಯ, ಸಾಮಾಜಿಕ, ಆಧ್ಯಾತ್ಮಿಕ, ವೈಯಕ್ತಿಕ ಬೆಳವಣಿಗೆ, ಕೊಡುಗೆಯ ವಿವಿಧ ಅಂಶಗಳನ್ನೊಳಗೊಂಡ ಜೀವನದ ಚಕ್ರ ಎಂಬ ಚಟುವಟಿಕೆಗಳನ್ನು ಮಾಡಿಸಿದರು.

ಒಬ್ಬವ್ಯಕ್ತಿಯು ದಿನಕ್ಕೆ 80,000 ಆಲೋಚನೆಗಳನ್ನು ಪಡೆಯುತ್ತಾನೆ. ನಕಾರಾತ್ಮಕ ಆಲೋಚನೆಗಳನ್ನು ಬರೆಯುವುದರಿಂದ ನಿಮ್ಮ ತಲೆಯಿಂದ ನಕಾರಾತ್ಮಕ ಆಲೋಚನೆಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ವಿದ್ಯಾರ್ಥಿಗಳಿರುವ ವೈಯಕ್ತಿಕ ಸಮಸ್ಯೆಗಳ ಬಗ್ಗೆ ತಿಳಿದು, ಸ್ಥಳದಲ್ಲೇ ಪರಿಹಾರ ಸೂಚಿಸಿದರು.

ಅಧ್ಯಕ್ಷತೆವಹಿಸಿದ್ದ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ವಿದ್ಯಾರ್ಥಿಯ ಸರ್ವತೋಮುಖಅಭಿವೃದ್ಧಿಯುನಿರಂತರವಾಗಿದ್ದು, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು. ಜೀವನದಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸಿಕೊಂಡರೆ ಉತ್ತಮ ವ್ಯಕ್ತಿತ್ವ ಹೊಂದಲು ಸಾಧ್ಯ ಎಂದು ಅವರು ತಿಳಿಸಿದರು. ವಿದ್ಯಾರ್ಥಿ ಸಂಸತ್ತಿನ ಸಂಚಾಲಕಿ ಡಾ.ಪಿ.ಜಿ. ಪುಷ್ಪಾರಾಣಿ ಸ್ವಾಗತಿಸಿದರು, ವಿದ್ಯಾರ್ಥಿ ಸಂಸತ್ತಿನ ಪ್ರಧಾನ ಪರಿವೀಕ್ಷಕ ಸಹನಾ ಗೌಡ ವಂದಿಸಿದರು. 120 ಪ್ರತಿನಿಧಿಗಳು ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಸೋಮವಾರ 14.10.2024

ಶಿಕ್ಷಣ ನೀತಿಗೆ ಸಂಬಂಧಪಟ್ಟ ಕನ್ನಡ ಪಠ್ಯಪುಸ್ತಕ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ 2024ರ ರಾಜ್ಯ ಶಿಕ್ಷಣ ನೀತಿಗೆ ಸಂಬಂಧಪಟ್ಟ ಕನ್ನಡ ವಿಭಾಗದ ಪಠ್ಯಪಸ್ತಕಗಳನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಯಾವುದೇ ಶೈಕ್ಷಣಿಕ ಸಂಸ್ಥೆಯ ಯಶಸ್ಸು ಅದರ ಭೌತಿಕ ಸ್ವರೂಪವನ್ನಷ್ಟೇ ಅವಲಂಬಿಸಿರುವುದಿಲ್ಲ. ಕಾಲೇಜಿನ ಕ್ರಿಯಾಶೀಲತೆ ಮತ್ತು ಸಾಧನೆಯ ಮೇಲೆ ಸಂಸ್ಥೆಯ ಶ್ರೇಯಸ್ಸು ನಿಂತಿರುತ್ತದೆ. ಅಧ್ಯಾಪಕರ ಪರಿಣಾಮಕಾರಿ ಬೋಧನೆ ಮತ್ತು ವಿದ್ಯಾರ್ಥಿಗಳ ಸಾರ್ಥಕ ಕಲಿಕೆಯನ್ನು ಪಠ್ಯಕ್ರಮ ನಿರ್ಧರಿಸುತ್ತದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಠ್ಯಕ್ರಮಕ್ಕೆ ಮಹತ್ವದ ಸ್ಥಾನವಿದೆ. ಈ ನಿಟ್ಟಿನಲ್ಲಿ ಸ್ವಾಯತ್ತತೆ ಹೊಂದಿದ ಕಾಲೇಜುಗಳಲ್ಲೇ ನಮ್ಮ ಕಾಲೇಜಿನ ಕನ್ನಡ ವಿಭಾಗವು ರಾಷ್ಟ್ರೀಯ ಹೊಸ ಶಿಕ್ಷಣ ನೀತಿ ಜಾರಿಗೆ ಬಂದಾಗಲೂ ಮೊದಲ ಬಾರಿಗೆ ಪಠ್ಯಪುಸ್ತಕಗಳನ್ನು ಪ್ರಕಟಿಸಿ ಪ್ರಶಂಸೆಗೆ ಪಾತ್ರವಾಗಿತ್ತು. ಪ್ರಸ್ತುತ 2024ರ ರಾಜ್ಯ ಶಿಕ್ಷಣ ನೀತಿಗೆ



ತಕ್ಕಂತೆ ವಿನೂತನವಾಗಿ, ವೈವಿಧ್ಯಮಯವಾದ ಪ್ರಥಮ ವರ್ಷದ ಬಿ.ಎ, ಬಿ.ಕಾಂ, ಬಿಬಿಎ, ಬಿಎಸ್ಸಿ ಮತ್ತು ಬಿಸಿಎ ತರಗತಿಗಳಿಗೆ ಅನುಕ್ರಮವಾಗಿ, ಕಲಾ ಸೌರಭ-1, ವಾಣಿಜ್ಯ ಸೌರಭ-1, ನಿರ್ವಹಣಾ ಸೌರಭ-1, ವಿಜ್ಞಾನ ಸೌರಭ-1 ಹಾಗೂ ಗಣಕ ಸೌರಭ-1 ಎಂಬ ಶೀರ್ಷಿಕೆ ಇರುವ ತಮ್ಮದೇ ಆದ ಪಠ್ಯಪುಸ್ತಕಗಳನ್ನು ಸ್ವಾಯತ್ತತೆ ಪಡೆದ ಕಾಲೇಜುಗಳಲ್ಲೇ ಪ್ರಪ್ರಥಮ ಬಾರಿಗೆ ಪ್ರಕಟಿಸು ತ್ತಿರುವುದು ಸಂತೋಷವನ್ನು ಇಮ್ಮಡಿಗೊಳಿಸಿದೆ ಎಂದರು.

ಉಪನ್ಯಾಸಕ ಎಚ್.ಎನ್. ಗಿರೀಶ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಸಹ ಪ್ರಾಧ್ಯಾಪಕಿ ಡಾ. ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ಎಂ. ನಾಗೇಶ, ಸಿ.ಎಂ. ಕಿರಣ್ ಕುಮಾರ್, ಜೆ. ಮನೋಜ್ ಕುಮಾರ್, ಸುನಿಲ್ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 9.10.2024



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ, ನಮ್ಮ ಮನೆ ಫೌಂಡೇಶನ್ ಹಾಗೂ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಂಯುಕ್ತವಾಗಿ ಕಣ್ಣಿನ ಉಚಿತ ತಪಾಸಣೆ ಮತ್ತು ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಶಿಬಿರದಲ್ಲಿ 100 ಹೆಚ್ಚು ಬೋಧಕರು ಹಾಗೂ ಬೋಧಕೇತರರು ಸದುಪಯೋಗವನ್ನು ಪಡೆದುಕೊಂಡರು. 55 ಹೆಚ್ಚು ಅಧ್ಯಾಪಕರು ಮತ್ತು ಅಧ್ಯಾಪಕೇತರ ವರ್ಗದವರಿಗೆ ಉಚಿತವಾಗಿ ಕನ್ನಡಕವನ್ನು ವಾರದ ಸಮಾವೇಶದಲ್ಲಿ ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ನಮ್ಮ ಮನೆ ಫೌಂಡೇಷನ್ ಸಂಸ್ಥೆಯ ಸಂಸ್ಥಾಪಕ ಎನ್. ಸಂತೋಷ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯ ಪಿ.ಆರ್.ಓ. ಎಸ್. ಪವನ್ ಕುಮಾರ್, ಆಪ್ತೋಮೆಟ್ರಿಸ್ಟ್ ಗಳಾದ ಎಲ್. ಪಲ್ಲವಿ, ಸಿ. ಪೂಜಾ, ಆಸ್ಪತ್ರೆಯ ಮೇಲ್ವಿಚಾರಕ ಸಯ್ಯದ್ ಜಾಕೀರ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ, ಡಾ.ಸಿ.ಎಸ್. ಸಿದ್ದರಾಜು ಮೊದಲಾದವರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 5.10.2024

ಬದುಕಿನ ಮೌಲ್ಯ ತಿಳಿಸುವುದೇ ಧರ್ಮ

ಪ್ರೊ.ಜೆ.ಬಿ. ಶಿವರಾಜು ಆಭಿಮತ | ಎಸ್.ಬಿ.ಆರ್.ಆರ್‌ಮಹಾಜನ ಪ್ರಥಮದರ್ಜೆ ಕಾಲೇಜಿನ ಎನ್ನೆಸ್ಸೆಸ್ ವಾರ್ಷಿಕ ಕಾರ್ಯಕ್ರಮ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಮೈಸೂರು

ಮಾನವೀಯ ಮೌಲ್ಯ, ಉತ್ತಮ ಗುಣ, ಜೀವನ ಶಿಕ್ಷಣವನ್ನು ಕಲಿಸಿಕೊಡುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ ಎಂದು ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರಾದ ಬೆಂಗಳೂರಿನ ಗಾಂಧಿಭವನದ ನಿರ್ದೇಶಕ ಪ್ರೊ.ಜೆ.ಬಿ. ಶಿವರಾಜು ಹೇಳಿದರು.

ನಗರದ ಎಸ್.ಬಿ.ಆರ್.ಆರ್‌ಮಹಾಜನ ಪ್ರಥಮದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ 2024-25ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಹಾಗೂ ಮಹಾತ್ಮಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಕೇಳುವ ಶ್ರವಣ 6 ನಿಮಿಷಕ್ಕೆ ಕಡಿಮೆಯಾಗಿದೆ ಎಂಬ ಸರ್ವೇಯ ಅಧ್ಯಯನ ಆತಂಕದ ವಿಚಾರ. ಮಕ್ಕಳು ದಾರಿತಪ್ಪುತ್ತಿರುವುದಕ್ಕೆ ಹಿರಿಯರೇ ಕಾರಣ. ಹಾಗಾಗಿ ಇಂದು ಒಂದು ಒಳ್ಳೆಯ ಶಾಲೆಯನ್ನು ಆರಂಭಿಸಿದರೆ, ನಾಳೆ ನೂರು ಜೈಲುಗಳನ್ನು ತಡೆಯಬಹುದು. ದೇಶದ ಭವಿಷ್ಯ ನಿರ್ಮಾಣವಾಗುವುದು ನಾಲ್ಕು ಗೋಡೆಗಳ ಮಧ್ಯೆ. ಆಂದರೆ, ಮಾನವೀಯ ಮೌಲ್ಯ ಉತ್ತಮ ಗುಣ, ಜೀವನ ಶಿಕ್ಷಣವನ್ನು ಕಲಿಸಿಕೊಡುವುದು



ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ. ಇತ್ತೀಚಿನ ದಿನಗಳಲ್ಲಿ ಸಂಪ್ರದಾಯಿಕ ಶಿಕ್ಷಣದ ಮೂಲಕ ಎಲ್ಲಾ ವಿಚಾರಗಳನ್ನು ಕಲಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಕಾರಣದಿಂದ ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ ಆಂತಹ ಘಟಕಗಳು ಆರಂಭವಾದವು. ಶ್ರಮ ಪಡದೇ ಏನನ್ನೂ ಪಡೆಯಲು ಸಾಧ್ಯವಲ್ಲ. ಈ ನಿಟ್ಟಿನಲ್ಲಿ ಬದುಕಿನ ನಿಜವಾದ ಚಿತ್ರಣ ಕಟ್ಟಿಕೊಡುವುದು ಎನ್.ಎಸ್.ಎಸ್ ನಂತಹ ಕಾರ್ಯಕ್ರಮಗಳು ಎಂದರು.

ಶಾಲೆಗಳಲ್ಲಿ ನೀವು ಏನನ್ನೂ ಕಳೆದುಕೊಳ್ಳುತ್ತಿದ್ದಿರೋ, ಆ ವಿಚಾರಗಳನ್ನು ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ ಆಂತಹ ವೇದಿಕೆಗಳಲ್ಲಿ ಪಡೆಯಬಹುದು. ಜೀವನಕ್ಕೆ ಬೇಕಾಗಿರುವ ಆಗತ್ಯ ವಿಚಾರಗಳನ್ನು ಕಲಿಯುವುದಕ್ಕೆ ಇಲ್ಲಿ ವಿಫುಲ ಅವಕಾಶವಿದೆ. ಮಕ್ಕಳಿಗೆ ರೋಗ ಗುಣಪಡಿಸಲು ಬಲವಂತವಾಗಿ ಔಷಧಿ ಕುಡಿಸುವ ಹಾಗೇ, ಈಗ ಯುವಕರಿಗೆ ಶಿಸ್ತು-ಸಂಯಮವನ್ನು, ಪ್ರೀತಿಯನ್ನು, ಹೊಂದಿಕೊಂಡು ಬದುಕುವುದನ್ನು, ವಿಧೇಯತೆಯನ್ನು ಕೂಡಿ ಹಾಕಿ ಕಲಿಸುವ ಆವಶ್ಯಕತೆ ಎದುರಾಗಿದೆ ಎಂದರು. ನಮ್ಮದೇಶದಲ್ಲಿನ ಸಂಸ್ಕೃತಿ, ಸಾಹಿತ್ಯ, ಬದುಕು ಜಗತ್ತಿನ ಯಾವ ಮೂಲೆಯಲ್ಲೂ ಇಲ್ಲ. ಹೊಸದಾಗಿ ನಾವು ಏನನ್ನೂ ಸೃಷ್ಟಿಸುವ ಆವಶ್ಯಕತೆ ಇಲ್ಲ. ಇರುವುದನ್ನು ಈಗಿನ ಮಕ್ಕಳ ಮನಸ್ಸಿಗೆ ಗಟ್ಟಿಯಾಗಿ ಬಿತ್ತುವ ಕೆಲಸ ಮಾಡಬೇಕಿದೆ ಎಂದು ಆವರು ಕಿವಿಮಾತು ಹೇಳಿದರು.

ಶಿಕ್ಷಣ ಎಂಬುದು ಮಾಹಿತಿಗಾಗಿ ಆಲ್ಲ, ಬದಲಾವಣೆಗೆ ಬೇಕಾಗಿದೆ. ಆಂಕಿ- ಆಂಶಗಳನ್ನು ತುಂಬಿಕೊಳ್ಳುವುದು ಶಿಕ್ಷಣವಲ್ಲ, ಗುಣಾತ್ಮಕ ಶಿಕ್ಷಣ, ಮಾನವೀಯ ಶಿಕ್ಷಣವೇ ನಿಜವಾದ ಶಿಕ್ಷಣ. ಆ ಶಿಕ್ಷಣ ಈಗ ಬೇಕಾಗಿದೆ. ವ್ಯಕ್ತಿಗಳಿಗೆ ಉನ್ನತ ವಿಚಾರಗಳನ್ನು ಕೊಟ್ಟು ಉನ್ನತೀಕ್ಕೇರಿಸದಿದ್ದರೆ, ಆತ ನರಿಯಾಗುತ್ತಾನೆ. ಹಾಗಾಗಿ ಆರಿವುಮೂಡಿಸುವುದೇ ಧರ್ಮ. ಎಲ್ಲದನ್ನೂ ಒಳ್ಳೆಯದನ್ನೇ ಬಯಸುವ ನಾವು ಕೂಡ ಒಳ್ಳೆಯ ರೀತಿಯಲ್ಲಿ ಬದುಕಬೇಕು. ತ್ಯಾಗವೇ ಜೀವನ, ಲಂಪಟ ತನವೇ ಸಾವು ಎಂದು ಗಾಂಧೀಜಿ ಹೇಳಿದ್ದರು. ಆದರಂತೆ ತ್ಯಾಗ, ಶ್ರಮದಿಂದ ಜೀವನ ನಡೆಸಬೇಕಿದೆ. ನೀವೇ ನಿಮ್ಮ ಹಣೆಬರಹದ ಸೃಷ್ಟಿಕರ್ತರು, ನಿಮ್ಮ ಬದುಕನ್ನು ನೀವೇ ರೂಪಿಸಿಕೊಳ್ಳಬೇಕು. ಬೇರೆಯವರಿಗಾಗಿ ಕಾಯಬಾರದು ಎಂದು ಆವರು ತಿಳಿಸಿದರು.

ಪಾಂಡವಪುರದ ವಿಜಯ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕ ಡಾ.ಎನ್.ಕೆ. ವೆಂಕಟೇಗೌಡ ಮಾತನಾಡಿ, ನಮಗೆ ಎರಡು ಬದುಕಿದೆ. ಒಂದು ಒಳ ಬದುಕು, ಆದು ನಮ್ಮ ಕುಟುಂಬದ ಬದುಕು. ಮತ್ತೊಂದು ಹೊರ ಬದುಕು. ಈ ಬದುಕನ್ನು ಸಮಾಜಕ್ಕಾಗಿ ಮೀಸಲಿಡಬೇಕು. ಆಗಮಾತ್ರ ಆವ್ಯಕ್ತಿ ಸಮಾಜದಲ್ಲಿ ಶಾಶ್ವತವಾಗಿ ನೆಲೆಸಲು ಸಾಧ್ಯ. ಈ ದಿಸೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಗ್ರಾಮೀಣ ಸೊಗಡು, ಬದ್ಧತೆ ಹಾಗೂ ಶಿಸ್ತನ್ನು ಕಲಿಸುತ್ತದೆ ಎಂದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಆಧ್ಯಯನ ತೀಲತೆ, ಪ್ರಾಮಾಣಿಕತೆ, ಕುತೂಹಲ ಇರುವಲ್ಲಿ ಉತ್ಸಾಹ ಇರುತ್ತದೆ. ಸತ್ಯಾನ್ವೇಷಣೆ, ಆಧ್ಯಯನ, ಬರಹಗಳು ಗಾಂಧಿ ಬದುಕಿನ ಒಂದು ಭಾಗ. ಇವುಗಳನ್ನು ಯುವಕರು ಆಳವಡಿಸಿಕೊಳ್ಳಬೇಕು. ಗಾಂಧಿಯ ಸರಳತೆ, ಆಹಿಂಸೆ, ಸಹಾನುಭೂತಿ 21ನೇ ಶತಮಾನದಲ್ಲಿ ಆನಿವಾರ್ಯ. ಇವುಗಳನ್ನು ವಿದ್ಯಾರ್ಥಿಗಳು ಎನ್.ಎಸ್.ಎಸ್ ಮೂಲಕ ರೂಢಿಸಿಕೊಂಡು, ಸಾಮರಸ್ಯ ಸಾಧಿಸಬೇಕು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಎನ್.ಎಸ್.ಎಸ್ ಆಧಿಕಾರಿ ಡಾ.ಸಿ.ಎಸ್.ಸಿದ್ದರಾಜು ಸ್ವಾಗತಿಸಿದರು. ಡಾ.ಜಿ. ಡೊಡ್ಡರಸಯ್ಯ ವಂದಿಸಿದರು. ಕಾರ್ಯಕ್ರಮದಲ್ಲಿ ಆಧ್ಯಾಪಕರು, ಆಧ್ಯಾಪಕೇತರರು ಹಾಗೂ ಸ್ವಯಂ ಸೇವಕರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 31.10.2024

ಷೇರು ಮಾರುಕಟ್ಟೆ ಅರಿವಿದ್ದಲ್ಲಿ ನಷ್ಟ ಪ್ರಮಾಣ ಕಡಿಮೆ

ಬಂಡವಾಳ ಮಾರುಕಟ್ಟೆ ಕಾರ್ಯಾಚರಣೆ ಕುರಿತ ಕಾರ್ಯಾಗಾರ | ವಿದ್ಯಾವರ್ಧಕ ಕಾಲೇಜಿನ ಪ್ರಾಧ್ಯಾಪಕ ಜಿ. ಪ್ರಶಾಂತ್ ಕುಮಾರ್

• **ಕನ್ನಡಪ್ರಭ ವಾರ್ತೆ** ಮೈಸೂರು

ಷೇರು ಮಾರುಕಟ್ಟೆಯ ಬಂಡವಾಳದ ಜ್ಞಾನವಿದ್ದಲ್ಲಿ ಹೂಡಿಕೆದಾರರು ನಷ್ಟ ಅನುಭವಿಸುವ ಪರಿಸ್ಥಿತಿ ಬರುವುದಿಲ್ಲ ಎಂದು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪಿ.ಜಿ. ಸೆಂಟರ್‌ನ ಸಹಾಯಕ ಪ್ರಾಧ್ಯಾಪಕ ಜಿ. ಪ್ರಶಾಂತ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಬಂಡವಾಳ ಮಾರುಕಟ್ಟೆ ಕಾರ್ಯಾಚರಣೆ ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರದಲ್ಲಿ



ಮಾತನಾಡಿದರು.

ಷೇರು ಮಾರುಕಟ್ಟೆಯಲ್ಲಿ ಕಂಪನಿಯ ಒಂದು ಗುಂಪು ಎಲ್ಲ ಪರಿಣಿತರನ್ನು ಒಂದುಗೂಡಿಸಿ, ಹೂಡಿಕೆಯ ಬಗ್ಗೆ ಕಾರ್ಯಾಚರಣೆ ಮಾಡುತ್ತದೆ. ಮಾರುಕಟ್ಟೆಯಲ್ಲಿ ಅತೀ ದೀರ್ಘಕಾಲದವರೆಗೆ ಭಾಗವಹಿಸಲು ಹೆಚ್ಚು ರೀತಿಯ ಪ್ರಯತ್ನಗಳನ್ನು ನಡೆಸುತ್ತಿರುತ್ತದೆ. ಇಂತಹ ವಿಧಾನದಲ್ಲಿ ಈ ರೀತಿಯ ಹೂಡಿಕೆಗಳಿಗೆ ವಿದ್ಯಾರ್ಥಿಗಳು ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಹಾಗೂ ಇತ್ತೀಚಿನ ದಿನಗಳಲ್ಲಿ ಎಲ್ಲವೂ ಡಿಜಿಟಲೀಕರಣವಾಗಿದ್ದು, ಎಲ್ಲ ರೀತಿಯ ಉಪಕರಣಗಳು ಲಭ್ಯವಿದ್ದು, ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ವಾಣಿಜ್ಯ ಮತ್ತು ವ್ಯವಹಾರ ನಿರ್ವಾಹಣಾಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಹಾಗೂ ಇತರರಿಗೂ ತಿಳಿಸಿದರು.

ಅಮೇರಿಕಾದ ಪ್ರಖ್ಯಾತ ಉದ್ಯಮಿ ಹಾಗೂ ಬಂಡವಾಳ ಹೂಡಿಕೆದಾರರಾದ ವಾರೆನ್ ಬಫೆಟ್ ರಂತಹ ದಿಗ್ಗಜರ ಉದಾಹರಣೆ ನೀಡುತ್ತಾ, ಮಾರುಕಟ್ಟೆ ಷೇರುಗಳ ಹೂಡಿಕೆಯಲ್ಲಿ ಕಂಪನಿಯ ಬೆಳವಣಿಗೆ ಮತ್ತು ಅದರ ಲಾಭಾಂಶಗಳನ್ನು ಗಮನಿಸಿ ಹೂಡಿಕೆ ಮಾಡಬೇಕು ಎಂದರು.

ಬಾಂಬೆ ಸ್ಟಾಕ್ ಎಕ್ಸ್ ಚೇಂಜ್, ನ್ಯಾಷನಲ್ ಸ್ಟಾಕ್ ಎಕ್ಸ್ ಚೇಂಜ್, ನಿಫ್ಟಿ, ಇಂಡಿಸಿಸ್, ಸೆನ್ಸೆಕ್ಸ್, ಮ್ಯೂಚಿಯಲ್ ಫಂಡ್ಸ್ ಇವುಗಳನ್ನು ಕುರಿತು ಉದಾಹರಣೆಗಳ ಮೂಲಕ ಕಂಪನಿಗಳ ಹೂಡಿಕೆ ಮತ್ತು ಬೆಳವಣಿಗೆಗಳ ಆಯ್ಕೆ ಪ್ರಕ್ರಿಯೆಗಳನ್ನು ವಿಸ್ತಾರವಾಗಿ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಕೊನೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಕಾಲೇಜಿನ ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ ಇದ್ದರು. ವಾಣಿಜ್ಯ ಮತ್ತು ವ್ಯವಹಾರ ನಿರ್ವಾಹಣಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್, ಕಾರ್ಯಕ್ರಮದ ಸಂಯೋಜಕ ಡಾ. ನಿರ್ಮಲಾ, ಶಾಂಭವಿ ಬೋನ್ಸ್ಲೆ, ವಿಭಾಗದ ಎಲ್ಲ ಅಧ್ಯಾಪಕರು, ವಿದ್ಯಾರ್ಥಿ ಸಂಯೋಜಕರಾದ ದಕ್ಷಿತಾ, ಕರಿಸ್ಮ ಶಿವಾರಿ, ಶ್ರೇಯಸ್, ಗಾನವಿ, ಸಾಯಿ ಸಂಜಯ್, ಅರ್ಪಿತಾ, ರಘು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆಂದೋಲನ
ದಿನ ಪತ್ರಿಕೆ
ಬುಧವಾರ, 2 ಅಕ್ಟೋಬರ್ 2024



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಾಲೇಜು ಆಶ್ರಯದಲ್ಲಿ ನಡೆದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಲಿಬಾಲ್ ತಂಡದವರು ದ್ವಿತೀಯ ಸ್ಥಾನ ಗಳಿಸಿದ್ದು, ತಂಡಕ್ಕೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗ ಅಭಿನಂದನೆ ಸಲ್ಲಿಸಿದ್ದಾರೆ. ತಂಡದೊಂದಿಗೆ ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂದನ, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಹೆಚ್.ಎನ್. ಭಾಸ್ಕರ್, ತಂಡದ ನಾಯಕ ಕಾರ್ತಿಕ್ ಚಿತ್ರದಲ್ಲಿದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 2 ಅಕ್ಟೋಬರ್ 2024

ವಾಲಿಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಕಾಲೇಜಿಗೆ ದ್ವಿತೀಯ ಸ್ಥಾನ



ಜೆಎಸ್ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಲಿಬಾಲ್ ತಂಡವು ದ್ವಿತೀಯ ಸ್ಥಾನ ಪಡೆದಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಹೆಚ್.ಎನ್.ಭಾಸ್ಕರ್, ತಂಡದ ನಾಯಕ ಕಾರ್ತಿಕ್. (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್, ತೇಜಸ್ ಎನ್.ಆರ್, ಸುಪ್ರೀತ್ ಎಂ, ಶಶಾಂಕ್ ಕೆ, ಕುಶಾಲ್ ಹೆಚ್‌ಜೆ, ರಕ್ಷಿತ್, ಪ್ರತೀಕ್‌ಗೌಡ, ಮನೀಷ್, ಯಶ್ವಂತ್ ಗೌಡ, ಶಿವ, ವರುಣ್, ಪ್ರೀತಮ್ ಹಾಗೂ ಗಂಭೀರ್ ಅವರನ್ನು ಕಾಣಬಹುದು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 2.10.2024

ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಕಾಲೇಜಿಗೆ ದ್ವಿತೀಯ ಸ್ಥಾನ



ಮೈಸೂರು: ನಗರದ ಊಟಿ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಾಲೇಜು ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಲಿಬಾಲ್‌ತಂಡವು ದ್ವಿತೀಯ ಸ್ಥಾನ ಪಡೆದಿದ್ದಾರೆ. ಅವರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದಿಂದ ಅಭಿನಂದಿಸಲಾಯಿತು. ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲ ಡಾ. ಬಿ.ಆರ್. ಜಯ ಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್. ಭಾಸ್ಕರ್, ತಂಡದ ನಾಯಕ ಕಾರ್ತಿಕ್, ಸೋಮಶೇಖರ್, ಎನ್.ಆರ್. ತೇಜಸ್, ಎಂ. ಸುಪ್ರೀತ್, ಕೆ. ಶ ಶಾಂಕ್, ಎಚ್.ಜೆ. ಕುಶಾಲ್, ರಕ್ಷಿತ್, ಪ್ರತೇಕ್ ಗೌಡ, ಮನೀಷ್, ಯಶ್ವಂತ್ ಎಸ್. ಗೌಡ, ಡಿ.ಬಿ. ಶಿವ. ಜೆ. ವರುಣ್, ಕೆ.ಎಂ. ಪ್ರೀತಮ್, ಎಸ್. ಗಂಭೀರ್ ಇದ್ದಾರೆ.

STAR OF MYSORE

Tuesday 29th October 2024

Runners-up in City Inter-Collegiate Men's Volleyball Tournament



SBRR Mahajana First Grade College emerged Runners-up in City Inter-Collegiate Men's Volleyball Tournament 2024-25 conducted by JSS College, Ooty Road, Mysuru. Seen are** (from left - sitting) **PE Director P.S. Madhusudhana, Principal Dr. B.R. Jayakumari, PE Director Dr. H.N. Bhaskar, Team Capitan Karthik;** (standing) **Somashekar, N.R. Tejas, M. Suprith, K. Shashank, H.J. Kushal, Rakshith, Prathyaksh Gowda, Manish, Yashwanth S. Gowda, D.B. Shiva, J. Varun, K.M. Preetham and S. Gambhir.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 19.10.2024

ರಾಮಾಯಣದ ಮೌಲ್ಯಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಿ

ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಸಲಹೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಈ ಜಗತ್ತು ನ್ಯಾಯಮಾರ್ಗದಲ್ಲಿ ಸಾಗಬೇಕಾದರೆ ವಾಲ್ಮೀಕಿ ಅವರು ರಾಮಾಯಣದಲ್ಲಿ ಕೊಟ್ಟಿರುವ ಆದರ್ಶವನ್ನು ಅರ್ಥ ಮಾಡಿಕೊಂಡು ಅನುಸರಿಸಬೇಕು. ಅದರಲ್ಲಿರುವ ಮೌಲ್ಯಗಳನ್ನು ರೂಢಿಸಿಕೊಳ್ಳಿ ಎಂದು ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಕರೆ ನೀಡಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಗೆ ಅನನ್ಯವಾದ ಕೊಡುಗೆ ನೀಡಿದ ಆದಿಕವಿ ಮಹರ್ಷಿ ವಾಲ್ಮೀಕಿಯನ್ನು ನಾವೆಲ್ಲಾ ಗೌರವದಿಂದ ಸ್ಮರಿಸಬೇಕು. ವಾಲ್ಮೀಕಿ ಅವರು ಬೇಡನಾಗಿ ಹುಟ್ಟಿದರೂ ಪರಿವರ್ತನೆಯ ಕುಲುಮೆಯಲ್ಲಿ ಉರಿದು, ಜ್ಞಾನದಗ್ನಿಯಲ್ಲಿ ಮಿಂದು ಜ್ಞಾನಶಾಸ್ತ್ರದಿಂದ ಜಗತ್ತನ್ನೇ ಗೆದ್ದು ಮಹರ್ಷಿ ವಾಲ್ಮೀಕಿಯಾದರು. ಪರಿಶ್ರಮ ಹಾಗೂ ಅಚಲ ಸಾಧನೆಯಿಂದ ಈ ಜಗತ್ತಿಗೆ ಮಾದರಿಯಾಗಿದ್ದಾರೆ ಎಂದರು.

ರಾಮಾಯಣ ಮಹಾಕಾವ್ಯದಲ್ಲಿ ನೂರಾರು ಪಾತ್ರಗಳ ಮೂಲಕ ಮೌಲ್ಯಯುತ ಬದುಕಿನ ಸೂಕ್ಷ್ಮ ಒಳನೋಟಗಳನ್ನು ಕಟ್ಟಿಕೊಟ್ಟಿದ್ದಾರೆ. ಮಾನವೀಯ ಅನುಕಂಪ, ಕರುಣೆ, ವಾತ್ಸಾಲ್ಯ, ತ್ಯಾಗ, ಸಹೋದರತೆ, ಅಸಮಾನತೆ ನಿರ್ಮೂಲನೆ, ಉತ್ತಮ ನಡೆ ಆದರ್ಶ ಹಾಗೂ ಆರೋಗ್ಯ ಪೂರ್ಣ ಸಮಾಜದ ನಿರ್ಮಾಣದ ಆಶಯ ಇರುವುದರಿಂದ ನಾವೆಲ್ಲರೂ ರಾಮಾಯಣದ ಈ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಪ್ರಪಂಚದಲ್ಲಿ ಬಂದಿರುವ ಮಹಾಕಾವ್ಯಗಳಿಗೆ ಹೋಲಿಕೆ ಮಾಡಿದರೆ ರಾಮಾಯಣ ಬಹಳ ಭಿನ್ನಾವಾಗಿದೆ. ಇಡೀ ಜಗತ್ತಿಗೆ ರಾಮಾಯಣದ ಮೂಲಕ ಸಂಸ್ಕೃತಿಯನ್ನು ಸಾರಿದ್ದಾರೆ. ವಿಶ್ವ ಸಾಹಿತ್ಯ ಮಟ್ಟದ ಮಹಾಕಾವ್ಯವೆಂದು ಹೆಗ್ಗಳಿಕೆ ಪಡೆದಿರುವ ರಾಮಾಯಣದ ಕರ್ತೃ ವಾಲ್ಮೀಕಿ ವಿಶ್ವಕವಿಯಾಗಿ ಗೌರವಕ್ಕೆ ಭಾಜನರಾಗಿದ್ದಾರೆ. ಇಂಥ ಮಹಾಕೃತಿ ಹುಟ್ಟಿದ ನಾಡಿನಲ್ಲಿ ಬದುಕುತ್ತಿರುವ ನಾವು ಧನ್ಯರು ಎಂದು ಅವರು ತಿಳಿಸಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 8 ನವೆಂಬರ್ 2024

'ಐತಿಹಾಸಿಕ ಮಹಿಳೆಯರ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲಲಿ'

ಅಹಲ್ಯಾಬಾಯಿ ಜನ್ಮ ತ್ರಿಶತಾಬ್ದಿ ಉದ್ಘಾಟಿಸಿದ ಡಾ.ವಿ.ರಂಗನಾಥ್ ಅಭಿಮತ



ಮೈಸೂರು: ಭಾರತದ ಇತಿಹಾಸದಲ್ಲಿ ಪುರುಷರಷ್ಟೇ ಸ್ತ್ರೀಯರೂ ವಿವಿಧ ಸಾಮ್ರಾಜ್ಯಗಳ ಚುಕ್ಕಾಣಿ ಹಿಡಿದು ಅತ್ಯುತ್ತಮ ಆಡಳಿತ ನೀಡಿದ ಮಹನೀಯರ ಬಗ್ಗೆ ಸಂಶೋಧನೆ ನಡೆಸಿ ಇತಿಹಾಸದ ಪುಟಗಳಲ್ಲಿ ಬೆಳಕು ಚೆಲ್ಲುವ ಅನಿವಾರ್ಯತೆ ಇದೆ ಎಂದು ನಿವೃತ್ತ ತಹಸಿಲ್ದಾರ್ ಡಾ.ವಿ.ರಂಗನಾಥ್ ತಿಳಿಸಿದರು.

ಲೋಕಮಾತೆ ಅಹಲ್ಯಾಬಾಯಿ ಹೋಳ್ಕರ್ ಜನ್ಮ ತ್ರಿಶತಾಬ್ದಿ ಅಂಗವಾಗಿ ನಗರದ ಒಂಟಿಕೊಪ್ಪಲಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಇತಿಹಾಸ ವಿಭಾಗ, ಐಕ್ಯೂಎಸಿ, ಮಹಿಳಾ ಸಮನ್ವಯ ಹಾಗೂ ರಾಷ್ಟ್ರಭಾರತೀ ಚಾರಿಟಬಲ್ ಟ್ರಸ್ಟ್‌ನ ಸಹಯೋಗದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯ ಸೈನಿಕನ ಮಗಳಾದ ಅಹಲ್ಯಾಬಾಯಿ ದೈವಭಕ್ತಿ, ಆಧ್ಯಾತ್ಮಿಕ ಮತ್ತು ಧಾರ್ಮಿಕ ಹಾಗೂ ಲೋಕ ಕಲ್ಯಾಣದ ಚಿಂತನೆಯಿಂದಾಗಿ ಗುರುತಿಸಲ್ಪಟ್ಟಿದ್ದರು. ಇಂಧೋರ್ ಪ್ರಾಂತ್ಯದ ರಾಜ್ಯಭಾರವನ್ನು ವಹಿಸಿಕೊಂಡು ಅತ್ಯಂತ ಕಾರ್ಯ ಕ್ಷಮತೆಯಿಂದ ಆಡಳಿತ ನಡೆಸಿದರು. ನೆರೆಹೊರೆಯ ದಾಳಿಗಳನ್ನು ಅತ್ಯಂತ ಚತುರತೆಯಿಂದ ಎದುರಿಸಿ, ರಾಜ್ಯ ರಕ್ಷಿಸುವುದರ ಜೊತೆಗೆ ಸಾಮಾಜಿಕ ಕಟ್ಟುಪಾಡುಗಳಿಗೆ ತಿಲಾಂಜಲಿ ಹಾಡಿದರು ಎಂದು ತಿಳಿಸಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ.ಪಿ.ಜಿ.ಪುಷ್ಪರಾಣಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಮಹಿಳಾ ಸಮನ್ವಯ ಘಟಕದ ಮೈಸೂರು ವಿಭಾಗದ ಸಂಚಾಲಕರಾದ ಲಾವಣ್ಯ, ಪದಾಧಿಕಾರಿ ಲಕ್ಷ್ಮಣ್ ಗೊರ್ಲಕಟ್ಟೆ, ನಿವೃತ್ತ ಸೈನಿಕರಾದ ದತ್ತಣ್ಣ, ನಾಗೇಂದ್ರ, ಪ್ರಾಧ್ಯಾಪಕರಾದ ಎ. ಆರ್.ನಂದೀಶ, ಎನ್.ಜಯಲಕ್ಷ್ಮಿ ಮುಂತಾದವರು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 8.11.2024

ಇತಿಹಾಸಕಾರರು ಚಾರಿತ್ರಿಕ ಸತ್ಯ ಹೊರತರಬೇಕಿದೆ

ನಿವೃತ್ತ ತಹಸೀಲ್ದಾರ್, ಚಿಂತಕ ಡಾ.ವಿ. ರಂಗನಾಥ್ ಅಭಿಮತ | ಲೋಕಮಾತೆ ಅಹಲ್ಯಾಬಾಯಿ ಹೋಳ್ಕರ್‌ರವರ ಜನ್ಮ ತ್ರಿಶತಾಬ್ದಿ

• ಕನ್ನಡಪ್ರಭ ವಾರ್ತೆ ಮೈಸೂರು

ಭಾರತದ ಇತಿಹಾಸವು ಅನೇಕ ಐತಿಹಾಸಿಕ ರಹಸ್ಯಗಳನ್ನು ತನ್ನಕಾಲಗರ್ಭದಲ್ಲಿ ಹುದುಗಿಸಿಕೊಂಡಿದ್ದು, ಚಾರಿತ್ರಿಕ ಸತ್ಯವನ್ನು ಹೊರತರುವ ಜವಾಬ್ದಾರಿಯು ಪ್ರತಿಯೊಬ್ಬ ಇತಿಹಾಸಕಾರರದ್ದಾಗಿದೆ ಎಂದು ನಿವೃತ್ತ ತಹಸೀಲ್ದಾರ್, ಚಿಂತಕ ಡಾ.ವಿ. ರಂಗನಾಥ್ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಐಕ್ಯೂಎಸಿ, ಮಹಿಳಾ ಸಮನ್ವಯ ಹಾಗೂ ರಾಷ್ಟ್ರ ಭಾರತೀ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಲೋಕಮಾತೆ ಅಹಲ್ಯಾಬಾಯಿ ಹೋಳ್ಕರ್‌ರವರ ಜನ್ಮ ತ್ರಿಶತಾಬ್ದಿ ಅಂಗವಾಗಿ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹತ್ತು ಹಲವು ಸಾಮಾಜಿಕ ಕಳಕಳಿಯ ಹೋರಾಟಗಾರರ ಇತಿಹಾಸವನ್ನು ಬೆಳಕಿಗೆ ತರುವುದು ಪ್ರಸಕ್ತ ಸಂದರ್ಭದಲ್ಲಿ ಅತ್ಯವಶ್ಯಕವಾಗಿದೆ. ಭಾರತದ ಇತಿಹಾಸದಲ್ಲಿ



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಐಕ್ಯೂಎಸಿ, ಮಹಿಳಾ ಸಮನ್ವಯ ಹಾಗೂ ರಾಷ್ಟ್ರ ಭಾರತೀ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಲೋಕಮಾತೆ ಅಹಲ್ಯಾಬಾಯಿ ಹೋಳ್ಕರ್‌ರವರ ಜನ್ಮ ತ್ರಿಶತಾಬ್ದಿ ಕಾರ್ಯಕ್ರಮ ನಡೆಯಿತು.

ಪುರುಷರಷ್ಟೇ ಸ್ತ್ರೀಯರು ಸಹ ವಿವಿಧ ರಾಜಮನೆತನಗಳ ಚುಕ್ಕಾಣಿ ಹಿಡಿದು ಆತ್ಯುತ್ತಮ ಆಡಳಿತ ನೀಡಿದಷ್ಟೇ ಆಲ್ಲದೇ, ಸಾಮಾಜಿಕ ಸುಧಾರಣೆಗಳ ಮೂಲಕ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ ಎಂದರು.

ಆದರೆ, ಬೆಳಕಿಗೆ ಬಾರದ ಇನ್ನೂ ಅನೇಕ ಮಹಿಳೆಯರ ಬಗ್ಗೆ ಸುದೀರ್ಘ ಸಂಶೋಧನೆಗಳ ಮೂಲಕ ಇತಿಹಾಸದ ಪುಟಗಳಲ್ಲಿ ಬೆಳಕು ಚೆಲ್ಲಿ ಜಗತ್ತಿನ ಸಮುದಾಯಕ್ಕೆ ತಿಳಿಸುವುದು ಅನಿವಾರ್ಯವಾಗಿದೆ. ಅವರಲ್ಲಿ ಇಂದೋರ್‌ನ ಹೋಳ್ಕರ್ ಮನೆತನದ ರಾಣಿ ಅಹಲ್ಯಾಬಾಯಿ ಹೋಳ್ಕರ್ ಪ್ರಮುಖರಾಗಿದ್ದಾರೆ ಎಂದು ಅವರು ಹೇಳಿದರು.

ಸಾಮಾನ್ಯ ಸೈನಿಕನ ಮಗಳಾಗಿ ಅಹಲ್ಯಾಬಾಯಿ ಅವರು ದೈವಭಕ್ತಿ, ಆಧ್ಯಾತ್ಮಿಕ ಮತ್ತು ಧಾರ್ಮಿಕ ಚಿಂತನೆ ಹಾಗೂ ಲೋಕ ಕಲ್ಯಾಣದ ಲೋಕಮಾತೆಯಾಗಿ ಜನಾನುರಾಗಿಯಾಗಿದ್ದಾರೆ. ಹೋಳ್ಕರ್‌ಮನೆತನದ ಸೊಸೆಯಾಗಿ ಇಂದೋರ್ ಪ್ರಾಂತ್ಯದ ರಾಜ್ಯಭಾರವನ್ನು ವಹಿಸಿಕೊಂಡು, ಅತ್ಯಂತ ದಕ್ಷತೆ ಮತ್ತು ಕಾರ್ಯಕ್ಷಮತೆಯಿಂದ ಆಡಳಿತ ನಡೆಸಿದರು. ನೆರೆಹೊರೆಯ ದಾಳಿಗಳನ್ನು ಅತ್ಯಂತ ಚತುರತೆಯಿಂದ ಎದುರಿಸಿ, ರಾಜ್ಯ ರಕ್ಷಿಸುವುದರ ಜೊತೆಗೆ ಸಾಮಾಜಿಕ ಕಟ್ಟುಪಾಡುಗಳಿಗೆ ತಿಲಾಂಜಲಿ ಹಾಡಿದರು ಎಂದು ಅವರು ವಿವರಿಸಿದರು.

ಭಾರತದ ಸನಾತನಧರ್ಮ, ಸಂಸ್ಕೃತಿ, ಪರಂಪರೆಯನ್ನು ಪುನರುಜ್ಜೀವನಗೊಳಿಸಿದರು. ಮಾಹೇಶ್ವರಿ ಎಂಬ ಹೆಸರಿನ ಎರಡನೇ ರಾಜಧಾನಿಯಾಗಿ ನಿರ್ಮಿಸಿ, ಉತ್ತರ ಭಾರತದಲ್ಲಿ ಸುಮಾರು ಮೂರು ಸಾವಿರ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಕೈಗೊಂಡರು. ಅವುಗಳಲ್ಲಿ ಗುಜರಾತಿನ ಸೋಮನಾಥ ಮತ್ತು ಕಾಶೀ ವಿಶ್ವನಾಥ ದೇವಾಲಯಗಳು ಪ್ರಮುಖವಾದವು. ಹೀಗೆ, ಆಡಳಿತ ಮತ್ತು ಸಮಾಜಮುಖಿ ಕಾರ್ಯಗಳ ಯಶಸ್ಸಿಗೆ ತಮ್ಮನ್ನು ತಾವು ಆತ್ಯಂತ ನಿಸ್ವಾರ್ಥದಿಂದ ತೊಡಗಿಸಿಕೊಂಡು, ಸರಳತೆಯ ಸಾಕಾರಮೂರ್ತಿಯಾಗಿ ಲೋಕ ಕಲ್ಯಾಣದ ಕಾಯಕದಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡ ಅಹಲ್ಯಾಬಾಯಿ ಅವರನ್ನು ಇತಿಹಾಸದ ಪುಟಗಳಲ್ಲಿ ಸ್ಪಷ್ಟವಾಗಿ ದಾಖಲಿಸುವ ಮತ್ತು ಗುರುತಿಸುವ ಕೆಲಸವಾಗಬೇಕು ಎಂದು ಅವರು ತಿಳಿಸಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಡಾ.ಪಿ.ಸಿ. ಪುಷ್ಪರಾಣಿ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಮಹಿಳಾ ಸಮನ್ವಯಘಟಕದ ಮೈಸೂರು ವಿಭಾಗದ ಸಂಚಾಲಕಿ ಲಾವಣ್ಯ, ಲಕ್ಷ್ಮಣ್ ಗೊರ್ಲಕಟ್ಟೆ, ನಿವೃತ್ತ ಸೈನಿಕರಾದ ದತ್ತಣ್ಣ ನಾಗೇಂದ್ರ, ಸಹಾಯಕ ಪ್ರಾಧ್ಯಾಪಕರಾದ ಎ.ಆರ್. ನಂದೀಶ, ಎನ್. ಜಯಲಕ್ಷ್ಮಿ ಮೊದಲಾದವರು ಇದ್ದರು.

STAR OF MYSORE

Tuesday 5th November 2024

'Early detection can cure breast cancer'



Mysuru, Nov. 5- SPARSH, Forum for Women Empowerment, Wellness Centre & Hygiene, SBRR Mahajana First Grade College, Jayalakshmipuram, Mysuru, in association with Inner Wheel Club of Mysore West had organised an awareness programme on breast cancer in the college premises recently.

Resource Person, Dr. Ramya Yethadka, Consultant Oncologist, Apollo BGS Hospitals, Mysuru said that, 26% to 28% of breast cancer cases are reported in the country and 90,000 to 1 lakh deaths among women are due to breast cancer every year. Breast cancer is diagnosed among women irrespective of age or gender.

The ratio of breast cancer in women and men is 100:1, that is, for every 100 women showing symptoms of breast cancer there is one man, said Dr. Ramya.

She emphasised that even during the time of lactation, breast cancer can be developed. A woman who has never given birth is prone to breast cancer and those who give birth after the age of 35 have high risk of getting breast cancer. It can be genetic too.

"Do not neglect the symptoms, because health is very important in anyone's life. Breast cancer develops in 4 stages and first 3 stages are usually painless. However, it is curable if detected at early stage. Early menarche and late menopause can increase the risk of breast cancer. It can be tested in two ways, self-examination and Mammogram. Women above 21 years of age should examine (self) their breast once in 2-3 months and women above 40 years of age should undergo mammogram every year," suggested Dr. Ramya.

She highlighted the importance of insurance policies and schemes that are available for the treatment of cancer.

Dr. Ramya concluded her talk by saying, "Let your faith be bigger than your fear so that we fight cancer together."

Dr. T. Vijayalakshmi Muralidhar, Hon. Secretary, Mahajana Education Society, Dr. B.R. Jayakumari, Principal, Dr. S.R. Ramesh, CEO & Academic Advisor, Dr. H. Sreedhara, Dean Academics, Shashikala Suresh, President, Inner Wheel Club of Mysore West, Bhavani Chandra, Secretary, Inner Wheel Club of Mysore West, Radhika Rani, Convener, SPARSH & Forum for Women Empowerment, Dr. S. Poornima, Convener, Wellness Centre & Hygiene, Teaching and Non-Teaching staff of the College were present.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 16.11.2024

ಬೆರಳಚ್ಚಿನಲ್ಲಿ ರಹಸ್ಯ ಪತ್ತೆ: ಡಾ.ಟಿ.ಶಿವಾನಂದಪ್ಪ

• **ಕನ್ನಡಪ್ರಭ ವಾರ್ತೆ** ಮೈಸೂರು

ಬೆರಳಚ್ಚಿನಲ್ಲಿ ರಹಸ್ಯ ಪತ್ತೆ ಮಾಡಬಹುದು ಎಂದು ಸಿ.ಎಫ್.ಟಿ.ಆರ್.ಐ ನಿವೃತ್ತ ವಿಜ್ಞಾನಿ ಡಾ.ಟಿ.ಶಿವಾನಂದಪ್ಪ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೂಕ್ಷ್ಮಜೀವ ವಿಜ್ಞಾನ ವಿಭಾಗ ಮತ್ತು ಐಕ್ಯುಎಸಿ ಘಟಕಗಳ ಸಹ ಹೋಗದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ವಿ.ಡಿಎನ್‌ಎ ಡಿಟೆಕ್ಟಿವ್ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಬೆರಳಚ್ಚಿನಲ್ಲಿ ದೊರೆಯುವ ಡಿಎನ್ ಎಯಿಂದ ಅಪರಾಧ ಪತ್ತೆ ಹಚ್ಚುವ ವೈಜ್ಞಾನಿಕ ವಿಧಾನವನ್ನು ವಿವರಿಸಿದ



ಅವರು, ಡಿಎನ್‌ಎ ಫಿಂಗರ್‌ಪ್ರಿಂಟ್ ನಿಂದ ಅಪರಾಧ ಪತ್ತೆ ಮಾಡಿದ ಕುತೂಹಲಕಾರಿ ಮಾಹಿತಿ ನೀಡಿದರು.

1984ರಲ್ಲಿ ಸರ್.ಆಲೆಕ್ ಜೆಫ್ರೀಸ್ ಈ ತಂತ್ರವನ್ನು ಮೊದಲು ಅನ್ವೇಷಣೆ ಮಾಡಿದರು. ಇಂಗ್ಲೆಂಡ್‌ನಲ್ಲಿ ನಡೆದ ಒಂದು ಕೊಲೆ ಪ್ರಕರಣವನ್ನು ಬಿಡಿಸಲು ಜೆಫ್ರೀಸ್ ಅವರ ತಂತ್ರವು ಪ್ರಮುಖ ಪಾತ್ರವಹಿಸಿತು ಎಂದರು. ಭಾರತೀಯ ಡಿಎನ್‌ಎ ಫಿಂಗರ್‌ಪ್ರಿಂಟಿಂಗ್ ನ ತಂದೆ ಎಂದು ಪ್ರೊ. ಲಾಲ್ಜಿ ಸಿಂಗ್ ಪ್ರಖ್ಯಾತರಾಗಿದ್ದು, ಹಲವು ಪ್ರಕರಣಗಳನ್ನು ಅವರ ಮಾರ್ಗದರ್ಶನದಲ್ಲಿ ಬೇಧಿಸಲಾಗಿದೆ ಎಂದ ಅವರು ಈ ಮೂಲಕ ಡಿಟೆಕ್ಟಿವ್ ಡಿಎನ್.ಎಯ ಪ್ರಾಮುಖ್ಯತೆಯನ್ನು ವಿವರಿಸಿದರು. ಈ ರೀತಿ ಬಗೆಹರಿಸಲಾದ ಪ್ರಕರಣಗಳನ್ನು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ. ಆರ್. ಜಯಕುಮಾರಿ, ಸಿಇಒ ಎಸ್. ಆರ್. ರಮೇಶ್, ಸೂಕ್ಷ್ಮ ಜೀವವಿಜ್ಞಾನ ವಿಭಾಗದ ಮುಖ್ಯಸ್ಥೆ ಎನ್. ಸ್ಪಂದನಾ, ಸಹಾಯಕ ಪ್ರಾಧ್ಯಾಪಕರಾದ ಕೆ. ಶ್ರೀಜಾ, ಜೂಹಾ ಅಫ್ಸಾ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 18 ನವೆಂಬರ್ 2024

ಬೆರಳಚ್ಚಿನಲ್ಲಿ ರಹಸ್ಯ ಪತ್ತೆ: ಡಿಟೆಕ್ಟಿವ್ ಡಿಎನ್‌ಎ



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೂಕ್ಷ್ಮಜೀವ ವಿಜ್ಞಾನ ವಿಭಾಗ, ಐಕ್ಯುಎಸಿ ಘಟಕಗಳಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು, ನ.17– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೂಕ್ಷ್ಮಜೀವ ವಿಜ್ಞಾನ ವಿಭಾಗ ಮತ್ತು ಐಕ್ಯುಎಸಿ ಘಟಕಗಳ ಸಹಯೋಗದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸಿಎಸ್‌ಐಆರ್ ಮತ್ತು ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ವಿಜ್ಞಾನಿಯಾಗಿದ್ದ ಡಾ.ಟಿ.ಶಿವಾನಂದಪ್ಪ ಅವರು 'ದಿ ಡಿಎನ್‌ಎ ಡಿಟೆಕ್ಟಿವ್' ಕುರಿತು ವಿಶೇಷ ಉಪನ್ಯಾಸ ನೀಡಿದರು. ಬೆರಳಚ್ಚಿನಲ್ಲಿ ದೊರೆಯುವ ಡಿಎನ್‌ಎಯಿಂದ ಅಪರಾಧ ಪತ್ತೆ ಹಚ್ಚುವ ವೈಜ್ಞಾನಿಕ ವಿಧಾನವನ್ನು ವಿವರಿಸಿದ ಡಾ.ಶಿವಾನಂದ ಅವರು ಡಿಎನ್‌ಎ ಫಿಂಗರ್ ಪ್ರಿಂಟ್‌ನಿಂದ ಅಪರಾಧ ಪತ್ತೆ ಮಾಡಿದ ಕುತೂಹಲಕಾರಿ ಮಾಹಿತಿಯನ್ನು ನೀಡಿದರು. ಡಿಎನ್‌ಎ ಬೆರಳಚ್ಚು ಪತ್ತೆ ತಂತ್ರವನ್ನು ಅಪರಾಧ ಕಂಡು ಹಿಡಿಯಲು ಮಾತ್ರವಲ್ಲದೇ, ಪೋಷಕರ ಪತ್ತೆ ಮಾಡಲು ಸಹ ಬಳಸಲಾಗುತ್ತದೆ ಎಂದು ಪ್ರಯೋಜನಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯ ಕುಮಾರಿ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಎಸ್.ಆರ್ .ರಮೇಶ್ ಹಾಗೂ ಸೂಕ್ಷ್ಮ ಜೀವ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಸ್ಪಂದನಾ ಎನ್. ಉಪಸ್ಥಿತರಿದ್ದರು. ವಿಭಾಗದ ಸಹಾಯಕ ಪ್ರಾಧ್ಯಾಪಕ ಶ್ರೀಜಾ ಕೆ., ಜೂಹಾ ಅಫ್ಸಾ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ನವೆಂಬರ್ 15, 2024

'ಅಪರಾಧ ಪತ್ತೆಗೆ ಡಿಎನ್‌ಎ ತಂತ್ರಜ್ಞಾನ'

ಪ್ರಜಾವಾಣಿ ವಾರ್ತೆ

ಮೈಸೂರು: 'ಡಿಎನ್‌ಎ ಬೆರಳಚ್ಚು ಪತ್ತೆ ತಂತ್ರವನ್ನು ಅಪರಾಧ ಕಂಡು ಹಿಡಿಯಲು ಮಾತ್ರವಲ್ಲದೆ, ಪೋಷಕರ ಪತ್ತೆ ಮಾಡಲು ಬಳಸಲಾಗುತ್ತದೆ. ಈ ತಂತ್ರಜ್ಞಾನದಿಂದ ಹಲವು ಪ್ರಯೋಜನ ಗಳಿವೆ' ಎಂದು ಸಿಎಸ್‌ಐಆರ್ ಮತ್ತು ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಟಿ.ಶಿವಾನಂದಪ್ಪ ಹೇಳಿದರು.

ಇಲ್ಲಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೂಕ್ಷ್ಮಜೀವ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ ಬುಧವಾರ 'ದಿ ಡಿಎನ್‌ಎ ಡಿಟೆಕ್ಟಿವ್' ಕುರಿತು ವಿಶೇಷ ಉಪನ್ಯಾಸ ನೀಡಿದರು.

'ಎಲ್ಲ ವ್ಯಕ್ತಿಗಳ ಬೆರಳಚ್ಚಿನಲ್ಲಿ ಶೇ 99.9ರಷ್ಟು ಡಿಎನ್‌ಎ ಒಂದೇ ತೆರನಾಗಿದ್ದರೂ, ಶೇ 0.1 ಡಿಎನ್‌ಎ ಯಲ್ಲಿ ವ್ಯತ್ಯಾಸವಿರುತ್ತದೆ. ಈ ಚಿಕ್ಕ ವ್ಯತ್ಯಾಸಗಳೇ ಡಿಎನ್‌ಎ ಬೆರಳಚ್ಚು ವಿಧಾನದ ಆಧಾರವಾಗಿದ್ದು, ವೈಜ್ಞಾನಿಕವಾಗಿ ಖಚಿತ ಡಿಎನ್‌ಎ ಪ್ರೊಫೈಲ್ ಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತವೆ' ಎಂದರು.

ಬೆರಳಚ್ಚಿನಲ್ಲಿ ಸಿಗುವ ಡಿಎನ್‌ಎ ಯಿಂದ ಅಪರಾಧ ಪತ್ತೆ ಹಚ್ಚುವ ವೈಜ್ಞಾನಿಕ ವಿಧಾನವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಆರ್. ರಮೇಶ್ ಹಾಗೂ ಸೂಕ್ಷ್ಮಜೀವ ವಿಜ್ಞಾನ ವಿಭಾಗದ ಮುಖ್ಯಸ್ಥೆ ಎನ್. ಸ್ಪಂದನಾ, ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಕೆ.ಶ್ರೀಜಾ, ಜೂಹಾ ಅಫ್ಸಾ ಉಪಸ್ಥಿತರಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಎನ್.ಸ್ಪಂದನಾ, ಬಿ.ಆರ್.ಜಯಕುಮಾರಿ, ಟಿ.ಶಿವಾನಂದಪ್ಪ, ಎಸ್.ಆರ್. ರಮೇಶ್ ಪಾಲ್ಗೊಂಡಿದ್ದರು

STAR OF MYSORE

Monday 25th November 2024

Science and techniques behind DNA fingerprinting, profiling explained



Mysuru, Nov. 25 (BCT)- The Department of Microbiology, in association with IQAC, organised a session titled "The DNA Detective" at SBRR Mahajana First Grade College, Jayalakshmipuram recently.

Dr. T. Shivanandappa, Former Scientist 'G,' CSIR-CFTRI was the resource person, delivering an insightful lecture on the history, methodology and diverse applications of DNA fingerprinting.

In his talk, Dr. Shivanandappa provided a comprehensive overview of the technique, beginning with its discovery by Sir Alec Jeffreys in 1984. He explained how DNA fingerprinting enables the identification of unique DNA patterns, revolutionising fields like forensic science, crime detection, and species classification.

He spotlighted a landmark case in India solved by Prof. Lalji Singh, hailed as the "Father of Indian DNA Fingerprinting." This breakthrough demonstrated the technique's potential in resolving complex cases where traditional evidence fell short.

He elaborated on the science behind DNA fingerprinting, emphasising that although 99.9 percent of human DNA is identical, slight variations in specific regions render every individual genetically unique. These differences form the foundation for creating precise DNA profiles.

Beyond forensics, he discussed the applications of DNA fingerprinting in paternity testing, establishing biological relationships and aiding legal and family reunification cases.

He also introduced cutting-edge advancements such as DNA phenotyping for predicting physical traits, the use of bioinformatics in genetic data analysis and DNA barcoding for species identification and taxonomy.

DNA barcoding, he explained, has become a pivotal tool in biodiversity studies, enabling researchers to classify species and explore evolutionary relationships.

The session concluded with an interactive discussion, where attendees actively engaged with the speaker to clarify doubts and deepen their understanding.

The programme began with a prayer by M.D. Sanjay, followed by a welcome address by R.S. Devika, hosted by K. Shreeja and Zuha Afsha, Assistant Professors in the Department of Microbiology.

Principal Dr. B.R. Jayakumari, CEO & Academic Advisor Dr. S.R. Ramesh, N. Spandana, Head of the Department of Microbiology were present.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 17.11.2024

ಕ್ಯಾಂಪಸ್ ಟು ಕೆರಿಯರ್ ಉದ್ಯೋಗಾವಕಾಶಗಳ ಶೋಧನೆ

ಮೈಸೂರು: ನಗರದ ಮಹಾಜನ ಕಾಲೇಜಿನ ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗವು ಕ್ಯಾಂಪಸ್ ಟು ಕೆರಿಯರ್- ಉದ್ಯೋಗಾವಕಾಶಗಳ ಶೋಧನೆ ಕುರಿತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಈ ವೇಳೆ ಆಪರ್ಚೂನ್ ಗ್ರೂಪ್ ಸಂಸ್ಥಾಪಕರು ಹಾಗೂ ಸಿಇಒ ಶರತ್ ಕುಮಾರ್‌ಮಾತನಾಡಿ, ಕ್ಯಾಂಪಸ್ ಟು ಕೆರಿಯರ್‌ವೃತ್ತಿ ಜೀವನದ ಹಾದಿಯಲ್ಲಿ ಸ್ಪಷ್ಟವಾದ ದಿಕ್ಕನ್ನು ಸ್ಥಾಪಿಸುವಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತದೆ.

ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ಹೊಸ ಪ್ರವೃತ್ತಿಗಳು ಮತ್ತು ಸವಾಲುಗಳಿಗೆ ಕಲಿಕೆ ಮತ್ತು



ಹೊಂದಿಕೊಳ್ಳುವ ಅಗತ್ಯ ಎಂದು ತಿಳಿಸಿದರು. ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಡಾ.ಪಿ.ಜಿ. ಪುಷ್ಪರಾಣಿ, ಆಪರ್ಚೂನ್ ಗ್ರೂಪ್ ಸಹ ಸಂಸ್ಥಾಪಕ ಜತಿನ್ ಆರ್. ಗೌಡ, ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್, ಸಂಚಾಲಕಿ ಕಾವ್ಯಶ್ರೀ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 24.11.2024

ತಂಬಾಕು ಸೇವನೆ ಕ್ಯಾನ್ಸರ್‌ಗೆ ಮೂಲ ಕಾರಣ

ದುಶ್ಚಟಗಳಿಂದ ದೂರವಿರಿ: ಡಾ.ವಿನಯ್ ಕುಮಾರ್ ಮುತ್ತಗಿ ಎಚ್ಚರಿಕೆ | ಕ್ಯಾನ್ಸರ್‌ಕುರಿತು ಜಾಗೃತಿ, ಉಚಿತ ಆರೋಗ್ಯ ತಪಾಸಣೆ

• ಕನ್ನಡಪ್ರಭ ವಾರ್ತೆ ಮೈಸೂರು

ತಂಬಾಕು ಸೇವನೆಯು ಯಾವುದೇ ರೀತಿಯ ಕ್ಯಾನ್ಸರ್‌ಗಳಿಗೆಮೂಲಭೂತಕಾರಣವಾಗಬಹುದು. ದುಶ್ಚಟಗಳಿಂದ ಸಂಪೂರ್ಣ ದೂರವಿದ್ದಲ್ಲಿ ಮಾತ್ರ ಆರೋಗ್ಯಕರ ಜೀವನ ನಡೆಸಲು ಸಾಧ್ಯ ಎಂದು ಭಾರತ್ ಕ್ಯಾನ್ಸರ್‌ಆಸ್ಪತ್ರೆಯ ರೇಡಿಯೇಷನ್ ಆಂಕೋಲಾಜಿಸ್ಟ್ ಡಾ. ವಿನಯ್ ಕುಮಾರ್‌ಮುತ್ತಗಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸ್ವಯಂ ಸೇವಕ ಘಟಕ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ವಿದ್ಯಾರ್ಥಿ ಸಂಸತ್, ಐಕ್ಯೂಎಸಿ ಹಾಗೂ ಭಾರತ್ ಕ್ಯಾನ್ಸರ್‌ಆಸ್ಪತ್ರೆ ಸಹಯೋಗದಲ್ಲಿ ಆಯೋಜಿಸಿದ್ದ ಕ್ಯಾನ್ಸರ್‌ಕುರಿತ ಜಾಗೃತಿ ಹಾಗೂ ಉಚಿತ ತಪಾಸಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಕಳೆದ ದಶಕದಲ್ಲಿ ಕ್ಯಾನ್ಸರ್‌ಸಂಬಂಧಿತ ರೋಗ ಸಮಸ್ಯೆಗಳು ತೀವ್ರ ಪ್ರಮಾಣದಲ್ಲಿ ಹೆಚ್ಚಾಗುತ್ತಿದ್ದು, ಎಳ್ಳಾವಯೋಮಾನದ ಯುವಕ- ಯುವತಿಯರು, ಪುರುಷ- ಮಹಿಳೆಯರಲ್ಲಿ ತಂಬಾಕು, ಗುಟ್ಕಾ ಸೇವನೆ ಹಾಗೂ ಇತರೆ ದುಶ್ಚಟಗಳಿಂದ ಕ್ಯಾನ್ಸರ್ ಕಾರಕ ತೊಂದರೆಗಳು ಕಂಡು ಬರುತ್ತಿವೆ. ಪ್ರಸಕ್ತ ದಿನಗಳಲ್ಲಿ ಶ್ವಾಸಕೋಶ, ಬಾಯಿ ಮತ್ತು ಗಂಟಲು ಹಾಗೂ ಸ್ತನ ಕ್ಯಾನ್ಸರ್‌ಗಳಂತಹ ರೋಗಗಳು ದೊಡ್ಡ ಪ್ರಮಾಣದಲ್ಲಿ ಕಂಡು ಬರುತ್ತಿವೆ ಎಂದರು.

ಇಂದಿನ ಯುವಪೀಳಿಗೆ ಧೂಮಪಾನ, ಮದ್ಯಪಾನ ಹಾಗೂ ರಾಸಾಯನಿಕಯುಕ್ತ ಆಹಾರ ಪದಾರ್ಥಗಳ ಬದಲು ಆರೋಗ್ಯಯುತವಾದ ಆಹಾರಗಳನ್ನು ಬಳಸಬೇಕು. ಉತ್ತಮ ಆಹಾರ ಶೈಲಿ, ಲಘು ವ್ಯಾಯಾಮ, ಪ್ರಾಣಾಯಾಮ, ನಿಗಧಿತ ನಿದ್ರಾ ಸಮಯ ಹಾಗೂ ಉತ್ತಮ ಚಿಂತನೆಗಳು ನಮ್ಮ ದೇಹದ ಮತ್ತು ಮನಸ್ಸಿನ ಆರೋಗ್ಯ ಸಂಪತ್ತನ್ನು ವೃದ್ಧಿಸಬಲ್ಲವು ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಎನ್‌ಎಸ್‌ಎಸ್ ಯೋಜನಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ, ಡಾ. ಸಿದ್ದರಾಜು, ವಿದ್ಯಾರ್ಥಿ ಸಂಸತ್ ಸಂಚಾಲಕಿ ಡಾ.ಪಿ.ಜಿ. ಪುಷ್ಪರಾಣಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಭಾರತ್ ಕ್ಯಾನ್ಸರ್ ಆಸ್ಪತ್ರೆಯ ವೈದ್ಯೆ ಡಾ. ಆರ್ಚನಾ, ಮಾರುಕಟ್ಟೆ ವ್ಯವಸ್ಥಾಪಕ ಸುನೀಲ್ ಕುಮಾರ್, ನರ್ಸಿಂಗ್ ವಿಭಾಗದ ಸಹನಾ, ಪ್ರಮೋದಿನಿ ಮೊದಲಾದವರು ಇದ್ದರು.

ಆಂದೋಲನ
ದಿನ ಪತ್ರಿಕೆ
ಶುಕ್ರವಾರ, 1 ನವೆಂಬರ್ 2024



ಶೈಕ್ಷಣಿಕ ವರದಿ ಬಿಡುಗಡೆ... ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎಲ್ಲಾ ವಿಭಾಗಗಳ ಶೈಕ್ಷಣಿಕ ವರದಿ, ಆಡಳಿತಾತ್ಮಕ ವರದಿ, ವಿದ್ಯಾರ್ಥಿಗಳ ಶೈಕ್ಷಣಿಕ ವರದಿ, ಸಂಸ್ಥೆಗಳ ವರದಿ, ಪಠ್ಯ-ಪಠ್ಯೇತರ ವರದಿಗಳನ್ನು ಒಳಗೊಂಡ 2021-22, 2022-23 ಹಾಗೂ 2023-24 ನೇ ಸಾಲಿನ ಶೈಕ್ಷಣಿಕ ವರದಿಯನ್ನೊಳಗೊಂಡ ಪುಸ್ತಕವನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಆಂಗ್ಲಭಾಷಾ ಸಹಾಯಕ ಪ್ರಾಧ್ಯಾಪಕ ಡಾ.ಜಿ.ನಾಗರಾಜು ಬಿಡುಗಡೆ ಮಾಡಿದರು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ವರದಿ ಸಂಪಾದಕ ಡಾ.ಜಿ.ದೊಡ್ಡರಸಯ್ಯ, ಗ್ರಂಥಪಾಲಕರಾದ ಎಂ.ವೀಣಾ, ಐಕ್ಯೂಎಸಿ ಸಂಚಾಲಕರಾದ ಡಿ.ಗೀತಾ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 1.11.2024

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶೈಕ್ಷಣಿಕ ವರದಿ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್.ಬಿ.ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎಲ್ಲ ವಿಭಾಗಗಳ ಶೈಕ್ಷಣಿಕ ವರದಿ, ಆಡಳಿತಾತ್ಮಕ ವರದಿ, ವಿದ್ಯಾರ್ಥಿಗಳ ಶೈಕ್ಷಣಿಕ ವರದಿ, ಸಂಸ್ಥೆಗಳ ವರದಿ, ಪಠ್ಯ-ಪಠ್ಯೇತರ ವರದಿಗಳನ್ನೊಳಗೊಂಡ 2021-22, 2022-23 ಹಾಗೂ 2023-24ನೇ ಸಾಲಿನ ಶೈಕ್ಷಣಿಕ ವರದಿ ಪುಸ್ತಕವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಂಗ್ಲ ಭಾಷಾ ಸಹಾಯಕ ಪ್ರಾಧ್ಯಾಪಕ ಡಾ.ಜಿ.ನಾಗರಾಜು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ



ವರದಿಯ ಸಂಪಾದಕರಾದ ಡಾ.ಜಿ. ದೊಡ್ಡರಸಯ್ಯ, ಗ್ರಂಥಪಾಲಕರಾದ ಎಂ. ವೀಣಾ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 16.11.2024

ವೈವಿಧ್ಯಮಯ ಓದುಗರಿಗೆ ಇ-ಪತ್ರಿಕೆಗಳು ಅನುಕೂಲ

ಹಿರಿಯ ಪತ್ರಕರ್ತ ಟಿ.ಆರ್.ಸತೀಶ್ ಕುಮಾರ್ ಅಭಿಪ್ರಾಯ



• **ಕನ್ನಡಪ್ರಭ ವಾರ್ತೆ** ಮೈಸೂರು

ವೈವಿಧ್ಯಮಯ ಓದುಗರಿಗೆ ಇ-ಪತ್ರಿಕೆಗಳು ಅನುಕೂಲಕರ ಎಂದು ಹಿರಿಯ ಪತ್ರಕರ್ತ ಟಿ.ಆರ್.ಸತೀಶ್ ಕುಮಾರ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮತ್ತು ಐಕ್ಯೂಎಸಿಯ ಸಹಯೋಗದೊಂದಿಗೆ ಇ-ಪೇಪರ್ ಎಂಬ ವಿಷಯದ ಕುರಿತು ಸಂವಾದಾತ್ಮಕ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ವಿಕಾಸಗೊಳ್ಳುತ್ತಿರುವ ಮಾಧ್ಯಮದ ಬಗ್ಗೆ ತಿಳಿಸಿದರು.

ಮುಖ್ಯವಾಹಿನಿಗಳ ಮಧ್ಯೆ, ಸಾಮಾಜಿಕ ಮಾಧ್ಯಮಗಳು ಬೀರುತ್ತಿರುವ ಪ್ರಭಾವದ ಬಗ್ಗೆ ಕೇಂದ್ರೀಕರಿಸಿದ ಅವರು, ಮುದ್ರಣ ಮಾಧ್ಯಮ ಮತ್ತು ಇ-ಪೇಪರ್‌ಗಳ ಕುರಿತು ವಿವರಿಸಿದರು. ಇ-ಪೇಪರ್‌ನ ವಿಶೇಷತೆ, ಉಪಯೋಗಗಳು ಮತ್ತು ಪ್ರಸ್ತುತತೆಯ ಬಗ್ಗೆ ಮಾತನಾಡಿದರು.

ಮುದ್ರಣ ಮತ್ತು ಇ-ಪೇಪರ್‌ಗಳಲ್ಲಿ ಇರುವ ಮಾಹಿತಿ ಒಂದೇ ಆಗಿರುತ್ತದೆ. ಮುದ್ರಣ ಪತ್ರಿಕೆ ಓದುಗರು ಕೊಂಡುಕೊಂಡರೂ, ಓದುವವರ ಸಂಖ್ಯೆ ಕಡಿಮೆ ಈಗ ಪ್ರತಿಯೊಬ್ಬರು ಮೊಬೈಲ್ ಬಳಸುವುದರಿಂದ ಎಲ್ಲವನ್ನೂ ಮೊಬೈಲ್ ನಲ್ಲೇ ಹುಡುಕುತ್ತಾರೆ. ಹಾಗಾಗಿ ಕಾಲ ಬದಲಾದಂತೆ ಪತ್ರಿಕೆಗಳು ಸಹ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿವೆ. ಮುದ್ರಣ ಪತ್ರಿಕೆಗಳನ್ನು ಒಂದು ಕಡೆ ಕೂತೇ ಓದಬೇಕು. ಆದರೆ, ಇ-ಪೇಪರ್‌ಗಳನ್ನು ಮೊಬೈಲ್ ನಲ್ಲಿ ಎಲ್ಲಿ, ಹೇಗೆ ಬೇಕಾದರೂ, ಯಾವಾಗ ಬೇಕಾದರೂ ಓದಬಹುದು. ಜೊತೆಗೆ ಸುಲಭವಾಗಿ, ನಿರ್ದಿಷ್ಟ ವಿಷಯವನ್ನು, ಸುದ್ದಿಯನ್ನು, ನಿರ್ದಿಷ್ಟ ದಿನಾಂಕದ ಸುದ್ದಿಯನ್ನು ಹುಡುಕಿಓದಬಹುದು ಮತ್ತುಇನ್ನೊಬ್ಬರಿಗೆ ಸುಲಭವಾಗಿ ನಿರ್ದಿಷ್ಟ ಸುದ್ದಿಯನ್ನು ಹಂಚಿಕೊಳ್ಳಬಹುದು. ಈ ಮೂಲಕ ಇ-ಪೇಪರ್‌ಗಳು ಓದುಗರನ್ನು ಆಕರ್ಷಿಸುತ್ತಿವೆ ಎಂದು ತಿಳಿಸಿದರು.

ಕನ್ನಡಿಗರು ಬೇರೆ ರಾಜ್ಯಗಳಲ್ಲಿ ಇದ್ದರೆ, ಅವರಿಗೆ ಸ್ಥಳೀಯ ಮುದ್ರಣ ಪತ್ರಿಕೆಗಳು ಸಿಗುವುದುಕಷ್ಟ. ಆದರೆ, ಇ-ಪೇಪರ್‌ಗಳನ್ನು ಹೊರರಾಜ್ಯದಲ್ಲಿರುವ ಆಸಕ್ತ ಕನ್ನಡಿಗರು ಸುಲಭವಾಗಿ ಪಡೆಯಬಹುದಾಗಿದೆ. ಜೊತೆಗೆ ಇ-ಪೇಪರ್‌ಗಳನ್ನು ಓದಲು ಸಹ ಇಂತಿಷ್ಟು ಮೊತ್ತವನ್ನು ಪಾವತಿಸಬೇಕಾಗಿರುವುದರಿಂದ ಮತ್ತು ಅದರಲ್ಲಿ ಬರುವ ಜಾಹೀರಾತುಗಳಮೂಲಕವೂ ಇ-ಪೇಪರ್ ಉತ್ತಮ ಆದಾಯವನ್ನು ತಂದು ಕೊಡುತ್ತದೆ ಎಂದು ವಿವರಿಸಿದರು.

ಇದೇ ವೇಳೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಇರುವ ಅನುಮಾನ, ಗೊಂದಲದ ಬಗೆಗಿನ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಪರಿಹಾರ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಅಮೃತ ಶಂಕ್ವಾಲ್, ಸಹಾಯಕ ಪ್ರಾಧ್ಯಾಪಕಿ ಸ್ವರ್ಣ ಕಿತ್ತೂರು, ತಾಂತ್ರಿಕ ವಿಭಾಗದ ಮುಖ್ಯಸ್ಥ ರಾಜೇಂದ್ರ ಪ್ರಸಾದ್ ಸೇರಿದಂತೆ ಇತರರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 16.11.2024

ರಾಜ್ಯೋತ್ಸವ ಕನ್ನಡ ನಮ್ಮ ಉಸಿರಿನಷ್ಟೇ ವಾಸ್ತವ: ಡಾ.ಜಯಕುಮಾರಿ

ನಮ್ಮ ಸರ್ವಸ್ವ ಎಲ್ಲವೂ ಕನ್ನಡವಾಗಿರಲಿ

• **ಕನ್ನಡಪ್ರಭ ವಾರ್ತೆ** ಮೈಸೂರು



ಕನ್ನಡ ಎಂಬುದು ನಮ್ಮ ಉಸಿರಿನಷ್ಟೇ ವಾಸ್ತವ ಎಂದು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಹೇಳಿದರು.

ರಾಮಕೃಷ್ಣನಗರದಲ್ಲಿರುವ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ನಡೆದ ಮಕ್ಕಳ ದಿನಾಚರಣೆಮತ್ತುಕನ್ನಡರಾಜ್ಯೋತ್ಸವದಲ್ಲಿ ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕನ್ನಡ ಭಾಷೆ ಸಂಪರ್ಕ ಸಮೂಹ ಮಾಧ್ಯಮ ಮಾತ್ರ ವಲ್ಲ, ಅದು ನಮ್ಮ ಉಸಿರು, ನಮ್ಮ ಜೀವನ, ನಮ್ಮ ಸರ್ವಸ್ವ ಎಲ್ಲವೂ ಕನ್ನಡವಾಗಿರಬೇಕು. ಇಂದಿನ ಮಕ್ಕಳೇ ನಾಳಿನ ನಾಯಕರು, ಈ ದಿನ ನಿಮ್ಮೆಲ್ಲರ ಹಬ್ಬ, ಮಕ್ಕಳು ದೊಡ್ಡವರ ರೀತಿ ಚಿಂತನೆಗಳು ಸಹಜವಾಗಿ ಕಲಿಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ ಮಾತನಾಡಿ, ಭವಿಷ್ಯದ ರಾಷ್ಟ್ರ ನಿರ್ಮಾಣದ ಶಿಲ್ಪಿಗಳೇ ಮಕ್ಕಳು. ಆದ್ದರಿಂದ ಪೋಷಕರು ಮತ್ತು ಶಿಕ್ಷಕರು ಮಕ್ಕಳನ್ನು ಒಳ್ಳೆಯ ವಾತಾವರಣದಲ್ಲಿ ಬೆಳೆಸಿ ಸಂಸ್ಕಾರವಂತರನ್ನಾಗಿ ಮಾಡಬೇಕೆಂದು ತಿಳಿಸಿದರು. ವಿನೋಬಾ ಬಾವೆ ಅವರು ಕನ್ನಡವನ್ನು ವಿಶ್ವಲಿಪಿಗಳ ರಾಣಿ ಎಂದು ಹೇಳಿದ್ದನ್ನು ಈ ಸಮಯದಲ್ಲಿ ಸ್ಮರಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್ ಮಾತನಾಡಿ, ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಲ್ಲಿ ಮಾತ್ರ ಆಗದೆ, ಕನ್ನಡ ನಿತ್ಯೋತ್ಸವವಾಗಬೇಕು ಎಂದರು. ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಮಕ್ಕಳಿಂದ ಮೂಡಿಬಂದ ಸಮೂಹ ಗಾಯನ ಮತ್ತು ಸಮೂಹ ನೃತ್ಯವನ್ನು ವೀಕ್ಷಿಸಿದ ಪೋಷಕರು ಮತ್ತು ಮಕ್ಕಳೆಲ್ಲರೂ ಸಂತಸಪಟ್ಟರು.

ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ವೀಣಾ ಕೆ. ಹೆಗಡೆ ಇದ್ದರು. ಸಹ ಶಿಕ್ಷಕಿ ಎನ್. ಶೀತಲ್ ನಿರೂಪಿಸಿದರು. ಸಹ ಶಿಕ್ಷಕಿ ಎಲ್. ಜ್ಯೋತಿ ವಂದಿಸಿದರು. ಶಾಲೆಯ ಶಿಕ್ಷಕ-ಶಿಕ್ಷಕೇತರರು, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 17 ನವೆಂಬರ್ 2024

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಮಕ್ಕಳ ದಿನ; ಕನ್ನಡ ರಾಜ್ಯೋತ್ಸವ ಆಚರಣೆ



ರಾಮಕೃಷ್ಣ ವಿದ್ಯಾಕೇಂದ್ರ ದಲ್ಲಿ ಮಕ್ಕಳಿಗೆ ನಾನಾ ಕ್ರೀಡೆ ಗಳನ್ನು ಏರ್ಪಡಿಸಿ ಮಕ್ಕಳ ದಿನ ಮತ್ತು ಕನ್ನಡ ರಾಜ್ಯೋತ್ಸವ ಆಚರಿಸ ಲಾಯಿತು.

ಮೈಸೂರು, ನ. 16– ರಾಮಕೃಷ್ಣ ನಗರದಲ್ಲಿರುವ ರಾಮಕೃಷ್ಣ ವಿದ್ಯಾಕೇಂದ್ರ ದಲ್ಲಿ ಮಕ್ಕಳಿಗೆ ನಾನಾ ಕ್ರೀಡೆಗಳನ್ನು ಏರ್ಪಡಿಸಿ ಮಕ್ಕಳ ದಿನ ಮತ್ತು ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರು ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ. ಹೆಗಡೆ ಉಪಸ್ಥಿತರಿದ್ದರು. ಕನ್ನಡ ಎಂಬುದು ನಮ್ಮ ಉಸಿರಿನಷ್ಟೇ ವಾಸ್ತವ. ಕನ್ನಡ ಭಾಷೆ ಸಂಪರ್ಕ ಸಮೂಹ ಮಾಧ್ಯಮ ಮಾತ್ರವಲ್ಲ, ಅದು ನಮ್ಮ ಉಸಿರು, ನಮ್ಮ ಜೀವನ, ನಮ್ಮ ಸರ್ವಸ್ವ ಎಲ್ಲವೂ ಕನ್ನಡವಾಗಿರಬೇಕು. ಇಂದಿನ ಮಕ್ಕಳೇ ನಾಳಿನ ನಾಯಕರು, ಈ ದಿನ ನಿಮ್ಮೆಲ್ಲರ ಹಬ್ಬ. ಮಕ್ಕಳು ದೊಡ್ಡವರ ರೀತಿ ಚಿಂತನೆಗಳು ಸಹಜವಾಗಿ ಕಲಿಯಬೇಕು ಎಂದು ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್ ಮಾತನಾಡಿ, ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಲ್ಲಿ ಮಾತ್ರ ಆಗದೆ, ಕನ್ನಡ ನಿತ್ಯೋತ್ಸವವಾಗಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಂ.ಪಾಪೇಗೌಡ ಮಾತನಾಡಿ, ಭವಿಷ್ಯದ ರಾಷ್ಟ್ರ ನಿರ್ಮಾಣದ ಶಿಲ್ಪಿಗಳೇ ಮಕ್ಕಳು. ಆದ್ದರಿಂದ ಪೋಷಕರು ಮತ್ತು ಶಿಕ್ಷಕರು ಮಕ್ಕಳನ್ನು ಒಳ್ಳೆಯ ವಾತಾವರಣದಲ್ಲಿ ಬೆಳೆಸಿ ಸಂಸ್ಕಾರವಂತರನ್ನಾಗಿ ಮಾಡಬೇಕೆಂದು ತಿಳಿಸಿದರು. ವಿನೋಬಾ ಭಾವೆಯವರು ಕನ್ನಡವನ್ನು ವಿಶ್ವಲಿಪಿಗಳ ರಾಣಿ ಎಂದು ಹೇಳಿದ್ದನ್ನು ಈ ಸಮಯದಲ್ಲಿ ಸ್ಮರಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 20.11.2024

ಅನುಗಾಲ ಸ್ಮರಿಸುವ ಸಂತ ಕನಕದಾಸರು

ಶ್ರೀಕನಕದಾಸರ ಜಯಂತಿಯಲ್ಲಿ ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಮೈಸೂರು

ಕನಕದಾಸರು ಅನುಗಾಲ ಸ್ಮರಿಸಬೇಕಾದ ವ್ಯಕ್ತಿತ್ವದ ಮೇರು ಪರ್ವತವಾಗಿದ್ದಾರೆ ಎಂದು ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀ ಕನಕದಾಸರ ಜಯಂತಿಯಲ್ಲಿ ಮಾತನಾಡಿದ ಅವರು, ಕನಕದಾಸರ ಭಕ್ತಿ ಹಾಗೂ ಆಧ್ಯಾತ್ಮಿಕ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಕೇವಲ ಕೀರ್ತನಕಾರರು ಮಾತ್ರವಾಗಿರದೇ, ಕವಿಯಾಗಿ, ವಿದ್ವಾಂಸರಾಗಿ ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ ಎಂದರು.

ಇಂದಿನ ಧಾರವಾಡ ಜಿಲ್ಲೆಯ ಬಂಕಾಪುರದ ಬಾಡಗ್ರಾಮದಲ್ಲಿ ಜನಿಸಿದ ಮೂಲ ಹೆಸರಿನ ತಿಮ್ಮಪ್ಪನಾಯಕ ನಂತರದ ಇತಿಹಾಸದಲ್ಲಿ ಸಂತ ಕನಕದಾಸರೆಂದೇ



ಪ್ರಸಿದ್ಧರಾದರು. ವ್ಯಾಸರಾಯರ ಶಿಷ್ಯರಾಗಿ ಆಧ್ಯಾತ್ಮಿಕ ಜ್ಞಾನದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು ತಾಳ, ತಂಬೂರಿ ಹಿಡಿದು ಶ್ರೇಷ್ಠ ಹರಿದಾಸರಾದರು ಎಂದರು.

ಕೇವಲ ಚಿನ್ನ ಇದ್ದ ಮಾತ್ರಕ್ಕೆ ಆತ ದೊಡ್ಡ ವ್ಯಕ್ತಿಯಾಗುವುದಿಲ್ಲ. ಅದರ ಬದಲಿಗೆ ಚಿನ್ನದಂಥಹ ಗುಣ, ವ್ಯಕ್ತಿತ್ವ ಇರಬೇಕು. ಆಗಲೇ ವ್ಯಕ್ತಿ ತುಂಬಾ ಎತ್ತರಕ್ಕೆ ಬೆಳೆಯಲು ಸಾಧ್ಯ. ಸಮಾಜದಲ್ಲಿನ ಜಾತಿ ವ್ಯವಸ್ಥೆ, ವರ್ಣಭೇದ ಹಾಗೂ ತಾರತಮ್ಯ ನೀತಿಯನ್ನು ತಮ್ಮ ಸಹಸ್ರಾರು ಕೀರ್ತನೆಗಳ ಮೂಲಕ ಕನಕದಾಸರು ಖಂಡಿಸಿದರು ಎಂದರು.

ಭಕ್ತಿ ಹಾಗೂ ಜ್ಞಾನ ಶ್ರೇಷ್ಠತೆಗೆ ಹೆಸರಾದ ಕನಕರು ಉಡುಪಿಯ ಶ್ರೀಕೃಷ್ಣನನ್ನು ಭಕ್ತಿ ಪೂರ್ವಕವಾಗಿ ಒಲಿಸಿಕೊಂಡ ಪವಾಡವೇ ರೋಚಕ. ಇಂದಿಗೂ ಸಾಕ್ಷಾತ್ ಶ್ರೀಕೃಷ್ಣನು ಪ್ರತ್ಯಕ್ಷನಾದ ಸ್ಥಳವನ್ನು ಕನಕನ ಕಿಂಡಿ ಎಂದು ಹೇಳುತ್ತಾರೆ. ಯೋಧರಾಗಿದ್ದ ಕನಕದಾಸರು ನಂತರದ ದಿನಗಳಲ್ಲಿ ಯುದ್ಧ ತಂದಿಟ್ಟ ವಿನಾಶ ಕಂಡು, ಆಧ್ಯಾತ್ಮದತ್ತ ಮುಖಮಾಡಿ, ಹಲವು ಶ್ರೇಷ್ಠ ಎನಿಸುವ ಕೀರ್ತನೆ, ಕಾವ್ಯ, ಉಗಾಭೋಗಗಳನ್ನು ರಚಿಸಿದ್ದು ಬಹು ವಿಶೇಷ ಎಂದು ತಿಳಿಸಿದರು.

ಬದುಕಿನುದ್ದಕ್ಕೂ ತಾವು ಕಂಡುಂಡ ಅನುಭವದ ಸಾರ ಅವರ ಕೀರ್ತನೆಗಳಲ್ಲಿ ಮಡುಗಟ್ಟಿದೆ. ಶಾಂತಿಯಿಂದ, ತಾಳ್ಮೆಯಿಂದ ಜನರ ಮೇಲಿನ ನಂಬಿಕೆಯಿಂದ ಲೋಕದ ಡೊಂಕುಗಳನ್ನು ತಿಳಿಸಿ ಹೇಳಿ, ಅರಿವು ಮೂಡಿಸುವ ಕೆಲಸವನ್ನು ಜೀವಿತದುದ್ದಕ್ಕೂ ಮಾಡಿದರು. ಆಡು ಮಾತಿನಲ್ಲಿ ರಚಿಸಿದ ಕೀರ್ತನೆಗಳು ತತ್ವ ಸಿದ್ಧಾಂತಗಳಿಗೆ ಮಾತ್ರ ಸೀಮಿತವಾಗಿದೆ ಜನ ಸಾಮಾನ್ಯರು ನೆಮ್ಮದಿಯಿಂದ ಬದುಕಲು ಕಾರಣವಾದವು ಎಂದರು.

ಕೃಷ್ಣಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ ಸೇರಿದಂತೆ ಮೊದಲಾದವರು ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಬುಧವಾರ, 20 ನವೆಂಬರ್ 2024



ಮೈಸೂರಿನ ಜಯಲಕ್ಷ್ಮಿಪುರಂನ ಎಸ್‌ಬಿಆರ್‌ಆರ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನಕ ಜಯಂತಿ ಆಚರಿಸಲಾಯಿತು. ಈ ವೇಳೆ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಪ್ರಾಧ್ಯಾಪಕರಾದ ಎಚ್.ಶ್ರೀಧರ್, ಡಾ.ಎಚ್.ಆರ್.ತಿಮ್ಮೇಗೌಡ ಮುಂತಾದವರು ಉಪಸ್ಥಿತರಿದ್ದರು.

ಆಂದೋಲನ
ದಿನ ಪತ್ರಿಕೆ

ಶನಿವಾರ, 9 ನವೆಂಬರ್ 2024

'ಓದಿನಿಂದ ಜೀವನದಲ್ಲಿ ಹೊಸ ಅಲೆ ನಿರ್ಮಾಣ'



ಮೈಸೂರು: ಪುಸ್ತಕಗಳನ್ನು ಓದುವುದರಿಂದ ಜೀವನದಲ್ಲಿ ಹೊಸ ಅಲೆಯನ್ನು ಸೃಷ್ಟಿಸುತ್ತದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಸಹಾಯಕ ಆಂಗ್ಲ ಪ್ರಾಧ್ಯಾಪಕ ಡಾ.ಜೆ.ನಟರಾಜ್ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ವಿಭಾಗದ ವತಿಯಿಂದ ಐಕ್ಯೂಎಸಿ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ಅನ್‌ಪ್ಯಾಕಿಂಗ್‌ದ ಪೇಜಸ್: ಅನ್ ಓರಲ್ ಪ್ರೆಸೆಂಟೇಷನ್' ಸ್ಪರ್ಧೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಅನ್‌ಪ್ಯಾಕಿಂಗ್‌ದ ಪೇಜಸ್: ಅನ್ ಓರಲ್ ಪ್ರೆಸೆಂಟೇಷನ್' ಸ್ಪರ್ಧೆಯಲ್ಲಿ ಡಾ.ಜೆ.ನಟರಾಜ್ ಅಭಿಮತ

ಇಂದಿನ ವಿದ್ಯಾರ್ಥಿಗಳು ಸಂವಿಧಾನದ ಮೂಲ ಅಂಶಗಳನ್ನು ಬಹಳ ಮುಖ್ಯವಾಗಿ ತಿಳಿದಿರಬೇಕು. ಸಾಹಿತ್ಯವು ಹೇಗೆ ಮಾನವನ ಮನಸ್ಸಿಗೆ ಮಾರ್ಗಗಳನ್ನು ತೆರೆಯುತ್ತದೆ ಮತ್ತು ಮಾನವನ ಭಾವನೆಗಳು, ಆಲೋಚನೆಗಳು ಪ್ರವೇಶಿಸುತ್ತವೆ ಎನ್ನುವ ವಾಸ್ತವದ ಒಳನೋಟವನ್ನು ಕಾಣಬಹುದಾಗಿದೆ ಎಂದರು.

ಸಾಹಿತ್ಯ, ಪಠ್ಯದ ಪ್ರತಿಯೊಂದು ತುಣುಕೂ ಕಲಾತ್ಮಕ ಸೃಷ್ಟಿಯಾಗಿದೆ. ಭವ್ಯ ಸಿದ್ಧಾಂತವನ್ನು ಹೊಂದಿದೆ. ಪದವಿ ವಿದ್ಯಾರ್ಥಿಗಳಾದ ನೀವು ಓದಿದ ಪುಸ್ತಕಗಳ ಕುರಿತು ಅಂತರ್ ದೃಷ್ಟಿ ಕೋನದಿಂದ ಮಾತನಾಡುತ್ತಿರುವುದು ಇದಕ್ಕೊಂದು ನಿದರ್ಶನವಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರು, ವಿದ್ಯಾರ್ಥಿಗಳು ಬಹಳ ಪ್ರೌಢಿಮೆಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಪುಸ್ತಕದ ವಿಮರ್ಶೆಯನ್ನು ತಮ್ಮದೇ ಆದ ರೀತಿಯಲ್ಲಿ ಮಂಡಿಸಿದ್ದಾರೆ. ಉತ್ತಮ ಪುಸ್ತಕಗಳು ಒಂದು ಶಕ್ತಿಯಾಗಿವೆ. ಓದುವ ಅಭಿರುಚಿಯನ್ನು ಕೈ ಬಿಡಬಾರದು ಎಂದು ಅವರು ಕಿವಿಮಾತು ಹೇಳಿದರು.

ಗ್ರಂಥಪಾಲಕರಾದ ಎಂ.ವೀಣಾ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್.ತಿಮ್ಮೇಗೌಡ, ಐಕ್ಯೂಎಸಿ ಸಂಚಾಲಕರಾದ ಡಿ.ಗೀತಾ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 9.11.2024

ಸ್ಪರ್ಧಾ ಕಾರ್ಯಕ್ರಮ | ಕರ್ನಾಟಕ ರಾಜ್ಯ ಮುಕ್ತ ವಿವಿ ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕ ಡಾ.ಜೆ. ನಟರಾಜ್ ಅಭಿಮತ

ಶ್ರೇಷ್ಠ ಮನಸ್ಸಿನೊಂದಿಗೆ ಸಂಪರ್ಕ ಸಾಧಿಸಲು ಓದುವಿಕೆ ಅಗತ್ಯ

• ಕನ್ನಡಪ್ರಭ ವಾರ್ತೆ ಮೈಸೂರು

ಓದುವಿಕೆ ಒಬ್ಬ ಶ್ರೇಷ್ಠ ಮನಸ್ಸಿನೊಂದಿಗೆ ಸಂಪರ್ಕ ಸಾಧಿಸುತ್ತದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕ ಡಾ.ಜೆ. ನಟರಾಜ್ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಆಯೋಜಿಸಿದ್ದ ಆನ್ ಪ್ಯಾಕಿಂಗ್ ದ ಪೇಜಸ್: ಆನ್ ಓರಲ್ ಪ್ರಸೆಂಟೇಷನ್ ಎಂಬ ಸ್ಪರ್ಧಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುಸ್ತಕಗಳನ್ನು ಓದುವುದರಿಂದ ಜೀವನದಲ್ಲಿ ಹೊಸ ಆಲೆಯನ್ನು ಸೃಷ್ಟಿಸುವುದರ ಜೊತೆಗೆ ಹೊಸ ಪ್ರಪಂಚ, ಜನರ ಅಭಿಪ್ರಾಯಗಳು ಮತ್ತು ಸಂಶೋಧನಾ ಸಾಹಿತ್ಯಗಳ ಮೂಲಕ ವಿವಿಧ ಸಂಶೋಧನಾ ಮಾಹಿತಿಗಳನ್ನು ತಿಳಿಸುತ್ತವೆ ಎಂದು ಹೇಳಿದರು.

ವಿದ್ಯಾರ್ಥಿಗಳು ಸಂವಿಧಾನದ ಮೂಲ ಆಂಶಗಳನ್ನು ತಿಳಿದಿರಬೇಕಾದುದು ಬಹಳ ಮುಖ್ಯ. ಸಾಹಿತ್ಯವು ಹೇಗೆ ಮಾನವನ ಮನಸ್ಸಿಗೆ ಮಾರ್ಗಗಳನ್ನು ತೆರೆಯುತ್ತದೆ ಮತ್ತು ಮಾನವನ ಭಾವನೆಗಳು, ಆಲೋಚನೆಗಳು, ಪ್ರವೇಶಿಸುತ್ತದೆ ಎನ್ನುವ ವಾಸ್ತವದ ಒಳ ನೋಟವನ್ನು ಕಾಣಬಹುದಾಗಿದೆ. ಸಾಹಿತ್ಯ, ಪಠ್ಯದ ಪ್ರತಿಯೊಂದು ತುಣುಕು ಕಲಾತ್ಮಕ ಸೃಷ್ಟಿಯಾಗಿದೆ ಮತ್ತು ಭವ್ಯವಾದ ಸಿದ್ಧಾಂತವನ್ನು ಹೊಂದಿದೆ ಎಂದರು.

ಪದವಿ ವಿದ್ಯಾರ್ಥಿಗಳಾದ ನೀವು ಓದಿದ ಪುಸ್ತಕಗಳ ಕುರಿತು ಅಂತಹ ದೃಷ್ಟಿಕೋನದಿಂದ ಮಾತನಾಡುತ್ತಿರುವುದು ನಿಜಕ್ಕೂ ಇದ ಕ್ಕೊಂದು ನಿದರ್ಶನವಾಗಿದೆ. ಇಂದು ಸಾಹಿತ್ಯ ಸಿದ್ಧಾಂತಗಳು ಮಾತನಾಡುತ್ತವೆ ಮತ್ತು ಪುಸ್ತಕ ವನ್ನು ಹೊಂದಿದೆ ಎಂದರು.



ಆನ್ ಪ್ಯಾಕಿಂಗ್ ದ ಪೇಜಸ್: ಆನ್ ಓರಲ್ ಪ್ರಸೆಂಟೇಷನ್ ಎಂಬ ಸ್ಪರ್ಧಾ ಕಾರ್ಯಕ್ರಮ ನಡೆಯಿತು.

ಪದವಿ ವಿದ್ಯಾರ್ಥಿಗಳಾದ ನೀವು ಓದಿದ ಪುಸ್ತಕಗಳ ಕುರಿತು ಅಂತಹ ದೃಷ್ಟಿಕೋನದಿಂದ ಮಾತನಾಡುತ್ತಿರುವುದು ನಿಜಕ್ಕೂ ಇದಕ್ಕೊಂದು ನಿದರ್ಶನವಾಗಿದೆ. ಇಂದು ಸಾಹಿತ್ಯ ಸಿದ್ಧಾಂತಗಳು ಮಾತನಾಡುತ್ತವೆ ಮತ್ತು ಪುಸ್ತಕ ಸಾಹಿತ್ಯವೂ ಓದುಗರ ಆಸ್ತಿಯಾಗಿದೆ. ಬರಹಗಾರರ ಆಸ್ತಿಯಲ್ಲ, ಆದುದರಿಂದ ಸಾಹಿತ್ಯದ ಮೌಲ್ಯವನ್ನು ಓದುಗರಾದ ನೀವು ನಿರ್ಣಯ ಮಾಡಬೇಕು ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ಬಹಳ ಪ್ರೌಢಿಮೆಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಪುಸ್ತಕದ ವಿಮರ್ಶೆಯನ್ನು ತಮ್ಮದೇ ರೀತಿಯಲ್ಲಿ ಮಂಡಿಸಿದ್ದಾರೆ. ಉತ್ತಮ ಪುಸ್ತಕಗಳು ಒಂದು ಶಕ್ತಿಯಾಗಿವೆ. ಅವು ನಮಗೆ ಮಾರ್ಗದರ್ಶಕ, ತತ್ವಜ್ಞಾನಿಯಾಗಿ ಮತ್ತು ಒಳ್ಳೆಯ ಗೆಳೆತನದ ಅನುಭವವನ್ನು ನೀಡುತ್ತವೆ ಎಂದು ತಿಳಿಸಿದರು. ಓದುವ ಅಭಿರುಚಿಯನ್ನು ಕೈ ಬಡಬಾರದು, ಅದು ಚಟವಾಗಬೇಕು. ಅರಿವೇ ಗುರು ಎಂ ಬಂತೆ ಪುಸ್ತಕಗಳು ಆತ್ಮವಿಶ್ವಾಸವನ್ನು ಹೆಚ್ಚಿಸು ತ್ತವೆ. ಒಳಗೆ ಅಮಿತರುವಚೇತನವನ್ನುಜಾಗೃತಗೊಳಿಸುತ್ತವೆ. ನಿರಂತರ ಪ್ರಕ್ರಿಯೆ ಯಲ್ಲೂ ಓದುವ ಅಭ್ಯಾಸವನ್ನು ನಿಲ್ಲಿಸಬಾರದು ಎಂದು ಅವರು ಕಿವಿಮಾತು ಹೇಳಿದರು. ಗ್ರಂಥಪಾಲಕಿ ಎಂ. ವೀಣಾ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ ಇತರರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 8 ನವೆಂಬರ್ 2024

ಪುಸ್ತಕಗಳು ಮನಸ್ಸಿನೊಂದಿಗೆ ಸಂಪರ್ಕ ಸಾಧಿಸುತ್ತದೆ

ಮುಕ್ತ ವಿವಿ ಸಹಾಯಕ ಆಂಗ್ಲ ಪ್ರಾಧ್ಯಾಪಕ ಡಾ.ಜಿ.ನಟರಾಜ್ ಅಭಿಮತ



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅನ್‌ಪ್ಯಾಕಿಂಗ್ ದ ಪೇಜಸ್: ಅನ್ ಓರಲ್ ಪ್ರಸೆಂಟೇಷನ್ ಎಂಬ ಸ್ಪರ್ಧಾ ಕಾರ್ಯಕ್ರಮದಲ್ಲಿ ಡಾ.ನಟರಾಜ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು.ನ.7-ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಅನ್‌ಪ್ಯಾಕಿಂಗ್ ದ ಪೇಜಸ್: ಅನ್ ಓರಲ್ ಪ್ರಸೆಂಟೇಷನ್ ಎಂಬ ಸ್ಪರ್ಧಾ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಮುಕ್ತ ವಿವಿ ಸಹಾಯಕ ಆಂಗ್ಲ ಪ್ರಾಧ್ಯಾಪಕ ಡಾ. ನಟರಾಜ್ ಮಾತನಾಡಿ, ಪುಸ್ತಕಗಳನ್ನು ಓದುವುದರಿಂದ ಜೀವನದಲ್ಲಿ ಹೊಸ ಆಲೋಚನೆಯನ್ನು ಸೃಷ್ಟಿಸುವುದರ ಜೊತೆಗೆ ಹೊಸ ಪ್ರಪಂಚ, ಏನನ್ನೇ ಅಭಿಪ್ರಾಯಗಳು ಮತ್ತು ಸಂಶೋಧನಾ ಸಾಹಿತ್ಯಗಳ ಮೂಲಕ ವಿವಿಧ ಸಂಶೋಧನಾ ಮಾಹಿತಿಗಳನ್ನು ತಿಳಿಸುತ್ತವೆ. ಇನ್ನು ವಿಶೇಷವಾಗಿ ಪುಸ್ತಕ ವಿಮರ್ಶೆಗಳಿಗೆ ಬಂದಾಗ ನಿಮ್ಮ ಓದುವಿಕೆ ಒಬ್ಬ ಶ್ರೇಷ್ಠ ಮನಸ್ಸಿನೊಂದಿಗೆ ಸಂಪರ್ಕ ಸಾಧಿಸುತ್ತದೆ. ವಿದ್ಯಾರ್ಥಿಗಳು ಸಂವಿಧಾನದ ಮೂಲಭೂತ ಅಂಶಗಳನ್ನು ತಿಳಿದಿರಬೇಕಾದುದು ಬಹಳ ಮುಖ್ಯ. ಸಾಹಿತ್ಯವು ಹೇಗೆ ಮಾನವನ ಮನಸ್ಸಿಗೆ ಮಾರ್ಗಗಳನ್ನು ತೆರೆಯುತ್ತದೆ ಮತ್ತು ಮಾನವನ ಭಾವನೆಗಳು, ಆಲೋಚನೆಗಳು, ಪ್ರವೇಶಿಸುತ್ತದೆ ಎನ್ನುವ ವಾಸ್ತವದ ಒಳನೋಟವನ್ನು ಕಾಣಬಹುದಾಗಿದೆ. ಸಾಹಿತ್ಯ ಪಠ್ಯದ ಪ್ರತಿಯೊಂದು ತುಣುಕು ಕಲಾತ್ಮಕ ಸೃಷ್ಟಿಯಾಗಿದೆ ಮತ್ತು ಭವ್ಯವಾದ ಸಿದ್ಧಾಂತವನ್ನು ಹೊಂದಿದೆ. ಪದವಿ ವಿದ್ಯಾರ್ಥಿಗಳಾದ ನೀವು ಓದಿದ ಪುಸ್ತಕಗಳ ಕುರಿತು ಅಂತಹ ದೃಷ್ಟಿಕೋನದಿಂದ ಮಾತನಾಡುತ್ತಿರುವುದು ನಿಜಕ್ಕೂ ಇದಕ್ಕೊಂದು ನಿದರ್ಶನವಾಗಿದೆ. ಇಂದು ಸಾಹಿತ್ಯ ಸಿದ್ಧಾಂತಗಳು ಮಾತನಾಡುತ್ತವೆ ಮತ್ತು ಪುಸ್ತಕ ಸಾಹಿತ್ಯವು ಓದುಗರ ಆಸ್ತಿಯಾಗಿದೆ. ಬರಹಗಾರರ ಆಸ್ತಿಯಲ್ಲ. ಆದುದರಿಂದ ಸಾಹಿತ್ಯದ ಮೌಲ್ಯವನ್ನು ಓದುಗರಾದ ನೀವು ನಿರ್ಣಯ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರು ಮಾತನಾಡುತ್ತಾ, ವಿದ್ಯಾರ್ಥಿಗಳು ಬಹಳ ಪ್ರೌಢಿಮೆಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಪುಸ್ತಕದ ವಿಮರ್ಶೆಯನ್ನು ತಮ್ಮದೇ ರೀತಿಯಲ್ಲಿ ಮಂಡಿಸಿದ್ದಾರೆ. ಉತ್ತಮ ಪುಸ್ತಕಗಳು ಒಂದು ಶಕ್ತಿಯಾಗಿವೆ. ಅವು ನಮಗೆ ಮಾರ್ಗದರ್ಶಕ. ಕತ್ತಲಜ್ಞಾನಿಯಾಗಿ ಮತ್ತು ಒಳ್ಳೆಯ ಗೆಳೆತನದ ಅನುಭವವನ್ನು ನೀಡುತ್ತವೆ. ಓದುವ ಅಭಿರುಚಿಯನ್ನು ಕೈ ಬಿಡಬಾರದು. ಅದು ಚಟುವಾಗಿರಬೇಕು. 'ಅರಿವೇ ಗುರು' ಎಂಬಂತೆ ಪುಸ್ತಕಗಳು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಒಳಗೆ ಅವಿತಿರುವ ಚೇತನವನ್ನು ಜಾಗೃತಗೊಳಿಸುತ್ತವೆ. ನಿರಂತರ ಪ್ರಕ್ರಿಯೆಯಲ್ಲೂ ಓದುವ ಅಭ್ಯಾಸವನ್ನು ನಿಲ್ಲಿಸಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಂಥಪಾಲಕರಾದ ವೀಣಾ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಐಕ್ಯೂಎಸಿ ಸಂಚಾಲಕಿ ಗೀತಾ ಹಾಗೂ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 5.11.2024

ನೈಸರ್ಗಿಕ ಗಾಣದ ಎಣ್ಣೆ ಹೆಚ್ಚಾಗಿ ಬಳಸುವುದರಿಂದ ಆರೋಗ್ಯ ವೃದ್ಧಿ

ವಿಜ್ಞಾನಿ ಡಾ. ಪನ್ನೀರ್‌ಸೇಲ್ವಂ ವಿಜಯರಾಜ್ ಅಭಿಮತ



• **ಕನ್ನಡಪ್ರಭ ವಾರ್ತೆ** ಮೈಸೂರು

ನೈಸರ್ಗಿಕ ಗಾಣದ ಎಣ್ಣೆ ಆರೋಗ್ಯವನ್ನು ವೃದ್ಧಿಸುತ್ತದೆ ಎಂದು ಜೈವಿಕ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಪ್ರಧಾನ ವಿಜ್ಞಾನಿ ಡಾ. ಪನ್ನೀರ್‌ಸೇಲ್ವಂ ವಿಜಯರಾಜ್ ಅಭಿಪ್ರಾಯಪಟ್ಟರು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಜೀವರಸಾಯನಶಾಸ್ತ್ರ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ವೈಯಕ್ತಿಕ ಆಹಾರ ಮತ್ತು ಪೋಷಣೆಯಲ್ಲಿನ ಅಭಿವೃದ್ಧಿಯ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ವೈಯಕ್ತಿಕಗೊಳಿಸಿದ ಆಹಾರ ಮತ್ತು ಪೋಷಣೆಯ ಪರಿಕಲ್ಪನೆಯ ಅಡಿಯಲ್ಲಿ ಶಕ್ತಿ ಉತ್ಪಾದನೆ ಮತ್ತು ಸಾಮಾನ್ಯ ಆರೋಗ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಜೈವಿಕ ಅಣುಗಳ ಪ್ರಾಮುಖ್ಯತೆಯನ್ನು ಉಲ್ಲೇಖಿಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮತ್ತು ಸಿಇಒ ಡಾ.ಎಸ್.ಆರ್. ರಮೇಶ್, ಜೀವರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥೆ ವಿ. ರಮ್ಯಾ ಇದ್ದರು.

ವಾಗ್ದೇವಿ ಸಂಪನ್ಮೂಲ ವ್ಯಕ್ತಿ ಪರಿಚಯ ಮಾಡಿಕೊಟ್ಟರು. ಜೈವಿಕ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪಿ. ರಾಧಿಕಾ ಕಾರ್ಯಕ್ರಮ ನಿರೂಪಿಸಿದರು. ಲೂಯಿ ಶರ್ಮಿಳಾ ಸ್ವಾಗತಿಸಿದರು. ಜೈವಿಕ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಆರ್. ಮಾಧುರಿ ವಂದಿಸಿದರು.

MFGE In the Eyes of the Press.....

STAR OF MYSORE

Monday 4th November 2024

Seminar for Rotaractors held



Mysuru, Nov. 4- Rotaract ZOOTS, the Zonal Training Seminar for Rotaractors, was hosted by Rotary District 3181 on Oct.27 at Mahajana First Grade College in Mysuru.

Rotaract Clubs bring together people aged 18 and older to exchange ideas with leaders in the community, develop leadership and professional skills, and have fun through service. In communities worldwide, Rotary and Rotaract members work side by side to take action through service.

The event, organised by Rotaract Mysore East and Rotaract Club of Mahajana led by Zonal Rotaract Representative IPP Rtr. Rtn. R. Prajwal, Chamundi Zone, was inaugurated by Rotary Mysore East President Rtn. Rohit Subbayya.

District Rotaract Representative Rtr. Rtn. R. Sanjay was the chief guest. Rtr. Rtn. Prajwal and District Secretary Rtr. Rtn. Ravishankar were the guests of honour.

Impactful Training Programmes were held throughout the day on various topics like 'Future of Volunteerism' by Rtn. Rakesh Babu, 'Club Culture' by Rtn. Shakuntala Elizabeth while SEARIC MDIO President PDRR Rtr. M.S. Abhijith trained Club Presidents & Secretaries, IPP Rtr. Rtn. Prajwal trained on 'Avenue Services' and Rtr. Gowtham on 'Branding & Social Media.' Over 130 Rotaractors from about 10 Rotaract Clubs in Mysuru City. Rtr. Shree Raksha and Rtr. Mohit Purohit, President of host Rotaract Clubs were present.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 10.11.2024

ದುರ್ಬಲರಿಗೂ ಕಾನೂನು ನೆರವು

ಮಹಾಜನ ಕಾನೂನು ಕಾಲೇಜು ಪ್ರಾಂಶುಪಾಲೆ ಕೆ. ಸೌಮ್ಯಾ ಅಭಿಮತ
ಕಾನೂನು ಸೇವೆಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳ ಅರಿವು ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಾನೂನು ಸೇವಾ ಆಯೋಗವು ರಾಷ್ಟ್ರ, ರಾಜ್ಯ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲೂಕು ಕಾನೂನು ಸೇವೆಗಳ ಸಮಿತಿ ಮೂಲಕ ಲೋಕ್ ಅದಾಲತ್, ಮಧ್ಯಸ್ಥಿಕೆ ಕೇಂದ್ರ, ಕಾನೂನು ನೆರವು ಕ್ಲಿನಿಕ್ ಆರಂಭಿಸುವುದರ ಮೂಲಕ ಆರ್ಥಿಕವಾಗಿ ದುರ್ಬಲರಾದಂತಹ ವ್ಯಕ್ತಿಗಳಿಗೂ ಕಾನೂನಿನ ನೆರವು ನೀಡುವುದರಲ್ಲಿ ಯಶಸ್ವಿಯಾಗುವುದರ ಜೊತೆಗೆ ಸಂವಿಧಾನದ ಸಮಾನತೆಯ ಹಕ್ಕಿನ ಮಹತ್ವವನ್ನು ಎತ್ತಿಹಿಡಿಯುತ್ತಿದೆ ಎಂದು ಮಹಾಜನ ಕಾನೂನು ಕಾಲೇಜು ಪ್ರಾಂಶುಪಾಲೆ ಕೆ. ಸೌಮ್ಯಾ ತಿಳಿಸಿದರು.


ಕಾನೂನು ಸೇವೆಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳ ಅರಿವು ಕಾರ್ಯಕ್ರಮ ನಡೆಯಿತು.

ನಗರದ ಮಹಾಜನ ಕಾಲೇಜಿನಲ್ಲಿ ಕಾನೂನು ಮತ್ತು ಸಂವಿಧಾನ ವಿಭಾಗ, ಐಕ್ಯೂಎಸಿ ಸಹಯೋಗದೊಂದಿಗೆ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಕಾನೂನು ಸೇವೆಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾನೂನು ರಚನಾ ಪ್ರಾಧಿಕಾರದ ಬಗ್ಗೆ ಸಂವಿಧಾನ ಪರಿಚ್ಛೇದ 39ಎ ಉಲ್ಲೇಖಿಸಿದಂತೆ ಪ್ರತಿಯೊಬ್ಬ ನಾಗರೀಕನು ಹಾಗೂ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆ ಮತ್ತು ಮಕ್ಕಳು, ಕಾರ್ಖಾನೆ ಕೆಲಸಗಾರರು, ಕೋಮು ಘರ್ಷಣೆಗೆ ಬಲಿಯಾದವರು, ಮಾನಸಿಕ ಮತ್ತು ಇತರೆ ಯಾವುದೇ ಅಂಗವೈಕಲ್ಯತೆಯಿಂದ ಬಳಲುತ್ತಿರುವ ವ್ಯಕ್ತಿಗಳು ಕಾನೂನು ಸೇವೆಯನ್ನು ಹೇಗೆ ಪಡೆದುಕೊಳ್ಳಬಹುದು ಎಂದರು. ಯಾವುದೇ ಪ್ರಕರಣವು ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿದ ನಂತರ ಆ ಪ್ರಕರಣವನ್ನು ಲೋಕ್ ಅದಾಲತ್ ಸ್ವ ಇಚ್ಛೆಯಿಂದ ವಕೀಲರ ಸಮರ್ಥದಕ್ಷ ಸೇವೆಗಳ ಮೂಲಕ ಪರಿಹರಿಸಿಕೊಂಡು, ನ್ಯಾಯಾಲಯದ ಸಮಯವನ್ನು ಉಳಿಸುವುದರ ಜೊತೆಗೆ ಅರ್ಜಿದಾರನು ತಮ್ಮ ಪ್ರಕರಣವನ್ನು ಯಾವುದೇ ವೆಚ್ಚವಿಲ್ಲದೆ ಪರಿಹರಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಡಾ.ಪಿ.ಜಿ. ಪುಷ್ಪರಾಣಿ, ಕಾನೂನು ಸಂವಿಧಾನ ವಿಭಾಗದ ಮುಖ್ಯಸ್ಥೆ ಮಂಜುಳಾ, ಸಹಾಯಕ ಪ್ರಾಧ್ಯಾಪಕರಾದ ಪರಮೇಶ್ವರ ಹೆಗಡೆ, ಸೂರಜ್ ಗಂಗಾಧರ್, ಎ.ಆರ್. ನಂದೀಶ್, ಕೀರ್ತಿರಾಜ್ ಕಮಲ್ ಮೊದಲಾದವರು ಇದ್ದರು.

ಆರೋಗ್ಯ
ದಿನ ಪತ್ರಿಕೆ

ಶನಿವಾರ, 16 ನವೆಂಬರ್ 2024

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ದ್ವಿತೀಯ ಸ್ಥಾನ

ಮೈಸೂರು: ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಐಇ ಕಾಲೇಜಿನ ಉತ್ತರ ಕ್ಯಾಂಪಸ್‌ನ ಮೈದಾನದಲ್ಲಿ ಎನ್‌ಐಇ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ನಡೆದ ಮೈಸೂರು ನಗರ ಅಂತರ ಕಾಲೇಜು ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜು ಪುರುಷರ ತಂಡ ದ್ವಿತೀಯ ಸ್ಥಾನ ಗಳಿಸಿದೆ.

ಸಾಧಕ ವಿದ್ಯಾರ್ಥಿಗಳಾದ ಮಹದೇವ ಪ್ರಸಾದ್(ತಂಡದ ನಾಯಕ), ಪರಿಣಿತ್, ಮಿಥುನ್ ಪಿ.ಡಿ. ಪೊನ್ನಣ್ಣ, ಮೋಹಿಶ್ ಎಚ್. ಸಿಂಗ್, ಕೆ.ಎಸ್.ರವೀಂದ್ರ, ಪರಿಣಿತ್ ಪ್ರಭು, ರಾಹುಲ್, ಎಸ್.ಎ.ಗಣೇಶ್ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಭಾರ ಪ್ರಾಂಶುಪಾಲರಾದ ಡಾ.ಪಿ.ಜಿ.ಪುಷ್ಪರಾಣಿ, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ ಅಭಿನಂದಿಸಿದ್ದಾರೆ.

ಮೈಸೂರು ನಗರ ಅಂತರ ಕಾಲೇಜು ಪುರುಷರ ಹ್ಯಾಂಡ್‌ಬಾಲ್ ಪಂದ್ಯಾವಳಿ



ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 16.11.2024

ಹ್ಯಾಂಡ್‌ಬಾಲ್: ಮಹಾಜನ ಕಾಲೇಜು ದ್ವಿತೀಯ



• **ಕನ್ನಡಪ್ರಭ ವಾರ್ತೆ** ಮೈಸೂರು

ಎನ್‌ಐಇ (ಉತ್ತರ) ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಹ್ಯಾಂಡ್ ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ತಂಡವು ಭಾಗವಹಿಸಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ವಿಜೇತ ತಂಡದ ನಾಯಕ ಮಹದೇವಪ್ರಸಾದ್, ಪರಿಣಿತ್, ಮಿಥುನ್ ಪಿ.ಡಿ. ಪೊನ್ನಣ್ಣ, ಮೋಹಿಶ್ ಎಚ್.ಸಿಂಗ್, ಕೆ.ಎಸ್. ರವೀಂದ್ರ, ಪರಿಣಿತ್ ಪ್ರಭು, ರಾಹುಲ್, ಎಸ್.ಎ. ಗಣೇಶ್ ಅವರನ್ನು ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಡಾ.ಪಿ.ಜಿ. ಪುಷ್ಪರಾಣಿ, ದೈಹಿಕ ಶಿಕ್ಷಣ ನಿರ್ದೇಶಕ ಪಿ. ಎಸ್. ಮಧುಸೂಧನ ಅಭಿನಂದಿಸಿದ್ದಾರೆ.

ಆಂದೋಲನ
ದಿನ ಪತ್ರಿಕೆ

ಭಾನುವಾರ, 10 ನವೆಂಬರ್ 2024



ಬಹುಮಾನ...ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಮಹಿಳೆಯರ ಕರಾಟೆ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿತು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್.ಭಾಸ್ಕರ್ ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 10.11.2024

ಮಹಾಜನ ಕಾಲೇಜಿಗೆ ಮಹಿಳೆಯರ ಕರಾಟೆ ಸಮಗ್ರ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗವು ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಮಹಿಳೆಯರ ಕರಾಟೆ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು 2024-25ನೇ ಸಾಲಿನ ಮಹಿಳೆಯರ ಕರಾಟೆ ಸಮಗ್ರ ತಂಡ ಪ್ರಶಸ್ತಿ ಪಡೆದಿದೆ. ವಿಜೇತರನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎಚ್.ಎನ್. ಭಾಸ್ಕರ್, ಪಿ.ಎಸ್. ಮಧುಸೂಧನ ಅಭಿನಂದಿಸಿದ್ದಾರೆ.



MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಮವಾರ • ನವೆಂಬರ್ 11, 2024



ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗ ಆಯೋಜಿಸಿದ್ದ ಮಹಿಳಾ ಕರಾಟೆ ಸಮಗ್ರ ಚಾಂಪಿಯನ್‌ಶಿಪ್‌ನಲ್ಲಿ ವಿಜೇತರಾದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರಾದ ಎಂ.ಕೆ.ಸಂಜನಾ, ಮರಿಯಮ್ ಹಾಗೂ ಎಂ.ಕೆ.ಸ್ಪಂದನಾ ಅವರೊಂದಿಗೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ್, ಎಂಇಎಸ್ ಕಾರ್ಯದರ್ಶಿ ವಿಜಯಲಕ್ಷ್ಮಿ ಮುರಳೀಧರ್, ಬಿ.ಆರ್.ಜಯಕುಮಾರಿ, ಎಚ್.ಎನ್.ಭಾಸ್ಕರ್, ಸೋಮಶೇಖರ್ ಪಾಲ್ಗೊಂಡರು

STAR OF MYSORE

Sunday 10th November 2024

Winners of Overall Championship



SBRR Mahajana First Grade College, Jayalakshmipuram, Mysuru, won the Women Karate Overall Championship of MUICT 2024-25 with 20 points. The Tournament was organised by Department of Physical Education, University of Mysore (UoM), Mysuru. Seen in the picture are** (sitting from left) **Physical Education Director P.S. Madhusudhana, MES Hon. Secretary Dr. T. Vijayalakshmi Muralidhar, Principal Dr. B.R. Jayakumari and Physical Education Director Dr. H.N. Bhaskar;** (standing from left) **Somashekara, M.K. Sanjana, Mariyam and M.K. Spandana.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 5 ನವೆಂಬರ್ 2024

ಪುರುಷರ ಕುಸ್ತಿ ಸಮಗ್ರ ಪ್ರಶಸ್ತಿ



ಮೈಸೂರು ವಿಶ್ವವಿದ್ಯಾನಿಲಯ ಇವರ ವತಿಯಿಂದ ಆಯೋಜಿಸಿದ್ದ, ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2024–25ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದಿದ್ದಾರೆ. (ಎಡದಿಂದ ಬಲಕ್ಕೆ ಕುಳಿತಿರುವವರು): ಪಿ.ಎಸ್. ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಡಾ.ಟಿ.ವಿಜಯಲಕ್ಷ್ಮಿ, ಗೌರವ ಕಾರ್ಯದರ್ಶಿ, ಡಾ.ಬಿ.ಆರ್.ಜಯಕುಮಾರಿ, ಪ್ರಾಂಶುಪಾಲರು, ಡಾ. ಭಾಸ್ಕರ್ ಹೆಚ್.ಎನ್., ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ತಂಡದ ನಾಯಕ ಮಂಚಣ್ಣ (ನಿಂತಿರುವವರು) ಸೋಮಶೇಖರ ಕೆ, ಅಬ್ದುಲ್ ಅವೇಜ್‌ಖಾನ್, ಹೇಮಂತ್‌ಗೌಡ ಹೆಚ್.ಎ., ಪ್ರಥಮ್ ಜಿ.ಎಸ್., ಹರ್ಷವರ್ಧನ್ ಜಿ.ಎಸ್., ಗ್ಯಾಬ್ರಿಲ್, ಲಾಲು ಪ್ರಸಾದ್ ಅವರನ್ನು ಕಾಣಬಹುದು.

STAR OF MYSORE

Wednesday 20th November 2024

SBRR Mahajana boys shine in wrestling



SBRR Mahajana First Grade College (FGC), Jayalakshmipuram, won the Men's Wrestling Overall Championship of MUICT 2024-25 with 20 points. The tournament was organised by the Department of Physical Education, University of Mysore (UoM). Seen in the picture are** (sitting from left) **Physical Education Director P.S. Madhusudhana, Mahajana Education Society Hon. Secretary Dr. T. Vijayalakshmi Muralidhar, Principal Dr. B.R. Jayakumari, Physical Education Director Dr. H.N. Bhaskar and Team Captain S. Manchanna;** (standing from left) **Somashekara, Abdul Awez Khan, H.A. Hemanthgowda, G.S. Pratham, Harshavardhan, Gabril and Laluprasad.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 29.01.2025

ಮಹಾಜನ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಸಂಭ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಆಯೋಜಿಸಲಾಗಿತ್ತು.

ಭಾರತೀಯ ವಾಯುಸೇನೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಎನ್.ಆರ್. ರವಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಬೇರೆ ಬೇರೆ ದೇಶಗಳನ್ನು ನೋಡಿದಾಗ ಅಲ್ಲೆಲ್ಲ ಸರ್ವಾಧಿಕಾರ ಕಾಣುತ್ತೇವೆ. ಅಲ್ಲಿ ಪ್ರಜಾಪ್ರಭುತ್ವಕ್ಕೆ ಅಷ್ಟು ಪ್ರಾಮುಖ್ಯತೆ ಇಲ್ಲ. ಸರ್ವಾಧಿಕಾರ ಎಂಬುದು ದೇಶದ ಅಭಿವೃದ್ಧಿಗೆಎಂದೂಕಾರಣವಾಗುವುದಿಲ್ಲ. ನಾವು ಇಲ್ಲಿ ನಿಂತು ಮಾತನಾಡುತ್ತಿದ್ದೇವೆ ಎಂದರೆ ಅದಕ್ಕೆ ಸಂವಿಧಾನ ಕಾರಣ ಎಂದರು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರುಳೀಧರ್‌ಮಾತನಾಡಿ, ಜೀವನದಲ್ಲಿ ಯಾರಿಂದ ಪಾಠ ಕಲಿತರೂ ಅವರನ್ನು ಎಂದಿಗೂ ಮರೆಯಬಾರದು. ತಮಗೆ ಪಾಠ ಕಲಿಸಿದ ತಂದೆ- ತಾಯಿ, ಗುರುಗಳಿಗೆ ಸದಾ ಕೃತಜ್ಞರಾಗಬೇಕು. ಸಂವಿಧಾನ ರಚಿಸುವಾಗ ಡಾ.ಬಿ.ಆರ್. ಅಂಬೇಡ್ಕರ್ ಅವರು ತುಂಬಾ ಜವಾಬ್ದಾರಿ ವಹಿಸಿದ್ದರು.

ನಮ್ಮ ದೇಶದ ಸಂವಿಧಾನ ಬೇರೆ ದೇಶಗಳಿಗಿಂತ ಉತ್ತಮವಾಗಿದೆ. ನಾವು ಅನದ್ನು ಅಷ್ಟೇ ಜವಾಬ್ದಾರಿಯಿಂದ ನಡೆಸಿಕೊಂಡು, ಪ್ರತಿದಿನದ ಜೀವನದಲ್ಲಿ ಅಳವಡಿಸಿಕೊಂಡು ಹೋಗಬೇಕು ಎಂದು ಅವರು ಕಿವಿಮಾತು ಹೇಳಿದರು. ಈ ವೇಳೆ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ. ರೇಣುಕಾರ್ಯ, ಎನ್.ಸಿ.ಸಿ ಪ್ಲೈಯಿಂಗ್ ಅಧಿಕಾರಿ ಡಾ.ಪಿ.ಜಿ. ಪುಷ್ಪರಾಣಿ ಹಾಗೂ ಎನ್.ಸಿ.ಸಿ ಭೂ ದಳದ ಸಿಟಿಒ ಗಾಯತ್ರಿ ಇದ್ದರು

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 28 ಜನವರಿ 2025

ಮಹಾಜನ ಕಾಲೇಜಿನಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಬೆಂಗಳೂರಿನ ಭಾರತೀಯ ವಾಯುಸೇನೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಎನ್.ಆರ್.ರವಿ ಧ್ವಜಾರೋಹಣ ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಸ್ನಾತಕೋತ್ತರ ಕೇಂದ್ರ ನಿರ್ದೇಶಕರಾದ ಡಾ.ಪಿ.ಕೆ. ರೇಣುಕಾರ್ಯ, ಎನ್‌ಸಿಸಿ ಫ್ಲೈಯಿಂಗ್ ಆಫೀಸರ್ ಡಾ.ಪುಷ್ಪರಾಣಿ ಪಿ.ಜಿ. ಹಾಗೂ ಎನ್‌ಸಿಸಿ ಭೂದಳದ ಸಿಟಿಒ ಶ್ರೀಮತಿ ಗಾಯತ್ರಿ ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 14.01.2025

ಮಹಾಜನ ಕಾಲೇಜಿನಲ್ಲಿ ಪಿ.ಸುಭಾಷ್‌ಗೆ ಶ್ರದ್ಧಾಂಜಲಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 2023-24ನೇ ಸಾಲಿನಲ್ಲಿ ಅಂತಿಮ ಬಿ.ಕಾಂ ವ್ಯಾಸಂಗ ಮಾಡಿದ್ದ ಪಿ. ಸುಭಾಷ್ (ಎನ್ಸಿಸಿ ಮಾಜಿ ಕೆಡೆಟ್) ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಸುಭಾಷ್ ಒಬ್ಬ ವಿಧೇಯ ಹಾಗೂ ಅತ್ಯುತ್ತಮ ವಿದ್ಯಾರ್ಥಿಯಾಗಿದ್ದರು. ಇವರು 2023ರ ದೆಹಲಿಯಲ್ಲಿ ನಡೆದ 74ನೇ ಗಣರಾಜ್ಯೋತ್ಸವದ ಕರ್ತವ್ಯ ಪಥದಲ್ಲಿ ಭಾಗವಹಿಸಿ, ಡಿಡಿಜಿ ಕಮಾಂಡೆಷನ್ ಅವಾರ್ಡ್ ಪಡೆದ ಸಂದರ್ಭವನ್ನು ಸ್ಮರಿಸಿದರು.

ಅತೀ ಚಿಕ್ಕ ವಯಸ್ಸಿನಲ್ಲೇ ಅಕಾಲಿಕ ಮರಣಕ್ಕೆ ತುತ್ತಾದ ಸುಭಾಷ್ ಅವರಿಗೆ ಭಾವ ಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ



ನೀಡಲೆಂದು ಪ್ರಾರ್ಥಿಸಲಾಯಿತು. ಎನ್ಸಿಸಿ ಫ್ಲೈಯಿಂಗ್ ಆಫಿಸರ್‌ಡಾ. ಪಿ.ಜಿ. ಪುಷ್ಪಾರಾಣಿ ಮತ್ತು ಟಿಡಿಒ ವಿ. ಗಾಯತ್ರಿ ಅವರು ಅಗಲಿದ ಕೆಡೆಟ್, ಎನ್ಸಿಸಿಗೆ ನೀಡಿದ ಅಭೂತಪೂರ್ವ ಕೊಡುಗೆಯನ್ನು ಸ್ಮರಿಸಿದರು. ಶೈಕ್ಷಣಿಕ ಡೀನ್ ಹಾಗೂ ಎಲ್ಲ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಇದ್ದರು

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 26.01.2025

ಸುಭಾಷ್‌ಚಂದ್ರ ಬೋಸ್, ವಿವೇಕ ಜಯಂತಿ ಆಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನೇತಾಜಿ ಸುಭಾಷ್ ಚಂದ್ರಬೋಸ್ ಮತ್ತು ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು.

ಪ್ರಥಮ ವರ್ಷದ ಬಿ.ಎ. ವಿದ್ಯಾರ್ಥಿ ಎಸ್. ಪ್ರಸನ್ನ ಅವರು, ಸುಭಾಷ್ ಚಂದ್ರ ಬೋಸ್ ಅವರು ಭಾರತದ ಸ್ವಾತಂತ್ರ್ಯ ಚಳವಳಿಗೆ ನೀಡಿದ ಕೊಡುಗೆಗಳು ಮತ್ತು ಅವರ ಪಾತ್ರವನ್ನು ತಿಳಿಸಿದರು.

ಅಂತಿಮ ವರ್ಷದ ಬಿ.ಎ. ವಿದ್ಯಾರ್ಥಿನಿ ಎಂ.ಎನ್.ಸಂಜನಾ ಅವರು, ವಿಶ್ವಸಂತ ಹಾಗೂ ಯುವ ಪೀಳಿಗೆಯ ಆದರ್ಶ ಸಂತ ಶ್ರೇಷ್ಠರಾದ ಸ್ವಾಮಿ ವಿವೇಕಾನಂದರನ್ನು ಕುರಿತು ಮಾತನಾಡಿದರು. ಇದೇ ವೇಳೆ ಭಾರತೀಯ ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಮತ ದಾನ ಜಾಗೃತಿ ಹಾಗೂ ನೋಂದಣಿ ಪ್ರಕ್ರಿಯೆಯ ಭಾಗವಾಗಿ ಜಾಥಾ ಆಯೋಜಿಸ ಲಾಗಿತ್ತು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ ಮಾತನಾಡಿ, ಪ್ರಜಾ ಪ್ರಭುತ್ವದ ವ್ಯವಸ್ಥೆಯಲ್ಲಿ ಮತದಾನ ಮಹತ್ವದ ಪಾತ್ರ ನಿರ್ವಹಿಸುವ ನಿಟ್ಟಿನಲ್ಲಿ ಯುವ ಮತದಾರರು ಮತದಾನದ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಬಹಳ ಮುಖ್ಯವಾಗಿದೆ ಎಂದು ತಿಳಿಸಿ, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ಮತದಾನ ಪ್ರತಿಜ್ಞಾ ವಿಧಿ ಬೋಧಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಮೊದಲಾದವರು ಇದ್ದರು.



MFGE In the Eyes of the Press.....

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಗುರುವಾರ 6.02.2025

ಮಹಾಜನ ಕಾಲೇಜಿನಲ್ಲಿ ಅಸ್ಟ್ರೋನೈಟ್ ಕಾರ್ಯಕ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ಮತ್ತು ಭೂಗೋಳ ಶಾಸ್ತ್ರ ವಿಭಾಗಗಳ ಸಹಯೋಗದೊಂದಿಗೆ ಮಹಾಜನ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಆಸ್ಟ್ರೋ-ನೈಟ್ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಕುವೆಂಪುನಗರ ವಿಸ್ತಮ್ ಪಿ.ಯು. ಕಾಲೇಜಿನ ಉಪ ಪ್ರಾಂಶುಪಾಲ ವಸಂತ್ ಹೆಗಡೆ ಅವರು ಗ್ರಹಗಳ ಜೋಡಣೆ ಮತ್ತು ಬಾಹ್ಯಾಕಾಶಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಹಾಗೂ ವೀಕ್ಷಕರಿಗೆ ವಿವರವಾಗಿ ತಿಳಿಸಿದರು.

ಕಾರ್ಯಕ್ರಮವು ವಿಶ್ವವಿಜ್ಞಾನ, ಬಾಹ್ಯಾಕಾಶ ಪರಿಶೋಧನೆ ಮತ್ತು ಪುರಾಣಗಳ ಬಗ್ಗೆ ಚರ್ಚೆಗಳನ್ನು ಒಳಗೊಂಡಿತ್ತು. ಭಾಗವಹಿಸಿದ ಎಲ್ಲರೂ ದೂರದರ್ಶಕ ಮಸೂರದ ಮೂಲಕ ಚಂದ್ರನನ್ನು ವೀಕ್ಷಿಸಿದರು. ಅದರ ಒರಟಾದ ಭೂಪ್ರದೇಶ ಮತ್ತು ಪ್ರಾಚೀನ ಕುಳಿಗಳನ್ನು ಕಂಡು ಆಶ್ಚರ್ಯಚಕಿತರಾದರು. ಖಗೋಳ ಶಾಸ್ತ್ರಜ್ಞ ವಸಂತ್ ಹೆಗಡೆ ಅವರು ಶುಕ್ರ ಗ್ರಹ, ಶನಿ ಗ್ರಹ ಮತ್ತು ಅದರ ಉಂಗುರಗಳನ್ನು ಹಾಗೂ ಗುರು ಗ್ರಹ ಮತ್ತು ಅದರ ನಾಲ್ಕು ದೊಡ್ಡ ಚಂದ್ರಗಳಾದ ಐಒ, ಯುರೋಪಾ, ಗ್ಯಾನಿಮೀಡ್ ಮತ್ತು ಕ್ಯಾಲಿಸ್ಟೊ ಹಾಗೂ ಕೆಂಪು ಗ್ರಹವಾದ ಮಂಗಳ ಗ್ರಹವನ್ನು ನೆರೆದಿದ್ದವರೆಲ್ಲಾ ವೀಕ್ಷಕರಿಗೂ ತೋರಿಸಿದರು. ಇದನ್ನು ನೋಡಿದ ಮಕ್ಕಳು, ವಿದ್ಯಾರ್ಥಿಗಳು ಆನಂದಿಸಿದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಖಗೋಳ ಶಾಸ್ತ್ರಜ್ಞ ವಸಂತ್ ಹೆಗಡೆ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಎಸ್. ಪೂರ್ಣಿಮಾ, ಸಹ ಪ್ರಾಧ್ಯಾಪಕ ವಿ. ಗಾಯತ್ರಿ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ್, ವಿದ್ಯಾರ್ಥಿ ಸಂಯೋಜಕ ಅಭಯ್ ಮುರಳೀಧರ್, ಎಸ್. ಶ್ರೀನಿಧಿ, ಕೆ.ಎಸ್. ಸಮುದ್ಯತಾ, ಎನ್.ಡಿ. ಜೀವನ್, ಎಸ್. ಚೇತನ್ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 6 ಫೆಬ್ರವರಿ 2025

ಮಹಾಜನ ಕಾಲೇಜಿನಲ್ಲಿ ಆಸ್ಟ್ರೋ-ನೈಟ್ ವಿಶೇಷ ಕಾರ್ಯಕ್ರಮ



ಮಹಾಜನ ಕಾಲೇಜಿನಲ್ಲಿ ಆಸ್ಟ್ರೋ-ನೈಟ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು,ಫೆ.5-ಮೈಸೂರಿನ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ಮತ್ತು ಭೂಗೋಳ ಶಾಸ್ತ್ರ ವಿಭಾಗಗಳ ಸಹಯೋಗದೊಂದಿಗೆ ಮಹಾಜನ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಆಸ್ಟ್ರೋ-ನೈಟ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಕುವೆಂಪು ನಗರ ವಿಸ್ಡಮ್ ಪಿ.ಯು. ಕಾಲೇಜಿನ ಉಪ ಪ್ರಾಂಶುಪಾಲ ವಸಂತ್ ಹೆಗಡೆ ಆಗ ಮಿಸಿ, ಗ್ರಹಗಳ ಜೋಡಣೆ ಮತ್ತು ಬಾಹ್ಯಾ ಕಾಶಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳು ಹಾಗೂ ವೀಕ್ಷಕ ರಿಗೆ ವಿವರವಾಗಿ ತಿಳಿಸಿಕೊಟ್ಟರು. ಕಾರ್ಯ ಕ್ರಮವು ವಿಶ್ವವಿಜ್ಞಾನ, ಬಾಹ್ಯಾಕಾಶ ಪರಿಶೋಧನೆ ಮತ್ತು ಪುರಾಣಗಳ ಬಗ್ಗೆ ಚರ್ಚೆಗಳನ್ನು ಒಳಗೊಂಡಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರೂ ದೂರದರ್ಶಕ ಮಸೂರದ ಮೂಲಕ ಚಂದ್ರನನ್ನು ವೀಕ್ಷಿಸಿದರು. ಅದರ ಒರಟಾದ ಭೂಪ್ರದೇಶ ಮತ್ತು ಪ್ರಾಚೀನ ಕುಳಿಗಳನ್ನು ಕಂಡು ಆಶ್ಚರ್ಯ ಚಕಿತರಾದರು. ಭೂಮಿಯ ನೈಸರ್ಗಿಕ ಉಪಗ್ರಹದ ಭೂವೈಜ್ಞಾನಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಒಳನೋಟವುಳ್ಳ ವ್ಯಾಖ್ಯಾನಗಳನ್ನು ವಸಂತ್ ವಿವರಿಸಿದರು.

ಶುಕ್ರಗ್ರಹ, ಶನಿ ಗ್ರಹ ಮತ್ತು ಅದರ ಉಂಗುರಗಳು ಹಾಗೂ ಗುರುಗ್ರಹ, ಅದರ ನಾಲ್ಕು ದೊಡ್ಡ ಚಂದ್ರಗಳಾದ ಐಓ, ಯುರೋಪಾ, ಗ್ಯಾನೀಮೀಡ್, ಕ್ಯಾಲಿಸ್ಟೊ ಹಾಗೂ ಕೆಂಪು ಗ್ರಹವಾದ ಮಂಗಳ ಗ್ರಹವನ್ನು ಖಗೋಳಶಾಸ್ತ್ರಜ್ಞ ವಸಂತ್ ಹೆಗಡೆ ನೆರೆದಿದ್ದ ಎಲ್ಲಾ ವೀಕ್ಷಕರಿಗೂ ತೋರಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ ಬಿ.ಆರ್.ಜಯಕುಮಾರಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪೂರ್ಣಿಮಾ, ಸಹ ಪ್ರಾಧ್ಯಾಪಕ ಗಾಯತ್ರಿ, ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸೋಮ ಶೇಖರ್, ವಿದ್ಯಾರ್ಥಿ ಸಂಯೋಜಕರಾದ ಅಭಯ್ ಮುರಳೀಧರ್, ಶ್ರೀನಿಧಿ, ಸಮುಧ್ಯತಾ, ಜೀವನ್, ಚೇತನ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

STAR OF MYSORE

Sunday 16th February 2025

Exploring the Cosmos

Astro-Night at Mahajana College



Mysuru, Feb. 16- The Department of Physics and Department of Geography at SBRR Mahajana First Grade College, Jayalakshmipuram, Mysuru, had organised Astro-Night event recently at its Jagadish Prasad Stadium.

Vasant Hegde, Vice-Principal, Wisdom PU College, Kuvempunagar, who was the resource person, spoke about planetary alignments and space-related topics. The event also included discussions on cosmology, space exploration and mythology.

The main attraction was the celestial viewing session, where participants observed the Moon. Through the lens of the telescope, participants marvelled at the intricate features of it, unveiling its rugged terrain and ancient craters.

Vasant provided insightful commentary, shedding light on the geological history of Earth's natural satellite.

The phases of Venus planet were also shown and explained by the speaker. Amidst the twilight, Saturn and its rings were shown for a short time before it set below the horizon.

Looking at Jupiter and 4 of its biggest Moons: Io, Europa, Ganymede and Callisto, was one of the biggest highlight of the event. People also enjoyed seeing Mars, the red planet, which is our neighbour.

As the grand finale, the telescope turned towards the Orion Nebula, a celestial cradle where stars are born.

Attendees were spellbound by the swirling clouds of gas and dust, a testament to the perpetual cycle of creation and destruction in the cosmos. Many attendees, especially children, showed great interest in the observations and asked various questions about space and science.

Dr. B.R. Jayakumari, Principal, SBRR Mahajana First Grade College, Dr. S. Poornima, Head, Department of Physics, Dr. S. Somashekar, Head, Department of Geography, V. Gayathri, Assistant Professor, Department of Physics, student coordinators Abhay Muralidhar, S. Shreenidhi, K.S. Samudyatha, N.D. Jeevan and S. Chethan, teaching, non-teaching staff and students along with localites attended the event.

ಆಂದೋಲನ
ದಿನ ಪತ್ರಿಕೆ

ಭಾನುವಾರ, 9 ಫೆಬ್ರವರಿ 2025

ಮಧ್ಯಮ ವರ್ಗದ ಕೇಂದ್ರ ಬಜೆಟ್: ಡಾ.ಕೃಷ್ಣಯ್ಯಗೌಡ



ಮೈಸೂರು:ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್‌ನಿಂದ ಮಧ್ಯಮ ವರ್ಗದವರಿಗೆ ಬಹಳ ಅನುಕೂಲವಾಗಲಿದೆ. ನೀರಾವರಿ, ಕೃಷಿ ಬೆಳೆ ವೈವಿಧ್ಯತೆ ಮತ್ತು ಉಗ್ರಾಣ ನಿರ್ಮಾಣಗಳ ಬಗ್ಗೆ ಹೆಚ್ಚು ಗಮನ ಹರಿಸಲಾಗಿದೆ ಎಂದು ಆರ್ಥಿಕ ಚಿಂತಕ ಡಾ.ಎಚ್.ಆರ್.ಕೃಷ್ಣಯ್ಯಗೌಡ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗ, ಐಕ್ಯೂಎಸಿ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಕೇಂದ್ರ ಬಜೆಟ್ 2025-26 ಒಂದು ಅವಲೋಕನ' ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಅಭಿವೃದ್ಧಿ ಮತ್ತು ಸಮತೆ ಒಂದು ಗಾಡಿಯ ಎರಡು ಚಕ್ರಗಳು. ಎಲ್ಲ ಕ್ಷೇತ್ರಗಳೂ ಸಮತೋಲಿತವಾಗಿ ಅಭಿವೃದ್ಧಿಯಾದರೆ ರಾಷ್ಟ್ರದ ಸಮಗ್ರ ಪ್ರಗತಿ ಸಾಧ್ಯವಾಗುತ್ತದೆ ಎಂದರು.

ಈ ನಿಟ್ಟಿನಲ್ಲಿ ಪ್ರತಿವರ್ಷದ ಬಜೆಟ್ ರೂಪುಗೊಳ್ಳಬೇಕು, ಬಜೆಟ್ ಕುರಿತಾಗಿ ಪ್ರತಿವರ್ಷ ಎಲ್ಲರೂ ಚರ್ಚಿಸಿ, ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸುವ ವಿಷಯವಾಗಿದೆ. ಒಂದು ದೇಶದ ನರನಾಡಿ ಯೆಂದರೆ ಹಣ. ಅದು ವ್ಯಕ್ತಿಯಿಂದ ಹಿಡಿದು, ರಾಷ್ಟ್ರದ ದೃಷ್ಟಿಯವರೆಗೂ ಒಂದೇ ಆಗಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶು ಪಾಲರಾದ ಡಾ.ಬಿ.ಆರ್.ಜಯಕುಮಾರಿ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎನ್. ವೆಂಕಟಲಕ್ಷ್ಮಿ, ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಆರ್. ಸಿದ್ದಪ್ಪ, ಸಿ.ಎಂ. ಚಲುವೇಗೌಡ, ಡಾ.ಪಿ.ಜಿ.ಪುಷ್ಪರಾಣಿ, ಕಾಲೇಜಿನ ಕೃಷ್ಣಣಿಕ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ,ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 9.02.2025

ಕ್ಯಾನ್ಸರ್ ವೃದ್ಧಿಸಲು ಆಧುನಿಕ ಜೀವನ ಶೈಲಿಯೇ ಕಾರಣ

ಭಾರತ್ ಕ್ಯಾನ್ಸರ್ ಆಸ್ಪತ್ರೆಯ ವೈದ್ಯ ಡಾ.ರಕ್ಷಿತ್ ಶೃಂಗೇರಿ ಅಭಿಮತ | ಮಹಾಜನ ಕಾಲೇಜಿನಲ್ಲಿ ಕ್ಯಾನ್ಸರ್ ಮಹಾಮಾರಿಯ ಬಗ್ಗೆ ಜಾಥಾ

• ಕನ್ನಡಪ್ರಭ ವಾರ್ತೆ ಮೈಸೂರು

ಮಹಾಜನ ಕಾಲೇಜಿನಲ್ಲಿ ಶನಿವಾರ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಕಾಲೇಜಿನ ಎನ್‌ಎಸ್‌ಎಸ್, ಎನ್‌ಸಿಸಿ, ಕ್ರೀಡಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ, ಅಧ್ಯಾಪಕೇತರು ಕ್ಯಾನ್ಸರ್ ಅರಿವು ಕುರಿತು ಜಯಲಕ್ಷ್ಮಿಪುರಂ ಬೀದಿಗಳಲ್ಲಿ ಕ್ಯಾನ್ಸರ್‌ಮಹಾಮಾರಿಯ ಬಗ್ಗೆ ಅರಿವು ಮೂಡಿಸಲಾಯಿತು.

ಭಾರತ್ ಕ್ಯಾನ್ಸರ್ ಆಸ್ಪತ್ರೆಯ ವೈದ್ಯರು, ಸರ್ಜಿಕಲ್‌ಆಂಕೊಲಾಜಿಸ್ಟ್ ಮತ್ತು ರೋಬೋಟಿಕ್ ಸರ್ಜನ್ ಹಾಗೂ ಮಹಾಜನ ಹಿರಿಯ ವಿದ್ಯಾರ್ಥಿ ಡಾ. ರಕ್ಷಿತ್ ಶೃಂಗೇರಿ, ರೇಡಿಯೇಷನ್ ಆಂಕೊಲಾಜಿಸ್ಟ್ ಡಾ. ವಿನಯ್ ಕುಮಾರ್‌ಮುತ್ತಗಿ ಅವರೊಂದಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.

ನಂತರ ವಾರದ ಸಮಾವೇಶದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಡನಾಡಿದ ಅವರು, ಕ್ಯಾನ್ಸರ್ ವರ್ಷದಿಂದವರ್ಷಕ್ಕೆ ಬಹುವೇಗವಾಗಿ ಹರಡುತ್ತಿದೆ.



ಮಹಾಜನ ಕಾರೇಜಿನಲ್ಲಿ ಕ್ಯಾನ್ಸರ್ ಮಹಾಮಾರಿಯ ಬಗ್ಗೆ ಜಾಥಾ ನಡೆಯಿತು. ಡಾ. ರಕ್ಷಿತ್ ಶೃಂಗೇರಿ, ರೇಡಿಯೇಷನ್ ಆಂಕೊಲಾ ಜಿಸ್ಟ್ ಡಾ. ವಿನಯ್ ಕುಮಾರ್ ಇದ್ದರು.

ಕ್ಯಾನ್ಸರ್ ಮಾರಣಾಂತಿಕ ಕಾಯಿಲೆಯ ಪಟ್ಟಿಯಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಈ ರೋಗದಬಗ್ಗೆನಾವುಹೆಚ್ಚಿತ್ತುಕೊಂಡುಸಮಾಜವನ್ನು ಎಚ್ಚರಿಸಬೇಕಾದ ಅನಿವಾರ್ಯತೆ ಯುವ ಜನತೆಯ ಮೇಲಿದೆ. ಧೂಮಪಾನ, ಮದ್ಯಪಾನ, ಮಾನಸಿಕ ಒತ್ತಡ, ಪರಿಸರ ಮಾಲಿನ್ಯ ಹಾಗೂ ಜಂಕ್ ಫುಡ್ ನಿಂದ ತೀವ್ರವಾಗಿ ಕ್ಯಾನ್ಸರ್ ಹರಡುತ್ತಿದೆ. 2035ರ ವೇಳೆಗೆ ಒಟ್ಟು ಜನಸಂಖ್ಯೆಯಲ್ಲಿ ಶೇ. 50ರಷ್ಟು ಜನ ಕ್ಯಾನ್ಸರ್ ರೋಗಕ್ಕೆತುತ್ತಾಗುತ್ತಾರೆ ಎಂಬ ಸಮೀಕ್ಷೆ ಇದೆ. ಆದ್ದರಿಂದ ಯುವಕರು ಶಿಸ್ತಿನಿಂದ ಕೂಡಿದ ಜೀವನವನ್ನು ರೂಪಿಸಿಕೊಂಡು ಪರಿಸರ ಮಾಲಿನ್ಯವನ್ನು ತಡೆಗಟ್ಟಿದರೆ ರೋಗವನ್ನು ನಿಯಂತ್ರಣಕ್ಕೆ ತರಬಹುದು ಎಂದರು.

ಬಹಳ ಜನರಲ್ಲಿ ಕ್ಯಾನ್ಸರ್‌ಬಂದರೆ ಜೀವನವೇ ಮುಗಿದೇ ಹೋಯಿತು ಎನ್ನುವ ಭಾವನೆ ಇದೆ, ಇದು ಸರಿಯಲ್ಲ, ಪ್ರಾರಂಭದಲ್ಲಿ ಗುರುತಿಸಿ ಚಿಕಿತ್ಸೆ ನೀಡಿದರೆ ಗುಣವಾಗುತ್ತದೆ ಎಂಬ ಅರಿವಿನ ಕೊರತೆಯಿಂದ ಪ್ರತಿ ವರ್ಷ ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಪ್ರಪಂಚದಲ್ಲಿ ಭಾರತ ಕ್ಯಾನ್ಸರ್‌3ನೇ ಸ್ಥಾನ ಪಡೆದಿದೆ. ಗ್ರಾಮೀಣ ಪ್ರದೇಶದ ಜನರಿಗಿಂತ ನಗರ ಪ್ರದೇಶಗಳ ಜನಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಇದಕ್ಕೆ ಆಧುನಿಕ ಜೀವನ ಶೈಲಿಯೇ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಕ್ಯಾನ್ಸರ್ ನಂತಹ ಭಯಾನಕರೋಗವನ್ನು ತಡೆಗಟ್ಟುವಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ನಮ್ಮೊಂದಿಗೆ ಕೈಜೋಡಿಸಿ ನಿರಂತರವಾಗಿ ಅರಿವು ಕಾರ್ಯಕ್ರಮ ನಡೆಸಿಕೊಂಡು ಬಂದಿರುವುದು ಶ್ಲಾಘನೀಯವಿದರು. ಭಾರತ್ ಕ್ಯಾನ್ಸರ್‌ವೈದ್ಯರಾದ ಡಾ. ರಕ್ಷಿತ್ ಶೃಂಗೇರಿ ಮತ್ತು ಡಾ. ವಿನಯ್‌ಕುಮಾರ್ ಮುತ್ತಗಿ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಅಧ್ಯಾಪಕ, ಅಧ್ಯಾಪಕೇತರ ಹಾಗೂ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

ಆಂದೋಲನ
ದಿನ ಪತ್ರಿಕೆ

ಭಾನುವಾರ, 2 ಫೆಬ್ರುವರಿ 2025



ಡಾ.ಬಿ.ಆರ್.ಜಯಕುಮಾರಿ ಅವರಿಗೆ ಸನ್ಮಾನ...

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರದ ಸಮಾವೇಶದಲ್ಲಿ ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ನಾಮ ನಿರ್ದೇಶನಗೊಂಡಿರುವ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರನ್ನು ಸನ್ಮಾನಿಸಲಾಯಿತು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾ ಧಿಕಾರಿ ಪ್ರೊ.ಪಿ.ಸರೋಜಮ್ಮ, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್.ಭಾಸ್ಕರ್, ಗ್ರಂಥಪಾಲಕರಾದ ಎಂ. ವೀಣಾ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಎಂ.ಎನ್.ವೆಂಕಟಲಕ್ಷ್ಮೀ, ಸಹಾಯಕ ಪ್ರಾಧ್ಯಾಪಕರಾದ ಡಾ.ಪಿ.ಜಿ.ಪುಷ್ಪರಾಣಿ, ಪರೀಕ್ಷಾಂಗ ನಿಯಂತ್ರಣಾಧಿಕಾರಿ ಶ್ರುತಿ ಪೂಣ್ಣಚ್ಚ, ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ದೊಡ್ಡರಸಯ್ಯ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಎಂ.ನಾಗೇಶ, ಪಿ.ಎಂ.ಕಿರಣ್ ಕುಮಾರ್, ಜೆ.ಮನೋಜ್ ಕುಮಾರ್ ಇತರರು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 2.02.2025

ಮೈವಿವಿ ಸಿಂಡಿಕೇಟ್‌ಗೆ ನಾಮ ನಿರ್ದೇಶನ

• ಕನ್ನಡಪ್ರಭ ವಾರ್ತೆ ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿ ಕೇಟ್ ಸದಸ್ಯರಾಗಿ ನಾಮನಿರ್ದೇಶನ ಗೊಂಡಿರುವ ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯ ಕುಮಾರಿ ಅವರಿಗೆ ಮಹಾಜನ ವಿದ್ಯಾ ಸಂಸ್ಥೆ, ವಿದ್ಯಾ ಸಂಸ್ಥೆಯ ಅಂಗಸಂಸ್ಥೆಗಳು, ಹಿರಿಯ ಅಧ್ಯಾ ಪಕರು ಹಾಗೂ ಕನ್ನಡ ವಿಭಾಗದ ವತಿಯಿಂದ ಸನ್ಮಾನಿ ಸಲಾ ಯಿತು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯ ದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀ ಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ. ರೇಣುಕಾರ್ಯ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಸಹ ಪ್ರಾಧ್ಯಾಪಕಿ ಡಾ. ವಿನೋದಮ್ಮ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಎಚ್.ಎನ್. ಭಾಸ್ಕರ್‌ಗ್ರಂಥಪಾಲಕಿ ಎಂ. ವೀಣಾ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್. ವೆಂಕಟಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕ ಡಾ.ಪಿ.ಜಿ. ಪುಷ್ಪರಾಣಿ, ಪರೀಕ್ಷಾಂಗ ನಿಯಂತ್ರಣಾಧಿಕಾರಿ ಶ್ರುತಿ ಪೂಣ್ಣಚ್ಚ, ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಿ. ದೊಡ್ಡರಸಯ್ಯ, ಕನ್ನಡ ವಿಭಾಗದಸಹಾಯಕ ಪ್ರಾಧ್ಯಾಪಕರಾದ ಎಂ. ನಾಗೇಶ, ಸಿ.ಎಂ. ಕಿರಣ್ ಕುಮಾರ್, ಜೆ. ಮನೋಜ್ ಕುಮಾರ್ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ವಿಜಯವಾಣಿ

ಕನ್ನಡಿಗರ ಧ್ವನಿ

ಭಾನುವಾರ 2 ಫೆಬ್ರವರಿ 2025
2 FEBUARY 2025



ವಿಜಯವಾಣಿ ಚಿತ್ರ

ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಪ್ರಾಂಶು ಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರನ್ನು ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಸನ್ಮಾನಿಸಲಾಯಿತು. ಡಾ.ತಿಮ್ಮೇಗೌಡ ಇತರರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 13.02.2025

ಮಹಾಜನ ಕಾಲೇಜಿನಲ್ಲಿ ವೃತ್ತಿಜೀವನದ ಯಶಸ್ಸಿಗೆ ಕಲ್ಪನೆಯ ಸ್ಫೋಟ ಕುರಿತು ಸಂವಾದ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರ ಮತ್ತು ಆಡಳಿತ ವ್ಯವಹಾರ ಆಡಳಿತ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ವೃತ್ತಿಜೀವನದ ಯಶಸ್ಸಿಗೆ ಕಲ್ಪನೆಯ ಸ್ಫೋಟ ಕುರಿತು ಸಂವಾದ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಇಟಿ ಮಾರ್ಕ್ ಅಕಾಡೆಮಿಯ ಸಂಸ್ಥಾಪಕ ಮತ್ತು ಶಿಕ್ಷಣ ತಜ್ಞ ಜಯತೀರ್ಥ ಕುಲಕರ್ಣಿ ಭಾಗವಹಿಸಿ ಮಾತನಾಡಿ, ಇಂಟರ್ನ್‌ಶಿಪ್ ವೆಬ್ ಸೈಟ್ ಗಳ ಪ್ರಾಮುಖ್ಯತೆ ಮತ್ತು ಲಿಂಕ್ಡ್ ಇನ್ ಪ್ರೊಫೈಲ್ ಗಳನ್ನು ಹೇಗೆ ರಚಿಸುವುದು, ವಿವಿಧ ಎಐ ಪರಿಕರಗಳನ್ನು ಉಪಯೋಗಿಸಿ ಅಪ್ಲಿಕೇಶನ್ ಗಳನ್ನು ಹೇಗೆರಚಿಸುವುದು, ವಿವಿಧ ಉದ್ಯೋಗ ಪೋರ್ಟಲ್ ಗಳ ಬಗ್ಗೆ ವಿವರವಾಗಿ ತಿಳಿಸಿದರು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ವಾಣಿಜ್ಯ ಮತ್ತು ವ್ಯವ ಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್ ಮತ್ತು ಸಂಯೋಜ ಕರಾದ ಬಿ.ಎ. ಕೀರ್ತಿರಾಜ್ ಕಮಲ್, ಅಧ್ಯಾಪಕಿ ಕಾವ್ಯಶ್ರೀ ಇದ್ದರು.

ವಿದ್ಯಾರ್ಥಿ ಸಂಯೋಜಕರಾದ ಧನುಷ್ ಹೊನ್ನಾಳ್, ಎಚ್.ಎಸ್. ಮಾನ್ಯ, ಆರ್. ಶ್ರೇಯಸ್, ಸಂಜನಾ ವಿ.ಶಾಖಾಪುರಹಾಗೂವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿನಿ ಆರ್. ಛಾಯಾ ಸ್ವಾಗತಿಸಿ, ವಂದಿಸಿದರು.

MFGE In the Eyes of the Press.....

ಅಂಚೋಲನ
ದಿನಪತ್ರಿಕೆ

ಶನಿವಾರ, 22 ಫೆಬ್ರವರಿ 2025

ಫೆ.24, 25ರಂದು ಅಂತಾರಾಷ್ಟ್ರೀಯ ವಿಚಾರಸಂಕಿರಣ



ಮೈಸೂರು: ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆಯ ಸಹಯೋಗದಲ್ಲಿ ಫೆ.24, 25ರಂದು 'ಕನ್ನಡವೆಂದರೆ ಬರಿ ನುಡಿಯಲ್ಲ ಆದಕಿದೆ ವಿಜ್ಞಾನದ ಸ್ಪರ್ಶ' ವಿಷಯ ಕುರಿತ ಎರಡು ದಿನಗಳ ಅಂತಾ ರಾಷ್ಟ್ರೀಯ ವಿಚಾರಸಂಕಿರಣವನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ನಡೆಯಲಿರುವ ವಿಚಾರ ಸಂಕಿರಣವನ್ನು ಫೆ.24ರಂದು ಬೆಳಿಗ್ಗೆ 9.30ಕ್ಕೆ ಬಹುಮುಖಿ ಚಿಂತಕ ಡಾ.ನರಹಳ್ಳಿ ಬಾಲ ಸುಬ್ರಹ್ಮಣ್ಯ ಉದ್ಘಾಟಿಸಲಿದ್ದಾರೆ. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್.ವಿಜಯಕುಮಾರಿ, ಅಭಿನವ ಸಂಸ್ಥೆಯ ರವಿಕುಮಾರ ಉಪಸ್ಥಿತರಿರಲಿದ್ದಾರೆ ಎಂದು ವಿವರಿಸಿದರು.

ಅಂದು ಬೆಳಿಗ್ಗೆ 10.30ಕ್ಕೆ 'ಕನ್ನಡ ಪ್ರಜ್ಞೆಯ ವಿಕಾಸ ಮತ್ತು ವಿಜ್ಞಾನದ ಪಾತ್ರ' ಕುರಿತು ಜೀವವಿಜ್ಞಾನ ವಿಷಯ ತಜ್ಞ ಡಾ.ಕೆ.ಪುಟ್ಟಸ್ವಾಮಿ, ಬೆಳಿಗ್ಗೆ 11.30ಕ್ಕೆ 'ತಂತ್ರಜ್ಞಾನದ ಬೆಳವಣಿಗೆಗಳು ಮತ್ತು ಕನ್ನಡ ಸಾಹಿತ್ಯ ಸಂವೇದನೆಯ ಸ್ವರೂಪ' ಕುರಿತು ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ.ಸಿ.ಪಿ.ರವಿಕುಮಾರ್, 'ಕ್ವಾಂಟಂ ಫಿಸಿಕ್ಸ್-ಸಾಹಿತ್ಯಾನುಭವ' ಕುರಿತು ತಿರುಪತಿ ಐಐಟಿಯ ಭೌತಶಾಸ್ತ್ರ ಪ್ರಾಧ್ಯಾಪಕ ಡಾ.ಅರವಿಂದ ಮಾತನಾಡಲಿದ್ದಾರೆ ಎಂದು ಹೇಳಿದರು.

ಮಧ್ಯಾಹ್ನ 2 ಗಂಟೆಗೆ 'ಪಠ್ಯದ ಅರಿವು ಮತ್ತು ಅನುಭವದ ಗ್ರಹಿಕೆಗಳು' ಕುರಿತು ವನ್ಯಜೀವಿ ತಜ್ಞರಾದ ಕೃಪಾಕರ ಸೇನಾನಿ, ಮಧ್ಯಾಹ್ನ 2.45ಕ್ಕೆ 'ತಂತ್ರಜ್ಞಾನದ ಬೆಳವಣಿಗೆಗಳು ಮತ್ತು ಬಹುಮುಖಿತೆಯ ನಾಶ' ಕುರಿತು ಮಾರುಕಟ್ಟೆ ತಂತ್ರಜ್ಞಾನ ಪರಿಣತರಾದ ಸ್ನೇಹ ನರಹಳ್ಳಿ ಅಮೆರಿಕದಿಂದ ವರ್ಚುವಲ್ ಮೂಲಕ ಮಾತನಾಡಲಿದ್ದಾರೆ. 'ಸಾಹಿತ್ಯ ಮತ್ತು ವಿಜ್ಞಾನ ಸಂಬಂಧಾಂತರ' ಕುರಿತು ದರ್ಶನ ಮೀಮಾಂಸಕ ಲಕ್ಷ್ಮೀಶ ತೋಳ್ಪಾಡಿ ಮಾತನಾಡಲಿದ್ದಾರೆ ಎಂದರು.

ಫೆ.25ರಂದು ಬೆಳಿಗ್ಗೆ 9.30ಕ್ಕೆ 'ಸೃಜನಶೀಲ ಪ್ರಕ್ರಿಯೆ ಮತ್ತು ತಂತ್ರಜ್ಞಾನದ ಸಾಧಕ-ಬಾಧಕಗಳು' ಕುರಿತು ಬುಕ್ ಬ್ರಹ್ಮ ಸಂಪಾದಕ ದೇವು ಪತ್ತಾರ್ ಮಾತನಾಡಲಿದ್ದಾರೆ. ಎಐ ವಿಷಯ ಪರಿಣತರಾದ ಮೇಘನಾ ಸುಧೀಂದ್ರ, ಲೇಖಕ ಟಿ.ಜಿ.ಶ್ರೀನಿಧಿ, ಕಥನಗಾರ್ತಿ ಪೂರ್ಣಿಮಾ ಮಾಳಗಿಮನೆ ಭಾಗವಹಿಸಲಿದ್ದಾರೆ. ಬೆಳಿಗ್ಗೆ 10.45ಕ್ಕೆ 'ವಿಜ್ಞಾನ ಭಾಷೆಯಾಗಿ ಕನ್ನಡದ ಸವಾಲುಗಳು ಕುರಿತು ಇಟಲಿಯ ಭೌತಶಾಸ್ತ್ರ ಪರಿಣತ ರಂಜಿತ್, ಕೃಷಿ ಸಾಹಿತ್ಯ ಕುರಿತು ಚನ್ನೇಶ್, 'ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಒಂದು ಸಮಾಲೋಚನೆ' ವಿಚಾರ ಕುರಿತು ಅಮೆರಿಕ ಕನ್ನಡ ಸಾಹಿತ್ಯ ರಂಗದ ಅಧ್ಯಕ್ಷ ಮೈ.ಶ್ರೀನಟರಾಜ ಮಾತನಾಡಲಿದ್ದಾರೆ ಎಂದು ವಿವರಿಸಿದರು.

ಅಂದು ಮಧ್ಯಾಹ್ನ 12ಕ್ಕೆ 'ವಿಜ್ಞಾನ ಸಾಹಿತ್ಯವನ್ನು ಜನಪ್ರಿಯಗೊಳಿಸುವ ಮಾರ್ಗೋಪಾಯಗಳು' ಕುರಿತು ಸಮುದಾಯ ಶಿಕ್ಷಣ ತಜ್ಞ ಕೊಳ್ಳೇಗಾಲ ಶರ್ಮ, ಯಾವುದು ಜ್ಞಾನ? ಯಾವುದು ವಿಜ್ಞಾನ ? ಕುರಿತು ಎಸ್.ಎ.ಐ.ಇಸ್ಮಾಯಿಲ್ ಮಾತನಾಡಲಿದ್ದಾರೆ. ಮಧ್ಯಾಹ್ನ 2.25ರಿಂದ 3 ಗಂಟೆಯವರೆಗೆ ಮುಕ್ತ ಸಂವಾದ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಲೇಖಕ ನಾಗೇಶ್ ಹೆಗಡೆ ಸಮಾರೋಪ ಭಾಷಣ ಮಾಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

MFGE In the Eyes of the Press.....

ಆಂದೋಲನ
ದಿನಪತ್ರಿಕೆ

ಮಂಗಳವಾರ, 25 ಫೆಬ್ರವರಿ 2025

'ಧರ್ಮದಷ್ಟು ಚರ್ಚೆಗಳು ವಿಜ್ಞಾನದ ಬಗ್ಗೆ ನಡೆಯುತ್ತಿಲ್ಲ'

ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ

ಮೈಸೂರು: ಪ್ರಸ್ತುತ ದಿನಗಳಲ್ಲಿ ರಾಜಕೀಯ ಮತ್ತು ಧರ್ಮದ ಬಗ್ಗೆ ನಡೆಯುತ್ತಿರುವ ಚರ್ಚೆಗಳು ತೋರುತ್ತಿರುವ ಆಸಕ್ತಿ, ವಿಜ್ಞಾನದ ಬೆಳವಣಿಗೆಯ ಬಗ್ಗೆ ಹೆಚ್ಚಾಗಿ ಕಂಡುಬರುತ್ತಿಲ್ಲ ಎಂದು ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದರು.

ನಗರದ ಜಯಲಕ್ಷ್ಮಿ ಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರಿನ ಸಹಯೋಗದಲ್ಲಿ ಆಯೋಜಿಸಿರುವ 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ' ವಿಷಯ ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಐದು ವರ್ಷಗಳಲ್ಲಿ ವಿಜ್ಞಾನದಲ್ಲಿ ಹಲವು ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಆದರೆ, ಇದರ ಬಗ್ಗೆ ಯಾರೂ ಹೆಚ್ಚು ಚಿಂತಿಸುತ್ತಿಲ್ಲ. ನಾವೆಲ್ಲರೂ ವಿಜ್ಞಾನವನ್ನು ಓದುತ್ತಿರುತ್ತೇವೆ ಮತ್ತು ಚರ್ಚಿಸುತ್ತೇವೆ. ಆದರೆ, ಮನೆಗಳಲ್ಲಿ ಮೌಢ್ಯತೆಯ ಆಚರಣೆಯನ್ನು ನಿಲ್ಲಿಸುವುದಿಲ್ಲ ಎಂದು ವಿಷಾದಿಸಿದರು.

ಮೊಬೈಲ್‌ನಿಂದ ಜಗತ್ತಿನಲ್ಲಿ ಹಲವು ಬದಲಾವಣೆಗಳಾಗಿರುವುದನ್ನು ಕಾಣಬಹುದು. ಮೊಬೈಲ್ ಎಷ್ಟು ಉಪಯುಕ್ತವೋ ಮನುಷ್ಯನ ಆರೋಗ್ಯ, ಸಂಬಂಧಗಳು, ಭಾವನೆಗಳ ಮೇಲೆ ಅಷ್ಟೇ ಅಪಾರವಾದ ಪರಿಣಾಮ ಬೀರಿದೆ. ವಿಜ್ಞಾನ ಸುಖವನ್ನು ನೀಡಿ ಸಂತೋಷವನ್ನು, ಭಾವನೆಯನ್ನು ಕಿತ್ತುಕೊಳ್ಳುತ್ತಿದೆ ಎಂದು ವಿಶ್ಲೇಷಿಸಿದರು.



ಮುಂದಿನ ದಿನಗಳಲ್ಲಿ ಆರೋಗ್ಯಕರ ಸಮಾಜವನ್ನು ಕಟ್ಟಬೇಕಾದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಆವಶ್ಯಕತೆ ಇದೆ. ಪ್ರಸುತ್ತ ದಿನಗಳಲ್ಲಿ ಮಾರುಕಟ್ಟೆಯು ಮನುಷ್ಯನ ದಾಹ, ದುರಾಸೆಯನ್ನು ಹೆಚ್ಚಿಸುತ್ತಿದೆ. ಭವಿಷ್ಯವನ್ನು ಭೀಕರವಾದ ಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದೆ. ಆದ್ದರಿಂದ ಎಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ.

-ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಚಿಂತಕ

ಪ್ರಾಚೀನ ಕಾಲದಿಂದಲೂ ವಿಜ್ಞಾನಕ್ಕೂ, ಸಾಹಿತ್ಯಕ್ಕೂ ಹೆಚ್ಚಿನ ಸಂಬಂಧವಿರುವುದನ್ನು ಕಾಣಬಹುದು. ಕುವೆಂಪು ವಿಜ್ಞಾನಿಯನ್ನು ಆಧುನಿಕ ಭಗೀರಥ ಎಂದು ಕರೆದರು. ಮೌಢ್ಯವನ್ನು ಕಳೆದು ಹೊಸ ಸಮಾಜದ ಮತ್ತು ಸಮ ಸಮಾಜದ ನಿರ್ಮಾಣಕ್ಕೆ ಕಾರಣವಾದವರು. ಒಬ್ಬ ವಿಜ್ಞಾನಿ ಮಾಡುವ ಕೆಲಸವನ್ನು ಶಿವರಾಮ ಕಾರಂತರು ಮಾಡಿದ್ದಾರೆ. ಇದರಿಂದ ಸಾಹಿತ್ಯಕ್ಕೂ ವಿಜ್ಞಾನ ಅಂತರ್ ಸಂಬಂಧವಿದೆ ಎಂಬುದನ್ನು ತಿಳಿಯಬಹುದು ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ವಿಜಯಲಕ್ಷ್ಮಿ ಮುರಳೀಧರ್, ಅಭಿನವ ಬೆಂಗಳೂರಿನ ರವಿಕುಮಾರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ, ಕನ್ನಡ ಸಹ ಪ್ರಾಧ್ಯಾಪಕರಾದ ಡಾ.ವಿನೋದಮ್ಮ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 22.02.2025

24, 25 ರಂದು ಮಹಾಜನ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಸಿದ್ಧತೆ

• **ಕನ್ನಡಪ್ರಭ ವಾರ್ತೆ** ಮೈಸೂರು ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಹಾಗೂ ಬೆಂಗಳೂರಿನಅಭಿನವಸಂಯುಕ್ತವಾಗಿ ಫೆ.24 ಮತ್ತು 25 ರಂದು ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಕನ್ನಡವೆಂದರೆ ಬರಿ ನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರಸಂಕಿರಣಆಯೋಜಿಸಲಾಗಿದೆ ಎಂದು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ಈವಿಚಾರಸಂಕಿರಣದಲ್ಲಿಇದರಲ್ಲಿ ದೇಶ ವಿದೇಶಗಳ ಸುಮಾರು 250 ಮಂದಿ ಪಾಲ್ಗೊಳ್ಳಲಿದ್ದಾರೆ,. ಈಗಾಗಲೇ ಸುಮಾರು 160 ಮಂದಿ ನೋಂದಾಯಿಸಿಕೊಂಡಿದ್ದಾರೆ ಎಂದು ಶನಿವಾರಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮಾತನಾಡಿ, ಫೆ.24ರ ಬೆಳಗ್ಗೆ 9.30ಕ್ಕೆ ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಉದ್ಘಾಟಿಸುವರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆ ವಹಿಸುವರು ಎಂದರು.

ಬಳಿಕ ಎರಡೂ ದಿನ ಗೋಷ್ಠಿಗಳು ನಡೆಯಲಿವೆ. ಫೆ.25ರ ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭದಲ್ಲಿ ಲೇಖಕ ನಾಗೇಶ್ ಹೆಗಡೆ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮಾಜಿ ಸಚಿವ ಸಿ. ಎಸ್. ಪುಟ್ಟರಾಜು, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ ಭಾಗವತ್ ಭಾಗವಹಿಸುವರು ಎಂದು ಅವರು ತಿಳಿಸಿದರು.

ಕಾಲೇಜಿನ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 25.02.2025

ವಿಚಾರ ಸಂಕಿರಣ ಬಹುಮುಖಿ ಚಿಂತಕ ಡಾ. ನರಹಳ್ಳಿ ಬಾಲಸುಬ್ರಮಣ್ಯ ಹೇಳಿಕೆ । ಕನ್ನಡವೆಂದರೆ ಬರಿ ನುಡಿಯಲ್ಲ ಆದಕ್ಕೆದೆ ವಿಜ್ಞಾನದ ಸ್ಪರ್ಶ

ವೈಜ್ಞಾನಿಕ ಸಂಸ್ಕೃತಿ ತಿಳಿಯದಿರೊದೇ ಅಭಿವೃದ್ಧಿ ಬಿರುಕಿಗೆ ಕಾರಣ

• ಕನ್ನಡಪ್ರಭ ವಾರ್ತೆ ಮೈಸೂರು

ವಿಜ್ಞಾನಿಗಳಿಗೆ ಸಾಹಿತ್ಯ ಹಾಗೂ ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ತಿಳಿಬಿಯಬಿರುವುದೇ ಅಭಿವೃದ್ಧಿಯ ಬಿರುಕಿಗೆ ಕಾರಣ ಎಂದು ಬಹುಮುಖಿ ಚಿಂತಕ ಡಾ. ನರಹಳ್ಳಿ ಬಾಲಸುಬ್ರಮಣ್ಯ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂ ವಿವೇಕಾನಂದ ಸಭಾಂಗಣದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಂಯುಕ್ತವಾಗಿ ಆಯೋಜಿಸಿರುವ ಕನ್ನಡವೆಂದರೆ ಬರಿ ನುಡಿಯಲ್ಲ ಆದಕ್ಕೆದೆ ವಿಜ್ಞಾನದ ಸ್ಪರ್ಶ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರಸಂಕಿರಣವನ್ನು ಅವರು ಸೋಮವಾರ ಉದ್ಘಾಟಿಸಿ ಮಾತನಾಡಿದರು.

ವಿಜ್ಞಾನಿಗಳಿಗೆ ಸಾಹಿತ್ಯಿಕ ಸಂಸ್ಕೃತಿ ಗೊತ್ತಿರುವುದಿಲ್ಲ, ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ತಿಳಿದಿರುವುದಿಲ್ಲ, ಲೋಕದ ಹಲವು ಸಮಸ್ಯೆಗಳು ಪರಿಹಾರಗೊಳ್ಳದೇ ಇರುವುದಕ್ಕೆ ಈ ಬಿರುಕೇ ಕಾರಣ ಎನ್ನುವುದು ಸ್ವೋನೆವಾದ ಎಂದು ಅವರು ಹೇಳಿದರು.

ಮಾನವಿಕ ಹಾಗೂ ವಿಜ್ಞಾನ ವಿಷಯದ ಅಧ್ಯಯನಗಳು ಪರಸ್ಪರ ಪೂರಕವಾದಂತಹವುಗಳು. ಮಾನವ ಕುಲಕ್ಕೆ ಈ ಎಲ್ಲದರ ಆಗತ್ಯವೂ ಇದೆ. ಆದರೆ, ಈಗಿನ ನಮ್ಮ ಅಧ್ಯಯನ ಕ್ರಮದಲ್ಲಿ ಮಾನವಿಕ ವಿಷಯಗಳು ಹಿಂದೆ ಸರಿದು ವಿಜ್ಞಾನ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯತೆ ದೊರಕುತ್ತಿದೆ. ಅದರಲ್ಲೂ ಮೂಲ ವಿಜ್ಞಾನಕ್ಕಿಂತ ತಂತ್ರಜ್ಞಾನಕ್ಕೆ ಹೆಚ್ಚು ಆದ್ಯತ ಇದೆ. ಈ ಬೆಳವಣಿಗೆಯ ಬಗ್ಗೆಯೂ ಸಂವೇದನಾಶೀಲ ಮನಸ್ಸು ಚಿಂತಿಸುವ ಆಗತ್ಯವಿದೆ ಎಂದರು.





ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸಾಧಕರಿಗೆ ಸಚಿಕರು.

ವಿಜ್ಞಾನ ಎಂದರೆ ನಿರಂತರ ಬದಲಾವಣೆ. ಜನರಿಗೆ ಸ್ಥಿರತೆ ಮತ್ತು ಬದಲಾವಣೆಯನ್ನು ಹೊಂದಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಅದರಲ್ಲೂ ಅವರ ಆಚಾರ ವಿಚಾರಗಳನ್ನು ತಿರಸ್ಕರಿಸಿದಾಗ ನಮ್ಮ ಮತ ಧರ್ಮಗಳು, ನಮ್ಮ ನಂಬಿಕೆಗಳು, ವಿಶ್ವಾಸಗಳು ನಮಗೆ ದಿನನಿತ್ಯದ ಚಟುವಟಿಕೆಯಂತೆಆಭ್ಯಾಸವಾಗಿ ಬಿಟ್ಟಿರುತ್ತದೆ ಎಂದು ಅವರು ತಿಳಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ನಮ್ಮ ಬದುಕಿನಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದೆ. ಅನೇಕ ಸವಲತ್ತುಗಳನ್ನು ಒದಗಿಸಿಕೊಟ್ಟಿದೆ. ಬೆರಳ ತುದಿಯಲ್ಲಿ ಜಗತ್ತಿನ ದರ್ಶನವಾಗುತ್ತದೆ. ಇದಕ್ಕೆ ಮೊಬೈಲ್ ಗಿಂತ ಮತ್ತೊಂದು ನಿದರ್ಶನ ಬೇಕಿಲ್ಲ. ಮೊಬೈಲ್ ಅನೇಕ ಅನುಕೂಲಗಳನ್ನು ಕಲ್ಪಿಸಿದ್ದರೂ ಮಾನವ ಸಂಘಜೀವಿ ಎಂಬ ಮೂಲ ತತ್ವವನ್ನೇ ಪಲ್ಲಟಗೊಳಿಸಿಬಿಟ್ಟಿದೆ. ಮನುಷ್ಯ ಸಂಬಂಧಗಳೇ ಅರ್ಥಹೀನವಾಗುತ್ತಿವೆ. ಸಂದೇಶಗಳೇ ಸಂಬಂಧ ಸಾಧನವಾಗಿವೆಯೇ ಹೊರತು ಮುಖಾಮುಖಿ ಭೇಟಿಯಾಗಲಿ, ಪರಸ್ಪರ ಒಡನಾಟವಾಗಲಿ ದೂರವಾಗುವುದರ ಮೂಲಕ ಸಾಂಘಿಕ ಬದುಕಿನ ಸಂತಸದಿಂದ

> **ಬಳಸಿ ಬಿಸಾಕು ಎಂಬುದು ಆಧುನಿಕತೆ ಒದಗಿಸಿಕೊಟ್ಟಿರುವ ಮತ್ತೊಂದು ಸವಲತ್ತು. ಇದು ನಮಗೆ ಅನೇಕ ಬಗೆಯಲ್ಲಿ ಅನುಕೂಲ ಒದಗಿಸಿಕೊಟ್ಟಿದೆ ಎಂಬುದು ನಿಜ. ಆದರೆ, ಅಪ್ಪ-ಅಮ್ಮ, ಅಣ್ಣ-ತಂಗಿ, ಹೆಂಡತಿ-ಗಂಡ, ಗೆಳೆಯ ಈ ನೆಲೆಯಲ್ಲೂ ಬಳಸಿ ಬಿಸಾಕುವ ಭಾವನೆ ಬಲಗೊಂಡಂತೆ ಕಾಣಿಸುತ್ತಿದೆ.**
>
> • ಡಾ. ನರಹಳ್ಳಿ ಬಾಲಸುಬ್ರಮಣ್ಯ, ಚಿಂತಕ

ಮನುಷ್ಯ ಪಂಚಿತನಾಗುತ್ತಿರುವ ಸಂದರ್ಭ ಸೃಷ್ಟಿಯಾಗುತ್ತಿದೆ ಎಂದರು. ತಂತ್ರಜ್ಞಾನದ ಅನುಕೂಲ ಹಾಗೂ ಅಪಾಯಗಳನ್ನು ಚರ್ಚಿಸುವುದು ನಮ್ಮ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜವಾಬ್ದಾರಿ. ಭಾರತೀಯ ಜ್ಞಾನ ಪರಂಪರೆಯನ್ನು ಗಮನಿಸಿದರೆ ಸಾಹಿತ್ಯಕ್ಕೆ ಇದ್ದಷ್ಟೇ ಪ್ರಾಶಸ್ತ್ಯ ವಿಜ್ಞಾನಕ್ಕೂ ಇದ್ದಿತು. ಗಣಿತ, ಖಗೋಳ ವಿಜ್ಞಾನ, ಆಯುರ್ವೇದ ಮುಂತಾದ ಜ್ಞಾನ ಶಾಖೆಗಳನ್ನು ನಾವು ನಿದರ್ಶನಕ್ಕಾಗಿ ಗಮನಿಸಬಹುದು. ಅದರಲ್ಲೂ ದಕಮೂಲ ಪದ್ಧತಿ ಜಗತ್ತಿಗೆ ಭಾರತ ನೀಡಿದ ಬಹುದೊಡ್ಡ ಕೊಡುಗೆ ಎಂದರು.

ಆಂತೆಯೇ ಸೊನ್ನೆಯ ಪರಿಕಲ್ಪನೆ. ನಮ್ಮ ಅಧ್ಯಯನ ಕ್ರಮದಲ್ಲಿ ಒಂದು ರೀತಿಯ ಸಮಗ್ರತೆ ಇತ್ತು. ಆದರೆ, ಬರಬರುತ್ತಾ ನಮ್ಮ ಅಧ್ಯಯನದ ಕ್ರಮ ಬಡಿಯಾದ ನೆಲೆಯಲ್ಲಿ ನಡೆಯುತ್ತಿದೆಯೇ ಹೊರತು, ಇಂಟಿಯಾದ ಪರಿಕಲ್ಪನೆಯಿಂದ ದೂರಸರಿದಂತೆಕಾಣುತ್ತದೆ ಎಂದು ಅವರು ತಿಳಿಸಿದರು.

ವಿಜ್ಞಾನ ಮತ್ತು ಸಾಹಿತ್ಯ ಪರಸ್ಪರ ವಿರೋಧವೆಂಬ ರೂಢಿಯ ನಂಬುಗೆ ಅರ್ಥ ವಿಲ್ಲದ್ದು. ಮೌಢ್ಯವನ್ನು ತೊಡೆದು ಹಾಕಿ ನವಸಮಾಜ ನಿರ್ಮಾಣಕ್ಕೆ ಕಾರಣವಾಗಿ ಕ್ರಾಂತಿಕಾರಕ ಬದಲಾವಣೆಯನ್ನು ತಂದ ವಿಜ್ಞಾನದ ಬಗ್ಗೆ ಕುವೆಂಪು ಅವರಿಗೆ ಅಪಾರ ಮೆಚ್ಚುಗೆ ಇತ್ತು ಎಂದರು.

ನಾವು ಚಿಕ್ಕವರಾಗಿರುವಾಗ ರಾತ್ರಿ ಹಾಸಿಗೆ ಹಾಸಿ ಬೆಳಗ್ಗೆ ಎದ್ದು ಅದನ್ನು ಸುತ್ತಿಡುವುದು ರೂಢಿಯಲ್ಲಿತ್ತು. ಯಾರಿಗೋ ಹುಷಾರಿಲ್ಲದಿದ್ದಾಗ ಮಾತ್ರ ಹಗಲು ಹಾಸಿಗೆ ಹಾಸುತ್ತಿದ್ದರು. ಯಾರ ಮನೆಯಲ್ಲಿ ಹಗಲು ಹಾಸಿಗೆ ಕಂಡರೆ ಆದು ಆನಾರೋಗ್ಯದ ಸೂಚಕ. ಬೆಡ್ ಬಂದ ಮೇಲೆ ಹಗಲೆರಳು ಹಾಸಿಗೆ ಸದಾ ಸಿದ್ದವಿರುತ್ತದೆ.

ಸಿದ್ದೆಯೇನು? ಊಟ ತಿಂಡಿ ಓದು ಎಲ್ಲವೂ ಹಾಸಿಗೆಯ ಮೇಲೆ. ಇದು ಮೇಲ್ನೋಟಕ್ಕೆ ಸರಳವಾದ ಬದಲಾವಣೆಯಂತೆ ಕಂಡರೂ ನಮ್ಮ ಜೀವನ ವಿಧಾನದ ಮೇಲೆ, ಆರೋಗ್ಯದ ಮೇಲೆ ಬೀರಿರುವ ಪರಿಣಾಮ ಅಪಾರವಾದದ್ದು ಎಂದರು.

ಮಹಾಜನ ಕಾಲೇಜಿನ ನಿವೃತ್ತ ಡಾ.ಎಸ್. ಆರ್. ರಮೇಶ್, ಮಹಾಜನ ಸ್ವಾತ್ತಕೋತ್ತರ ಕೇಂದ್ರದ ನರ್ದೇಶಕ ಡಾ.ಸಿ.ಕೆ. ರೇಣುಕಾರ್ಯ ಇದ್ದರು. ಪ್ರಾಂಶುಪಾಲೆ ಡಾ.ಬಿ.ಆರ್.ಜಯಶುಮಾರಿಸ್ವಾಗತಿಸಿದರು. ಅಭಿನವದನ.ರವಿಕುಮಾರಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ. ಸಹಕನ್ನಡವ್ಯಾಪಕಿ ಡಾ. ವಿನೋದಮ್ಮ ನಿರೂಪಿಸಿದರು.

ಕನ್ನಡ ಭಾಷೆಗಿದೆ ವೈಜ್ಞಾನಿಕ ನೆಲೆ

ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆಯಗೌರವಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರುಳೀಧರ್ ಮಾತನಾಡಿ, ಜಗತ್ತಿನಲ್ಲಿ ಯಾವ ಭಾಷೆಯಲ್ಲಿಯೂ ಇರದ ವೈಜ್ಞಾನಿಕ ನೆಲೆ, ಹನ್ನೆಲೆ ಕನ್ನಡ ಭಾಷೆಗೆ ಇದೆ. ಮೂಲ ಕಾವ್ಯ ಇರುವುದು ಕನ್ನಡ ಭಾಷೆಯಲ್ಲಿ ಎಂದು ಹೇಳಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 26.02.2025

ವಿಜ್ಞಾನ ಇಂದು ನಮ್ಮ ಹೃದಯಕ್ಕೆ ಇಳಿಯುತ್ತಿಲ್ಲ

ಲೇಖಕ ನಾಗೇಶ್ ಹೆಗಡೆ ವಿಷಾದ | ಕನ್ನಡವೆಂದರೆ ಬರಿ ನುಡಿಯಲ್ಲ ಅದಕ್ಕಿದೆ ವಿಜ್ಞಾನದ ಸ್ಪರ್ಶ ವಿಚಾರ ಸಂಕಿರಣ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿಜ್ಞಾನ ನಮ್ಮ ಹೃದಯಕ್ಕೆ ಇಳಿಯುತ್ತಿಲ್ಲ, ಜ್ಞಾನದ ಮೇಲೆ ಮೌಢ್ಯ ಸವಾರಿ ಮಾಡುತ್ತಿದೆ ಎಂದು ಲೇಖಕ ನಾಗೇಶ್ ಹೆಗಡೆ ವಿಷಾದಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಂಯುಕ್ತವಾಗಿ ಮಂಗಳವಾರ ಆಯೋಜಿಸಿದ್ದ ಕನ್ನಡವೆಂದರೆ ಬರಿ ನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ ಕುರಿತು ಎರಡು ದಿನಗಳ ಆಂತಾರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಜ್ಞಾನ ಎಂಬುದು ನಮ್ಮ ಹೃದಯಕ್ಕೆ ಇಳಿಯುತ್ತಿಲ್ಲ. ವಿಜ್ಞಾನ ಅರ್ಥವಾಗದೇ ಇರುವುದರಿಂದ ಮತ್ತು ವಿಜ್ಞಾನದ ಮೇಲೆ ಆಸಕ್ತಿ ಬೆಳೆಯದಿರುವುದೇ ಪ್ರಾಣಿ ಸಂಕುಲದ ಅವನತಿಗೆ ಕಾರಣವಾಗುತ್ತಿದೆ. ಜೊತೆಗೆ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡೆ ಸಾಹಿತ್ಯದ ಮೂಲಕ ವಿಜ್ಞಾನವನ್ನು ನಾಡಿಗೆ ತಿಳಿಸುವ ಪ್ರಯತ್ನದ ಭಾಗವಾಗಿ ಈ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು ಎಂದರು. ಚಾಮರಾಜನಗರದಲ್ಲಿ ವಿಷಾಕಾರಿ ತರಕಾರಿ ತಿಂದು ಒಬ್ಬರೈತ ಮೃತಪಟ್ಟ. ಇದಕ್ಕೆ ಕಾರಣ ತರಕಾರಿಗೆ ಸಿಂಪಡಿಸುವ ಔಷಧಿಗಳ ಮೇಲೆ ಎಚ್ಚರಿಕೆಯ ಮಾಹಿತಿಯನ್ನು



ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರ ಹೊನ್ನಾರಿನ ಗೆರೆಗಳು ಮತ್ತು ಕಾಲಕಟ್ಟಳೆಯ ಮೀರಿ ಎಂಬ ಎರಡು ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ಇಂಗ್ಲಿಷ್ ನಲ್ಲಿ ಮಾತ್ರ ಮುದ್ರಿಸಿ. ಕನ್ನಡವನ್ನು ನಿರ್ಲಕ್ಷಿಸಿದ್ದು. ರೈತರಿಗೆ ವೈಜ್ಞಾನಿಕ ಮಾಹಿತಿಗಳನ್ನು ಸ್ಥಳೀಯ ಭಾಷೆಗಳಲ್ಲಿ ನೀಡುವ ಕೆಲಸವನ್ನು ಕಂಪನಿಗಳು ಮಾಡುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಜೊತೆಗೆ ಮೌಢ್ಯ ಜ್ಞಾನದ ಮೇಲೆ ಸವಾರಿ ಮಾಡುತ್ತಿದೆ. ನಮ್ಮ ಕೈಗೆ ಜ್ಞಾನದ ದೀವಿಗೆ ಆಗಿ ಬರಬೇಕಾದ ಎಐಗಳು ಅಜ್ಞಾನವಾಗಿ ಜನರಿಗೆ ಮಾಹಿತಿರವಾನಿಸುತ್ತಿವೆ. ಇದರ ಜೊತೆಗೆ ವಿಜ್ಞಾನವನ್ನು ಸರಳವಾಗಿ ಹೇಳುವಲ್ಲಿ ಶಿಕ್ಷಕರು ಕೂಡ ವಿಫಲರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿಜ್ಞಾನದ ಜ್ಞಾನವನ್ನು ಎಲ್ಲರೂ ಬೆಳೆಸಿ ಕೊಳ್ಳಬೇಕು ಎಂದರು.

ಇದೇ ವೇಳೆ ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಬರೆದಿರುವ ಹೊನ್ನಾರಿನ ಗೆರೆಗಳು ಮತ್ತು ಕಾಲಕಟ್ಟಳೆಯ ಮೀರಿ ಎಂಬ ಎರಡು ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ಬಹುಮುಖಿಚಿಂತಕಡಾ.ನರಹಳ್ಳಿಬಾಲಸುಬ್ರಮಣ್ಯ, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರುಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯ ಲಕ್ಷ್ಮಿ ಮುರುಳೀಧರ್, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಂಗಳವಾರ 25 ಫೆಬ್ರವರಿ 2025

ವಿಜ್ಞಾನಿಗಳಿಗೆ ಸಾಹಿತ್ಯ, ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ಅರಿವು ಇಲ್ಲದಿರುವುದೇ ಅಭಿವೃದ್ಧಿ ಕುಂಠಿತಗೊಳ್ಳಲು ಕಾರಣ

ಬಹುಮುಖಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಅಭಿಮತ

ಮೈಸೂರು, ಫೆ. 24– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಹಯೋಗದಲ್ಲಿ 'ಕನ್ನಡವೆಂದರೆ ಬರಿನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ' ವಿಷಯ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಂಕಿರಣವನ್ನು ಉದ್ಘಾಟಿಸಿದ ಬೆಂಗಳೂರಿನ ಬಹುಮುಖಿ ಚಿಂತಕ ಡಾ. ನರಹಳ್ಳಿ ಬಾಲಸುಬ್ರಮಣ್ಯ ಮಾತನಾಡಿ, ನಾವು ಬದುಕುತ್ತಿರುವುದೇ ಜಾಗತೀಕರಣ ಹಾಗೂ ತಂತ್ರಜ್ಞಾನದ ಯುಗದಲ್ಲಿ. ಇವುಗಳ ಪರಿಣಾಮವೆಂದರೆ ಇವುಗಳೊಟ್ಟಿಗೆ ಬರುವ ಎಲ್ಲ ವಲಯಗಳ ಪಲ್ಲಟಗಳನ್ನೂ ನಾವು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕು. ಅರ್ಥವ್ಯವಸ್ಥೆಯಲ್ಲಾಗುವ ಅಲ್ಲೋಲ–ಕಲ್ಲೋಲ, ಜೀವನಶೈಲಿಯಲ್ಲಾಗುವ ಬದಲಾವಣೆ, ರೂಢಿಯ ನಂಬಿಕೆಗಳನ್ನು ಅಸ್ತವ್ಯಸ್ತಗೊಳಿಸುವ ಆಧುನಿಕ ಪ್ರಗತಿಯ ವಿದ್ಯಮಾನಗಳು, ಪ್ರಕೃತಿಯ ಮೇಲಾಗುತ್ತಿರುವ ಹಲ್ಲೆ, ಮಾನವ ಸಂಬಂಧಗಳ ಮೇಲಾಗುತ್ತಿರುವ ಆಘಾತಗಳು–ಇವೆಲ್ಲವೂ ನಮ್ಮ ಬದುಕಿನ ಸಹಜ ಲಯವನ್ನು ಅಸ್ತವ್ಯಸ್ತಗೊಳಿಸುತ್ತಿವೆ. ರಸೆಲ್ ಹೇಳುವಂತೆ ನಮ್ಮ ಕಾಲದಲ್ಲಿ ತಂತ್ರಜ್ಞಾನ ಸ್ವತಂತ್ರ ಅಸ್ತಿತ್ವ ಪಡೆದ ಶಾಸ್ತ್ರವಲ್ಲ; ಅದು ಜನರ ಮೇಲೆ ಸವಾರಿ ಮಾಡುತ್ತಿರುವ ಯಜಮಾನಿಕೆಯ ಶಕ್ತಿ. ಈ ಹೊತ್ತಿನಲ್ಲಿ ತಂತ್ರಜ್ಞಾನದ ಅನುಕೂಲ ಹಾಗೂ ಅಪಾಯಗಳನ್ನು ಚರ್ಚಿಸುವುದು ನಮ್ಮ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜವಾಬ್ದಾರಿಯೂ ಹೌದು ಎಂದು ತಿಳಿಸಿದರು.

ಭಾರತೀಯ ಜ್ಞಾನ ಪರಂಪರೆಯನ್ನು ಗಮನಿಸಿದರೆ ಸಾಹಿತ್ಯಕ್ಕೆ ಇದ್ದಷ್ಟೇ ಪ್ರಾಶಸ್ತ್ಯ ವಿಜ್ಞಾನಕ್ಕೂ ಇದ್ದಿತು. ಗಣಿತ, ಖಗೋಳ ವಿಜ್ಞಾನ, ಆಯುರ್ವೇದ ಮುಂತಾದ ಜ್ಞಾನ ಶಾಖೆಗಳನ್ನು ನಾವು ನಿದರ್ಶನಕ್ಕಾಗಿ ಗಮನಿಸಬಹುದು. ಅದರಲ್ಲೂ ದಶಮೂಲ ಪದ್ಧತಿ ಜಗತ್ತಿಗೆ ಭಾರತ ನೀಡಿದ ಬಹುದೊಡ್ಡ ಕೊಡುಗೆ ಅಂತೆಯೇ ಸೊನ್ನೆಯ ಪರಿಕಲ್ಪನೆ. ನಮ್ಮ ಅಧ್ಯಯನ ಕ್ರಮದಲ್ಲಿ ಒಂದು ರೀತಿಯ ಸಮಗ್ರತೆ ಇತ್ತು. ಆದರೆ, ಬರಬರುತ್ತಾ ನಮ್ಮ ಅಧ್ಯಯನದ ಕ್ರಮ ಬಿಡಿಯಾದ ನೆಲೆಯಲ್ಲಿ ನಡೆಯುತ್ತಿದೆಯೇ ಹೊರತು, ಇಂಡಿಯಾದ ಪರಿಕಲ್ಪನೆಯಿಂದ ದೂರ ಸರಿದಂತೆ ಕಾಣುತ್ತದೆ. ವಿಶೇಷ ನೈಪುಣ್ಯತೆಯ ನೆಲೆಯಲ್ಲಿ ಆಳಕ್ಕೆ ಇಳಿಯುತ್ತಾ ಹೋಗಿ ವಿಸ್ತಾರವನ್ನು ಕಳೆದುಕೊಂಡಿತೇ, ಅನ್ಯಜ್ಞಾನ ಶಿಸ್ತುಗಳ ಜೊತೆ ಅನುಸಂಧಾನ ಕಡಿಮೆಯಾಯಿತೇ, ಇಂದು ಮಾನವ ಸಂಬಂಧಗಳಂತೆಯೇ ಜ್ಞಾನ ಶಾಖೆಗಳೂ ದ್ವೀಪಗಳಾಗುತ್ತಿವೆಯೇ. ಇಂತಹ ಪ್ರಶ್ನೆಗಳಿಗೆ ನಾವು ಮುಖಾಮುಖಿಯಾಗಬೇಕಾಗಿದೆ ಎಂದು ಕರೆಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ವಹಿಸಿದ್ದರು.

ಪ್ರಾಂಶುಪಾಲರಾದ ಡಾ.ಬಿ.ಆರ್ ಜಯಕುಮಾರಿ, ಬೆಂಗಳೂರಿನ ಅಭಿನವದ ನ.ರವಿಕುಮಾರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕ ಡಾ.ವಿನೋದಮ್ಮ, ಕಾಲೇಜಿನ ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಕನ್ನಡ ವಿಭಾಗದ ಪ್ರಾಧ್ಯಾಪಕರು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಉದ್ಘಾಟಿಸಿದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಫೆಬ್ರುವರಿ 22, 2025

'ಕನ್ನಡವೆಂದರೆ ಬರಿ ನುಡಿಯಲ್ಲ, ಅದಕ್ಕಿದೆ ವಿಜ್ಞಾನದ ಸ್ಪರ್ಶ': ವಿಚಾರಸಂಕಿರಣ 24ರಿಂದ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕನ್ನಡವೆಂದರೆ ಬರಿ ನುಡಿಯಲ್ಲ, ಅದಕ್ಕಿದೆ ವಿಜ್ಞಾನದ ಸ್ಪರ್ಶ' ಎಂಬ ಆಶಯದಲ್ಲಿ ಫೆ.24 ಹಾಗೂ 25ರಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಚಾರ ಸಂಕಿರಣ ನಡೆಯಲಿದೆ' ಎಂದು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

'ಕಾಲೇಜಿನ ಕನ್ನಡ ವಿಭಾಗ ಹಾಗೂ ಬೆಂಗಳೂರಿನ ಅಭಿನವ ಸಂಸ್ಥೆಯ ಸಹಯೋಗದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ದೇಶ ವಿದೇಶದ 250 ಮಂದಿ ಪಾಲ್ಗೊಳ್ಳಲಿದ್ದಾರೆ' ಎಂದು ಇಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'24ರಂದು ಬೆಳಿಗ್ಗೆ 9.30ಕ್ಕೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೊ. ನರಹಳ್ಳಿ ಬಾಲಸುಬ್ರಹ್ಮಣ್ಯ, ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮೀ ಮುರಳೀಧರ್, ನ. ರವಿಕುಮಾರ್, ಡಾ.ಎಸ್.ಆರ್. ರಮೇಶ್ ಭಾಗವಹಿಸಲಿದ್ದಾರೆ. 'ಕನ್ನಡ ಪ್ರಜ್ಞೆಯ ವಿಕಾಸ ಮತ್ತು ವಿಜ್ಞಾನದ ಪಾತ್ರ' ಕುರಿತು ಕೆ.ಪುಟ್ಟಸ್ವಾಮಿ ಮಾತನಾಡಲಿದ್ದಾರೆ' ಎಂದರು.

'ತಂತ್ರಜ್ಞಾನದ ಬೆಳವಣಿಗೆ ಮತ್ತು ಕನ್ನಡ ಸಾಹಿತ್ಯ ಸಂವೇದನೆಯ ಸ್ವರೂಪ' ಕುರಿತು ಸಿ.ಪಿ.ರವಿಕುಮಾರ್, 'ಕ್ವಾಂಟಂ ಫಿಸಿಕ್ಸ್- ಸಾಹಿತ್ಯಾನುಭವ' ಕುರಿತು ಅರವಿಂದ, 'ಪಠ್ಯದ ಅರಿವು ಮತ್ತು ಅನುಭವದ ಗ್ರಹಿಕೆ' ಕುರಿತು ಕೃಪಾಕರ-ಸೇನಾನಿ, 'ತಂತ್ರಜ್ಞಾನದ ಬೆಳವಣಿಗೆ ಹಾಗೂ ಬಹುಮುಖಿ ನಾಶ' ಕುರಿತು ಸ್ನೇಹಾ ನರಹಳ್ಳಿ ಹಾಗೂ 'ಸಾಹಿತ್ಯ ನತ್ತ ವಿಜ್ಞಾನ ಸಂಬಂಧಾಂತರ' ಕುರಿತು ಲಕ್ಷ್ಮೀಶ ತೋಳ್ಪಾಡಿ ಮಾತನಾಡಲಿದ್ದಾರೆ' ಎಂದರು.

ಎರಡನೇ ದಿನವಾದ ಮಂಗಳವಾರ, 'ಸೃಜನಶೀಲತೆ ಮತ್ತು ತಂತ್ರಜ್ಞಾನದ ಸಾಧಕ-ಬಾಧಕ' ಸಂವಾದದಲ್ಲಿ ದೇವು ಪತ್ತಾರ, ಮೇಘನಾ ಸುಧೀಂದ್ರ, ಟಿ.ಜಿ. ಶ್ರೀನಿಧಿ, ಪೂರ್ಣಿಮಾ ಮಾಳಗಿಮನೆ ಭಾಗವಹಿಸಲಿದ್ದಾರೆ. 'ವಿಜ್ಞಾನ ಭಾಷೆಯಾಗಿ ಕನ್ನಡದ ಸವಾಲು' ಕುರಿತು ಇಟಲಿಯ ರಂಜಿತ್, 'ಕೃಷಿ ಸಾಹಿತ್ಯದ ಕೃಷಿ' ಕುರಿತು ಚನ್ನೇಶ್, 'ಕನ್ನಡ ವಿಜ್ಞಾನ ಮತ್ತು ತಂತ್ರಜ್ಞಾನದ ಶಿಕ್ಷಣ ಒಂದು ಸಮಾಲೋಚನೆ' ಕುರಿತು ಮೈ. ನಟರಾಜ, 'ವಿಜ್ಞಾನ ಸಾಹಿತ್ಯ ಜನಪ್ರಿಯ-ಗೊಳಿಸುವ ಮಾರ್ಗೋಪಾಯ' ಕುರಿತು ಕೊಳ್ಳೇಗಾಲ ಶರ್ಮ, 'ಯಾವುದು ಜ್ಞಾನ?, ಯಾವುದು ವಿಜ್ಞಾನ?' ಕುರಿತು ಎನ್.ಎ.ಎಂ.ಇಸ್ಮಾಯಿಲ್ ಮಾತನಾಡ-ಲಿದ್ದಾರೆ.

'ಮುಕ್ತ ಸಂವಾದದ ಬಳಿಕ, ವಿಜ್ಞಾನ ಲೇಖಕ ನಾಗೇಶ್ ಹೆಗಡೆ ಸಮಾರೋಪ ಭಾಷಣ ಮಾಡಲಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್. ಕೆ. ಲೋಕನಾಥ್, ಸಿ.ಎಸ್. ಪುಟ್ಟರಾಜು, ಟಿ. ಮುರಳೀಧರ ಭಾಗವತ್, ಪ್ರೊ.ಸಿ.ಕೆ. ರೇಣುಕಾರ್ಯ ಭಾಗವಹಿಸಲಿದ್ದಾರೆ' ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಎಚ್. ಆರ್.ತಿಮ್ಮೇಗೌಡ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂಗಳವಾರ • ಫೆಬ್ರುವರಿ 25, 2025



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಂಸ್ಥೆಯು ವಿವೇಕಾನಂದ ಸಭಾಂಗಣದಲ್ಲಿ ಸೋಮವಾರದಿಂದ ಆಯೋಜಿಸಿರುವ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ನರಹಳ್ಳಿ ಬಾಲಸುಬ್ರಹ್ಮಣ್ಯ ಉದ್ಘಾಟಿಸಿದರು. ನ. ರವಿಕುಮಾರ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ, ಮುರಳೀಧರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಸ್ನಾತಕೋತ್ತರ ವಿಭಾಗದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್. ತಿಮ್ಮೇಗೌಡ, ಪ್ರಾಧ್ಯಾಪಕಿ ವಿನೋದಮ್ಮ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

'ವಿಜ್ಞಾನ, ವೈದ್ಯಕೀಯ ಲೇಖಕರೆಂಬ ಭೇದ ಸಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಜ್ಞಾನವನ್ನು ಜನ ಸಾಮಾನ್ಯರೂ ಅರ್ಥೈಸಿಕೊಳ್ಳಲು ಸಾಹಿತ್ಯದ ಸ್ಪರ್ಶ ಅಗತ್ಯ. ವಿಜ್ಞಾನ, ವೈದ್ಯಕೀಯ ಲೇಖಕರೆಂಬ ಭೇದ ಸರಿಯಲ್ಲ. ಅವರೆಲ್ಲರನ್ನೂ ಸಾಹಿತಿಗಳೆಂದೇ ಒಪ್ಪಬೇಕು' ಎಂದು ಪ್ರೊ.ನರಹಳ್ಳಿ ಬಾಲಸುಬ್ರಹ್ಮಣ್ಯ ಪ್ರತಿಪಾದಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು, ಅಭಿನವ ಬೆಂಗಳೂರು ಸಹಯೋಗದಲ್ಲಿ ಸೋಮವಾರದಿಂದ ಏರ್ಪಡಿಸಿರುವ 'ಕನ್ನಡವೆಂದರೆ ಬರಿ ನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ' ಅಂತರ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿ, 'ರಾಜಕೀಯ, ಧರ್ಮ, ವಿಜ್ಞಾನವು ಸಾಮಾಜಿಕ ಶಕ್ತಿಯ ಪ್ರತಿರೂಪ. ಆದರೆ ವಿಜ್ಞಾನದ ಕುರಿತು ಚಿಂತನೆಗಳು ನಡೆದಿರುವುದು ವಿರಳ. ಸಾಂಸ್ಕೃತಿಕ ಲೋಕ ಅದರ ಬಗ್ಗೆ ಚಿಂತಿಸಿಲ್ಲ' ಎಂದರು.

'ಚಿತ್ರಕಲೆ, ಸಾಹಿತ್ಯ, ಚರಿತ್ರೆ ಹಾಗೂ ವಿಜ್ಞಾನದ ಕುರಿತು ಒಂದೇ ವೇದಿಕೆಯಡಿ ಚರ್ಚೆಯಾಗದಿರುವುದು ದುರಂತ. ಇದು ನಮ್ಮನ್ನು ದ್ವೀಪದಂತೆ ಮಾಡಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಹಿಂದೆ ಸಾಹಿತ್ಯ ಹಾಗೂ ವಿಜ್ಞಾನಕ್ಕೆ ನಿಕಟ ಸಂಬಂಧವಿತ್ತು. ವಿಜ್ಞಾನಿಯನ್ನು ಕುವೆಂಪು 'ಯಂತ್ರ ಶ್ರೀ', 'ಆಧುನಿಕ ಭಗೀರಥ' ಎಂದಿದ್ದರು. ಶಿವರಾಮ ಕಾರಂತರ ಸಾಹಿತ್ಯದಲ್ಲಿ ವಿಜ್ಞಾನದ ಸ್ಪರ್ಶವಿತ್ತು. ಪೂರ್ಣಚಂದ್ರ ತೇಜಸ್ವಿಯವರು ಅಧ್ಯಾತ್ಮ, ಧರ್ಮಕ್ಕಿಂತ ವಿಜ್ಞಾನವನ್ನು ನಂಬುತ್ತಿದ್ದರು. ಅಡಿಗರು, ದಿಬಿಎಲ್ ಸ್ವಾಮಿ ಅವರ ವಿಜ್ಞಾನ ಆಧಾರಿತ ಬರಹಗಳು ಮನೋಜ್ಞವಾಗಿದ್ದವು' ಎಂದು ವಿಶ್ಲೇಷಿಸಿದರು.

ಅಭಿನವ ಸಂಸ್ಥೆಯ ನ. ರವಿಕುಮಾರ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಸ್ನಾತಕೋತ್ತರ ವಿಭಾಗದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್. ತಿಮ್ಮೇಗೌಡ, ಪ್ರಾಧ್ಯಾಪಕಿ ವಿನೋದಮ್ಮ ಪಾಲ್ಗೊಂಡಿದ್ದರು.

ಸರಣಿ ಗೋಷ್ಠಿ: ನಂತರ, 'ಕನ್ನಡ ಪ್ರಜ್ಞೆಯ ವಿಕಾಸ ಮತ್ತು ವಿಜ್ಞಾನದ ಪಾತ್ರ' ಕುರಿತು ತಜ್ಞ ಕೆ.ಪುಟ್ಟಸ್ವಾಮಿ, 'ತಂತ್ರಜ್ಞಾನದ ಬೆಳವಣಿಗೆ ಮತ್ತು ಕನ್ನಡ ಸಾಹಿತ್ಯ ಸಂವೇದನೆಯ ಸ್ವರೂಪ' ಕುರಿತು ಸಿ.ಪಿ.ರವಿಕುಮಾರ್, 'ಕ್ವಾಂಟಂ ಫಿಸಿಕ್ಸ್-ಸಾಹಿತ್ಯಾನುಭವ' ಕುರಿತು ಅರವಿಂದ, 'ಪಠ್ಯದ ಅರಿವು ಮತ್ತು ಅನುಭವದ ಗ್ರಹಿಕೆ' ಕುರಿತು ರಾಜಶೇಖರ ಹಳಮನೆ, 'ಸಾಹಿತ್ಯ ನತ್ತ ವಿಜ್ಞಾನ ಸಂಬಂಧಾಂತರ' ಕುರಿತು ಲಕ್ಷ್ಮೀಶ ತೋಳ್ಪಾಡಿ ವಿಷಯ ಮಂಡಿಸಿದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಮಂಗಳವಾರ,25 ಫೆಬ್ರವರಿ 2025

ವಿಜ್ಞಾನದ ಬಗ್ಗೆ ಆಲೋಚಿಸಬೇಕಿದೆ

ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಹ್ಮಣ್ಯ ಹೇಳಿಕೆ | ಅಂತಾರಾಷ್ಟ್ರೀಯ ವಿಚಾರ ಸಂಕಿರಣ

■ **ವಿಕ ಸುದ್ದಿಲೋಕ** ಮೈಸೂರು

ಕಳೆದ 5 ವರ್ಷದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಕ್ರಾಂತಿಕಾರಿ ಬದಲಾವಣೆಗಳು ಆಗಿವೆ. ಆದರೆ, ಇದರ ಬಗ್ಗೆ ಯಾರೂ ಹೆಚ್ಚು ಆಲೋಚಿಸುತ್ತಿಲ್ಲ ಎಂದು ಬಹುಮುಖಿ ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಹಯೋಗದಲ್ಲಿ ನಡೆದ 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ' ಎಂಬ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

''ಸಾಹಿತ್ಯಕ್ಕೂ ವಿಜ್ಞಾನಕ್ಕೂ ಸಂಬಂಧವಿದೆ. ಪ್ರಾಚೀನ ಕಾಲದಿಂದಲೂ ಸಾಹಿತ್ಯವನ್ನು ಗಮನಿಸಿದರೆ ಇದನ್ನು ಕಾಣಬಹುದು. ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಮೌಢ್ಯವನ್ನು ಧಿಕ್ಕರಿಸಿ ಎಂದಿದ್ದರು. ವಿಜ್ಞಾನಿಯನ್ನು ಆಧುನಿಕ ಭಗೀರಥ ಎಂದು ಕರೆದರು. ಶಿವರಾಮ ಕಾರಂತರು ಕೂಡ ವಿಜ್ಞಾನಿ ಮಾಡುವ ಕೆಲಸವನ್ನು ಮಾಡಿ ತೋರಿಸಿದ್ದಾರೆ. ಆದರೆ, ಇಂದು ರಾಜಕೀಯ, ಧರ್ಮಗಳ ಬಗ್ಗೆ ತೋರಿಸುವ ಆಸಕ್ತಿಯನ್ನು ವಿಜ್ಞಾನ ಬಗ್ಗೆ ತೋರಿಸುತ್ತಿಲ್ಲ,'' ಎಂದು ವಿಷಾದ ವ್ಯಕ್ತಪಡಿಸಿದರು.

''ಸಾಹಿತ್ಯವನ್ನು ಎಲ್ಲಾ ಕ್ಷೇತ್ರದವರು ಬರೆಯುತ್ತಾರೆ. ಹೀಗಾಗಿ ಸಾಹಿತ್ಯದ ಜತೆಗೆ ಚಿತ್ರಕಲೆ, ಸಂಗೀತ, ನೃತ್ಯಕ್ಕೆ ಸಂಬಂಧಪಟ್ಟ ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕು. ನಾವೆಲ್ಲರೂ ವಿಜ್ಞಾನವನ್ನು ಓದುತ್ತಿರುತ್ತೇವೆ ಮತ್ತು ಚರ್ಚಿಸುತ್ತೇವೆ. ಆದರೆ ಮನೆಗಳಲ್ಲಿ ಮೌಢ್ಯತೆಯನ್ನು ಆಚರಿಸುತ್ತೇವೆ. ಸಮಾಜದಲ್ಲಿ ಇದು ಹೆಚ್ಚು ಚರ್ಚೆಯಾಗಬೇಕು. ಜತೆಗೆ ನಮ್ಮಲ್ಲೂ ಬದಲಾವಣೆ ಆಗಬೇಕು,'' ಎಂದು ಹೇಳಿದರು.

''ಇಂದು ಜಗತ್ತಿನಲ್ಲಿ ಮೊಬೈಲ್ ಆವಿಷ್ಕಾರದಿಂದ ಹಲವು ಬದಲಾವಣೆಗಳಾಗಿವೆ. ಆದರೆ, ಇದರಿಂದ ಎಷ್ಟು ಉಪಯೋಗವಾಗವೋ ಅಷ್ಟೇ ದುರುಪಯೋಗವೂ ಆಗುತ್ತಿದೆ. ಮನುಷ್ಯನ ಆರೋಗ್ಯ, ಸಂಬಂಧಗಳು, ಭಾವನೆಗಳ ಮೇಲೆ ಪರಿಣಾಮ ಬೀರಿದೆ. ಮೊಬೈಲ್ ಸಂದೇಶಗಳು ಸಂಬಂಧಗಳಾಗಿ ಬದಲಾವಣೆಯಾಗಿರುವುದನ್ನು ಕಾಣಬಹುದು. ಮೊಬೈಲ್ ಸುಖವನ್ನು ನೀಡಿ, ಸಂತೋಷ, ಭಾವನೆಯನ್ನು ಕಿತ್ತುಕೊಳ್ಳುತ್ತಿದೆ,'' ಎಂದರು. '' ಮುಂದಿನ ದಿನಗಳಲ್ಲಿ ಆರೋಗ್ಯಕರ ಸಮಾಜವನ್ನು ಕಟ್ಟಬೇಕಾದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಆವಶ್ಯಕತೆ ಹೆಚ್ಚಾಗಿದೆ,'' ಎಂದು ತಿಳಿಸಿದರು.



ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಹಯೋಗದಲ್ಲಿ ನಡೆದ 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ' ಎಂಬ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಉದ್ಘಾಟಿಸಿದರು.

> **ಮಾರುಕಟ್ಟೆ ವ್ಯವಸ್ಥೆಯು ಮನುಷ್ಯನ ದುರಾಸೆಯನ್ನು ಹೆಚ್ಚಿಸುತ್ತಿದೆ. ಸಂಗ್ರಹಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಇದರಿಂದ ಭವಿಷ್ಯದಲ್ಲಿ ಭೀಕರವಾದ ಸ್ಥಿತಿ ಬರಬಹುದು. ಹಾಗಾಗಿ ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕಿದೆ.**
>
> **- ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ,**
> ಬಹುಮುಖಿ ಚಿಂತಕ.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳಿಧರ್, ಬೆಂಗಳೂರು ಅಭಿನವ ಪ್ರಕಾಶನದ ರವಿಕುಮಾರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್. ಆರ್ ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ಪ್ರಾಧ್ಯಾಪಕಿ ಡಾ. ವಿನೋದಮ್ಮ ಹಾಜರಿದ್ದರು.

ನಾನಾ ವಿಚಾರಗೋಷ್ಠಿ: ಡಾ.ಕೆ.ಪುಟ್ಟಸ್ವಾಮಿ 'ಕನ್ನಡ ಪ್ರಜ್ಞೆಯ ವಿಕಾಸ ಮತ್ತು ವಿಜ್ಞಾನದ ಪಾತ್ರ' ಎಂಬ ವಿಷಯದ ಕುರಿತು ಮಾತನಾಡಿದರು. ಡಾ.ಸಿ.ಪಿ.ರವಿಕುಮಾರ್ ತಂತ್ರಜ್ಞಾನದ ಬೆಳವಣಿಗೆಗಳು ಮತ್ತು ಕನ್ನಡ ಸಾಹಿತ್ಯ ಸಂವೇದನೆಯ ಸ್ವರೂಪ ಕುರಿತು ಮಾತನಾಡಿದರು. ಡಾ. ಅರವಿಂದ, ರಾಜಶೇಖರ ಹಳೇಮನೆ, ಲಕ್ಷ್ಮೀಶ ತೋಳ್ಪಾಡಿ ಸೇರಿದಂತೆ ಇತರರು ಗೋಷ್ಠಿಯಲ್ಲಿ ವಿಷಯ ಮಂಡಿಸಿದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶನಿವಾರ 22 ಫೆಬ್ರವರಿ 2025
22 FEBRUARY 2025

24,25ರಂದು ಅಂತಾರಾಷ್ಟ್ರೀಯ ವಿಚಾರಸಂಕಿರಣ

ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ ಹಾಗೂ ಬೆಂಗಳೂರಿನ ಅಭಿನವ ಸಂಸ್ಥೆಯಿಂದ ಫೆ.24 ಹಾಗೂ 25ರಂದು ಎರಡು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ಮಹಾಜನ ಸಂಸ್ಥೆ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಿರುವ ವಿಚಾರ ಸಂಕಿರಣಕ್ಕೆ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಚಾಲನೆ ನೀಡಲಿದ್ದಾರೆ. ವಿಚಾರ ಸಂಕಿರಣದಲ್ಲಿ ದೇಶ ವಿದೇಶಗಳ ಸುಮಾರು 250 ಜನ ಪಾಲ್ಗೊಳ್ಳಲಿದ್ದಾರೆ. ಈಗಾಗಲೇ 180 ಜನ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಮಾತನಾಡಿ, 'ಕನ್ನಡವೆಂದರೆ ಬರಿನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ' ಘೋಷಣೆಯ ವಿಚಾರ ಸಂಕಿರಣದಲ್ಲಿ ಹಲವು ಗೋಷ್ಠಿಗಳು ಆಯೋಜಿಸಲಾಗುವುದು ಎಂದರು.

ಮಹಾಜನ ಸಂಸ್ಥೆ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾಹಿತಿ

ವಿವಿಧ ಗೋಷ್ಠಿಗಳಲ್ಲಿ ಡಾ.ಕೆ.ಪುಟ್ಟಸ್ವಾಮಿ, ಡಾ.ಸಿ.ಪಿ.ರವಿಕುಮಾರ್, ಡಾ.ಅರವಿಂದ, ಕೃಪಾಕರ, ಸೇನಾನಿ, ಸ್ನೇಹ ನರಹಳ್ಳಿ, ಲಕ್ಷ್ಮೀಶ ತೋಳ್ಪಾಡಿ, ದೇವು ಪತ್ತಾರ, ಮೇಘನಾ ಸುಧೀಂದ್ರ, ಟಿ.ಜಿ.ಶ್ರೀನಿಧಿ, ಪೂರ್ಣಿಮಾ ಮಾಳಗಿಮನೆ, ರಂಜಿತ್, ಚನ್ನೇಶ್, ಮೈ.ಶ್ರೀ.ನಟರಾಜ, ಕೊಳ್ಳೇಗಾಲ ಶರ್ಮಾ, ಎನ್.ಎ.ಎಂ.ಇಸ್ಮಾಯಿಲ್ ಇತರರು ವಿಷಯ ಮಂಡಿಸಲಿದ್ದಾರೆ ಎಂದರು.

ಫೆ. 25ರಂದು ಸಮಾರೋಪ ನಡೆಯಲಿದ್ದು, ಹಿರಿಯ ಲೇಖಕ ನಾಗೇಶ್ ಹೆಗಡೆ ಪ್ರಧಾನ ಭಾಷಣ ಮಾಡುವರು. ಮೈಸೂರು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಸಂಸ್ಥೆಯ ಟಿ. ಮುರಳೀ ಧರ ಭಾಗವತ, ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಾಂಶುಪಾಲೆ ಡಾ.ಬಿ. ಆರ್. ಜಯಕುಮಾರಿ, ಸ್ನಾತಕೋತ್ತರ ಕೇಂದ್ರದ ಪ್ರೊ.ಸಿ.ಕೆ. ರೇಣುಕಾರ್ಯ ಇತರರು ಭಾಗವಹಿಸಲಿದ್ದಾರೆ ಎಂದರು. ಸಂಸ್ಥೆಯ ಡಾ.ಎಸ್.ಆರ್. ರಮೇಶ್ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 25 ಫೆಬ್ರವರಿ 2025
25 FEBRUARY 2025

ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಹೇಳಿಕೆ | ಅಂತಾರಾಷ್ಟ್ರೀಯ ವಿಚಾರಸಂಕಿರಣ

ವಿವಿಧ ಕ್ಷೇತ್ರಗಳೊಂದಿಗೆ ಸಾಹಿತ್ಯ ಮುಖಾಮುಖಿಯಾಗಲಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಸಾಹಿತ್ಯ ನಮ್ಮ ಸಾಮಾಜಿಕ ರಚನೆಯನ್ನು ಗಾಢವಾಗಿ ಪ್ರಭಾವಿಸುತ್ತಿರುವ ರಾಜಕೀಯ, ಧರ್ಮ ಹಾಗೂ ವಿಜ್ಞಾನದಂತಹ ವಲಯಗಳೊಡನೆ ಸೃಜನಶೀಲವಾಗಿ ಮುಖಾಮುಖಿಯಾಗುವ ಅಗತ್ಯವಿದೆ. ಇದು ಕನ್ನಡ ಮತ್ತು ಕರ್ನಾಟಕವನ್ನು ಕಟ್ಟುವ ಕ್ರಮವೂ ಹೌದು ಎಂದು ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆಯ ಸಹಯೋಗದಲ್ಲಿ ವಿವೇಕಾನಂದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ 'ಕನ್ನಡವೆಂದರೆ ಬರಿನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ' ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ವಿಜ್ಞಾನ- ತಂತ್ರಜ್ಞಾನ ಬದುಕಿನಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆ ತಂದಿದೆ. ಅನೇಕ ಸವಲತ್ತು ಒದಗಿಸಿಕೊಟ್ಟಿದೆ. ಬೆರಳ ತುದಿಯಲ್ಲಿ ಜಗತ್ತಿನ ದರ್ಶನವಾಗುತ್ತದೆ. ಇದೆಲ್ಲವನ್ನೂ ನಾವು ಬಳಸಿಕೊಳ್ಳುತ್ತಿದ್ದು, ಇದಕ್ಕೆ ಮೊಬೈಲ್‌ಗಿಂತ ಮತ್ತೊಂದು ನಿದರ್ಶನ ಬೇಕಿಲ್ಲ ಎಂದು ತಿಳಿಸಿದರು.

ನಾವು ಬದುಕುತ್ತಿರುವುದೇ ಜಾಗತೀಕರಣ ಹಾಗೂ ತಂತ್ರಜ್ಞಾನದ ಯುಗದಲ್ಲಿ. ಇದರ ಪರಿಣಾಮವೆಂದರೆ ಎಲ್ಲ ವಲಯಗಳ ಪಲ್ಲಟಗಳನ್ನೂ ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕು. ಅರ್ಥ ವ್ಯವಸ್ಥೆಯಲ್ಲಾಗುವ ಅಲ್ಲೋಲ ಕಲ್ಲೋಲ, ಜೀವನಶೈಲಿಯಲ್ಲಾಗುವ ಬದಲಾವಣೆ, ರೂಢಿಯ ನಂಬಿಕೆ ಅಸ್ತವ್ಯಸ್ತಗೊಳಿಸುವ ಆಧುನಿಕ ಪ್ರಗತಿಯ ವಿದ್ಯಮಾನಗಳು, ಪ್ರಕೃತಿಯ ಮೇಲಾಗುತ್ತಿರುವ ಹಲ್ಲೆ, ಮಾನವ ಸಂಬಂಧಗಳ ಮೇಲಾಗುತ್ತಿರುವ ಆಘಾತಗಳು-ಇವೆಲ್ಲವೂ ನಮ್ಮ ಬದುಕಿನ ಸಹಜ ಲಯವನ್ನು ಅಸ್ತವ್ಯಸ್ತಗೊಳಿಸುತ್ತಿವೆ ಎಂದು ತಿಳಿಸಿದರು.

ರಸೆಲ್ ಹೇಳುವಂತೆ ನಮ್ಮ ಕಾಲದಲ್ಲಿ ತಂತ್ರಜ್ಞಾನ ಸ್ವತಂತ್ರ ಅಸ್ತಿತ್ವ ಪಡೆದ ಶಾಸ್ತ್ರವಲ್ಲ; ಅದು ಜನರ ಮೇಲೆ ಸವಾರಿ ಮಾಡುತ್ತಿರುವ ಯಜಮಾನಿಕೆಯ ಶಕ್ತಿ. ಈ ಹೊತ್ತಿನಲ್ಲಿ ತಂತ್ರಜ್ಞಾನದ ಅನುಕೂಲ ಹಾಗೂ ಅಪಾಯಗಳನ್ನು ಚರ್ಚಿಸುವುದು ನಮ್ಮ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜವಾಬ್ದಾರಿ ಎಂದರು.

ಭಾರತೀಯ ಜ್ಞಾನ ಪರಂಪರೆ ಗಮನಿಸಿದರೆ ಸಾಹಿತ್ಯಕ್ಕೆ ಇದ್ದಷ್ಟೇ ಪ್ರಾಶಸ್ತ್ಯ ವಿಜ್ಞಾನಕ್ಕೂ ಇದೆ. ಗಣಿತ, ಖಗೋಳ ವಿಜ್ಞಾನ, ಆಯುರ್ವೇದ ಮುಂತಾದ ಜ್ಞಾನ ಶಾಖೆಗಳನ್ನು ನಾವು ನಿದರ್ಶನಕ್ಕಾಗಿ ಗಮನಿಸಬಹುದು. ಅದರಲ್ಲೂ ದಶಮೂಲ ಪದ್ಧತಿ ಜಗತ್ತಿಗೆ ಭಾರತ ನೀಡಿದ ಬಹುದೊಡ್ಡ ಕೊಡುಗೆ. ಅಂತೆಯೇ ಸೊನ್ನೆಯ ಪರಿಕಲ್ಪನೆ. ನಮ್ಮ ಅಧ್ಯಯನ ಕ್ರಮದಲ್ಲಿ ಒಂದು ರೀತಿಯ ಸಮಗ್ರತೆ ಇತ್ತು. ಆದರೆ, ಬರಬರುತ್ತಾ ನಮ್ಮ ಅಧ್ಯಯನದ ಕ್ರಮ ಬಿಡಿಯಾದ ನೆಲೆಯಲ್ಲಿ ನಡೆಯುತ್ತಿದೆಯೇ ಹೊರತು, ಇಂಡಿಯಾದ ಪರಿಕಲ್ಪನೆಯಿಂದ ದೂರ ಸರಿದಂತೆ ಕಾಣುತ್ತದೆ ಎಂದರು.

ವಿಶೇಷ ನೈಪುಣ್ಯತೆಯ ನೆಲೆಯಲ್ಲಿ ಆಳಕ್ಕೆ ಇಳಿಯುತ್ತಾ ಹೋಗಿ ವಿಸ್ತಾರವನ್ನು ಕಳೆದುಕೊಂಡಿತೇ? ಅನ್ಯಜ್ಞಾನ ಶಿಸ್ತುಗಳ ಜತೆ ಅನುಸಂಧಾನ ಕಡಿಮೆಯಾಯಿತೇ? ಇಂದು ಮಾನವ ಸಂಬಂಧಗಳಂತೆಯೇ ಜ್ಞಾನ ಶಾಖೆಗಳೂ ದ್ವೀಪಗಳಾಗುತ್ತಿವೆಯೇ? ಇಂತಹ ಪ್ರಶ್ನೆಗಳಿಗೆ ಮುಖಾಮುಖಿಯಾಗಬೇಕಾಗಿದೆ ಎಂದು ಕರೆಕೊಟ್ಟರು.

ವಿಜ್ಞಾನ ಮತ್ತು ಸಾಹಿತ್ಯ ಪರಸ್ಪರ ವಿರೋಧವೆಂಬ ರೂಢಿಯ ನಂಬುಗೆ ಅರ್ಥವಿಲ್ಲದ್ದು. ಸಾಹಿತ್ಯ ಭಾವ ಜಗತ್ತಿಗೆ ಸಂಬಂಧಪಟ್ಟದ್ದು, ವಿಜ್ಞಾನ ಭಾವ ಜಗತ್ತಿಗೆ ಸಂಬಂಧಪಟ್ಟದ್ದು ಎಂಬುದು ನಿಜವಾದರೂ, ಇವುಗಳ ನಡುವೆ ಅರ್ಥಪೂರ್ಣ ಸಂಬಂಧವಿದೆ ಎಂದು ಹೇಳಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ ಟಿ. ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಸಾಕ್ಷಿ ನುಡಿ ನಡೆಸಿಕೊಟ್ಟು, ಜಗತ್ತಿನಲ್ಲಿ ಯಾವ ಭಾಷೆಯಲ್ಲೂ ಇರದ ವೈಜ್ಞಾನಿಕ ನೆಲೆ, ಹಿನ್ನೆಲೆ ಕನ್ನಡ ಭಾಷೆಗೆ ಇದೆ. ಮೂಲ ಕಾವ್ಯ ಇರುವುದು ಕನ್ನಡ ಭಾಷೆಯಲ್ಲಿ ಎಂದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ತಂತ್ರಜ್ಞಾನದ ಮಧ್ಯೆ ಕನ್ನಡ ಮತ್ತು ಭಾವದ ಜಗತ್ತನ್ನು ಹೇಗೆ ಉಳಿಸಬೇಕು ಎಂಬ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ನಡೆಸಬೇಕಿದೆ ಎಂದರು.

ಬೆಂಗಳೂರಿನ ಅಭಿನವದ ನ.ರವಿಕುಮಾರ, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕಿ ಡಾ.ವಿನೋದಮ್ಮ, ಡಾ.ಎಸ್.ಆರ್.ರಮೇಶ್, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ. ರೇಣುಕಾರ್ಯ ಇತರರಿದ್ದರು.



ವಿಜಯವಾಣಿ ಚಿತ್ರ

ನಗರದ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ 'ಕನ್ನಡವೆಂದರೆ ಬರಿ ನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ' ಕುರಿತು ವಿಚಾರಸಂಕಿರಣವನ್ನು ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಉದ್ಘಾಟಿಸಿದರು. ಡಾ. ಟಿ.ವಿಜಯಲಕ್ಷ್ಮೀ ಮುರಳೀಧರ್, ಡಾ.ಬಿ.ಆರ್. ಜಯಕುಮಾರಿ, ನ.ರವಿಕುಮಾರ, ಡಾ.ಎಚ್.ಆರ್.ತಿಮ್ಮೇಗೌಡ ಇತರರಿದ್ದರು.

ಸಂಸ್ಕೃತಿ ಗೊತ್ತಿರುವುದಿಲ್ಲ

ಮೌಢ್ಯವನ್ನು ತೊಡೆದು ಹಾಕಿ ನವ ಸಮಾಜ ನಿರ್ಮಾಣಕ್ಕೆ ಕಾರಣವಾಗಿ ಕ್ರಾಂತಿಕಾರಕ ಬದಲಾವಣೆಯನ್ನು ತಂದ ವಿಜ್ಞಾನದ ಬಗ್ಗೆ ಕುವೆಂಪು ಅವರಿಗೆ ಅಪಾರ ಮೆಚ್ಚುಗೆ ಇತ್ತು. ವಿಜ್ಞಾನಿಗಳಿಗೆ ಸಾಹಿತ್ಯಿಕ ಸಂಸ್ಕೃತಿ ಗೊತ್ತಿರುವುದಿಲ್ಲ. ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ತಿಳಿದಿರುವುದಿಲ್ಲ. ಲೋಕದ ಹಲವು ಸಮಸ್ಯೆಗಳು ಪರಿಹಾರಗೊಳ್ಳದೇ ಇರುವುದಕ್ಕೆ ಈ ಬಿರುಕೇ ಕಾರಣ ಎನ್ನುವುದು ಸ್ನೋನ ವಾದ ಎಂದು ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಬೇಸರ ವ್ಯಕ್ತಪಡಿಸಿದರು. ಮೊಬೈಲ್ ಅನೇಕ ಅನುಕೂಲ ಕಲ್ಪಿಸಿದ್ದರೂ ಮಾನವ ಸಂಘ ಜೀವಿ ಎಂಬ ಮೂಲ ತತ್ವವನ್ನೇ ಪಲ್ಲಟಗೊಳಿಸಿಬಿಟ್ಟಿದೆ. ಮನುಷ್ಯ ಸಂಬಂಧಗಳೇ ಅರ್ಥಹೀನವಾಗುತ್ತಿವೆ. ಸಂದೇಶಗಳೇ ಸಂಬಂಧ ಸಾಧನವಾಗಿವೆಯೇ ಹೊರತು ಮುಖತಃ ಭೇಟಿಯಾಗಲಿ, ಪರಸ್ಪರ ಒಡನಾಟವಾಗಲಿ ದೂರವಾಗುವುದರ ಮೂಲಕ ಸಾಂಘಿಕ ಬದುಕಿನ ಸಂತಸದಿಂದ ಮನುಷ್ಯ ವಂಚಿತನಾಗುತ್ತಿರುವ ಸಂದರ್ಭ ಸೃಷ್ಟಿಯಾಗುತ್ತಿದೆ ಎಂದರು. ಬಳಸಿ ಬಿಸಾಕು ಎಂಬುದು ಆಧುನಿಕತೆ ಒದಗಿಸಿಕೊಟ್ಟಿರುವ ಮತ್ತೊಂದು ಸವಲತ್ತು. ಇದು ನಮಗೆ ಅನೇಕ ಬಗೆಯಲ್ಲಿ ಅನುಕೂಲ ಒದಗಿಸಿಕೊಟ್ಟಿದೆ ಎಂಬುದು ನಿಜ. ಆದರೆ, ಅಪ್ಪ, ಅಮ್ಮ, ಅಣ್ಣ, ತಂಗಿ, ಹೆಂಡತಿ, ಗಂಡ, ಗೆಳೆಯ ಈ ನೆಲೆಯಲ್ಲೂ ಬಳಸಿ ಬಿಸಾಕುವ ಭಾವನೆ ಬಲಗೊಂಡಂತೆ ಕಾಣಿಸುತ್ತಿದೆ ಎಂದರು.

MFGE In the Eyes of the Press.....

ವಿಜಯವಾಣಿ

ಕನ್ನಡಿಗರ ಧ್ವನಿ

ಬುಧವಾರ 26 ಫೆಬ್ರವರಿ 2025
26 FEBRUARY 2025

ವಿಜ್ಞಾನ ಲೇಖಕ ನಾಗೇಶ್ ಹೆಗಡೆ ಆಶಯ | ವಿಚಾರ ಸಂಕಿರಣ ಸಮಾರೋಪ

ವಿಜ್ಞಾನದ ಜ್ಞಾನ ಪ್ರತಿಯೊಬ್ಬರೂ ಬೆಳೆಸಿಕೊಳ್ಳಲಿ



ನಗರದ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಜಯಕುಮಾರಿ ಅವರ 2 ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. ನಾಗೇಶ್ ಹೆಗಡೆ, ಡಾ.ಟಿ.ವಿಜಯಲಕ್ಷ್ಮೀ ಮುರುಳೀಧರ್, ಡಾ.ನರಹಳ್ಳಿ ಬಾಲಸುಬ್ರಮಣ್ಯ, ಪ್ರೊ.ಸಿ.ಕೆ. ರೇಣುಕಾರ್ಯ ಇನ್ನಿತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮೌಢ್ಯ ಜ್ಞಾನದ ಮೇಲೆ ಸವಾರಿ ಮಾಡುತ್ತಿದೆ. ನಮ್ಮ ಕೈಗೆ ಜ್ಞಾನದ ದೀವಿಗೆ ಆಗಿ ಬರಬೇಕಾದ ಕೃತಕಬುದ್ಧಿಮತ್ತೆ ತಂತ್ರ ಜ್ಞಾನವು ಅಜ್ಞಾನವಾಗಿ ಜನರಿಗೆ ಮಾಹಿತಿ ರವಾನಿಸುತ್ತಿವೆ ಎಂದು ವಿಜ್ಞಾನ ಲೇಖಕ ನಾಗೇಶ್ ಹೆಗಡೆ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಸಂಜೆ ಆಯೋಜಿಸಿದ್ದ 'ಕನ್ನಡವೆಂದರೆ ಬರಿ ನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ' ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರಸಂಕಿರಣದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿ, ವಿಜ್ಞಾನವನ್ನು ಸರಳವಾಗಿ ಹೇಳುವಲ್ಲಿ ಶಿಕ್ಷಕರು ಕೂಡ ವಿಫಲರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿಜ್ಞಾನದ ಜ್ಞಾನವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ವಿಜ್ಞಾನ ಎಂಬುದು ನಮ್ಮ ಹೃದಯಕ್ಕೆ ಇಳಿಯುತ್ತಿಲ್ಲ. ಇದು ಅರ್ಥವಾಗದೇ ಇರುವುದರಿಂದ ಮತ್ತು ವಿಜ್ಞಾನದ ಮೇಲೆ ಆಸಕ್ತಿ ಬೆಳೆಯದಿರುವುದೇ ಪ್ರಾಣಿ ಸಂಕುಲದ ಅವನತಿಗೆ ಕಾರಣವಾಗುತ್ತಿದ್ದು, ಜತೆಗೆ, ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದರು. ಚಾಮರಾಜ ನಗರದಲ್ಲಿ ವಿಷಕಾರಿ ತರಕಾರಿ ತಿಂದು ಒಬ್ಬ ರೈತ ಮೃತ ಪಟ್ಟ. ಇದಕ್ಕೆ ಕಾರಣ ತರಕಾರಿಗೆ ಸಿಂಪಡಿಸುವ ಔಷಧದ ಮೇಲೆ ಎಚ್ಚರಿಕೆಯ ಮಾಹಿತಿಯನ್ನು ಇಂಗ್ಲಿಷ್‌ನಲ್ಲಿ ಮಾತ್ರ ಮುದ್ರಿಸಿ, ಕನ್ನಡವನ್ನು ನಿರ್ಲಕ್ಷಿಸಿದ್ದು. ರೈತರಿಗೆ ವೈಜ್ಞಾನಿಕ ಮಾಹಿತಿಗಳನ್ನು ಸ್ಥಳೀಯ ಭಾಷೆಗಳಲ್ಲಿ ನೀಡುವ ಕೆಲಸವನ್ನು ಕಂಪನಿಗಳು ಮಾಡುತ್ತಿಲ್ಲ ಎಂದರು. ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಮಾತನಾಡಿ, ಸಂಕಿರಣದ ವಿಚಾರಗಳನ್ನು ಗಾಳಿಯಲ್ಲಿ ತೂರದೇ ಆ ವಿಚಾರಗಳನ್ನು ಜೀವನದಲ್ಲಿ ಆಳವಡಿಸಿಕೊಳ್ಳಬೇಕು ಎಂದರು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ ಮಾತನಾಡಿ, ಜಗತ್ತಿನಲ್ಲಿ ಇರುವುದೆಲ್ಲವೂ ವಿಜ್ಞಾನವೇ ಆಗಿದ್ದು, ಎಲ್ಲರೂ ಕೂಡ ವಿಜ್ಞಾನಿಗಳೇ ಆಗಿದ್ದಾರೆ. ಅದಕ್ಕೆ ಸಾಹಿತ್ಯ ಮಾಧ್ಯಮವಾಗಿ ಕೆಲಸ ಮಾಡಬೇಕು. ವೈಜ್ಞಾನಿಕ ಸಾಹಿತ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಕೇಳಿಕೊಂಡರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರುಳೀಧರ್ ಮಾತನಾಡಿದರು. ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಅವರ 'ಹೊನ್ನಾರಿನ ಗೆರೆಗಳು ಮತ್ತು 'ಕಾಲಕಟ್ಟಳೆಯ ಮೀರಿ' ಎಂಬ ಎರಡು ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. ವಿಚಾರ ಸಂಕಿರಣದಲ್ಲಿ 10ಕ್ಕೂ ಹೆಚ್ಚು ಸಂಶೋಧಕರು ಮತ್ತು ತಜ್ಞರಿಂದ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರುಳೀಧರ್ ಭಾಗವತ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಇನ್ನಿತರರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 24.02.2025

- ಮಹಾಜನ ಕಾಲೇಜು, ಅಭಿನವ: ಕನ್ನಡವೆಂದರೆ ಬರಿನುಡಿಯಲ್ಲ ಅದಕಿದೆ ವಿಜ್ಞಾನದ ಸ್ವರ್ಶ– ವಿಚಾರ ಸಂಕಿರಣ, ಉದ್ಘಾಟನೆ, ಭಾಗವಹಿಸುವವರು– ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಡಾ.ಬಿ.ಆರ್. ಜಯಕುಮಾರಿ, ನ. ರವಿಕುಮಾರ್, ಡಾ.ಎಸ್.ಆರ್. ರಮೇಶ್, ಡಾ.ಎಚ್.ಆರ್. ತಿಮ್ಮೇಗೌಡ, ಡಾ.ವಿನೋದಮ್ಮ, ಜಯಲಕ್ಷ್ಮೀಪುರಂ, ವಿವೇಕಾನಂದ ಸಭಾಂಗಣ, ಬೆಳಗ್ಗೆ 9.30 ರಿಂದ.

ಪ್ರಜಾವಾಣಿ

ಸೋಮವಾರ • ಫೆಬ್ರುವರಿ 24, 2025

ಎಸ್‌ಬಿಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ' ವಿಷಯ ಕುರಿತ ವಿಚಾರ ಸಂಕಿರಣ, ಉದ್ಘಾಟನೆ– ನರಹಳ್ಳಿ ಬಾಲಸುಬ್ರಹ್ಮಣ್ಯ, ಉಪಸ್ಥಿತಿ– ಟಿ.ವಿಜಯಲಕ್ಷ್ಮಿ ಮುರಳೀಧರ್, ನ.ರವಿಕುಮಾರ್, ಎಸ್. ಆರ್.ರಮೇಶ್, ಎಚ್.ಆರ್.ತಿಮ್ಮೇಗೌಡ, ವಿನೋದಮ್ಮ, ಸ್ಥಳ: ಜಯಲಕ್ಷ್ಮೀಪುರಂ, ಬೆಳಿಗ್ಗೆ 9.30

ಆಂದೋಲನ

ದಿನ ಪತ್ರಿಕೆ

ಸೋಮವಾರ, 24 ಫೆಬ್ರವರಿ 2025

- **ವಿಚಾರ ಸಂಕಿರಣ**

ಬೆಳಿಗ್ಗೆ 9.30ರಿಂದ 10.30ರವರೆಗೆ, ಮಹಾಜನ ವಿದ್ಯಾಸಂಸ್ಥೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ, ಅಭಿನವ ಬೆಂಗಳೂರು, ವಿಷಯ: ಕನ್ನಡವೆಂದರೆ ಬರಿ ನುಡಿಯಲ್ಲ ಅದಕಿದೆ. ವಿಜ್ಞಾನದ ಸ್ಪರ್ಶ. ಮುಖ್ಯ ಅತಿಥಿಗಳು– ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪ್ರಕಾಶಕ ನ.ರವಿಕುಮಾರ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ಸ್ಥಳ–ವಿವೇಕಾನಂದ ಸಭಾಂಗಣ, ಮಹಾಜನ ಕಾಲೇಜು.

ವಿಜಯ ಕರ್ನಾಟಕ

ಸೋಮವಾರ,24 ಫೆಬ್ರವರಿ 2025

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಅಭಿನವ ಬೆಂಗಳೂರು:** ಕನ್ನಡವೆಂದರೆ ಬರಿನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ- ಬಹುಮುಖಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ- ಮಹಾಜನ ಪ್ರಥಮದರ್ಜೆ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಉಪಸ್ಥಿತಿ- ಅಭಿನವ ಬೆಂಗಳೂರಿನ ನ.ರವಿಕುಮಾರ, ಕಾಲೇಜಿನ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಡಾ.ಎಚ್.ಆರ್.ತಿಮ್ಮೇಗೌಡ, ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣ, ಬೆ.9.30ಕ್ಕೆ

ಆಂದೋಲನ

ದಿನ ಪತ್ರಿಕೆ

ಶುಕ್ರವಾರ, 28 ಫೆಬ್ರವರಿ 2025

● **ರಾಷ್ಟ್ರೀಯ ವಿಜ್ಞಾನ ದಿನ**

ಬೆಳಿಗ್ಗೆ 10.30ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ-ಸಿಎಫ್‌ಟಿಆರ್‌ಐ-ಸಿಎಸ್ ಐಆರ್ ಹಿರಿಯ ವಿಜ್ಞಾನಿ ಡಾ.ಆಶಾ ಮಾರ್ಟಿನ್, ಅಧ್ಯಕ್ಷತೆ-ಮಹಾಜನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಸ್ಥಳ-ಕಾಲೇಜು ಸಭಾಂಗಣ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 24 ಫೆಬ್ರವರಿ 2025

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು:** 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕ್ಕಿದೆ ವಿಜ್ಞಾನದ ಸ್ಪರ್ಶ' ಕುರಿತು ಎರಡು ದಿನಗಳ ಅಂತರ ಕಾಲೇಜು ವಿಚಾರ ಸಂಕಿರಣ. ತೋರಣ ನಾಂದಿ: ಬಹುಮುಖಿ ಚಿಂತಕರಾದ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ. ಸಾಕ್ಷಿ ನುಡಿ: ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ ಟಿ.ವಿಜಯಲಕ್ಷ್ಮಿ ಮುರಳೀಧರ್, ನುಡಿ ತೋರಣ: ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ವಿನ್ಯಾಸದ ನುಡಿ: ಅಭಿನವದ ನ. ರವಿಕುಮಾರ್, ನಂತರ ವಿಚಾರ ಸಂಕಿರಣ, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾ ಸಂಸ್ಥೆ, ಬೆಳಗ್ಗೆ 9.30ರಿಂದ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 28.02.2025

ಸಾಮಾಜಿಕ ಸೇವೆಯ ಮಹತ್ವ ಅರಿಯಲು ಎನ್ನೆಸ್ಸೆಸ್ ಸಹಕಾರಿ

ಪ್ರಾಂಶುಪಾಲೆ ಡಾ. ಜಯಕುಮಾರಿ ಅಭಿಮತ | ಮಹಾಜನ ಕಾಲೇಜಿನ ಎನ್‌ಎಸ್‌ಎಸ್ ಶಿಬಿರ ಸಮಾರೋಪ



• **ಕನ್ನಡಪ್ರಭ ವಾರ್ತೆ** ಮೈಸೂರು

ಸಾಮಾಜಿಕ ಸೇವೆಯ ಮಹತ್ವವನ್ನು ಅರಿತುಕೊಳ್ಳಲು ರಾಷ್ಟ್ರೀಯ ಸೇವಾ ಯೋಜನೆಯು ಸಹಕಾರಿಯಾಗಿದೆ ಎಂದು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಟಿ. ನರಸೀಪುರ ತಾಲೂಕಿನ ಮಾರಗೌಡನಹಳ್ಳಿಯಲ್ಲಿ ಆಯೋಜಿಸಿದ್ದ ವಾರ್ಷಿಕವಿಶೇಷಶಿಬಿರದಸಮಾರೋಪಸಮಾರಂಭದಲ್ಲಿ ಮಾತನಾಡಿದ ಅವರು, ದೈನಂದಿನ ಬದುಕಿನಲ್ಲಿ ಸಮಯಪಾಲನೆ, ನಾಯಕತ್ವದ ಗುಣ, ಶಿಸ್ತು, ಒಗ್ಗಟ್ಟು, ಸಾಮಾಜಿಕ ಸೇವಾ ಮನೋಭಾವ, ವ್ಯಕ್ತಿತ್ವ ವಿಕಸನ ಹಾಗೂ ಜೀವನದ ಮೌಲ್ಯಗಳನ್ನು ಅರಿಯಲು ಎನ್ ಎಸ್‌ಎಸ್ ಶಿಬಿರಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಎನ್‌ಎಸ್‌ಎಸ್ ಶಿಬಿರವು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸು. ಯುವಜನತೆಯಲ್ಲಿ ಸೇವಾ ಮನೋಧರ್ಮ ರೂಪಿಸಿ, ಗ್ರಾಮ್ಯ ಬದುಕಿನ ಒಳನೋಟಗಳನ್ನು ಅರಿಯುವಂತೆ ಮಾಡಲು ಸಹಕಾರಿಯಾಗಿದೆ. ಇದನ್ನು ಪಡೆಯುವಲ್ಲಿ ನೀವೆಲ್ಲಾ ಯಶಸ್ವಿಯಾಗಿದ್ದೀರಾ ಎಂಬುದನ್ನ ಗ್ರಾಮಸ್ಥರು ತೋರಿದ ಪ್ರೀತಿ, ವಿಶ್ವಾಸದಲ್ಲಿ ಕಂಡು ಬಂದಿದೆ. ಇಲ್ಲಿ ಕಲಿತದ್ದನ್ನು ನೀವು ಜೀನವದುದ್ದಕ್ಕೂ ಪಾಲಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಬನ್ನೂರು ಸಂತೇಮಾಳದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಗೂಳಿಗೌಡ ಮಾತನಾಡಿ, ಯುವಕ- ಯುವತಿಯರು ಶಿಕ್ಷಣದಿಂದ ದೂರ ಉಳಿಯದಿರಿ ಹಾಗೂ ಉತ್ತಮ ವಿದ್ಯಾಭ್ಯಾಸವನ್ನು ಪಡೆದು ಉತ್ತಮ ಜೀವನ ರೂಪಿಸಿಕೊಂಡು, ಹೆತ್ತವರಿಗೆ ಹಾಗೂ ದೇಶಕ್ಕೆ ಆಸ್ತಿಯಾಗಿರಬೇಕು ಎಂದು ಹೇಳಿದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್‌ಡಾ.ಎಚ್. ಶ್ರೀಧರ, ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಕೆ. ನಂದೀಶ್‌ಕುಮಾರ್, ಹನುಮನಾಳು ಗ್ರಾಪಂ ಅಧ್ಯಕ್ಷ ಮಾರಗೌಡನಹಳ್ಳಿ ಸುರೇಶ್, ಶ್ರೀ ಲಕ್ಷ್ಮೀವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್‌ಅಧ್ಯಕ್ಷೆ ಜಯಾ ಟಿ. ಗೌಡ, ರೋಟರಿಸಂಸ್ಥೆಯ ಅಧ್ಯಕ್ಷವೆಂಕಟೇಶ್, ಮುಖಂಡರಾದ ಹೊಂಬೇಗೌಡ, ಎಚ್. ರಾಮೇಗೌಡ, ದೇವರಾಜು, ರಾಜೇಶ್, ಕೃಷ್ಣಪ್ಪ, ಶಾಂತಪ್ಪ ರಾಮೇಗೌಡ, ಮಾದೇಗೌಡ, ಶಂಕರೇಗೌಡ, ಸಹಾಯಕ ಪ್ರಾಧ್ಯಾಪಕರಾದ ಜೆ. ಮನೋಜ್‌ಕುಮಾರ್, ಆರ್. ಶ್ವೇತಾ ಇದ್ದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ ಸ್ವಾಗತಿಸಿದರು. ಡಾ.ಸಿ.ಎಸ್. ಸಿದ್ದರಾಜು ವಂದಿಸಿದರು. ಎಚ್.ಜೆ. ಚಂದನಾ ಮತ್ತು ಅಂಕಿತಾ ನಿರೂಪಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 3.02.2025

ಮಹಾಜನ ಕಾಲೇಜಿನಲ್ಲಿ ವೃತ್ತಿಪರ ಕೋರ್ಸ್ ಸಂವಾದಾತ್ಮಕ ಅಧಿವೇಶನ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗಗಳು ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ವೃತ್ತಿಪರ ಕೋರ್ಸ್ ಕುರಿತು ಸಂವಾದ ಕಾರ್ಯಕ್ರಮವನ್ನು ಗುರುವಾರ ವಿದ್ಯಾರ್ಥಿಗಳಿಗಾಗಿ ಆಯೋಜಿಸಿತ್ತು.

ಗ್ರೇಟರ್ ನ್ಯಾಕ್‌ನ ನಿರ್ದೇಶಕರು ಮತ್ತು ಶೈಕ್ಷಣಿಕ ವ್ಯವಸ್ಥಾಪಕ ಎಸ್. ನಿಖಿತ ಮತ್ತು ವ್ಯವಸ್ಥಾಪಕ ನಿರ್ದೇಶಕರು ಮತ್ತು ವಿಷಯ ಪರಿಣಿತರಾದ ಸುಜಯ್ ಕುಮಾರ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ವೃತ್ತಿಪರ ಕೋರ್ಸ್‌ಗಳ ಪ್ರಾಮುಖ್ಯತೆ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿಯಶಸ್ಸನ್ನುಪಡೆಯಲುವಿದ್ಯಾರ್ಥಿಗಳಿಗೆ



ಅಗತ್ಯವಿರುವ ಪ್ರಯತ್ನಗಳನ್ನು ವಿವರಿಸಿದರು.

ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳಿದ್ದು, ವಿದ್ಯಾರ್ಥಿಗಳು ಇರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್, ಕಾರ್ಯಕ್ರಮ ಸಂಯೋಜಕ ಡಾ.ಕೆ.ಎಸ್. ಮುತ್ತಮ್ಮ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಇದ್ದರು.

ವಿದ್ಯಾರ್ಥಿ ಸಂಯೋಜಕ ಕರಿಷ್ಮಾತಿವಾರಿ ಸ್ವಾಗತಿಸಿ, ವಂದಿಸಿದರು. ಚೈತ್ರ, ಗೌತಮ್, ಧನುಷ್ ಹೊನ್ನಾಳ್ ಹಾಗೂ ವಾಣಿಜ್ಯಶಾಸ್ತ್ರಮತ್ತು ಆಡಳಿತ ವ್ಯವಹಾರಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಯೋಜನ
ದಿನ ಪತ್ರಿಕೆ

ಮಂಗಳವಾರ, 11 ಫೆಬ್ರವರಿ 2025

ಥ್ರೋಬಾಲ್: ಮಹಾಜನ ಕಾಲೇಜಿಗೆ ಪಾರಿತೋಷಕ



ಮೈಸೂರು: ಶ್ರೀರಾಂಪುರದ ಕೈಸ್ಟ್ ಕಾಲೇಜು ವತಿಯಿಂದ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಮೈಸೂರಿನ ಎಸ್.ಜಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮಹಿಳೆಯರ ಮತ್ತು ಪುರುಷರ ತಂಡಗಳು ಕ್ರಮವಾಗಿ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿ ಪ್ರಶಸ್ತಿ ಹಾಗೂ ಪಾರಿತೋಷಕವನ್ನು ಪಡೆದಿವೆ.

ಎರಡೂ ತಂಡಗಳಿಗೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಜಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಡಾ.ಎಚ್.ಎನ್.ಭಾಸ್ಕರ್ ಅವರು ಮಹಿಳೆಯರ ಥ್ರೋಬಾಲ್ ತಂಡದ ನಾಯಕಿ ಕೆ.ಎ.ಸಾಗರಿ, ಪುರುಷರ ವಾಲಿಬಾಲ್ ತಂಡದ ನಾಯಕ ಕಾರ್ತಿಕ್, ಕೆ.ಸೋಮಶೇಖರ್, ಕವಿತಾ, ಟಿ.ಜಿ.ಹರ್ಷಿತಾ, ಎಂ.ಕೆ.ನಂದನಾ, ಕೃತಿಕಾ, ಎಂ.ಕೆ.ಸಂಜನಾ, ಅನುಶ್ರೀ, ಎಂ.ಟಿ.ಪ್ರತೇಕ್ಷ್, ಎಸ್.ಶಿವಕುಮಾರ್, ಎಚ್.ಜೆ.ಕುಶಾಲ್, ಯು.ಪಿ.ಮನುಕಿರಣ್, ರಕ್ಷಿತ್, ಬಿ.ವಿ.ಮನಿಷ್, ಎನ್.ಆರ್.ತೇಜಸ್, ಜೆ.ವರುಣ್, ಎಂ.ಸುಪ್ರೀತ್, ಕೆ.ಶಶಾಂಕ್, ಡಿ.ಬಿ.ಶಿವ, ಎನ್.ಎಸ್.ಆಕಾಶ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಮಂಗಳವಾರ 11.02.2025



ಮೈಸೂರಿನ ಕ್ರೈಸ್ಟ್ ಕಾಲೇಜು ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್‌ನಲ್ಲಿ ಪ್ರಥಮ, ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಮಹಾಜನ ಪ್ರಥಮ ದರ್ಜೆ ಕಾಲೇಜು ಪಡೆದಿದೆ. ವಿಜೇತರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲೆ ಡಾ. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 11 ಫೆಬ್ರವರಿ 2025

ಥ್ರೋಬಾಲ್‌ನಲ್ಲಿ ಪ್ರಥಮ, ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ಮಹಾಜನ ಕಾಲೇಜು ತಂಡಗಳು



ಮೈಸೂರಿನ ಶ್ರೀರಾಂಪುರದ ಕ್ರೈಸ್ಟ್ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪಡೆದುಕೊಂಡಿತು.

ಮೈಸೂರು, ಫೆ.10–ಮೈಸೂರಿನ ಶ್ರೀರಾಂಪುರದ ಕ್ರೈಸ್ಟ್ ಕಾಲೇಜಿನಲ್ಲಿ ಆಯೋಜಿಸಿದ್ದ, ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಮೈಸೂರಿನ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪಡೆದುಕೊಂಡಿತು.

ವಿಜೇತರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ಮಹಿಳೆಯರ ಥ್ರೋಬಾಲ್ ತಂಡದ ನಾಯಕಿ ಸಾಗರಿ ಕೆ.ಎ., ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂಧನ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಡಾ. ಹೆಚ್.ಎನ್. ಭಾಸ್ಕರ್ ಹಾಗೂ ಪುರುಷರ ವಾಲಿಬಾಲ್ ತಂಡದ ನಾಯಕ ಕಾರ್ತಿಕ್, ಸೋಮಶೇಖರ್ ಕೆ, ಕವಿತಾ, ಹರ್ಷಿತಾ ಟಿ.ಜಿ, ಸ್ಪಂದನಾ ಎಂ.ಕೆ., ಕೃತಿಕಾ, ಸಂಜನಾ ಎಂ.ಕೆ., ಅನುಶ್ರೀ, ಪ್ರತೇಕ್ಷ್ ಎಂ.ಟಿ., ಶಿವ ಕುಮಾರ್, ಕುಶಾಲ್ ಹೆಚ್.ಜೆ., ಮನು ಕಿರಣ್ ಯು.ಪಿ, ರಕ್ಷಿತ್, ಮನಿಷ್ ಬಿ.ವಿ., ತೇಜಸ್ಸ್ ಎನ್.ಆರ್., ವರುಣ್ ಜೆ. ಸುಪ್ರೀತ್ ಎಂ, ಶಶಾಂಕ್, ಶಿವ ಡಿ.ಬಿ., ಆಕಾಶ್ ಇನ್ನಿತರರು ಉಪಸ್ಥಿತರಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 17 ಫೆಬ್ರವರಿ 2025

ವಾರದ ಸಮಾವೇಶದಲ್ಲಿ ಕುಲಸಚಿವ ಡಾ.ಎನ್.ನಾಗರಾಜರಿಗೆ ಸನ್ಮಾನ

ಮೈಸೂರು, ಫೆ. 16– ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ನಿರ್ದೇಶಕರು ಹಾಗೂ ಕುಲಸಚಿವ (ಪರೀಕ್ಷಾಂಗ)ಡಾ.ಎನ್.ನಾಗರಾಜ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಮಾತನಾಡಿ, ಸಾಧಕ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡುತ್ತಾ, ಮಹಾಜನ ಪ್ರಥಮ ದರ್ಜೆ ಕಾಲೇಜು ಆರಂಭದಿಂದಲೂ ಪಠ್ಯ ಬೋಧನೆ ಜೊತೆಗೆ, ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳು, ಸಮಾಜ ಸೇವಾ ಕಾರ್ಯಗಳು ಮೊದಲಾದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿರುವುದು ಶ್ಲಾಘನೀಯ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯ ಕುಮಾರಿ, ಆಡಳಿತ ನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ತಿಮ್ಮೇಗೌಡ, ಪ್ರೈಮಾನಿಟರ್ ಕೆ.ಎಸ್.ರವೀಂದ್ರ, ಡೆಪ್ಯುಟಿ ಪ್ರೈಮಾನಿಟರ್ ಆದ ಅಭಯ್ ಮುರಳೀಧರ್, ಸ್ಟ್ರೀಮ್ ಹೆಡ್ ಆದ ಸಂಜನಾ ವಿ ಶಾಖಾಪೂರ್, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.



ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರದ ಸಮಾವೇಶದಲ್ಲಿ ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಡಾ.ಎನ್. ನಾಗರಾಜ ಅವರನ್ನು ಸನ್ಮಾನಿಸಲಾಯಿತು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 8.02.2025

ವಿದ್ಯಾರ್ಥಿಗಳಿಗೆ ಸಲಹೆ ಬಿಬಿಎ, ಬಿಬಿಎಂ ವಿದ್ಯಾರ್ಥಿಗಳಿಗೆ ಕಾರ್ಯಾಗಾರ

ನಿರಂತರ ಅಭ್ಯಾಸ ಮಾಡಿ: ರಚನಾ ಪ್ರದೀಪ್



• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಅವಧಿಯಲ್ಲಿ ಕಲಿಕೆಗೆ ತೊಡಗಿಸಿ ಕೊಂಡು ನಿರಂತರ ಅಭ್ಯಾಸ ಮಾಡಬೇಕು ಎಂದು ರಮ್ಮನಹಳ್ಳಿಯ ಸಂತ ಜೋಸೆಫರ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ರಚನಾ ಪ್ರದೀಪ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿಬಿಎ, ಬಿಬಿಎಂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪರಿಣಾಮಕಾರಿ ಸಂವಹನ ಕಾರ್ಯಾಗಾರದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಸಂವಹನ - ವೃತ್ತಿಪರ ಮತ್ತು ವೈಯಕ್ತಿಕ ಬೆಳವಣಿಗೆಗೆ ಪ್ರಮುಖ ಪಾತ್ರ ವಿಚಾರಗಳನ್ನು ಉದಾಹರಣೆಯಮೂಲಕತಿಳಿಸಿಕೊಟ್ಟರು. ನಿರಂತರ ಅಭ್ಯಾಸದಿಂದ ಮಾತ್ರ ನಾವು ವಿಚಾರಗಳನ್ನು ಸರಿಯಾಗಿ ಮಂಡನೆ ಮಾಡಲು, ಸಮರ್ಥವಾಗಿ ಅಭಿವೃದ್ಧಿಯಾಗಲುಸಾಧ್ಯವೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ವಿದ್ಯಾರ್ಥಿ ಸಮೂಹ ತಮ್ಮ ಕಲಿಕೆಯಲ್ಲಿ ತೊಡಗಿಕೊಳ್ಳಬೇಕು. ನೀವು ಕಲಿಕೆಗೆ ಹೆಚ್ಚು ಒತ್ತು ನೀಡಿ ಈ ರೀತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದರ ಸದುಪಯೋಗ ಪಡೆದುಕೊಂಡರೆ ನಮಗೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸಲು ಸ್ಫೂರ್ತಿ ನೀಡಲಿದೆ. ಇದರಿಂದ ಶಿಕ್ಷಣದ ಮೌಲ್ಯ ವೃದ್ಧಿಯಾಗಲಿದೆ ಎಂದರು. ಐಕ್ಯೂಎಸಿ ಸಂಚಾಲಕಿಗೀತಾ, ಬಿಬಿಎ ಮತ್ತು ಬಿ.ಕಾಂ ವಿಭಾಗದ ಮುಖ್ಯಸ್ಥಡಾ. ಶಿವಕುಮಾರ್, ಕಾರ್ಯಕ್ರಮದ ಆಯೋಜಕಿ ಕಾವ್ಯಶ್ರೀ, ಕೀರ್ತಿ ರಾಜ್ ಕಮಲ್, ವಿದ್ಯಾರ್ಥಿ ಸಂಯೋಜಕರಾದ ಪಂಚಮ್, ಹರ್ಷಿತ್, ಐಶ್ವರ್ಯ, ಸೋನಂ ತಿವಾರಿ, ಪಿಆರ್‌ಒ ಪೂರ್ಣಿಮಾ, ವಿಭಾಗ ಪ್ರಾಧ್ಯಾಪಕರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 29.03.2025

ಮಹಾಜನ ಕಾಲೇಜಿನಲ್ಲಿ ಕೃತಕ ಬುದ್ಧಿಮತ್ತೆಯ ಫಲಕ ಸಂವಾದ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣಕ ವಿಜ್ಞಾನ ವಿಭಾಗ ಹಾಗೂ ಬಿಸಿಎ ವಿಭಾಗದ ವತಿಯಿಂದ ಕೃತಕ ಬುದ್ಧಿಮತ್ತೆಯ ಬಗ್ಗೆ ಫಲಕ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂವಾದ ಕಾರ್ಯಕ್ರಮದಲ್ಲಿ ಮೊದಲ ಭಾಗವಾಗಿ ಸಿಇಡಿಐ, ಐಐಎಸ್ಸಿ ನೆಟ್ ವರ್ಕ್ ಪ್ರಾಜೆಕ್ಟ್‌ನ ಮಾಜಿ ಮುಖ್ಯಸ್ಥ ಪ್ರೊ. ಅಶೋಕ್ ರಾವ್, ಮಾತನಾಡಿ, ಕೈಗಾರಿಕಾ ಕ್ರಾಂತಿಯಿಂದ ಪ್ರಾರಂಭಿಸಿ ಇಂದಿನ ಕೃತಕ ಬುದ್ಧಿಮತ್ತೆಯ ಸಂಶೋಧನವರೆಗೂ ನಡೆದಿರುವ ಹಲವಾರು ಹಂತಗಳನ್ನು ವಿವರಿಸಿದರು. ಮುಂದುವರೆದು, ಕೃತಕ ಬುದ್ಧಿಮತ್ತೆ ಹಾಗೂ ಯಂತ್ರಕಲಿಕೆ (ಎಂಎಲ್) ಯ ಉಪಯುಕ್ತತೆಗಳ ಉದಾಹರಣೆಗಳಾದ ಚಾಲಕರಹಿತ ವಾಹನ, ವೈದ್ಯಕೀಯ ರೋಗನಿರ್ಣಯ, ಔಷಧಗಳ ತಯಾರಿಕೆ ಇನ್ನೂ ಮುಂತಾದ ಕ್ಷೇತ್ರಗಳ ಬಗ್ಗೆ ವಿವರಿಸಿದರು.

ಇಡಿ ಸೈರ್ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ತೋತ್ರಿಂಗಮ್ ಕಸರ್ ಮಾತನಾಡಿ, ಯಂತ್ರಗಳು ಯೋಚಿಸಬಲ್ಲ ಶಕ್ತಿಯನ್ನು ಹೊಂದಿದೆಯೇ? ಎಂಬ ಮೂಲಭೂತ ಪ್ರಶ್ನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಶ್ನಿಸಿದರು. ಕೃತಕ ಬುದ್ಧಿಮತ್ತೆಯ ಅಭಿವೃದ್ಧಿಯನ್ನು ವಿವರಿಸುತ್ತಾ, ಅಲೀನ್ ಟ್ಯೂರಿಂಗ್ ನಿಂದ ಇಂದಿನವರೆಗೂ ಆ ಕ್ಷೇತ್ರದ ಅಭಿವೃದ್ಧಿಯನ್ನು ತಿಳಿಸಿಕೊಟ್ಟರು.

ಎವಿಪಿ ಇನ್ಫೋಸಿಸ್ ಸಂಚಾಲಕ ಐಟಿ/ಐಟಿಇಎಸ್ ಪ್ಯಾನೆಲ್, ಸಿಐಐ ಡಾ. ನವೀನ್ ಪಟೇಲ್ ಮಾತನಾಡಿ, ಕೃತಕ ಬುದ್ಧಿಮತ್ತೆ ವಿಷಯಗಳನ್ನು ತಿಳಿದುಕೊಳ್ಳುವ ಬಗ್ಗೆ ಹಾಗೂ ಅದು ಸಮಸ್ಯೆಗಳನ್ನು ಪರಿಹರಿಸುವ ವಿಧಾನಗಳ ಬಗ್ಗೆ ಕೂಲಂಕುಷವಾಗಿ ತಿಳಿಸಿಕೊಟ್ಟರು. ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಇಒ ಡಾ.ಎಸ್.ಆರ್. ರಮೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರುತಿಪೂಣಚ್ಚ, ಕಂಪ್ಯೂಟರ್‌ಸೈನ್ಸ್ ವಿಭಾಗದ ಮುಖ್ಯಸ್ಥ ಎ. ರಾಧೇಶ್ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದ ಅಧ್ಯಾಪಕರು ಇದ್ದರು.

ತೃತೀಯ ಬಿಸಿಎ ವಿದ್ಯಾರ್ಥಿಗಳು ಹಾಗೂ ಇತರೆ ಕಾಲೇಜು ವಿದ್ಯಾರ್ಥಿಗಳು ಸೇರಿ ಒಟ್ಟು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 14.03.2025

ಡಿಜಿಟಲ್ ಸಂವಹನ, ಕೌಶಲ್ಯ ರೂಢಿಸಿಕೊಳ್ಳಿ

ಮೊಹಮ್ಮದ್ ಬಿಲಾಲ್ ಸಿದ್ದಿಖಿ ಸಲಹೆ | ಮಹಾಜನ ಕಾಲೇಜಿನ ಬಿಬಿಎ, ಬಿ.ಕಾಂ ವಿಭಾಗದಲ್ಲಿ ಕೌಶಲ್ಯಗಳ ಕುರಿತು ಸಂವಾದ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳು ಪ್ರಸ್ತುತ ಆರ್ಥಿಕ ಜಗತ್ತಿನಲ್ಲಿ ಯಶಸ್ವಿಯಾಗಲು ಡಿಜಿಟಲ್ ಕೌಶಲ್ಯ, ಸಂವಹನ, ಜನಸಂಪರ್ಕ ಕೌಶಲ್ಯ, ಶಿಸ್ತು ಮತ್ತು ಸಮಯ ನಿರ್ವಹಣೆ ರೂಢಿಸಿಕೊಳ್ಳಬೇಕೆಂದು ಅಥರ್ವ ಬಿಸಿನೆಸ್ ಗ್ರೂಪ್ ನ ಮುಖ್ಯ ವಾಣಿಜ್ಯಾಧಿಕಾರಿ ಮೊಹಮ್ಮದ್ ಬಿಲಾಲ್ ಸಿದ್ದಿಖಿ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗಗಳು ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಬಿಬಿಎ ಮತ್ತು ಬಿ.ಕಾಂ ವಿಭಾಗದಲ್ಲಿ ಪ್ರಸ್ತುತ ಯುಗದಲ್ಲಿ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ಕೌಶಲ್ಯಗಳ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್ ಮತ್ತು ಕಾರ್ಯಕ್ರಮ ಸಂಯೋಜಕ ಕೀರ್ತಿ ರಾಜ್ ಕಮಲ್ ಮತ್ತು ರಶ್ಮಿ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಇದ್ದರು. ವಿದ್ಯಾರ್ಥಿ ಸಂಯೋಜಕರಾದ ಕರಿಷ್ಮಾ ತಿವಾರಿ ಸ್ವಾಗತಿಸಿದರು, ಲಕ್ಷ್ಮೀ ವಂದಿಸಿದರು. ಪಂಚಮ್, ಅನ್ವಿತಾ, ಚಾರುಜೈನ್, ರೋಹನ್, ಜನನಿ, ಪ್ರೇರಣ ಕಾರ್ಯಕ್ರಮವನ್ನು ಆಯೋಜಿಸಿದ್ದರು. ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 27.03.2025

ಮಹಾಜನ ಕಾಲೇಜಿನಲ್ಲಿ ಎಂಬಿಎ ಪ್ರವೇಶಾತಿ ಪರೀಕ್ಷೆ ಕುರಿತು ತರಬೇತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂಟ್ರಿ-ಟು-ಸರ್ವಿಸ್, ವಾಣಿಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಎಂ.ಬಿ.ಎ. ಪ್ರವೇಶಾತಿ ಪರೀಕ್ಷೆ, ಕ್ಯಾಟ್ ಮತ್ತು ಮ್ಯಾಟ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿದ್ದ, ಬೆಂಗಳೂರಿನ ನ್ಯೂಪೇಸ್ ಅಕಾಡೆಮಿಯ ಸಂಸ್ಥಾಪಕ ನಿರ್ದೇಶಕ ಡಿ. ಪಾರ್ಶ್ವನಾಥ್ ಮಾತನಾಡಿ, ಬಿಬಿಎ ಮತ್ತು ಬಿ.ಕಾಂ. ಪದವಿಗಳ ನಂತರ ವ್ಯವಹಾರ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆ ಸೇರಿದಂತೆ, ಕ್ಯಾಟ್ ಮತ್ತು ಮ್ಯಾಟ್ ಪರೀಕ್ಷೆಗಳಿಗೆ ಹೇಗೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಪ್ರವೇಶಾತಿ ಪರೀಕ್ಷೆ ನಡೆಸುವ ಸಂದರ್ಭ ಅರ್ಹತೆಯ ಮಾನದಂಡಗಳು, ವಿವಿಧ ತರಬೇತಿ ಸಂಸ್ಥೆಗಳು ಮತ್ತು ಪರೀಕ್ಷೆಯಲ್ಲಿ ಪ್ರಮುಖವಾಗಿ ಕೇಳುವ ವಿಷಯಾಧಾರಿತ ಪ್ರಶ್ನೆ ಮಾದರಿಗಳು, ಅಧ್ಯಯನ ವಿಧಾನ ಮತ್ತು ಅಧ್ಯಯನ ಸಾಮಾಗ್ರಿಗಳು ಸೇರಿದಂತೆ ಈ ಹಿಂದೆ ನಡೆಸಿರುವ ಎಂ.ಬಿ.ಎ ಪ್ರವೇಶಾತಿ ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನಪತ್ರಿಕೆಗಳು ಹಾಗೂ



ಮಾರ್ಗಸೂಚಿಗಳನ್ನು ನಿರಂತರವಾಗಿ ಅಧ್ಯಯನ ಮಾಡುವಂತೆ ಅವರು ತಿಳಿಸಿದರು.

ನಿರಂತರ ಪರಿಶ್ರಮ, ಸಮಯ ನಿಗಧಿ, ವಸ್ತುನಿಷ್ಠ ಪಠ್ಯಕ್ರಮ, ಉತ್ತಮ ಮಾರ್ಗದರ್ಶನ ಹಾಗೂ ವ್ಯವಸ್ಥಿತ ಅಧ್ಯಯನವು ಈ ಪರೀಕ್ಷೆಯ ಯಶಸ್ಸಿನ ಮೂಲಮಂತ್ರಗಳಾಗಿರುತ್ತವೆ. ಒಂದು ಬಾರಿ ವಿಫಲವಾದರೂ ಮತ್ತೊಂದು ಬಾರಿ ಯಶಸ್ಸಿನ ಗುರಿಮುಟ್ಟುವ ಸಂಕಲ್ಪವನ್ನು ವಿದ್ಯಾರ್ಥಿಗಳು ಇಟ್ಟುಕೊಳ್ಳಬೇಕು ಎಂದು ಅವರು ಸೂಚಿಸಿದರು.

ಜೊತೆಗೆ ಬ್ಯಾಂಕಿಂಗ್, ರೈಲ್ವೆ ಸೇರಿದಂತೆ ವಿವಿಧ ಕೇಂದ್ರ ಸರ್ಕಾರದ ಸೇವಾವಲಯಗಳಿಗೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆಗಳಿಗೆ ಪದವಿ ಹಂತದಲ್ಲೆ ಸೂಕ್ತ ಸಿದ್ಧತೆ ಮತ್ತುತರಬೇತಿ ಪಡೆದದ್ದೇ ಆದರೆ ಯಶಸ್ಸು ನಿಶ್ಚಿತ ಎಂದರು.

ಪದವಿಯ ನಂತರ ಮುಂದಿನ ಸ್ಪಷ್ಟ ಗುರಿಯನ್ನು ಹಿಂದೆ ವಿದ್ಯಾರ್ಥಿಗಳು ನಿರ್ಧಿಷ್ಟಪಡಿಸಿಕೊಂಡು ಆ ಗುರಿಯನ್ನು ತಲುಪುವಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಕಿವಿಮಾತು ಹೇಳಿದರು.

ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಎಂಟ್ರಿ-ಟು-ಸರ್ವಿಸ್ ನ ಸಂಚಾಲಕ ಡಾ.ಎಚ್. ಶ್ರೀಧರ, ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪಿ.ಜಿ. ಪುಷ್ಪರಾಣಿ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ, ವಾಣಿಜ್ಯಶಾಸ್ತ್ರ ಮತ್ತು ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶಿವಕುಮಾರ್, ವಿಭಾಗದ ಎಲ್ಲ ಆಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 28 ಮಾರ್ಚ್ 2025
28 MARCH 2025

ವಿಜಯವಾಣಿ ಚಿತ್ರ



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ನ್ಯೂಪೇಸ್ ಅಕಾಡೆಮಿಯ ಸಂಸ್ಥಾಪಕ ನಿರ್ದೇಶಕ ಡಿ. ಪಾರ್ಶ್ವನಾಥ್ ಉದ್ಘಾಟಿಸಿದರು. ಡಾ.ಎಚ್.ಶ್ರೀಧರ, ಡಾ.ಪಿ.ಜಿ.ಪುಷ್ಪರಾಣಿ, ಡಿ.ಗೀತಾ, ಡಾ.ಶಿವ್‌ಕುಮಾರ್ ಇದ್ದರು.

ಸುದ್ದಿ ಕಾರ್ನರ್

ಕ್ಯಾಟ್, ಮ್ಯಾಟ್‌ಗೆ ನಿರಂತರ ಅಧ್ಯಯನ ಅವಶ್ಯ

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂಟ್ರಿ-ಟು-ಸರ್ವಿಸ್, ವಾಣಿಜ್ಯ ಶಾಸ್ತ್ರ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗ ದೊಂದಿಗೆ ಎಂಬಿಎ ಪ್ರವೇಶಾತಿ ಪರೀಕ್ಷೆ, ಕ್ಯಾಟ್ ಮತ್ತು ಮ್ಯಾಟ್ ಪರೀಕ್ಷೆ ಗಳಿಗೆ ಸಂಬಂಧಿಸಿದಂತೆ ಗುರುವಾರ ಒಂದು ದಿನದ ತರಬೇತಿ ಕಾರ್ಯಕ್ರಮ ಆಯೋಜಿಸ ಲಾಗಿತ್ತು.ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಬೆಂಗಳೂರಿನ ನ್ಯೂಪೇಸ್ ಅಕಾಡೆಮಿ ಸಂಸ್ಥಾಪಕ ನಿರ್ದೇಶಕ ಡಿ. ಪಾರ್ಶ್ವನಾಥ್ ಮಾತನಾಡಿ, ಬಿಬಿಎ ಮತ್ತು ಬಿ.ಕಾಂ. ಪದವಿಗಳ ನಂತರ ವ್ಯವಹಾರ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆ ಸೇರಿದಂತೆ ಕ್ಯಾಟ್ ಮತ್ತು ಮ್ಯಾಟ್ ಪರೀಕ್ಷೆಗಳಿಗೆ ಹೇಗೆ ಪೂರ್ವಭಾವಿ ಸಿದ್ಧತೆಗಳನ್ನು ನಡೆಸಿಕೊಳ್ಳ ಬೇಕು ಎಂದು ವಿವರವಾಗಿ ಮಾಹಿತಿ ನೀಡಿದರು. ಪ್ರವೇಶಾತಿ ಪರೀಕ್ಷೆ ನಡೆಸುವ ಸಂದರ್ಭ ಅರ್ಹತೆಯ ಮಾನದಂಡಗಳು, ವಿವಿಧ ತರಬೇತಿ ಸಂಸ್ಥೆಗಳು ಮತ್ತು ಪರೀಕ್ಷೆ ಯಲ್ಲಿ ಪ್ರಮುಖವಾಗಿ ಕೇಳುವ ವಿಷಯಾಧಾರಿತ ಪ್ರಶ್ನಾ ಮಾದರಿಗಳು, ಅಧ್ಯಯನ ವಿಧಾನ ಮತ್ತು ಅಧ್ಯಯನ ಸಾಮಗ್ರಿ ಸೇರಿದಂತೆ ಈ ಹಿಂದೆ ನಡೆಸಿರುವ ಎಂಬಿಎ ಪ್ರವೇಶಾತಿ ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳು ಹಾಗೂ ಮಾರ್ಗಸೂಚಿ ಗಳನ್ನು ನಿರಂತರವಾಗಿ ಅಧ್ಯಯನ ಮಾಡಬೇಕು ಎಂದು ತಿಳಿಸಿದರು. ನಿರಂತರ ಪರಿಶ್ರಮ. ಸಮಯ ನಿಗದಿ, ವಸ್ತುನಿಷ್ಠ ಪಠ್ಯಕ್ರಮ, ಉತ್ತಮ ಮಾರ್ಗದರ್ಶನ ಹಾಗೂ ವ್ಯವಸ್ಥಿತ ಅಧ್ಯಯನವು ಈ ಪರೀಕ್ಷೆಯ ಯಶಸ್ಸಿನ ಮೂಲಮಂತ್ರಗಳಾಗಿರುತ್ತವೆ. ಒಂದು ಬಾರಿ ವಿಫಲವಾದರೂ ಮತ್ತೊಂದು ಬಾರಿ ಯಶಸ್ಸಿನ ಗುರಿ ಮುಟ್ಟುವ ಸಂಕಲ್ಪವನ್ನು ವಿದ್ಯಾರ್ಥಿಗಳು ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು. ಜತೆಗೆ ಬ್ಯಾಂಕಿಂಗ್, ರೈಲ್ವೆ ಸೇರಿದಂತೆ ವಿವಿಧ ಕೇಂದ್ರ ಸರ್ಕಾರದ ಸೇವಾ ವಲಯಗಳಿಗೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆಗಳಿಗೆ ಪದವಿ ಹಂತದಲ್ಲೇ ಸೂಕ್ತ ಸಿದ್ಧತೆ ಮತ್ತು ತರಬೇತಿ ಪಡೆದದ್ದೇ ಆದರೆ ಯಶಸ್ಸು ನಿಶ್ಚಿತ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಅರ್ಥಶಾಸ್ತ್ರ ವಿಭಾಗದ ಸಹಾ ಯಕ ಪ್ರಾಧ್ಯಾಪಕಿ ಡಾ.ಪಿ.ಜಿ.ಪುಷ್ಪರಾಣಿ, ಐಕ್ಯೂಎಸಿ ಸಂಚಾಲಕಿ ಡಿ.ಗೀತಾ, ವಾಣಿಜ್ಯ ಶಾಸ್ತ್ರ ಮತ್ತು ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಶಿವಕುಮಾರ್ ಇದ್ದರು.

- ವಿದ್ಯಾಥಿಗಳಿಗೆ ಡಿ. ಪಾರ್ಶ್ವನಾಥ್ ಸಲಹೆ
- ಮಹಾಜನ ಪದವಿ ಕಾಲೇಜಿನಲ್ಲಿ ಕಾರ್ಯಕ್ರಮ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 26.03.2025

ಉದ್ಯೋಗ, ವ್ಯಕ್ತಿತ್ವ ಅಭಿವೃದ್ಧಿಗಾಗಿ ಸಾಫ್ಟ್ ಸ್ಕಿಲ್ಸ್ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ನಿರ್ವಹಣಾ ಶಾಸ್ತ್ರವಿಭಾಗವು ಅಥರ್ವ ಬಿಸಿವೆಸ್ ಗ್ರೂಪ್, ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಅಂತಿಮ ವರ್ಷದ ಬಿಬಿಎ ಮತ್ತು ಬಿ.ಕಾಂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಉದ್ಯೋಗ ಮತ್ತು ವ್ಯಕ್ತಿತ್ವ ಅಭಿವೃದ್ಧಿಗಾಗಿ ಸಾಫ್ಟ್ ಸ್ಕಿಲ್ಸ್ ಐದು ದಿನಗಳ ಕಾರ್ಯಾಗಾರದ ಸಮಾರೋಪ ಸಮಾರಂಭ ನಡೆಯಿತು.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ಅಥರ್ವ ಬಿಸಿನೆಸ್ ಗ್ರೂಪ್ ನ ಮುಖ್ಯ ವಾಣಿಜ್ಯಾಧಿಕಾರಿ ಮೊಹಮ್ಮದ್ ಬಿಲಾಲ್ ಸಿದ್ಧಿಖಿ ಅವರನ್ನು ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್, ಕಾರ್ಯಕ್ರಮ ಸಂಯೋಜಕಿ ಎಸ್. ಕಾವ್ಯಶ್ರೀ ಹಾಗೂ ವಿದ್ಯಾರ್ಥಿ ಸಂಯೋಜಕರಾದ ನಂದಿತಾ ಎಂ ಮೇನಸಗಿ, ಸ್ನೇಹಯು, ಕೆ. ಎಸ್. ಕರೀಷ್ಮ ಸನ್ಮಾನಿಸಿದರು.

ಐದು ದಿನಗಳು ನಡೆದ ಕಾರ್ಯಾಗಾರದಲ್ಲಿ ಸಿದ್ಧಿಖಿ ಅವರು ರೆಸ್ಯೂಮ್ ಬರೆಯುವ ಕೌಶಲ್ಯ, ಸಂವಹನ ಕೌಶಲ್ಯ, ಗುಂಪು ಚರ್ಚೆ, ಉದ್ಯೋಗ ಯಶಸ್ವಿಗೆ ತಂತ್ರಜ್ಞಾನ ಪಟುತ್ವ, ಸಂದರ್ಶ ನಗಳನ್ನು ಹೇಗೆ ಎದುರಿಸಬೇಕು ? ಈ ವಿಚಾರಗಳ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು. 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಂಡರು. ವಿದ್ಯಾರ್ಥಿಗಳು ಕಾರ್ಯಾಗಾರದ ಬಗ್ಗೆ ತಮ್ಮ ಅಭಿಪ್ರಾಯ ಗಳನ್ನು ಹಂಚಿ ಕೊಂಡರು. ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 18.03.2025

ವಿದ್ಯಾರ್ಥಿಗಳಿಗೆ 5 ದಿನಗಳ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ಕಾಲೇಜಿನಲ್ಲಿ ಸೋಮವಾರ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗವು ಅಥರ್ವ ಬಿಸಿನೆಸ್ ಗ್ರೂಪ್ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಅಂತಿಮ ವರ್ಷದ ಬಿಬಿಎ ಮತ್ತು ಬಿ.ಕಾಂ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ವ್ಯಕ್ತಿತ್ವ ಅಭಿವೃದ್ಧಿಗಾಗಿ ಸಾಫ್ಟ್ ಸ್ಕಿಲ್ಸ್ ವಿಷಯ ಕುರಿತು ಐದು ದಿನಗಳ ಕಾರ್ಯಾಗಾರ ಉದ್ಘಾಟಿಸಲಾಯಿತು.

ಅಥರ್ವ ಬಿಸಿನೆಸ್ ಗ್ರೂಪ್ ಮುಖ್ಯ ವಾಣಿಜ್ಯಾಧಿಕಾರಿ ಮೊಹಮ್ಮದ್ ಬಿಲಾಲ್ ಸಿದ್ದಿಖಿ ಅವರು ಐದು ದಿನಗಳ ಕಾಲ ಪ್ರತಿದಿನ ಒಂದೊಂದು ವಿಚಾರಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್, ಕಾರ್ಯಕ್ರಮ ಸಂಯೋಜಕಿ ಎಸ್. ಕಾವ್ಯಶ್ರೀ, ಸಹ ಸಂಯೋಜಕಿ ಅನಿತಾ, ಹೇಮಲತಾ, ವಿಭಾಗದ ಅಧ್ಯಾಪಕರಾದ ಡಾ. ಮುತ್ತಮ್ಮ, ಕೀರ್ತಿ ರಾಜ್ ಕಮಲ್ ಮತ್ತು ರಶ್ಮಿ ಇದ್ದರು. ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿ ಸಂಯೋಜಕರಾದ ನಂದಿತಾ ಎಂ ಮೇನಸಗಿ ನಿರೂಪಿಸಿದರು.

ಆರ್, ಸ್ನೇಹಯು. ಕೆ.ಎಸ್. ಕರೀಷ್ಮ ನಿರ್ವಹಿಸಿದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 18 ಮಾರ್ಚ್ 2025
18 MARCH 2025

ಮಹಾಜನ ಕಾಲೇಜಿನಲ್ಲಿ ಸಾಫ್ಟ್ ಸ್ಕಿಲ್ಸ್‌ಗೆ ಚಾಲನೆ

ವಿಜಯವಾಣಿ ಚಿತ್ರ



ಮಹಾಜನ ಕಾಲೇಜಿನಲ್ಲಿ ಸೋಮವಾರದಿಂದ ಆರಂಭಗೊಂಡ ಐದು ದಿನಗಳ ಸಾಫ್ಟ್ ಸ್ಕಿಲ್ಸ್ ಕಾರ್ಯಕ್ರಮದಲ್ಲಿ ಮೊಹಮ್ಮದ್ ಬಿಲಾಲ್ ಸಿದ್ಧಿಖಿ, ಡಾ. ಬಿ.ಆರ್. ಜಯಕುಮಾರಿ, ಡಾ. ಶಿವ್‌ಕುಮಾರ್, ಎಸ್.ಕಾವ್ಯಶ್ರೀ ಇದ್ದರು.

ಮೈಸೂರು: ನಗರದ ಮಹಾಜನ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗವು ಅಥರ್ವ ಬಿಸಿವೆಸ್ ಗ್ರೂಪ್, ಮೈಸೂರು ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಅಂತಿಮ ವರ್ಷದ ಬಿಬಿಎ ಮತ್ತು ಬಿ.ಕಾಂ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ವ್ಯಕ್ತಿತ್ವ ಅಭಿವೃದ್ಧಿ ಗಾಗಿ ಐದು ದಿನಗಳ ಸಾಫ್ಟ್ ಸ್ಕಿಲ್ಸ್ ಗೆ ಸೋಮವಾರ ಚಾಲನೆ ನೀಡಲಾಯಿತು.

ಆಥರ್ವ ಬಿಸಿನೆಸ್ ಗ್ರೂಪ್‌ನ ಮುಖ್ಯ ವಾಣಿಜ್ಯಾಧಿಕಾರಿ ಮೊಹಮ್ಮದ್ ಬಿಲಾಲ್ ಸಿದ್ಧಿಖಿ ಅವರು ರೆಸ್ಯೂಮ್ ಬರೆಯುವ ಕೌಶಲದ ಬಗ್ಗೆ ಚರ್ಚಿಸಿ ಸ್ಥಳದಲ್ಲೇ ವಿದ್ಯಾರ್ಥಿಗಳು ತಮ್ಮ ತಮ್ಮ ರೆಸ್ಯೂಮ್ ಸಿದ್ಧ ಪಡಿಸುವುದು, ಸಂವ ಹನ ಕೌಶಲ, ಗುಂಪು ಚರ್ಚೆ, ಉದ್ಯೋಗ ಯಶಸ್ವಿಗೆ ತಂತ್ರಜ್ಞಾನ, ಸಂದ ರ್ಶನ ಗಳನ್ನು ಹೇಗೆ ಎದುರಿಸಬೇಕು ಎನ್ನುವ ಕುರಿತು ಮಾಹಿತಿ ನೀಡಿದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ವಾಣಿಜ್ಯ ಮತ್ತು ವ್ಯವ ಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವ್‌ಕುಮಾರ್, ಕಾರ್ಯಕ್ರಮ ಸಂಯೋಜಕ ಎಸ್.ಕಾವ್ಯಶ್ರೀ, ಸಹ ಸಂಯೋಜಕರಾದ ಅನಿತಾ, ಹೇಮಲತಾ, ವಿಭಾಗದ ಅಧ್ಯಾಪಕರಾದ ಡಾ. ಮುತ್ತಮ್ಮ, ಕೀರ್ತಿ ರಾಜ್‌ಕಮಲ್, ರಶ್ಮಿ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 13.03.2025

ಹಲ್ಲುಗಳ ಆರೋಗ್ಯದಿಂದ ಉತ್ತಮ ವ್ಯಕ್ತಿತ್ವದ ಬೆಳವಣಿಗೆ ಸಾಧ್ಯ

• **ಕನ್ನಡಪ್ರಭ ವಾರ್ತೆ** ಮೈಸೂರು

ಹಲ್ಲುಗಳ ಆರೋಗ್ಯದಿಂದ ಉತ್ತಮ ವ್ಯಕ್ತಿತ್ವದ ಬೆಳವಣಿಗೆ ಸಾಧ್ಯ ಎಂದು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ದಂತ ವೈದ್ಯಕೀಯ ಸಹಾಯಕ ಪ್ರಾಧ್ಯಾಪಕ ಡಾ. ಪ್ರಸನ್ನ ದೇಶಪಾಂಡೆ ಹೇಳಿದರು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎನ್‌ಸಿಸಿ ಘಟಕಗಳು ಮತ್ತು ರೋಟರ್ಯಾಕ್ಟ್ ಕ್ಲಬ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಹಲ್ಲುಗಳ ಆರೋಗ್ಯ ಮತ್ತು ಬಾಯಿ ಕ್ಯಾನ್ಸರ್ ತಡೆಗಟ್ಟುವಿಕೆ ಕುರಿತಂತೆ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಹಲ್ಲುಗಳ ಆರೋಗ್ಯ ಶಿಕ್ಷಣವನ್ನು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಲ್ಲಿ ತಿಳಿಸುವುದು ಅತ್ಯಂತ ಮುಖ್ಯವಾಗಿದೆ.



ಹಲ್ಲುಗಳ ಆರೋಗ್ಯ ಕೇವಲ ಬಾಯಿಗಷ್ಟೇ ಸೀಮಿತವಾಗದೆ ಜೀರ್ಣಕ್ರಿಯೆ ಮತ್ತು ಸರಿಯಾದ ಉಚ್ಚಾರಣೆಗೆ ಸಹಾಯ ಮಾಡುತ್ತದೆ ಹಾಗೂ ನಮ್ಮ ವ್ಯಕ್ತಿತ್ವವನ್ನು ಬೆಳೆಸಲು ಮಹತ್ವದ ಪಾತ್ರವಹಿಸುತ್ತದೆ ಎಂದರು.

ದಂತಕುಳಿ ಮತ್ತು ಅದರ ಪರಿಣಾಮಗಳ ಬಗ್ಗೆ ವಿವರಿಸುತ್ತಾ, ದಂತ ಕುಳಿಯಿಂದಾಗುವ ನೋವು ಮನುಷ್ಯ ಅನುಭವಿಸಬಹುದಾದ ಎರಡನೇ ಅತಿ ತೀವ್ರವಾದ ನೋವು. ಪ್ರಾಥಮಿಕ ಹಂತದಲ್ಲಿಯೇ ಚಿಕಿತ್ಸೆ ಪಡೆಯುವುದು ಉತ್ತಮ. ಇಲ್ಲವಾದರೆ ಭವಿಷ್ಯದಲ್ಲಿ ಹೆಚ್ಚು ಸಂಕೀರ್ಣವಾದ ಚಿಕಿತ್ಸೆಗೆ ಒಳಗಾಗಬೇಕು, ಹಲ್ಲುಗಳು ಪರಸ್ಪರ ಸಂಪರ್ಕದಲ್ಲಿರುತ್ತವೆ ಒಂದು ಹಲ್ಲು ಬಿದ್ದು ಹೋದರೆ ಪಕ್ಕದ ಹಲ್ಲುಗಳು ಅಸ್ವಾಭಾವಿಕವಾಗಿ ಬೆಳೆಯಬಹುದು ಮತ್ತು ದಂತಕುಳಿಯಾಗುವ ಸಾಧ್ಯತೆ ಹೆಚ್ಚುತ್ತದೆ ಎಂದು ತಿಳಿಸಿದರು.

ಡಾ. ಮೃಣಾಲ್ ದೇಶಪಾಂಡೆ, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪ್ಲೇಯಿಂಗ್ ಆಫೀಸರ್ ಡಾ.ಪಿ.ಜಿ. ಪುಷ್ಪರಾಣಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ರೋಟರ್ಯಾಕ್ಟ್ ಕ್ಲಬ್‌ನ ಸಂಚಾಲಕಿ ವಿ. ಗಾಯತ್ರಿ, ರೋಟರ್ಯಾಕ್ಟ್ ಕ್ಲಬ್ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಗಳಾದ ಮೋಹಿತ್ ಪುರೋಹಿತ್, ಆರ್ಮಾನ್ ಬಿಲ್ಲಾಲ್ ಮತ್ತು ಧನುಷ್ ಎಸ್. ಹೊನ್ನಾಳ್, ಎನ್‌ಸಿಸಿ ಕೆಡೆಟ್‌ಗಳು, ರೋಟರ್ಯಾಕ್ಟ್ ಕ್ಲಬ್ ಸದಸ್ಯರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಉಚಿತ ಹಲ್ಲಿನ ತಪಾಸಣೆ ಮಾಡಿಸಿಕೊಂಡರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 15.03.2025

ಗ್ರಾಮಗಳ ಬೆಳವಣಿಗೆಯಲ್ಲಿ ಆರೋಗ್ಯದ ಪಾತ್ರ ಮುಖ್ಯ

ರೇಡಿಯೇಷನ್ ಆಂಕೊಲಾಜಿಸ್ಟ್ ಡಾ.ವಿನಯ್ ಕುಮಾರ್ ಮುತ್ತಗಿ ಅಭಿಮತ | ಕ್ಯಾನ್ಸರ್ ಬಗ್ಗೆ ಅರಿವು ಕಾರ್ಯಕ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ಗ್ರಾಮಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಆರೋಗ್ಯ ಮುಖ್ಯಪಾತ್ರ ವಹಿಸುತ್ತದೆ ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆಯ ರೇಡಿಯೇಷನ್ ಆಂಕೊಲಾಜಿಸ್ಟ್ ಡಾ. ವಿನಯ್ ಕುಮಾರ್‌ಮುತ್ತಗಿ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಹಾಗೂ ಐಕ್ಯೂಎಸ್‌ಸಿ ಸಹಯೋಗದೊಂದಿಗೆ ವಿಸ್ತರಣೆ ಹಾಗೂ ಪ್ರಭಾವಿತ ಚಟುವಟಿಕೆಗಳು ಎಂಬ ಕಾರ್ಯಕ್ರಮದ ಅಡಿಯಲ್ಲಿ ಟಿ.ನರಸೀಪು ತಾಲೂಕಿನ ಬನ್ನೂರು ಹೋಬಳಿಯ ಮಾರಗೌಡನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕ್ಯಾನ್ಸರ್ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿನ ಎಲ್ಲೆಡೆ ಕ್ಯಾನ್ಸರ್ ನ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಯುತ್ತಿದೆ. ಭಾರತವು ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಗಳಲ್ಲಿ ಕ್ಯಾನ್ಸರ್‌ನ ಬಗ್ಗೆ ಅರಿವು ಮೂಡಿಸುವುದು ಅವಶ್ಯವಿರುವುದು ದುರದೃಷ್ಟ ಸಂಗಾತಿ. ನಗರ ಪ್ರದೇಶದಲ್ಲಿ ಕೇಳುತ್ತಿದ್ದ ರೋಗವು ಹಳ್ಳಿಗಳನ್ನು ಆವರಿಸಿಕೊಂಡಿದೆ. ಕ್ಯಾನ್ಸರ್ ರೋಗದ ಲಕ್ಷಣಗಳು, ಗುರುತಿಸುವಿಕೆ, ಪರಿಹಾರ ಕ್ರಮಗಳು ಸರ್ಕಾರದ ಯೋಜನೆಗಳು ಮುಂತಾದವುಗಳ ಬಗ್ಗೆ ತಿಳುವಳಿಕೆ ಇರಬೇಕಾದದ್ದು ಅನಿವಾರ್ಯವಾಗಿದೆ. ಕ್ಯಾನ್ಸರ್ ಅನ್ನುವಂತದ್ದು ಮಾರಣಾಂತಿಕ ರೋಗವಲ್ಲ ಸೂಕ್ತ ಚಿಕಿತ್ಸೆಗಳಿಂದ ಗುಣಪಡಿಸಿಕೊಳ್ಳಬಹುದು ಎಂಬ ಅರಿವು ಇರಬೇಕಾಗಿದೆ. ವೈದ್ಯರ ನಿಗದಿತ ಸಲಹೆ ಮೇರೆಗೆ ಕ್ಯಾನ್ಸರ್ ರೋಗವನ್ನು ಗೆಲ್ಲಬಹುದೆಂದು ಎಂಬ ಅರಿವು ಇರಬೇಕಾಗಿದೆ ಎಂದು ಅವರು ಹೇಳಿದರು.

ಮಧ್ಯಪಾನದ ಸೇವನೆಯಿಂದಲೂ ಕ್ಯಾನ್ಸರ್ ರೋಗ ಬರುವ ಸಾಧ್ಯತೆಗಳು ಹೆಚ್ಚಾಗಿದೆ. ಇತ್ತೀಚಿಗೆ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್‌ಹಾಗೂ ಗರ್ಭಕೋಶದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿವೆ. ಸ್ತನಗಳಲ್ಲಿ ಗಂಟುಗಳು ಸ್ತನ ಕ್ಯಾನ್ಸರ್‌ನ ಲಕ್ಷಣವಾಗಿರುತ್ತದೆ ಎಂದು ಅವರು ವಿವರಿಸಿದರು.

ಗ್ರಾಮೀಣ ಜನರು ರೋಗವನ್ನು ಬೇರೆಯವರಿಗರ ಹೇಳಿದರೆ, ಅವಮಾನವಾಗುತ್ತದೆಂದು ಹೇಳಿಕೊಳ್ಳುವಲ್ಲಿ ಮುಜಗರಕ್ಕೊಳಗಾಗುತ್ತಿದ್ದಾರೆ. ಕ್ಯಾನ್ಸರ್‌ಲಕ್ಷಣಗಳು ಕಂಡುಬಂದಾಗ ಶೀಘ್ರವಾಗಿ ಚಿಕಿತ್ಸೆ ಪಡೆದರೆ ಕ್ಯಾನ್ಸರ್‌ನಿಂದ ಗುಣಮುಖರಾಗಬಹುದು ಎಂದರು.

ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಸರ್ಜಿಕಲ್ ಆಂಕೊಲಾಜಿಸ್ಟ್ ಮತ್ತು ರೋಬೋಟಿಕ್ ಸರ್ಜನ್ ಡಾ. ರಕ್ಷಿತ್ ಶೃಂಗೇರಿ ಮಾತನಾಡಿ, ಕ್ಯಾನ್ಸರ್‌ರೋಗ ಮನುಷ್ಯನನ್ನು ಕೊಲ್ಲುವುದಿಲ್ಲ, ಕುಟುಂಬದಮನಸ್ಸುಗಳನ್ನು ಕೊಲ್ಲುತ್ತದೆ. ದುಶ್ಚಟ ದೂರ ಮಾಡಿದರೆ ಕ್ಯಾನ್ಸರನ್ನು ತಡೆಗಟ್ಟಬಹುದು ಎಂದರು.

ಮಹಾಜನ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯದ ಬಗೆಗಿನ ಅರಿವುಗಳು ಕಡಿಮೆ ಇದೆ ವಿದ್ಯಾವಂತ ಯುವ ಸಮುದಾಯಗಳೇ, ವಿವೇಕರಹಿತವಾಗಿ ವರ್ತಿಸುತ್ತಿರುವುದು ಶೋಚನೀಯ ಸಂಗತಿ ಎಂದರು. ಭೂಗೋಳ ಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಡಾ.ಜಿ. ದೊಡ್ಡರಸಯ್ಯ, ಡಾ. ಸಿದ್ದರಾಜು, ಕನ್ನಡಸಹಾಯಕಪ್ರಾಧ್ಯಾಪಕರಾದ ಎಂ. ನಾಗೇಶ್, ಜೆ. ಮನೋಜ್ ಕುಮಾರ್, ಮಾರಗೌಡನಹಳ್ಳಿಯ ಮುಖ್ಯಸ್ಥರು, ವಿವಿಧ ಗ್ರಾಮಗಳಿಂದ ಗ್ರಾಮಸ್ಥರು 400ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

MFGE In the Eyes of the Press.....

ಹೊಸದಿಗಂತ

ಶುಕ್ರವಾರ
7 ಮಾರ್ಚ್ 2025

ಫ್ರೆಂಚ್ ಕೆರಿಬಿಯನ್‌ನಲ್ಲಿ ಭಾರತೀಯ ಕಾರ್ಮಿಕರು

ಮೈಸೂರು: ಭಾರತೀಯ ಒಪ್ಪಂದದ ಪ್ರಕಾರ ಫ್ರೆಂಚ್ ಕೆರಿಬಿಯನ್ ಕಾಲೋನಿಗಳಲ್ಲಿ ದುಡಿದ ಕಾರ್ಮಿಕರ ದುಸ್ಥಿತಿ ಮತ್ತು ನೋವು ಇತಿಹಾಸದಲ್ಲಿ ಕಡೆಗಣಿಸಲ್ಪಟ್ಟ ಒಂದು ಅಧ್ಯಾಯ ಎಂದು ವರ್ಜೀನಿಯಾ ವಿಶ್ವವಿದ್ಯಾನಿಲಯದ ಆಲ್ಬರ್ಟ್ ಜೇಮ್ಸ್ ಆರ್ನಾಲ್ಡ್ (ಪ್ರೊಫೆಸರ್ ಎಮೆರಿಟಸ್) ಅಭಿಪ್ರಾಯಪಟ್ಟರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಆಂಗ್ಲ ಭಾಷಾ ವಿಭಾಗ ಮತ್ತು ಐಕ್ಯೂಎಸಿ ಆಯೋಜಿಸಿದ್ದ ಫ್ರೆಂಚ್ ಕೆರಿಬಿಯನ್ ಪ್ರದೇಶದಲ್ಲಿ ಭಾರತೀಯ ಒಪ್ಪಂದ ಮಾಡಿಕೊಂಡ ಕಾರ್ಮಿಕರ ಹೋರಾಟಗಳು, ಮಾನಸಿಕ ಸಹನಾಶೀಲತೆ ಮತ್ತು ಕೊಡುಗೆಯ ಕುರಿತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಕಡೆಗಣಿಸಲ್ಪಟ್ಟ ಅಧ್ಯಾಯವು ಬ್ರಿಟಿಷ್, ಡಚ್, ಮತ್ತು ಬ್ರೆಜಿಲಿಯನ್ ವಸಾಹತುಶಾಹಿಗೆ ಸಂಬಂಧಿಸಿದ ವಿಶಾಲವಾದ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಸೆರೆಹಿಡಿಯುತ್ತದೆ ಎಂದು ನುಡಿದರು.ಒಪ್ಪಂದ ಮೇರೆಗೆ ಕಾರ್ಮಿಕರನ್ನು ಕರೆದುಕೊಂಡು ಹೋಗುವ ಪರಿಕಲ್ಪನೆ ಯುರೋಪಿಯನ್ ವಸಾಹತುಶಾಹಿಗೆ ಸಂಬಂಧಿಸಿದ್ದಾಗಿದೆ. ಈ ಕಾರ್ಮಿಕರು ಮೂಲತಃ ಭಾರತ ಮತ್ತು ಆಫ್ರಿಕಾ ದೇಶದವರಾಗಿದ್ದರೆಂದು ಹೇಳುತ್ತಾ ಗ್ವಾಡೆಲೋಪ್ ಮತ್ತು ಮಾರ್ಟಿನಿಕ್‌ನಂತಹ ದ್ವೀಪಗಳಿಗೆ ಭಾರತ, ಚೀನಾ, ಆಫ್ರಿಕಾ ದೇಶದ ಕಾರ್ಮಿಕರು ಕಠಿಣ ಷರತ್ತುಗಳನ್ನೊಳಗೊಂಡ ಒಪ್ಪಂದದ ಮೇರೆಗೆ ತೆರೆಳುತ್ತಿದ್ದರು ಎಂದು ತಿಳಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 6.03.2025

'ಸಂಸ್ಕಾರವಿಲ್ಲದ ಜೀವನ ಆತ್ಮವಿಲ್ಲದ ದೇಹದಂತೆ'



• **ಕನ್ನಡಪ್ರಭ ವಾರ್ತೆ** ಮೈಸೂರು

ಸಂಸ್ಕಾರವಿಲ್ಲದ ಜೀವನ ಆತ್ಮವಿಲ್ಲದ ದೇಹದಂತೆ ಎಂದು ವಿನಮ್ರ ಸೇವಕ, ಡಿವೈನ್ ಪಾರ್ಕ್ ಟ್ರಸ್ಟ್ ಸಂಸ್ಥೆಯ ಡಿ. ಎಸ್. ಯಶವಂತ ಅಭಿಪ್ರಾಯಪಟ್ಟರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ ಕನ್ನಡ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಭಾಗವಹಿಸಿದ್ದರು.

ಇಂದಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನ ಸಂಪಾದನೆಯನ್ನು ಕಾಣುತ್ತೇವೆ, ಆದರೆ ಆಧ್ಯಾತ್ಮಿಕವಾಗಿ ಹಾಗೂ ಧಾರ್ಮಿಕವಾಗಿ ಕೊರತೆಇರುವುದನ್ನುನಾವುಗಮನಿಸಬೇಕು. ಜಗತ್ತಿಗೆಚೇತನರಾಗಿದ್ದಸ್ವಾಮಿವಿವೇಕಾನಂದರು ಈ ನಿಟ್ಟಿನ ಆಲೋಚನೆಯನ್ನು ಯುವಕರಿಗೆ ನೀಡಿದ್ದಾರೆ ಎಂದರು.

ವಿವೇಕಾನಂದರ ಚಿಂತನೆಗಳು ಹಾಗೂ ಅವರ ಆಲೋಚನಾ ಶಕ್ತಿ ಜಗತ್ತಿಗೆ ಸ್ಫೂರ್ತಿದಾಯಕವಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿವೇಕಾನಂದರ ಯೋಚನೆಗಳು ಪರಿಣಾಮಕಾರಿಯಾದ ಬುನಾದಿಗಳನ್ನು ಕಲ್ಪಿಸಿತು. ದೇಶಭಕ್ತಿಯ ಜೊತೆ ಆಧ್ಯಾತ್ಮಿಕ ಆಲೋಚನೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದರು.

ಆತ್ಮಸ್ಥೈರ್ಯವೇ ಮನುಷ್ಯನ ಮುಖ್ಯ ಸಾಧನ ಶಕ್ತಿಯಾಗಿದೆ. ಪ್ಯಾರಾ ಒಲಂಪಿಕ್ ಕ್ರೀಡಾಸ್ಪರ್ಧೆಯಲ್ಲಿ ಅಂಗವಿಕಲತೆ ಇರುವ ವ್ಯಕ್ತಿಗಳು ಸಾಧನೆ ಮಾಡುತ್ತಾರೆ. ಸದೃಢರಾದ ನಮಗೇಕೆ ಸಾಧ್ಯವಾಗುವುದಿಲ್ಲ ಎಂದು ಪ್ರಶ್ನಿಸಿಕೊಳ್ಳಬೇಕು. ಮಾನಸಿಕ ವೈಕಲ್ಯತೆಗೆ ಒಳಗಾಗಿರುವ ಇಂದಿನ ಯುವ ಸಮುದಾಯ ಚೈತನ್ಯ ಶೂನ್ಯರಾಗಿ ಬದುಕುತ್ತಿದ್ದಾರೆ. ನಿನ್ನನ್ನು ನೀನು ಗೆಲ್ಲು ಆಗ ಜಗತ್ತೇ ನಿನ್ನ ಅಡಿಯಾಳಾಗುತ್ತದೆ ಎಂಬ ಯುಕ್ತಿಯಂತೆ ಮಾನಸಿಕ ನಿಶ್ಚಿತತೆ ಬಹಳ ಮುಖ್ಯವಾದ ಸಿದ್ಧತೆ ಎಂದರು.

ಸಮಾಜದಲ್ಲಿಇಂದುಯುವಕರಿಗೆನಾನಾ ತರಹದ ಯೋಚನೆಗಳು ಬಂದರೂ ತಮ್ಮ ಗುರಿಗಳ ಬಗ್ಗೆ ಗಮನವಿರಬೇಕು. ಗುರಿ ಇಲ್ಲದ ಜೀವನ ಚುಕ್ಕಾಣಿ ಇಲ್ಲದ ದೋಣಿಯಂತೆ, ಎಣ್ಣೆಇಲ್ಲದ ದೀಪದಂತೆ ಆಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಏಳಿ ಎದ್ದೇಳಿ ತಮ್ಮ ಗುರಿ ಮುಟ್ಟುವವರೆಗೆ ನಿಲ್ಲದಿರಿ ಎಂದು ಹೇಳಿದ ಸ್ವಾಮಿ ವಿವೇಕಾನಂದರ ಮಾತು ಯುವಕರಲ್ಲಿ ಸ್ಥಾಪಿತವಾಗಬೇಕು. ಸೋಮಾರಿತನದಲ್ಲಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವ ಯುವಕರಿಗೆ ವಿವೇಕಾನಂದರ ಮಾತುಗಳು ಸ್ಫೂರ್ತಿಯಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ನಾವು ಮೊದಲು ನಮ್ಮನ್ನು ನಾವು ಪ್ರೀತಿಸಬೇಕು, ಆನಂತರ ನಮ್ಮ ದೇಶವನ್ನು ಪ್ರೀತಿಸಬೇಕು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗ ಮುಖ್ಯಸ್ಥೆ ಡಿ.ಗೀತಾ, ಸಹ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ಎಂ. ನಾಗೇಶ, ಸಿ.ಎಂ. ಕಿರಣಕುಮಾರ್‌ದೇಸಾಯ್, ಜೆ. ಮನೋಜ್ ಕುಮಾರ್, ಹಂಸವೇಣಿ, ವಿದ್ಯಾ, ಸುಲ್ತಾನ ಪೂರ್ಣಿಮಾ ಪಿಆರ್‌ಟ, ಡಿವೈನ್ ಪಾರ್ಕ್‌ಭಕ್ತರು, ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 6 ಮಾರ್ಚ್ 2025

ಏಕಾಗ್ರತೆ ಒಂದೇ ಯಶಸ್ಸಿನ ಕೀಲಿ ಕೈ

ಡಿವೈನ್ ಪಾರ್ಕ್ ಟ್ರಸ್ಟ್‌ನ ಡಿ.ಎಸ್.ಯಶವಂತ ಅಭಿಮತ

ಮೈಸೂರು, ಮಾ. 5– ಕನ್ನಡ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಸಂವಾದ ಕಾರ್ಯಕ್ರಮವನ್ನು ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಲಾಗಿತ್ತು.



ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಿವೈನ್ ಪಾರ್ಕ್ ಟ್ರಸ್ಟ್ ಸಂಸ್ಥೆಯ ಡಿ.ಎಸ್.ಯಶವಂತ ಮಾತನಾಡಿ, ಸಂಸ್ಕಾರ ವಿಲ್ಲದ ಜೀವನ ಆತ್ಮವಿಲ್ಲದ ದೇಹದಂತೆ. ಇಂದಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನ ಸಂಪಾದನೆಯನ್ನು ಕಾಣುತ್ತೇವೆ. ಆದರೆ ಆಧ್ಯಾತ್ಮಿಕ ಹಾಗೂ ಧಾರ್ಮಿಕವಾಗಿ ಕೊರತೆ ಇರುವುದನ್ನು ನಾವು ಗಮನಿಸಬೇಕು. ಜಗತ್ತಿಗೆ ಚೇತನರಾಗಿದ್ದ ಸ್ವಾಮಿ ವಿವೇಕಾನಂದರು ಈ ನಿಟ್ಟಿನ ಆಲೋಚನೆಯನ್ನು ಯುವಕರಿಗೆ ನೀಡಿದ್ದಾರೆ ಎಂದರು.

ವಿವೇಕಾನಂದರ ಚಿಂತನೆಗಳು ಹಾಗೂ ಅವರ ಆಲೋಚನಾ ಶಕ್ತಿ ಜಗತ್ತಿಗೆ ಸ್ಫೂರ್ತಿದಾಯಕವಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿವೇಕಾನಂದರ ಯೋಚನೆಗಳು ಪರಿಣಾಮಕಾರಿಯಾದ ಬುನಾದಿಗಳನ್ನು ಕಲ್ಪಿಸಿತು. ದೇಶಭಕ್ತಿಯ ಜೊತೆಗೆ ಆಧ್ಯಾತ್ಮಿಕ ಆಲೋಚನೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ಅವರು ತಿಳಿಸಿದರು.

ಸೇವಾ ಮನೋಭಾವ ಯುವಕರ ಮುಖ್ಯ ಧ್ಯೇಯವಾಗಬೇಕು. ಸ್ವಾರ್ಥ ರಹಿತವಾದ ಸೇವೆ ಮಾಡುವವರು ಸಮಾಜದ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಯಾರು ಇತರರಿಗಾಗಿ ಬಾಳುತ್ತಾರೋ ಅವರದು ಜೀವನ. ಸುಮ್ಮನೆ ಬದುಕುವುದು ತಿರುಗಾಡುವ ಹೆಣದಂತೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ತಿಮ್ಮೇಗೌಡ, ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಗೀತಾ, ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ನಾಗೇಶ, ಕಿರಣಕುಮಾರ್ ದೇಸಾಯ್, ಮನೋಜ್ ಕುಮಾರ್, ಹಂಸವೇಣಿ, ವಿದ್ಯಾ, ಸುಲ್ತಾನ ಪೂರ್ಣಿಮಾ ಪಿ.ಆರ್.ಓ, ಡಿವೈನ್ ಪಾರ್ಕ್ ಭಕ್ತರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 13.03.2025

ಕಾಲೇಜುಗಳಲ್ಲಿ ಲೈಂಗಿಕ ಕಿರುಕುಳ ತಡೆಗೆ ಸಂಘಟಿತ ಪ್ರಯತ್ನ ಅಗತ್ಯ

• **ಕನ್ನಡಪ್ರಭ ವಾರ್ತೆ** ಮೈಸೂರು.

ಕಾಲೇಜುಗಳಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಆಡಳಿತ ಮಂಡಳಿಗಳು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸಂಘಟಿತ ಪ್ರಯತ್ನದ ಅಗತ್ಯವಿದೆ ಎಂದು ವಕೀಲೆ ಎನ್. ಗೀತಾ ತಿಳಿಸಿದರು.

ನಗರದ ಮಹಾಜನ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಸತ್ತು, ಆಂತರಿಕ ದೂರು ಸಮಿತಿ ಮತ್ತು ರೋಟರ್ಯಾಕ್ಟ್ ಕ್ಲಬ್ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಬ್ರೇಕಿಂಗ್ ಬ್ಯಾರಿಯರ್ಸ್: ಅಂಡರ್ ಸ್ಟಾ್ಯಂಡಿಂಗ್ ಪೊಸ್ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ 2013 (ಪೊಸ್) ಭಾರತದಲ್ಲಿನ ಒಂದು ಶಾಸಕಾಂಗ ಕಾಯ್ದೆಯಾಗಿದ್ದು, ಇದು ಕೆಲಸದ ಸ್ಥಳದಲ್ಲಿ ಮಹಿಳೆಯರನ್ನು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರನ್ನು ಲೈಂಗಿಕ ಕಿರುಕುಳದಿಂದ ರಕ್ಷಿಸಲು



ನೆರವಾಗುವ ಕಾನೂನು ಆಗಿದೆ ಎಂದು ಅವರು ಹೇಳಿದರು. ಲೈಂಗಿಕ ಸ್ಪರ್ಶ ಸೇರಿದಂತೆ ಲೈಂಗಿಕ ಚಟುವಟಿಕೆಗಾಗಿ ಒತ್ತಡ ಹೇರುವುದು, ಬೀದಿಗಳಲ್ಲಿ ಲೈಂಗಿಕ ಕಿರುಕುಳ ಮಾಡುವುದು, ಅಶ್ಲೀಲ ಪದಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಳಸುವುದು ಮತ್ತು ಪ್ರಚೋದಿಸುವುದು, ಅಶ್ಲೀಲ ಭಾಷೆ ಮತ್ತು ಹಾಸ್ಯಗಳ ಮೂಲಕ ಲೈಂಗಿಕ ವಿಷಯಗಳ ಅನಗತ್ಯ ಚರ್ಚೆ ಸೇರಿದಂತೆ ಲೈಂಗಿಕ ಕಿರುಕುಳದ ಮೌಖಿಕ ಮತ್ತು ಭೌತಿಕ ವಿಧಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳು ತಮಗೆ ಲೈಂಗಿಕ ಕಿರುಕುಳವಾದಾಗ ದೂರು ನೀಡಲು ಇರುವ ವೇದಿಕೆಗಳ ಬಗ್ಗೆ ಅವರು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ವಿದ್ಯಾರ್ಥಿ ಸಂಸತ್ತು ಮತ್ತು ಆಂತರಿಕ ದೂರು ಸಮಿತಿಯ ಸಂಚಾಲಕ ಡಾ.ಪಿ.ಜೆ. ಪುಷ್ಪಾರಾಣಿ, ರೋಟರ್ಯಾಕ್ಟ್ ಕ್ಲಬ್ ಸಂಚಾಲಕಿ ವಿ. ಗಾಯತ್ರಿ, ವಿದ್ಯಾರ್ಥಿ ಸಂಸತ್ತಿನ ಮುಖ್ಯ ಪ್ರತಿನಿಧಿ ಕೆ.ಎಸ್. ರವೀಂದ್ರ, ರೋಟರ್ಯಾಕ್ಟ್ ಅಧ್ಯಕ್ಷ ಮೋಹಿತ್ ಪುರೋಹಿತ್, ಕಾರ್ಯದರ್ಶಿ ಅರ್ಮಾನ್ ಬಿಲಾಲ್ ಮೊದಲಾದವರು ಇದ್ದರು.

ಆಂದೋಲನ
ದಿನ ಪತ್ರಿಕೆ
ಗುರುವಾರ, 20 ಮಾರ್ಚ್ 2025

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಐಎಸ್ ಕಾರ್ಯಾಗಾರ



ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೂಗೋಳ ಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿಯ ಸಹಯೋಗದಲ್ಲಿ 'ಡಿಜಿಟಲ್ ಮ್ಯಾಪಿಂಗ್ ಟೆಕ್‌ನಿಕ್ಸ್ ಇನ್ ಜಿಯೋ ಗ್ರಾಫಿಕಲ್ ಇನ್‌ಫಾರ್ ಮೇಷನ್ ಸಿಸ್ಟಂ' ಎಂಬ ವಿಷಯ ಕುರಿತು ಆಯೋಜಿಸಿರುವ ಎರಡು ದಿನಗಳ ಕಾರ್ಯಾಗಾರಕ್ಕೆ ಚಾಲನೆ ದೊರೆಯಿತು.

ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಆರ್.ಶೆಲ್ವರಾಜು ಮಾತನಾಡಿ, ಆಧುನಿಕ ಜಗತ್ತಿಗೆ ಜಿಐಎಸ್ ಬಹಳ ಮುಖ್ಯ ವಾಗಿದೆ. ಇದನ್ನು ವಿದ್ಯಾರ್ಥಿಗಳು ಕಲಿಯುವುದು ತುಂಬಾ ಕಷ್ಟ ಎಂದು ಭಾವಿಸಿದ್ದಾರೆ. ಆದರೆ, ಇದನ್ನು ಅತ್ಯಂತ ಸರಳ ವಿಧಾನದ ಮೂಲಕ ಕಲಿಯಬಹುದಾಗಿದೆ ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯ ಜಿಯೋ ಇನ್‌ಫಾರ್ಮೆಟಿಕ್ಸ್ ಸ್ಕೂಲ್ ಆಫ್ ಲೈಫ್‌ಸೈನ್ಸ್ ಸಂಶೋಧಕ ಡಾ.ಜಿ.ಭುವನೇಶ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿದರು. ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಕೆ.ಕೆ.ಸೋಮಶೇಖರ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಜಿ.ದೊಡ್ಡರಸಯ್ಯ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ.ಸಿ.ಎಸ್. ಸಿದ್ದರಾಜು, ಸಂಧ್ಯಾರಾಣಿ ಹಾಜರಿದ್ದರು. ಅಂಕಿತಾ ಪ್ರಾರ್ಥನೆಯೊಂದಿಗೆ ನಿರೂಪಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 20.03.2025

ಆಧುನಿಕ ಜಗತ್ತಿಗೆ ಜಿಐಎಸ್ ಬಹಳ ಮುಖ್ಯ

ಪ್ರಾಧ್ಯಾಪಕ ಡಾ.ಆರ್. ಶೆಲ್ವರಾಜು ಅಭಿಮತ | ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಐಎಸ್ ಕಾರ್ಯಾಗಾರ

• ಕನ್ನಡಪ್ರಭ ವಾರ್ತೆ ಮೈಸೂರು

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿಯ ಸಹಯೋಗದಲ್ಲಿ ಡಿಜಿಟಲ್ ಮ್ಯಾಪಿಂಗ್ ಟೆಕ್ ನಿಕ್ಸ್ ಇನ್ ಜಿಯೋಗ್ರಾಫಿಕಲ್ ಇನ್ ಫಾರ್ ಮೇಷನ್ ಸಿಸ್ಟಂ ಎಂಬ ವಿಷಯ ಕುರಿತು ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಆರ್. ಶೆಲ್ವರಾಜು ಮಾತನಾಡಿ, ಆಧುನಿಕ ಜಗತ್ತಿಗೆ ಜಿಐಎಸ್ ಬಹಳ ಮುಖ್ಯವಾಗಿದೆ. ಇದನ್ನು


ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಐಎಸ್ ಕಾರ್ಯಾಗಾರ ನಡೆಯಿತು.

ವಿದ್ಯಾರ್ಥಿಗಳು ಕಲಿಯುವುದು ತುಂಬಾ ಕಷ್ಟ ಎಂದು ಭಾವಿಸಿದ್ದಾರೆ. ಆದರೆ ಇದನ್ನು ಕಲಿಯುವುದು ಅತ್ಯಂತ ಸರಳ ವಿಧಾನವಾಗಿದೆ. ನೀವುಗಳು ದಿನನಿತ್ಯ ಮೊಬೈಲ್ ಆಪ್ಲಿಕೇಷನ್ ಗಳನ್ನು ಬಳಸುವ ರೀತಿಯಲ್ಲಿ ಇದನ್ನು ಆಭ್ಯಾಸ ಮಾಡಿ ಕಲಿಯಬಹುದಾಗಿದೆ ಎಂದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಜೆಎಸ್ಎಸ್ ಉನ್ನತ ಶಿಕ್ಷಣ ಅಕಾಡೆಮಿಯ ಡಿವಿಜನ್ ಆಫ್ ಜಿಯೋ ಇನ್ಫಾರ್ಮೆಟಿಕ್ಸ್ ಸ್ಕೂಲ್ ಆಫ್ ಲೈಫ್ ಸೈನ್ಸ್ ಸಂಶೋಧಕ ಡಾ.ಜೆ. ಭುವನೇಶ್ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಜಿಐಎಸ್ ಹಾಗೂ ದೂರಸಂವೇದಿ ವಿಷಯಗಳಿಗಿರುವ ಬೇಡಿಕೆಯನ್ನು ವಿವರಿಸಿದರು. ಕಾಲೇಜಿನ ಇಒ ಡಾ.ಎಸ್.ಆರ್. ರಮೇಶ್ ಮಾತ ನಾಡಿ, ಭೂಮಿ ಎಲ್ಲರಿಗೂ ಆತ್ಯಾವಶ್ಯಕವಾಗಿದೆ. ಭೂಗೋಳಶಾಸ್ತ್ರವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆ ವಿಷಯವಾಗಿದೆ. ಆಧುನಿಕ ಜಗತ್ತಿನಲ್ಲಿ ಜಿಐಎಸ್ ಮತ್ತು ದೂರಸಂವೇದಿ ಭೂಗೋಳಶಾಸ್ತ್ರಕ್ಕೆ ಹೊಸ ಸ್ಪರ್ಶವನ್ನು ನೀಡಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಭೂಗೋಳಶಾಸ್ತ್ರದ ವಿದ್ಯಾರ್ಥಿಗಳು ಭೂಮಿಯನ್ನೇ ಆಳುವವರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಕೇವಲ ಪಠ್ಯವಿಷಯಕ್ಕೆ ಸೀಮಿತವಾಗದೆ ಈ ರೀತಿಯ ಕಾರ್ಯಾಗಾರಗಳನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಕೌಶಲ್ಯವನ್ನು ಬೆಳೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಕೆ.ಕೆ. ಸೋಮಶೇಖರ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಜೆ. ದೊಡ್ಡರಸಯ್ಯ ವಂದಿಸಿದರು. ಸಹಾಯಕ ಪ್ರಾಧ್ಯಾಪಕ ಸಿ.ಎಸ್. ಸಿದ್ದರಾಜು, ಸಂಧ್ಯಾರಾಣಿ ಇದ್ದರು. ಅಂಕಿತಾ ಪ್ರಾರ್ಥಿಸಿ, ನಿರೂಪಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಇದ್ದರು.

ಆಂದೋಲನ
ದಿನ ಪತ್ರಿಕೆ

ಭಾನುವಾರ, 23 ಮಾರ್ಚ್ 2025



ವಿಶೇಷ ಉಪನ್ಯಾಸ ...

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಸ್ಕೃತ ಮತ್ತು ಹಿಂದಿ ವಿಭಾಗಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ಆಧುನಿಕ ಸಮಾಜಕ್ಕೆ ಭಾರತೀಯ ಜ್ಞಾನ ಪರಂಪರೆಯ ಪ್ರಸ್ತುತತೆ' ಕುರಿತು ವಿಶೇಷ ಉಪನ್ಯಾಸ ನಡೆಯಿತು. ಉಡುಪಿಯ ಎಸ್‌ಎಂಎಸ್‌ಪಿ ಸಂಸ್ಕೃತ ಕಾಲೇಜು ಪ್ರಾಧ್ಯಾಪಕ ಡಾ.ಬಿ.ರಾಧಾಕೃಷ್ಣ ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸಂಸ್ಕೃತ ವಿಭಾಗದ ಮುಖ್ಯಸ್ಥ ಶ್ರೀವತ್ಸ ಅಚ್ಚುತ, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 22.03.2025

ಸಂಪ್ರದಾಯ ರಕ್ಷಣೆಯಿಂದ ಉತ್ತಮ ಸಮಾಜ

ವಿಶೇಷ ಉಪನ್ಯಾಸದಲ್ಲಿ ಉಡುಪಿಯ ಎಸ್‌ಎಂಎಸ್‌ಪಿ ಸಂಸ್ಕೃತ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಬಿ. ರಾಧಾಕೃಷ್ಣ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಂಪ್ರದಾಯಗಳನ್ನು ಸಂರಕ್ಷಿಸುವುದು ಮತ್ತು ಆಧುನಿಕ ಪ್ರಗತಿಯೊಂದಿಗೆ ಒಳಗೊಳ್ಳುವುದರಿಂದ ನೈತಿಕವಾಗಿ ನೆಲೆಗೊಂಡ ಮತ್ತು ಮುಂದಾಲೋಚನೆಯುಳ್ಳ ಸಮಾಜವನ್ನು ಸೃಷ್ಟಿಸಬಹುದು ಎಂದು ಉಡುಪಿಯ ಎಸ್‌ಎಂಎಸ್‌ಪಿ ಸಂಸ್ಕೃತ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಬಿ. ರಾಧಾಕೃಷ್ಣ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಹಿಂದಿ ವಿಭಾಗಗಳು ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಆಧುನಿಕ ಸಮಾಜಕ್ಕೆ ಭಾರತೀಯ ಜ್ಞಾನ ಪರಂಪರೆಯ ಪ್ರಸ್ತುತತೆ ಕುರಿತು ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.



ಸಂಸ್ಕೃತ, ವೈದಿಕ ಸಾಹಿತ್ಯ, ಆಯುರ್ವೇದ, ಯೋಗ ಮತ್ತು ವಿವಿಧ ತಾತ್ವಿಕ ವ್ಯವಸ್ಥೆಗಳಲ್ಲಿ ಬೇರೂರಿರುವ ಭಾರತೀಯ ಜ್ಞಾನ ಸಂಪ್ರದಾಯಗಳು ಆಧುನಿಕ ಕಾಲದಲ್ಲಿ ಹೇಗೆ ಅಪಾರ ಮೌಲ್ಯವನ್ನು ಹೊಂದಿವೆ. ಶಾಸ್ತ್ರ ಪುರಾಣ, ಜ್ಯೋತಿಶಾಸ್ತ್ರ ಹಾಗೂ ಗಣಿತ ವಿಚಾರಗಳು ಹೇಗೆ ಪ್ರಸ್ತುತತೆ ಹೊಂದಿದೆ ಎಂಬುದನ್ನು ಅವರು ವಿವರಿಸಿದರು.

ಭಾರತೀಯ ಗುರುಕುಲ ವ್ಯವಸ್ಥೆಯು ಅನುಭವದ ಕಲಿಕೆ, ಶಿಸ್ತು ಮತ್ತು ನೈತಿಕ ಶಿಕ್ಷಣವನ್ನು ಉತ್ತೇಜಿಸುತ್ತದೆ. ಅಲ್ಲದೇ ಮೌಲ್ಯಗಳನ್ನು ಆಧುನಿಕ ಶಿಕ್ಷಣದೊಂದಿಗೆ ಸಂಯೋಜಿಸಿ ಕೌಶಲ್ಯಪೂರ್ಣ ವೃತ್ತಿಪರರನ್ನು ಮಾತ್ರವಲ್ಲದೆ ಬಲವಾದ ನೈತಿಕ ಅಡಿಪಾಯಗಳನ್ನು ಹೊಂದಿರುವ ಜವಾಬ್ದಾರಿಯುತ ನಾಗರಿಕರನ್ನು ಬೆಳೆಸಬಹುದು ಎಂದರು.

ಪ್ರಾಚೀನ ಭಾರತೀಯ ಪಠ್ಯಗಳಿಂದ ಆಯ್ದ ಪರಿಸರ ಪ್ರಜ್ಞೆಯ ಮಹತ್ವವನ್ನು, ಪ್ರಕೃತಿಯೊಂದಿಗೆ ಸಾಮರಸ್ಯದ ಸಹಬಾಳ್ವೆ, ಸಾಂಪ್ರದಾಯಿಕವಾಗಿ ಪರಿಸರ ತತ್ವಶಾಸ್ತ್ರಗಳನ್ನು ಮರುಪರಿಶೀಲಿಸುವುದು ಸುಸ್ಥಿರ ಅಭಿವೃದ್ಧಿಗೆ ನಿರ್ಣಾಯಕವಾಗಿದೆ. ಶೂನ್ಯ ಪರಿಕಲ್ಪನೆ, ಖಗೋಳಶಾಸ್ತ್ರದಲ್ಲಿನ ಪ್ರಗತಿಗಳು ಮತ್ತು ಲೋಹಶಾಸ್ತ್ರ ಸೇರಿದಂತೆ ವಿಜ್ಞಾನ ಮತ್ತು ಲೋಕಶಾಸ್ತ್ರ ಸೇರಿದಂತೆ ವಿಜ್ಞಾನ ಮತ್ತು ಗಣಿತಕ್ಕೆ ಭಾರತದ ಐತಿಹಾಸಿಕ ಕೊಡುಗೆಗಳ ಬಗೆಯೂ ಗುರುತಿಸುವುದು ಮತ್ತು ಸಂಯೋಜಿಸುವುದು ಸಾಂಪ್ರದಾಯಿಕ ಬುದ್ಧಿವಂತಿಕೆ ಮತ್ತು ಸಮಕಾಲೀನ ಸಾವೀನ್ಯತೆಯ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತ್ಯವು ಯಾವುದೇ ಯುಗದಲ್ಲಿ ಬರೆಯಲ್ಪಟ್ಟಿದ್ದರೂ ವ್ಯಕ್ತಿಯಪಾತ್ರ ಮತ್ತು ನೈತಿಕ ಅಡಿಪಾಯವನ್ನು ರೂಪಿಸುವಲ್ಲಿ ಮಾರ್ಗದರ್ಶಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಶತಮಾನಗಳಾದ್ಯಂತ ಸಾಹಿತ್ಯವು ತೃಪ್ತಿಕರ ಜೀವನವನ್ನು ನಡೆಸಲು ಆಗತ್ಯವಾದ ಮೌಲ್ಯಗಳನ್ನು ಒದಗಿಸುವಂತೆ, ಭಾರತೀಯ ಜ್ಞಾನ ಸಂಪ್ರದಾಯಗಳು ಬೌದ್ಧಿಕ ಮತ್ತು ನೈತಿಕ ಬೆಳವಣಿಗಗ ಕಾಲಾತೀತ ಅಡಿಪಾಯವನ್ನು ನೀಡುತ್ತದೆ ಎಂದು ತಿಳಿಸಿದರು.

ಸಂಸ್ಕೃತ ವಿಭಾಗದ ಮುಖ್ಯಸ್ಥ ಶ್ರೀವತ್ಸ ಅಚ್ಯುತ, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

ಹೊಸ ದಿಗಂತ

ಶುಕ್ರವಾರ
7 ಮಾರ್ಚ್ 2025

ಪ್ರಾಧ್ಯಾಪಕ ಡಾ.ಕೆ.ಎನ್.ಮೋಹನ್ ಕಿವಿಮಾತು

ಭಾರತೀಯ ಶಿಲ್ಪಕಲೆ ಉಳಿಸಿ ಬೆಳೆಸಿ

• **ಮೈಸೂರು:** ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಾವಿರಾರು ವರ್ಷಗಳ ಇತಿಹಾಸ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿದ್ದು, ಸಿಂಧೂ ಬಯಲಿನ ನಾಗರೀಕತೆಯಿಂದ ಭಾರತೀಯರ ವಾಸ್ತುಶೈಲಿಯ ಪ್ರಕಾರವು ಆರಂಭಗೊಂಡಿದೆ ಎಂದು ಪ್ರಾಧ್ಯಾಪಕ ಡಾ.ಕೆ.ಎನ್.ಮೋಹನ್ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿಯ ಸಹಯೋಗದಲ್ಲಿ ಭಾರತೀಯ ವಾಸ್ತುಶಿಲ್ಪ ಕಲೆ ಒಂದು ಐತಿಹಾಸಿಕ ಒಳನೋಟ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮೌರ್ಯರು ಮತ್ತು ಗುಪ್ತರ ಕಾಲದಲ್ಲಿ ಉತ್ತರ ಭಾರತದಲ್ಲಿ ನಾಗರ ಕಲಾಶೈಲಿಯು ಅಸ್ತಿತ್ವಕ್ಕೆ ಬಂದು ಅನೇಕ ದೇವಾಲಯಗಳು, ಬೌದ್ಧಸ್ತೂಪಗಳು, ಜೈನಬಸದಿಗಳು ಸೇರಿದಂತೆ ಭವ್ಯವಾದ ಅರಮನೆಗಳು ನಿರ್ಮಾಣಗೊಂಡವು. ದಕ್ಷಿಣ ಭಾರತದಲ್ಲಿ ಪಲ್ಲವರ ಕಾಲದಲ್ಲಿ ದ್ರಾವಿಡ ಕಲಾಶೈಲಿಯೂ ಉಗಮಗೊಂಡು ಚೋಳರು ಸೇರಿದಂತೆ ಕರ್ನಾಟಕದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಹೊಯ್ಸಳರ ಕಾಲದಲ್ಲಿ ಹಲವು ಪ್ರಸಿದ್ಧ ದೇವಾಲಯಗಳು ನಿರ್ಮಾಣವಾದವು. ವಿಶೇಷವಾಗಿ ಬಾದಾಮಿ



ಚಾಲುಕ್ಯರ ಕಾಲದಲ್ಲಿ ನಾಗರ ಮತ್ತು ದ್ರಾವಿಡ ಶೈಲಿಗಳು ಸಮ್ಮಿಲನಗೊಂಡುನೂತನ ವೇಸರಶೈಲಿಯು ಅಸ್ತಿತ್ವಕ್ಕೆ ಬಂದು ನೂರಾರು ವಿಭಿನ್ನವಾದ ಮತ್ತು ಆಕರ್ಷಣೀಯವಾದ ದೇವಾಲಯಗಳು ಅಸ್ತಿತ್ವಕ್ಕೆ ಬಂದವು. ವಿಜಯನಗರದ ಅರಸರ ಕಾಲದಲ್ಲಿ ದ್ರಾವಿಡ ಕಲಾಶೈಲಿಯು ದಕ್ಷಿಣ ಭಾರತದಲ್ಲಿ ಪರಾಕಾಷ್ಠೆಯ ಹಂತವನ್ನು ತಲುಪಿತು ಎಂದು ತಿಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲೆ ಡಾ ಬಿ ಆರ್ ಜಯಕುಮಾರಿ ಆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶೈಕ್ಷಣಿಕ ಡೀನ್ ಡಾ.ಶ್ರೀಧರ ಹೆಚ್. ವಿಭಾಗದ ಅಧ್ಯಾಪಕರುಗಳಾದ ನಂದೀಶ್ ಎ.ಆರ್., ಜಯಲಕ್ಷ್ಮೀ ಇದ್ದರು.

ಆಂದೋಲನ

ದಿನ ಪತ್ರಿಕೆ

ಭಾನುವಾರ, 9 ಮಾರ್ಚ್ 2025



ಮಹಾಜನ ಕಾಲೇಜು... ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ 'ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು. ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಒಂದು ಕಿರುನಾಟಕವನ್ನು ಕಾಲೇಜಿನ ವಿದ್ಯಾರ್ಥಿಗಳು ಮನೋಜ್ಞವಾಗಿ ಅಭಿನಯಿಸಿದರು. ಉದ್ಯಮಿ ಹೇಮಾ ನಂದೀಶ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಆಡಳಿತ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಬಿಬಿಎ ಸಹಾಯಕ ಪ್ರಾಧ್ಯಾಪಕ ಸುನಿಲ್ ಅಧ್ಯಾಪಕರು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 9.03.2025

ಹೆಣ್ಣಿನ ಸಶಕ್ತತೆಗಾಗಿ ಪುರುಷರ ಬೆಂಬಲವೂ ಬೇಕು:ಹೇಮಾ

• **ಕನ್ನಡಪ್ರಭ ವಾರ್ತೆ** ಮೈಸೂರು

ಹೆಣ್ಣುಮಕ್ಕಳ ಸಶಕ್ತತೆಗಾಗಿಪುರುಷರ ಬೆಂಬಲವೂ ಇರಬೇಕೆಂದು ಬಿಜೆಪಿ ಮುಖಂಡರಾದ ಹೇಮಾ ನಂದೀಶ್ ಅಭಿಪ್ರಾಯಪಟ್ಟರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿ ಅವರು ಮಾತನಾಡಿದರು.

ಇಂದಿನ ಮಹಿಳೆ ಅಡುಗೆಮನೆಗೆ ಮಾತ್ರ ಸೀಮಿತವಾಗದೆ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಹಾಗೂ ವಿಜ್ಞಾನ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ತನ್ನದೇ ಆದ ಗಣನೀಯ ಸೇವೆಯನ್ನು ಸಲ್ಲಿಸುತ್ತಿದ್ದಾಳೆ. ಮಹಿಳೆ ವಿದ್ಯೆಯಿಂದ ಮಾತ್ರ ತನ್ನ ಗುರಿಸಾಧಿಸಲು ಸಾಧ್ಯ. ಅದಕ್ಕೆ ನಿದರ್ಶನ ಕಲ್ಪನಾಚಾವ್ಲಾ ಅವರ ಸಾಧನೆಯನ್ನು ನೆನೆಯಬೇಕು. ಪುರುಷ ಸಮಾಜದಲ್ಲಿ ಹೆಣ್ಣು ಹಲವು ಬಗೆಯಲ್ಲಿ ಶೋಷಣೆಗೆ ಒಳಗಾದರೂ ಸಹ ಮೆಟ್ಟಿನಿಂತು ಮನುಕುಲದ ಏಳಿಗೆಗೆ ಶ್ರಮಿಸುತ್ತಾ, ಸಾಧಕಳಾಗಿಯೂ ತನ್ನನ್ನು ಗುರುತಿಸಿಕೊಳ್ಳಬೇಕು.ಮಹಿಳೆಯರ ಸಮಾನತೆಗಾಗಿ ಕೈಜೋಡಿಸಿದ ಅಪ್ಪ, ಅಣ್ಣ,ತಮ್ಮ, ಗಂಡ, ಮಗ ಇವರೆಲ್ಲರೂ ನಮ್ಮ ಬೆನ್ನಹಿಂದೆ ನಿಂತು ಎಲ್ಲ ಕಾರ್ಯಗಳಿಗೂ ಸ್ಫೂರ್ತಿ ಮತ್ತು ಧೈರ್ಯವನ್ನು ತುಂಬಿ ಸಮಾನತೆಗಾಗಿ ಕೈಜೋಡಿಸಬೇಕು ಎಂದರು.



ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಒಂದು ಕಿರುನಾಟಕವನ್ನು ಕಾಲೇಜಿನ ವಿದ್ಯಾರ್ಥಿಗಳು ಮನೋಜ್ಞವಾಗಿ ಅಭಿನಯಿಸುವುದರ ಮೂಲಕ ಮಹಿಳಾ ಅಂತಾರಾಷ್ಟ್ರೀಯ ದಿನಾಚರಣೆಗೆ ವಿಶೇಷ ಮೆರಗು ನೀಡಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಆಡಳಿತ ನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್.ಆರ್. ರಮೇಶ್ ಮತ್ತು ಅಧ್ಯಾಪಕರು ಹಾಗೂ ಅಧ್ಯಾಪಕೇತರರು, ವಿದ್ಯಾರ್ಥಿಗಳು ಇದ್ದರು. ಬಿಬಿಎ ಸಹಾಯಕ ಪ್ರಾಧ್ಯಾಪಕ ಸುನಿಲ್ ನಿರೂಪಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 17.03.2025



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಬಿ. ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಇದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 19 ಮಾರ್ಚ್ 2025

ಡಾ.ಬಿ.ಚಂದ್ರಶೇಖರ್‌ಗೆ ಸನ್ಮಾನ...



ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ನೂತನ ಜಂಟಿ ನಿರ್ದೇಶಕ ಡಾ.ಬಿ.ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ಆಂದೋಲನ
ದಿನ ಪತ್ರಿಕೆ

ಗುರುವಾರ, 6 ಮಾರ್ಚ್ 2025

'ಕಾಲದ ಗಡಿ ಮೀರಿದ ಮಹಾನ್ ಚೇತನ ಅಲ್ಲಮಪ್ರಭು'

'ಅಲ್ಲಮನ ವಚನಗಳ ಚಿಂತನೆ' ವಿಷಯ ಕುರಿತ ಉಪನ್ಯಾಸದಲ್ಲಿ ಅಧ್ಯಾಪಕರಾದ ಡಾ.ಶೈಲಾ ಅಭಿಮತ



ಮೈಸೂರು: ಅಲ್ಲಮಪ್ರಭು ತನ್ನ ಅಪಾರವಾದ ಜ್ಞಾನ ಮತ್ತು ಸಾಧನೆಯ ದೃಷ್ಟಿಯಿಂದ ವಿಶ್ವದ ಮಹಾನ್ ಚೇತನಗಳ ಸಾಲಿನಲ್ಲಿ ನಿಲ್ಲುತ್ತಾರೆ. ಅಲ್ಲಮರ ವಚನಗಳು ಆಳಕ್ಕೆ-ಆಳ, ವಿಸ್ತಾರಕ್ಕೆ- ವಿಸ್ತಾರ, ಎತ್ತರಕ್ಕೆ- ಎತ್ತರ. ಆದ್ದರಿಂದ ಅಲ್ಲಮಪ್ರಭು ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ದೇಶ, ಕಾಲದ ಗಡಿಯನ್ನೂ ಮೀರಿ ನಿಲ್ಲುತ್ತಾರೆ ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರಾದ ಡಾ.ಶೈಲಾ ಬಣ್ಣಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ, ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರದವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಅಲ್ಲಮನ ವಚನಗಳ ಚಿಂತನೆ' ವಿಷಯ ಕುರಿತು ಅವರು ಮಾತನಾಡಿದರು.

ಅಲ್ಲಮಪ್ರಭು ನಿರಚನವಾದಿ, ಸಂಪೂರ್ಣ ಬಂಡಾಯಗಾರ. ಆದ್ದರಿಂದಲೇ ಪ್ರಖರ ವೈಚಾರಿಕತೆ ಮತ್ತು ಸ್ವತಂತ್ರ ವಿಚಾರಶಕ್ತಿ ಅಲ್ಲಮನ ವಚನಗಳಲ್ಲಿ ಪ್ರತಿಧ್ವನಿಸುತ್ತದೆ. ಮಾತ್ರವಲ್ಲ, ಅಲ್ಲಮಪ್ರಭುವಿನ ವಚನ ಗಳನ್ನು ಅಧ್ಯಯನ ಮಾಡಿದಾಗ ಅಲ್ಲಮ ಎದುರಿಸಿದ ಕಠಿಣ ಪರಿಸ್ಥಿತಿಗಳನ್ನೂ ನಾವು ಗ್ರಹಿಸಬಹುದಾಗಿದೆ ಎಂದು ಹೇಳಿದರು.

ಸರಣಿ ಉಪನ್ಯಾಸ ಮಾಲಿಕೆ ಸಂಯೋಜಕ ಡಾ.ಮೈಲಹಳ್ಳಿ ರೇವಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ವಿಜಯಕುಮಾರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 6.03.2025

ಅಲ್ಲಮ ದೇಶ, ಕಾಲ, ಗಡಿ ಮೀರಿ ನಿಲ್ಲುತ್ತಾರೆ: ಡಾ.ಶೈಲಾ

ಅಲ್ಲಮಪ್ರಭುವಿನ ವಚನಗಳ ಬರೀ ಶಬ್ದಗಳಲ್ಲ, ಅವು ವಿಶ್ವ ಚೈತನ್ಯದ ನುಡಿಗಳು | ಅಲ್ಲಮನ ವಚನಗಳ ಚಿಂತನೆ ವಿಷಯ ಕುರಿತು ಮಾತು

• ಕನ್ನಡಪ್ರಭ ವಾರ್ತೆ ಮೈಸೂರು

ಅಲ್ಲಮ ಪ್ರಭು ದೇಶ ಕಾಲದ ಗಡಿ ಮೀರಿ ನಿಲ್ಲುತ್ತಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ. ಶೈಲಾ ಬಣ್ಣಿಸಿದರು.

ಜಯಲಕ್ಷ್ಮೀಪುರಂನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿವಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ, ಅಧ್ಯಯನಹಾಗೂ ವಿಸ್ತರಣಾ ಕೇಂದ್ರದ ಸಹಯೋಗದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಲ್ಲಮನ ವಚನಗಳ ಚಿಂತನೆ ವಿಷಯ ಕುರಿತು ಅವರು ಮಾತನಾಡಿದರು.

ಅಲ್ಲಮಪ್ರಭು ತನ್ನ ಆಪಾರ ಜ್ಞಾನ ಮತ್ತು ಸಾಧನೆಯ ದೃಷ್ಟಿಯಿಂದ ವಿಶ್ವದ ಮಹಾನ್ ಚೇತನಗಳ ಸಾಲಿನಲ್ಲಿ ನಿಲ್ಲುತ್ತಾರೆ. ಅಲ್ಲಮರ ವಚನಗಳು ಆಳಕ್ಕೆ-ಆಳ, ವಿಸ್ತಾರಕ್ಕೆ- ವಿಸ್ತಾರ, ಎತ್ತರಕ್ಕೆ- ಎತ್ತರ. ಆದ್ದರಿಂದ ಅಲ್ಲಮಪ್ರಭು ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ, ಅವರು ದೇಶ, ಕಾಲ, ಗಡಿ ಮೀರಿ ನಿಲ್ಲುತ್ತಾರೆ ಎಂದರು.



ಮೈಸೂರು ಎಪಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ, ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಲ್ಲಮನ ವಚನಗಳ ಚಿಂತನೆ ವಿಷಯ ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಪ್ರಾಧ್ಯಾಪಕ ಡಾ.ಶೈಲಾ ಮಾತನಾಡಿದರು.

ವಚನಕಾರರ ಕಾಲಘಟ್ಟ ಭಕ್ತಿಯ ಅಂಗವಾಗಿತ್ತು. ಆಗಿದ್ದರೂ ವಚನಕಾರರು ಭಕ್ತಿ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕ ಭಕ್ತಿ ವಿರೋಧಿಸಿದರು. ನಾನು ಎಂಬ ಅಹಮಿಕೆ, ಸಂಕುಚಿತತೆಯನ್ನು ಕಳೆದು, ನಾವೆಲ್ಲರೂ ಸಮಾನರು ಎಂಬ ಆಶಯವನ್ನು ಬಿತ್ತಿದರು. ಶಾಂತಿ, ಸೌಹಾರ್ದತೆ, ಸಹಬಾಳ್ವೆಯನ್ನು ತಮ್ಮ ವಚನಗಳಲ್ಲಿ ಸಾರಿದರು. ಆದ್ದರಿಂದ ವಚನಕಾರರ ವಚನಗಳು ಎಲ್ಲಾ ಕಾಲಕ್ಕೂ ಅನ್ವಯಿಸುತ್ತವೆ ಎಂದು ಅವರು ತಿಳಿಸಿದರು.

ಅಲ್ಲಮಪ್ರಭು ನಿರಚನವಾದಿ, ಸಂಪೂರ್ಣ ಬಂಡಾಯಗಾರ. ಆದ್ದರಿಂದಲೇ ಪ್ರಖರ ವೈಚಾರಿಕತೆ ಮತ್ತು ಸ್ವತಂತ್ರ ವಿಚಾರಶಕ್ತಿ ಅಲ್ಲಮನ ವಚನಗಳಲ್ಲಿ ಪ್ರತಿಧ್ವನಿಸುತ್ತದೆ. ಮಾತ್ರವಲ್ಲ, ಅಲ್ಲಮ ಪ್ರಭುವಿನ ವಚನಗಳನ್ನು ಅಧ್ಯಯನ ಮಾಡಿದಾಗ ಅಲ್ಲಮ ಎದುರಿಸಿದ ಕಠಿಣ ಪರಿಸ್ಥಿತಿಯನ್ನೂ ನಾವು ಗ್ರಹಿಸಬಹುದಾಗಿದೆ ಎಂದು ಅವರು ಹೇಳಿದರು.

ಬಸವಣ್ಣ ಅವರು ತಮ್ಮನ್ನು ಮಾದಾರ ಚೆನ್ನಯ್ಯನ ಮನೆಯ ಮಗ ಎಂದು ಹೇಳಿಕೊಳ್ಳುವ ಮೂಲಕ ತಳ ಸಮುದಾಯಗಳಲ್ಲಿ ಶಕ್ತಿ ತುಂಬುವ ಕೆಲಸ ಮಾಡಿದರು. ಕಾರ್ಲ್ ಮಾರ್ಕ್ಸ್ ಸೇರಿದಂತೆ ಪಾಶ್ಚಾತ್ಯ ಚಿಂತಕರು ಯೋಚಿಸುತ್ತಿದ್ದ ಚಿಂತನಾಕ್ರಮಗಳನ್ನು ವಚನಕಾರರು ತಮ್ಮ ಚಳವಳಿ ಮೂಲಕ ಸಾಧಿಸಿದ್ದರು. ಬಸವಣ್ಣ, ಅಲ್ಲಮಪ್ರಭು ಅವರಿಂದ ಹಿಡಿದು ಕುವೆಂಪು ಅವರವರೆಗೆ ದೇವಾಲಯದ ಪರಿಕಲ್ಪನೆ, ಮೌಢ್ಯಾಚಾರಣೆ, ಡಾಂಭಿಕ ಭಕ್ತಿ ವಿರೋಧಿಸಿದ್ದಾಗಿ ಅವರು ವಿವರಿಸಿದರು.

ಅಲ್ಲಮಪ್ರಭುವಿನ ವಚನಗಳ ಬರೀ ಶಬ್ದಗಳಲ್ಲ, ಅವು ವಿಶ್ವ ಚೈತನ್ಯದ ನುಡಿಗಳು. ಅಲ್ಲಮನ ಸಾಧನೆ ವಿಸ್ಮಯ. ಭಾಷೆಯ ಮೂಲಕ ಎಲ್ಲವನ್ನೂ ವ್ಯಕ್ತಪಡಿಸಲು ಸಾಧ್ಯವಿಲ್ಲ ಎಂಬುದು ಅಲ್ಲಮನ ನಿಲುವಾಗಿತ್ತು ಎಂದು ಅವರು ಅಭಿಪ್ರಾಯಪಟ್ಟರು.

ವೇದ, ಶಾಸ್ತ್ರ, ಪುರಾಣ, ಆಗಮಗಳು ಒಂದು ಕಾಲದ ಚಿಂತನೆಗಳು. ಹಾಗಾಗಿ ಅವು ಎಲ್ಲ ಕಾಲಕ್ಕೂ ಅನ್ವಯವಾಗುವುದಿಲ್ಲ. ವೇದ ಶಾಸ್ತ್ರಗಳನ್ನು ಒಂದು ಮಾನಸಿಕ ಅಂತರ ಕಾಯ್ದುಕೊಂಡು ಅವಲೋಕಿಸಿದಾಗ ಅವುಗಳಲ್ಲಿ ಯಾವುದನ್ನು ಸ್ವೀಕರಿಸಬೇಕು ಮತ್ತು ತಿರಸ್ಕರಿಸಬೇಕು ಎಂಬ ಅರಿವು ಮೂಡುತ್ತದೆ ಎಂದರು. ಸರಣಿ ಉಪನ್ಯಾಸ ಮಾಲಿಕೆ ಸಂಯೋಜಕ ಡಾ. ಮೈಲಹಳ್ಳಿ ರೇವಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ವಿಜಯಕುಮಾರಿ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಗುರುವಾರ • ಮಾರ್ಚ್ 6, 2025

'ಅಲ್ಲಮನ ವಚನಗಳ ಚಿಂತನೆ' ಕುರಿತು ಉಪನ್ಯಾಸ
'ಜ್ಞಾನ ಮಾರ್ಗಕ್ಕಾಗಿ ಗ್ರಂಥಾಲಯ ಬಳಸಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ದೇವಾಲಯದ ಬದಲಿಗೆ ಗ್ರಂಥಾಲಯದ ಮುಂಭಾಗ ಸಾಲಾಗಿ ನಿಲ್ಲುವ ಸ್ಥಿತಿ ನಿರ್ಮಾಣವಾಗಬೇಕು. ಜನ ಜ್ಞಾನದ ಮಾರ್ಗ ವಿಸ್ತರಿಸಿಕೊಂಡು ವಿಚಾರವಂತರಾಗಬೇಕಿದೆ. ದೇವರನ್ನು ಎಲ್ಲೆಲ್ಲೋ ಹುಡುಕಬೇಕಿಲ್ಲ. ಆತ ನಮ್ಮಲ್ಲೇ ಇದ್ದಾನ ಎಂದು ಅಲ್ಲಮಪ್ರಭು ಪ್ರತಿಪಾದಿಸಿದ್ದಾನೆ' ಎಂದು ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಪ್ರಾಧ್ಯಾಪಕಿ ಶೈಲಾ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರವು ಬುಧವಾರ 'ಅಲ್ಲಮನ ವಚನಗಳ ಚಿಂತನೆ' ವಿಷಯದ ಕುರಿತು ಆಯೋಜಿಸಿದ್ದ ಉಪನ್ಯಾಸ ಮಾಲಿಕೆಯಲ್ಲಿ ಮಾತನಾಡಿದರು.

'ಅಲ್ಲಮನ ವಚನಗಳು ಕನ್ನಡಕ್ಕಷ್ಟೇ ಸೀಮಿತವಾಗಿಲ್ಲ. ಅವು ಭಾಷಾಶಾಸ್ತ್ರ, ರಾಜಕೀಯ, ಧಾರ್ಮಿಕ ಕ್ಷೇತ್ರದ ಕುರಿತ ಚಿಂತನೆಗಳನ್ನು ಒಳಗೊಂಡಿವೆ. ಆತ ಬರೆದಿರುವ 1,640 ವಚನಗಳು ದೊರೆತಿವೆ. ಅವುಗಳಲ್ಲಿನ ಶಬ್ದಜಾಲವು ವಿಶ್ವಚೈತನ್ಯ ನೀಡುತ್ತವೆ. ಪ್ರಖರ ವೈಚಾರಿಕತೆ, ಸ್ವತಂತ್ರ ಚಿಂತನೆ ಆತನ ಬರಹದ ಶಕ್ತಿ. ಈಚೆಗೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ನಡೆಯುತ್ತಿರುವ ಬೆಳವಣಿಗೆಯು ಹನ್ನೆರಡನೇ ಶತಮಾನದಲ್ಲೇ ವಚನಕಾರರು ನಡೆಸಿದ್ದರು. ಅಲ್ಲಮ ಸಂಪೂರ್ಣ ಬಂಡಾಯಗಾರನಾಗಿದ್ದು, ಆತನ ವ್ಯಕ್ತಿತ್ವದ ಕಾರಣದಿಂದ ಆ ಕಾಲದ ಕಪಟ ಶರಣರು ನಾಶವಾದರು' ಎಂದು ಹೇಳಿದರು.

'ಜ್ಞಾನ ಮಾರ್ಗವು ವಿರೋಧಿಗಳನ್ನು ಮಣಿಸಲು ಇರುವ ಅಸ್ತ್ರ ಎಂದು ಅಲ್ಲಮಪ್ರಭು ತಿಳಿಸಿದ್ದು, ವೇದ ಹಾಗೂ ಅಧ್ಯಾತ್ಮದ ಕುರಿತ ತಪ್ಪು ಕಲ್ಪನೆಗಳ ಬಗ್ಗೆ ಧ್ವನಿಯೆತ್ತಿದ. ಅಹಂಕಾರ ರಹಿತರನ್ನು ಗೌರವಿಸುತ್ತೇನೆ ಎನ್ನುತ್ತಾ ದೇವರ ಅಸ್ತಿತ್ವ ಒಪ್ಪದೆ, ದೇವಾಲಯವನ್ನು ನಿರಾಕರಿಸುತ್ತಾನೆ. ಭಕ್ತಿಯನ್ನು ಟೀಕಿಸದೆ ಅದನ್ನು ಬಳಸಿ ಲಾಭ ಮಾಡುತ್ತಿರುವವರ ವಿರುದ್ಧ ಬಂಡಾಯದ ಮಾತುಗಳನ್ನಾಡಿದ. ತೋರ್ಪಡಿಕೆಯ ಭಕ್ತಿ ಸಲ್ಲ ಎಂದು ಪ್ರತಿಪಾದಿಸಿದ. ಹೀಗಾಗಿ ಆತ ವಚನಕಾರರ ಗುರುವಾಗಿ, ದೀಪಸ್ತಂಭವಾಗಿ ನಿಲ್ಲುತ್ತಾನೆ' ಎಂದು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್.ತಿಮ್ಮೇಗೌಡ, ಸರಣಿ ಉಪನ್ಯಾಸ ಮಾಲಿಕೆ ಸಂಯೋಜಕ ಮೈಲಹಳ್ಳಿ ರೇವಣ್ಣ ಭಾಗವಹಿಸಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ 'ಅಲ್ಲಮನ ವಚನಗಳ ಚಿಂತನೆ' ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಶೈಲಾ ಮಾತನಾಡಿದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಪ್ರಖರ ವೈಚಾರಿಕತೆ, ಸ್ವತಂತ್ರ ಚಿಂತನೆ ಅಲ್ಲಮನ ಬರಹದ ಶಕ್ತಿ
- ವಚನಕಾರರ ದೀಪಸ್ತಂಭ ಅಲ್ಲಮಪ್ರಭು

MFGE In the Eyes of the Press.....

STAR OF MYSORE

Monday 10th March 2025

Vachana movement gave knowledge of science, righteousness, spiritualism: KIKS Professor

Mysuru, Mar. 10- Dr. Shyla, resource person and Professor at Kuvempu Institute of Kannada Studies (KIKS), has said that the Vachana Movement started in the 12th century, promoted the knowledge of science, righteousness and spiritualism.

She was speaking at a lecture and interaction programme on the topic 'Allammana Vachanagala Chintane' organised jointly by Sri Basaveshwara Institute of Social Research and Extension, KIKS and Department of Kannada and IQAC Cell, Mahajana Degree College, at College auditorium in city recently.



Stating that the Vachanakaras of yesteryears laid the foundation to modern mystic and spiritual literature, Dr. Shyla said that several writers have written about Allama Prabhu. "Writers have described Allama Prabhu as the son of humble and scholar parents, native of Balligavi, Shivamogga. They have also sketched in detail about his relationship with Mayadevi, her separation and following sermons from Guru Animisha, how he became a symbol of detachment, shedding all worldly ambitions. Allama Prabhu became the head of Anubhava Mantap established by Basavanna because of his love for the deprived sections of the society," added Dr. Shyla.

Mahajana College Principal Dr. E.R. Jayakumari, who spoke, said that the Sharanas promoted Vachana literature which uprooted caste, class and gender discriminations and preached real humanity.

Folk scholar Dr. Mylahalli Revanna, who was conferred with Geeshampa Award by the Karnataka Janapada Academy, was felicitated on the occasion. He delivered the keynote address.

College's Kannada Department Head Dr. H.R. Thimmegowda welcomed the gathering. Assistant Professor C.M. Kirankumar Desai compered the programme. Dr. Vinodamma proposed a vote of thanks.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪಮ್ಮೆ

ಭಾನುವಾರ,9 ಮಾರ್ಚ್ 2025,

ಅಲ್ಲಮ ಪ್ರಭುವಿನ ವಚನ ವಿಶ್ವ ಚೈತನ್ಯದ ನುಡಿಗಳು: ಡಾ.ಶೈಲಾ

ಮೈಸೂರು: ಅಲ್ಲಮ ಪ್ರಭುವಿನ ವಚನಗಳು ವಿಶ್ವ ಚೈತನ್ಯದ ನುಡಿಗಳು ಎಂದು ಉಪನ್ಯಾಸಕಿ ಡಾ.ಶೈಲಾ ಅಭಿಪ್ರಾಯಪಟ್ಟರು.

ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ, ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಸರಣಿ ಉಪನ್ಯಾಸ ಮಾಲಿಕೆಯಲ್ಲಿ ಅಲ್ಲಮನ ವಚನಗಳ ಚಿಂತನೆ ಕುರಿತು ಮಾತನಾಡಿದರು.

''ಅಲ್ಲಮಪ್ರಭು ತನ್ನ ಅಪಾರವಾದ ಜ್ಞಾನ ಮತ್ತು ಸಾಧನೆಯಿಂದ ವಿಶ್ವದ ಮಹಾನ್ ಚೇತನಗಳ ಸಾಲಿನಲ್ಲಿ ನಿಲ್ಲುತ್ತಾರೆ. ಅಲ್ಲಮರ ವಚನಗಳು ಆಳಕ್ಕೆ-ಆಳ, ವಿಸ್ತಾರಕ್ಕೆ-ವಿಸ್ತಾರ, ಎತ್ತರಕ್ಕೆ-ಎತ್ತರ. ಆದ್ದರಿಂದ ಅಲ್ಲಮಪ್ರಭು ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ, ಅವರು ದೇಶ ಕಾಲದ ಗಡಿಯನ್ನು ಮೀರಿ ನಿಲ್ಲುತ್ತಾರೆ,'' ಎಂದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಸರಣಿ ಉಪನ್ಯಾಸ ಮಾಲಿಕೆಯಲ್ಲಿ ಉಪನ್ಯಾಸಕಿ ಡಾ.ಶೈಲಾ ಮಾತನಾಡಿದರು.

''ಅಲ್ಲಮಪ್ರಭುವಿನ ವೈಚಾರಿಕತೆ ಮತ್ತು ಸ್ವತಂತ್ರ ವಿಚಾರಶಕ್ತಿ ಅವರ ವಚನಗಳಲ್ಲಿ ಪ್ರತಿಧ್ವನಿಸುತ್ತದೆ. ಅಲ್ಲದೇ, ಅಲ್ಲಮ ಪ್ರಭುವಿನ ವಚನಗಳನ್ನು ಅಧ್ಯಯನ ಮಾಡಿದಾಗ ಅಲ್ಲಮ ಎದುರಿಸಿದ ಕಠಿಣ ಪರಿಸ್ಥಿತಿಗಳನ್ನೂ ನಾವು ಗ್ರಹಿಸಬಹುದಾಗಿದೆ,'' ಎಂದು ತಿಳಿಸಿದರು.

''ವಚನಕಾರರ ಕಾಲಘಟ್ಟ ಭಕ್ತಿಯ ಯುಗವಾಗಿತ್ತು. ಭಕ್ತಿಯ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕ ಭಕ್ತಿಯನ್ನು ಅಲ್ಲಮಪ್ರಭು ವಿರೋಧಿಸಿದರು. ನಾನು ಎಂಬ ಅಹಮಿಕೆ, ಸಂಕುಚಿತತೆಯನ್ನು ಕಳೆದು, ನಾವೆಲ್ಲರೂ ಸಮಾನರು ಎಂಬ ಆಶಯವನ್ನು ಬಿತ್ತಿದರು. ಶಾಂತಿ, ಸೌಹಾರ್ದತೆ, ಸಹಬಾಳ್ವೆಯನ್ನು ತಮ್ಮ ವಚನಗಳಲ್ಲಿ ಸಾರಿದರು,'' ಎಂದರು.

ಸರಣಿ ಉಪನ್ಯಾಸ ಮಾಲಿಕೆ ಸಂಯೋಜಕ ಡಾ. ಮೈಲಹಳ್ಳಿ ರೇವಣ್ಣ, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ವಿಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಮತ್ತಿತರರು ಇದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 14 ಮಾರ್ಚ್ 2025
14 MARCH 2025

ಲೈಂಗಿಕ ಕಿರುಕುಳ ತಡೆಗಟ್ಟಲು ಸಂಘಟಿತ ಪ್ರಯತ್ನ ಅಗತ್ಯ

ಮೈಸೂರು: ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಕಾಲೇಜುಗಳ ಆಡಳಿತ ಮಂಡಳಿ, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸಂಘಟಿತ ಪ್ರಯತ್ನದ ಅಗತ್ಯವಿದೆ ಎಂದು ವಕೀಲೆ ಎನ್. ಗೀತಾ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೋಕ್ಸೋ ಕಾಯ್ದೆ ಕುರಿತು ಇತ್ತೀಚೆಗೆ ಆಯೋಜಿಸಿದ್ದ ಜಾಗೃತಿ ಕಾರ್ಯ ಕ್ರಮದಲ್ಲಿ ಮಾತನಾಡಿದರು. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ-2013ರ ಭಾರತ ದಲ್ಲಿನ ಒಂದು ಶಾಸಕಾಂಗ ಕಾಯ್ದೆಯಾಗಿದ್ದು, ಇದು ಕೆಲಸದ ಸ್ಥಳದಲ್ಲಿ ಮಹಿಳೆಯರನ್ನು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರನ್ನು ಲೈಂಗಿಕ ಕಿರುಕುಳದಿಂದ ರಕ್ಷಿಸಲು ನೆರವಾಗುವ ಕಾನೂನು ಆಗಿದೆ ಎಂದರು.

ಕಾಲೇಜುಗಳು ಲೈಂಗಿಕ ಕಿರುಕುಳವನ್ನು ತಡೆಗಟ್ಟುವಲ್ಲಿ ಹೇಗೆ ಕೆಲಸ ಮಾಡಬಹುದು ಎಂಬುದನ್ನು ವಿವರಿಸಿದ ಅವರು, ಲೈಂಗಿಕ ಸ್ಪರ್ಶ ಸೇರಿದಂತೆ ಲೈಂಗಿಕ ಚಟುವಟಿಕೆಗಾಗಿ ಒತ್ತಡ ಹೇರುವುದು, ಬೀದಿಗಳಲ್ಲಿ ಲೈಂಗಿಕ ಕಿರುಕುಳ ನೀಡುವುದು. ಆಕ್ಷೇಪಾರ್ಹ ಪದಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಳಸುವುದು ಮತ್ತು ಪ್ರಚೋದಿಸುವುದು, ಆಕ್ಷೇಪಾರ್ಹ ಭಾಷೆ, ಹಾಸ್ಯಗಳ ಮೂಲಕ ಲೈಂಗಿಕ ವಿಷಯಗಳ ಅನಗತ್ಯ ಚರ್ಚೆ ಸೇರಿದಂತೆ ಲೈಂಗಿಕ ಕಿರುಕುಳ ಧ್ವನಿ ಎತ್ತಬೇಕು. ಹೆಣ್ಣು ಮಕ್ಕಳು ತಮಗೆ ಲೈಂಗಿಕ ಕಿರುಕುಳವಾದಾಗ ದೂರು ನೀಡಬೇಕು ಎಂದರು.

■ ವಕೀಲೆ ಎನ್.ಗೀತಾ ಅಭಿಮತ

ಪ್ರಾಂಶುಪಾಲೆ ಡಾ ಬಿ. ಆರ್. ಜಯಕುಮಾರಿ ಮಾತನಾಡಿ, ಲೈಂಗಿಕ ಕಿರುಕುಳದ ಬಗ್ಗೆ ಎಲ್ಲರಿಗೂ ಅರಿವಿನ ಅಗತ್ಯವಿದೆ. ಈ ಬಗ್ಗೆ ತಿಳಿದುಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು. ಆಡಳಿತ ನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹಗಾರ ಡಾ.ಎಸ್.ಆರ್.ರಮೇಶ್, ವಿದ್ಯಾರ್ಥಿ ಸಂಸತ್ತು ಮತ್ತು ಆಂತರಿಕ ದೂರು ಸಮಿತಿಯ ಸಂಚಾಲಕಿ, ಸಹಾಯಕ ಪ್ರಾಧ್ಯಾಪಕಿ ಡಾ.ಪಿ.ಜಿ. ಪುಷ್ಪಾರಾಣಿ, ರೋಟರ್ಯಾಕ್ಟ್ ಕ್ಲಬ್‌ನ ಸಂಚಾಲಕಿ ವಿ.ಗಾಯತ್ರಿ, ವಿದ್ಯಾರ್ಥಿ ಸಂಸತ್ತಿನ ಮುಖ್ಯ ಪ್ರತಿನಿಧಿ ಕೆ.ಎಸ್.ರವೀಂದ್ರ, ರೋಟರ್ಯಾಕ್ಟ್‌ನ ಮೋಹಿತ್ ಪುರೋಹಿತ್ ಹಾಗೂ ಅರ್ಮಾನ್ ಬಿಲಾಲ್ ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ವಕೀಲೆ ಎನ್.ಗೀತಾ ಮಾತನಾಡಿದರು. ಡಾ.ಎಸ್.ಆರ್.ರಮೇಶ್, ಡಾ.ಪಿ.ಜಿ. ಪುಷ್ಪಾರಾಣಿ ಇನ್ನಿತರರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 2.03.2025

ಪ್ರದರ್ಶನ ಸಿಎಸ್‌ಐಆರ್‌ಸಿಎಫ್‌ಟಿಆರ್‌ಐ ನ ಜೀವರಸಾಯನಶಾಸ್ತ್ರ ವಿಭಾಗದ ಹಿರಿಯ ಪ್ರಧಾನ ವಿಜ್ಞಾನಿ ಡಾ. ಆಶಾ ಮಾರ್ಟಿನ್ ಉದ್ಘಾಟನೆ

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ದಿನಾಚರಣೆ

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು. ಆ ಮೂಲಕ ಭಾರತೀಯ ಭೌತ ಶಾಸ್ತ್ರಜ್ಞ ಸರ್.ಸಿ.ವಿ. ರಾಮನ್ ಅವರ ವೈಜ್ಞಾನಿಕ ಆವಿಷ್ಕಾರವನ್ನು ಗೌರವಿಸಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಸಿಎಸ್‌ಐಆರ್ ಸಿಎಫ್‌ಟಿಆರ್‌ಐ ನ ಜೀವರಸಾಯನಶಾಸ್ತ್ರ ವಿಭಾಗದ ಹಿರಿಯ ಪ್ರಧಾನ ವಿಜ್ಞಾನಿ ಡಾ. ಆಶಾ ಮಾರ್ಟಿನ್ ಅವರು ನೈಸರ್ಗಿಕ ಪಿಸಿಎಸ್ ಕೆ 9 ಪ್ರತಿಬಂಧಕಗಳು: ಎ ಪ್ರಾಮಿಸಿಂಗ್ ಲಿಪಿಡ್ ಕಡಿಮೆ/ಗೊಳಿಸುವ ತಂತ್ರ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ದಿನಾಚರಣೆ ಉದ್ಘಾಟಿಸಲಾಯಿತು.



ವಿಜ್ಞಾನ ದಿನಾಚರಣೆಯಲ್ಲಿ ತಾವು ತಯಾರಿಸಿದ ಪ್ರತಿಕೃತಿ ಪ್ರದರ್ಶಿಸಿದರು,

ಹೃದಯರಕ್ತನಾಳದ ಕಾಯಿಲೆಗಳು, ಹೃದಯಾಘಾತಗಳು, ಪಾರ್ಶ್ವವಾಯು, ಡಿಸ್ಲಿಪಿಡೆಮಿಯಾ, ಹೈಪರ್ಕೊಲೆಸ್ಟರಾಲ್ಮಿಯ ಇತ್ಯಾದಿ ಕಾಯಿಲೆಗಳನ್ನು ತಡೆಗಟ್ಟುವ ಬಗ್ಗೆ, ಇನ್ಸುಲಿನ್, ವಿಟಮಿನ್ ಬಿ12, ಪೆನಿಸಿಲಿನ್ ಮತ್ತು ವಿವಿಧ ಜೈವಿಕ ಅಣುಗಳ ರಚನೆ ಹಾಗೂ ಹೈಪಕೋಲೆಸ್ಟರಾಲ್ಮಿಯಾ ರೋಗಿಗಳಿಗೆ ಚಿಕಿತ್ಸಕ ಗುರಿಯಾಗಿ ಪಿಸಿಎಸ್‌ಕೆ 9 ಆವಿಷ್ಕಾರದ ಬಗ್ಗೆ ವಿವರಿಸಿದರು.

ಕಾಲೇಜಿನ ವಿವಿಧ ವಿಭಾಗಗಳಾದ ಜೀವ ವಿಜ್ಞಾನ, ಭೌತಿಕ ವಿಜ್ಞಾನ ಮತ್ತು ಮಾನವಿಕ ವಿಭಾಗಗಳ ಸಹಯೋಗದೊಂದಿಗೆ ಸಮಗ್ರ ಭಾಷಣ, ಪೋಸ್ಟರ್ ಮತ್ತು ಮಾದರಿ ತಯಾರಿಕೆ ಸ್ಪರ್ಧೆಗಳಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ತಮ್ಮ ವೈಜ್ಞಾನಿಕ ಸೃಜನಶೀಲತೆ ಮತ್ತು ಕೌಶಲ್ಯಗಳನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಇದು ವೈಜ್ಞಾನಿಕ ಕುತೂಹಲ ಮತ್ತು ಪ್ರಾಮಾಣ್ಯತೆಯನ್ನು ಬೆಳೆಸುವಲ್ಲಿ ಸಂಸ್ಥೆಯು ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ವಿಜ್ಞಾನ ಕುರಿತು ಪ್ರದರ್ಶನವನ್ನು ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ ಉದ್ಘಾಟಿಸಿದರು. ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಶೈಕ್ಷಣಿಕ ಸಲಹೆಗಾರರು ಹಾಗೂ ಸಿಇಒ ಡಾ. ಎಸ್. ಆರ್. ರಮೇಶ್, ಹಿರಿಯ ವಿಜ್ಞಾನಿ ಡಾ. ಟಿ. ಶಿವಾನಂದಪ್ಪ, ಜೀವ ವಿಜ್ಞಾನ, ಭೌತವಿಜ್ಞಾನ ಮತ್ತು ಮಾನವಿಕ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು ಇದ್ದರು.

ಮೈಕ್ರೋಬಯಾಲಜಿ ವಿಭಾಗದ ಮುಖ್ಯಸ್ಥೆ ಎಂ.ಎಸ್. ಸ್ಪಂದನಾ ಸ್ವಾಗತಿಸಿದರು. ಜೀವ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥೆ ರಾಧಿಕಾ ನಿರೂಪಿಸಿದರು. ಬಯೋ ಕೆಮಿಸ್ಟ್ರಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಮಾಧುರಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಬಿಟಿಬಿಎಂ. ಅಂತಿಮ ವರ್ಷದ ವಿದ್ಯಾರ್ಥಿನಿ ಆರ್.ಎಸ್. ದೇವಿಕಾ ಪ್ರಾರ್ಥಿಸಿದರು. ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಅಮೂಲ್ಯಾ ವಂದಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಮಾರ್ಚ್ 2, 2025

ವಿಜ್ಞಾನ ದಿನಾಚರಣೆ: ವಿಶೇಷ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಡೆಯಿತು. ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ.ವಿ.ರಾಮನ್ ಅವರ ವೈಜ್ಞಾನಿಕ ಆವಿಷ್ಕಾರವನ್ನು ಸ್ಮರಿಸಲಾಯಿತು.

'ಸಿಎಸ್‌ಐಆರ್- ಸಿಎಫ್‌ಟಿಆರ್‌ಐ'ನ ಜೀವರಸಾಯನ ವಿಜ್ಞಾನ ವಿಭಾಗದ ಪ್ರಧಾನ ವಿಜ್ಞಾನಿ ಆಶಾ ಮಾರ್ಟಿನ್, 'ನೈಸರ್ಗಿಕ ಪಿಸಿಎಸ್‌ಕೆ9 ಪ್ರತಿಬಂಧಕಗಳು: ಎ ಪ್ರಾಮಿಸಿಂಗ್ ಲಿಪಿಡ್ ಕಡಿಮೆಗೊಳಿಸುವ ತಂತ್ರ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾಲೇಜಿನ ಜೀವ ವಿಜ್ಞಾನ, ಭೌತಿಕ ವಿಜ್ಞಾನ ಮತ್ತು ಮಾನವಿಕ ವಿಭಾಗಗಳ ಸಹಯೋಗದೊಂದಿಗೆ ಸಮಗ್ರ ಭಾಷಣ, ಪೋಸ್ಟರ್ ಮತ್ತು ಮಾದರಿ ತಯಾರಿಕೆ ಸ್ಪರ್ಧೆ ನಡೆದವು. ವಿದ್ಯಾರ್ಥಿಗಳು ಆವಿಷ್ಕರಿಸಿದ ನವೀನ ಯೋಜನೆಗಳು ಮತ್ತು ಸಂಶೋಧನಾ ಕಲ್ಪನೆಗಳನ್ನು ಪ್ರದರ್ಶಿಸಲಾಯಿತು.



ವಿದ್ಯಾರ್ಥಿಗಳು ಆವಿಷ್ಕರಿಸಿದ ಯೋಜನೆಗಳು ಮತ್ತು ಸಂಶೋಧನಾ ಕಲ್ಪನೆಗಳನ್ನು ಪ್ರದರ್ಶಿಸಿದರು. ಆಶಾ ಮಾರ್ಟಿನ್, ಟಿ.ವಿಜಯಲಕ್ಷ್ಮಿ ಮುರಳೀಧರ್, ಬಿ.ಆರ್. ಜಯಕುಮಾರಿ, ಎಸ್.ಆರ್.ರಮೇಶ್, ಟಿ.ಶಿವಾನಂದಪ್ಪ ಹಾಜರಿದ್ದರು

ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಹಾಗೂ ಸಿಇಒ ಎಸ್.ಆರ್.ರಮೇಶ್, ವಿಜ್ಞಾನಿ ಟಿ.ಶಿವಾನಂದಪ್ಪ ಇದ್ದರು.

STAR OF MYSORE

Thursday 27th March 2025

Session on Oral Hygiene and Oral Cancer Prevention



Mysuru, Mar. 27 - An interactive session on oral hygiene and oral cancer prevention was organised by the NCC Units and Rotaract Club of SBRR Mahajana First Grade College in association with Internal Complaints Committee and IQAC here recently.

JSS AHER Assistant Professor Dr. Prasanna Deshpande, a specialist in Oral Medicine and Radiology, who was the resource person, said "It is important to have knowledge on oral health at an early age as it is not only related to mouth but also associated with digestion, helps in absorption of micro-nutrients in the gut and contributes to proper phonetics."

Emphasising the effects of tooth decay and its consequences, he said, "Toothache due to decay is the second worst known pain to humans. Getting treatment early is better than relying on advanced procedures later."

On replacing the missing teeth, he explained that teeth are always in contact with each other. If we lose a tooth and it is not replaced, the adjacent teeth are at a greater risk of decay and may grow in different shapes.

Deliberating about oral cancer, he warned that the oral cancer can be fatal and may also be linked to other diseases.

"There are several causes of oral cancer. Chewing tobacco, smoking and alcohol consumption significantly increase the risk. Oral cancer can also result from natural radiation and chemicals present in food," he said calling upon students to cultivate healthy habits.

College Principal Dr. B.R. Jayalakshmi, Dr. Mrinal Deshpande, NCC Flying Officer Dr. P.G. Pushparani, Department of Kannada Head Dr. H.R. Thimmegowda, Rotaract Club of Mahajana Teacher Convenor V. Gayatri, Rotaract Club of Mahajana President Rtr. Mohith Purohit, Secretary Rtr. Arman Billal, Treasurer Rtr. Dhanush S Honnal, Rotaract members and NCC cadets took part in the interactive session.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಮಂಗಳವಾರ 18.03.2025

ನಿಮ್ಮ ಜ್ಞಾನವನ್ನು ಸಮಾಜದ ಒಳಿತಿಗೆ ಬಳಸಿ: ಪ್ರೊ.ಎನ್.ಕೆ.ಲೋಕನಾಥ್

ರಾಜ್ಯ ಮಟ್ಟದ ಯುವಜನೋತ್ಸವ ಉದ್ಘಾಟನೆ | ಜೀವನ ರೂಪಿಸುವಲ್ಲಿ ಉನ್ನತ ಶಿಕ್ಷಣದ ಪಾತ್ರ ಪ್ರಮುಖವಾಗಿದೆ | ಕೇವಲ ಅಂಕಪಟ್ಟಿಯಿಂದ ಯಾವುದೇ ಪ್ರಯೋಜನ ಇಲ್ಲ

• ಕನ್ನಡಪ್ರಭ ವಾರ್ತೆ ಮೈಸೂರು

ನಿಮ್ಮಲ್ಲಿರುವ ಜ್ಞಾನವನ್ನು ಸಮಾಜದ ಒಳಿತಿಗೆ ಬಳಸಿ. ಆತ್ಮವಿಶ್ವಾಸ ಬೆಳೆಸಿಕೊಂಡು, ನಿಮ್ಮ ಕೆಲಸ ಕಾರ್ಯಗಳ ಮೌಲ್ಯಮಾಪನ ಮಾಡಿಕೊಳ್ಳಿ ಎಂದು ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ತಿಳಿಸಿದರು.

ನಗರದ ಸರಸ್ವತಿಪುರಂನಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಮೈಸೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಆಯೋಜಿಸಿರುವ 5 ದಿನಗಳ ರಾಜ್ಯ ಮಟ್ಟದ ಯುವಜನೋತ್ಸವ- 2024- 25 ಅನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು.

ಜೀವನ ರೂಪಿಸುವಲ್ಲಿ ಉನ್ನತ ಶಿಕ್ಷಣದ ಪಾತ್ರ ಪ್ರಮುಖವಾಗಿದೆ. ವಿದ್ಯಾರ್ಥಿಗಳು ಓದಿನ ದಿನಗಳಲ್ಲಿ ಕೇವಲ ಪಠ್ಯಕ್ಕೆ ಸೀಮಿತ ಆಗದೇ ಇತರೆ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಆಯ್ಕೆ ಇರುತ್ತದೆ. ನೀವು ಆಯ್ದುಕೊಂಡ ಕ್ಷೇತ್ರದಲ್ಲಿ ಶ್ರೇಷ್ಠತೆ ಸಾಧಿಸಿ. ಕೇವಲ ಅಂಕಪಟ್ಟಿಯಿಂದ ಯಾವುದೇ ಪ್ರಯೋಜನ ಇಲ್ಲ ಎಂದರು. ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಮೈಸೂರು ವಿವಿಗೆ ತನ್ನದೇ ಆದ ಘನತೆ ಇದೆ. ಎನ್‌ಎಸ್‌ಎಸ್ ಚಟುವಟಿಕೆಗಳಿಗೆ ಭದ್ರ ಅಡಿಪಾಯ ಹಾಕಿದ್ದು ಇಲ್ಲಿಯೇ. ಶಿಸ್ತು, ಸಂಯಮ, ಕಾಯಕ ಹಾಗೂ ಸೇವಾ ಮನೋಭಾವ ಬೆಳೆಸುವ ಯೋಜನೆ ಇದಾಗಿದ್ದು, ಯುವಜನರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಮತ್ತೊಬ್ಬ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತ ಆಗಿರದೇ ಇತರೆ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಆ ಮೂಲಕ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಪ್ರೊ.ಎಂ.ಬಿ. ಸುರೇಶ, ಎನ್‌ಎಸ್‌ಎಸ್- ತರಬೇತಿ ಸಂಸ್ಥೆಯ ಸಂಯೋಜಕ ಪ್ರೊ.ಬಿ. ಚಂದ್ರಶೇಖರ ಮೊದಲಾದವರು ಇದ್ದರು.





ಮೈಸೂರಿನ ಎನ್‌ಎಸ್‌ಎಸ್ ಭವನದಲ್ಲಿ ಆಯೋಜಿಸಿರುವ 5 ದಿನಗಳ ರಾಜ್ಯ ಮಟ್ಟದ ಯುವಜನೋತ್ಸವವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿದರು. ಡಾ.ಬಿ.ಆರ್. ಜಯಕುಮಾರಿ, ಗೋಕುಲ್ ಗೋವರ್ಧನ್, ಪ್ರೊ.ಎಂ.ಬಿ. ಸುರೇಶ, ಪ್ರೊ.ಬಿ. ಚಂದ್ರಶೇಖರ ಇದ್ದರು. (ಎಡಚಿತ್ರ), ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಪಾಲ್ಗೊಂಡಿರುವ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು.

ಆಂದೋಲನ
ದಿನ ಪತ್ರಿಕೆ

ಶನಿವಾರ, 1 ಮಾರ್ಚ್ 2025



ಮಹಾಜನ ಕಾಲೇಜಿಗೆ ರನ್ನರ್ ಅಪ್ ಪ್ರಶಸ್ತಿ... ಮೈಸೂರು

ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದವತಿಯಿಂದ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ತಂಡ ರನ್ನರ್‌ಅಪ್ ಸ್ಥಾನವನ್ನು ಪಡೆದಿದ್ದು, ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಎಚ್. ಎನ್.ಭಾಸ್ಕರ್, ಕೆ.ಸೋಮಶೇಖರ್, ಜೀವನ್, ಅನೂಪ್ ಹಾಗೂ ದುಷ್ಯಂತ್ ಚಿತ್ರದಲ್ಲಿದ್ದಾರೆ.

STAR OF MYSORE

Tuesday 4th March 2025

Bags second place in Men's Badminton



SBRR Mahajana First Grade College Men's Badminton Team bagged second place in Mysuru City Inter-Collegiate Men's Badminton tournament-2025 organised by the Department of Physical Education, University of Mysore, recently. Seen are** (sitting from left) **P.S. Madhusudhana, Physical Director, Dr. B.R. Jayakumari, Principal and Dr. H.N. Bhaskar, Physical Director with** (standing from left) **K. Somashekar, Jeevan, Anup and Dushyanth.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 1.03.2025



ಮಹಾಜನ ಕಾಲೇಜು ದ್ವಿತೀಯ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಆಯೋಜಿಸಿದ್ದ, ಪುರುಷರ ಅಂತರ ಕಾಲೇಜು ಬ್ಯಾಡ್ ಮಿಂಟನ್ ಪಂದ್ಯಾವಳಿಯಲ್ಲಿ ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ದ್ವಿತೀಯ ಸ್ಥಾನದೊಂದಿಗೆ ಪ್ರಶಸ್ತಿ ಹಾಗೂ ಪಾರಿತೋಷಕ ಪಡೆದಿದೆ. ವಿಜೇತರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದಿಂದ ಅಭಿನಂದಿಸಲಾಯಿತು. ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಡಾ. ಎಚ್.ಎನ್. ಭಾಸ್ಕರ್, ಕೆ. ಸೋಮಶೇಖರ್, ಜೀವನ್, ಅನೂಪ್ ಹಾಗೂ ದುಷ್ಯಂತ್ ಇದ್ದರು.

ಆಯೋಜನ
ದಿನ ಪತ್ರಿಕೆ
ಬುಧವಾರ, 19 ಮಾರ್ಚ್ 2025



ಕ್ರೀಡಾ ಪ್ರಶಸ್ತಿ... ಮೈಸೂರಿನ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ವತಿಯಿಂದ ಆಯೋಜಿಸಿದ್ದ ಅಂತರ ಕಾಲೇಜು ಚಾಮುಂಡಿ ವಲಯ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡ ಪ್ರಶಸ್ತಿ ಪಡೆಯಿತು. ಕಾಲೇಜಿನ ಕ್ರೀಡಾಪಟುಗಳ ಸಾಧನೆಯನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 19.03.2025



ಥ್ರೋಬಾಲ್: ಮಹಾಜನ ಕಾಲೇಜಿಗೆ ಪ್ರಥಮ ಸ್ಥಾನ

ಮೈಸೂರು: ನಗರದ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಆಯೋಜಿಸಿದ್ದ ಅಂತರ ಕಾಲೇಜು ಚಾಮುಂಡಿ ವಲಯ ಮಹಿಳೆಯರ ಥ್ರೋ ಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜೇತ ತಂಡದ ನಾಯಕಿ ಕವಿತಾ, ಉಪ ನಾಯಕಿ ಪರಿಣಿತಾ, ಎಂ.ಕೆ. ಸ್ಪಂದನಾ, ಶ್ರಾವ್ಯ ಬೋಪ್ಪಯ್ಯ, ಹರ್ಷಿತಾ ಎಂ. ಗೌಡ, ದರ್ಶಿತಾ, ಜೀವಿತಾ, ಟಿ.ಜಿ. ಹರ್ಷಿತಾ, ಪುಣ್ಯಶ್ರೀ, ಸಂಜನಾ ಅವರನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಸು ಪಾಲೆ ಡಾ.ಜಯಕುಮಾರಿ, ಆಡಳಿತ ನಿರ್ವಹಣಾಧಿಕಾರಿ ಡಾ. ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕರಾದ ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್, ಕೆ. ಸೋಮಶೇಖರ್ಅಭಿನಂದಿಸಿದ್ದಾರೆ.

ಆಂದೋಲನ
ದಿನ ಪತ್ರಿಕೆ

ಮಂಗಳವಾರ, 4 ಮಾರ್ಚ್ 2025



ಕಾರ್ಯಾಗಾರ...

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರೀಕ್ಷಾಂಗ ವಿಭಾಗ ಮತ್ತು ಐಕ್ಯೂಎಸಿಯ ಸಹಭಾಗಿತ್ವದೊಂದಿಗೆ 'ಮೌಲ್ಯಾಂಕನ ಮತ್ತು ಮೌಲ್ಯಮಾಪನ: ಬೋಧನೆ ಮತ್ತು ಕಲಿಕೆ ಯನ್ನು ಹೆಚ್ಚಿಸುವುದು' ವಿಷಯ ಕುರಿತು ಕಾರ್ಯಾಗಾರವನ್ನು ನಡೆಸಲಾಯಿತು. ಎನ್‌ಸಿಇಆರ್‌ಟಿ ವಿಭಾ ಗದ ಸಹಾಯಕ ಪ್ರಾಧ್ಯಾಪಕ ಡಾ.ಟಿ.ವಿ.ಸೋಮಶೇಖರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾಲೇಜಿನ ಪರೀಕ್ಷಾಂಗ ನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ, ಐಕ್ಯೂಎಸಿ ಸಂಚಾಲಕರಾದ ಡಿ.ಗೀತಾ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ ಮತ್ತಿತರರು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 4.03.2025

ಮೌಲ್ಯಮಾಪನವು ಕೌಶಲ್ಯ ಅಭಿವೃದ್ಧಿಗೆ ಸಹಕಾರಿ

ಎನ್ ಸಿಇಆರ್‌ಟಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಟಿ.ವಿ. ಸೋಮಶೇಖರ್

• **ಕನ್ನಡಪ್ರಭ ವಾರ್ತೆ** ಮೈಸೂರು

ಮೌಲ್ಯಮಾಪನವನ್ನು ಅರ್ಥ ಮಾಡಿಕೊಳ್ಳುವುದರಿಂದ ಕಾರ್ಯಕ್ಷಮತೆ, ಸುಧಾರಣೆ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಕಾರಿ ಆಗಿರುತ್ತದೆ ಎಂದು ಮೈಸೂರಿನ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್ ಸಿಇಆರ್ ಟಿ) ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಟಿ.ವಿ. ಸೋಮಶೇಖರ್‌ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರೀಕ್ಷಾಂಗ ವಿಭಾಗ ಮತ್ತು ಐಕ್ಯೂಎಸಿಯ ಸಹಭಾಗಿತ್ವದೊಂದಿಗೆ ಪ್ರಾಧ್ಯಾಪಕರಿಗಾಗಿ ಆಯೋಜಿಸಿದ್ದ ಮೌಲ್ಯಂಕನ ಮತ್ತು ಮೌಲ್ಯಮಾಪನ: ಬೋಧನೆ ಮತ್ತು ಕಲಿಕೆಯನ್ನು ಹೆಚ್ಚಿಸುವುದು ಕುರಿತು ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮೌಲ್ಯಮಾಪನ ಎಂಬುದು ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರ ಎರಡೂ ದೃಷ್ಟಿಕೋನದಲ್ಲಿ ನಡೆಯಬೇಕಾದ ಕೆಲಸ. ಮೌಲ್ಯಮಾಪನ ಎಂಬುದು ಅಂತಿಮ ಹಂತವಲ್ಲ, ಇದು ಮುಂದಿನ ಹೆಜ್ಜೆಗೆ ಬೇಕಾದ ಸಿದ್ಧತೆ. ಮೌಲ್ಯಮಾಪನ ಎಂಬುದು ನಮ್ಮನ್ನು ನಾವು ತಿಳಿದುಕೊಳ್ಳುವುದಕ್ಕೆ ಇರುವ ಅವಕಾಶ. ಇದರಲ್ಲಿ ನಮ್ಮೊಂದಿಗೆ ನಮ್ಮನ್ನು ಹೋಲಿಕೆ ಮಾಡಿಕೊಳ್ಳಬೇಕೇ ಹೊರತು, ಬೇರೆಯವರೊಂದಿಗೆ ಅಲ್ಲ ಎಂದು ಅವರು ಹೇಳಿದರು.

ಮೌಲ್ಯಮಾಪನದ ಚಟುವಟಿಕೆಗಳನ್ನು ಪೂರ್ಣಗೊಳಿಸಿದ ನಂತರ, ಕಲಿಯುವವರಿಗೆ ಅಮೂಲ್ಯವಾದ ಅವಕಾಶವನ್ನು ನೀಡಲಾಗುತ್ತದೆ. ಸಮಸ್ಯೆಗಳನ್ನು ಗುರುತಿಸಲು ಶಿಕ್ಷಕರಿಗೆ ನೆರವಾಗುತ್ತದೆ. ಮೌಲ್ಯಮಾಪನಗಳು ಕಲಿಕೆಯ ನಿರ್ಣಾಯಕ ಅಂಶವಾಗಿದ್ದು, ತರಬೇತಿಯ ಪರಿಣಾಮಕಾರಿತ್ವವನ್ನು ಅಳೆಯಲು ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸುಧಾರಣೆಯ ಕ್ಷೇತ್ರಗಳನ್ನು ಗುರುತಿಸಲು ಸಹಾಯ ಮಾಡುತ್ತವೆ ಎಂದರು.



ಎನ್ ಸಿಇಆರ್ ಟಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಟಿ.ವಿ. ಸೋಮಶೇಖರ್ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಶಿಸ್ತು, ಮೌಲ್ಯ ಮತ್ತು ಅಭ್ಯಾಸದ ಪ್ರಕ್ರಿಯೆಗಳು ಸಹ ಮೌಲ್ಯಮಾಪನಕ್ಕೆ ತೆಗೆದುಕೊಳ್ಳಬೇಕಾಗಿದೆ ಎಂದು ಅವರು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ ಮಾತನಾಡಿ, ಶಿಕ್ಷಣ ಎನ್ನುವಂತದ್ದು ನಿರಂತರ ಕಲಿಕೆ. ಮೌಲ್ಯಮಾಪನ ಎಂಬುದು ತುಂಬಾ ಜವಾಬ್ದಾರಿಯುತಕೆಲಸವಾಗಿದ್ದು, ಪ್ರಾಧ್ಯಾಪಕರು ಪ್ರಮಾಣಿಕವಾಗಿ ಕೆಲಸ ಮಾಡಬೇಕಾಗಿದೆ. ಮೌಲ್ಯಮಾಪನ ಎಂಬುದು ಮೌಲ್ಯಮಾಪನಕ್ಕೆ ಒಳಗಾಗಬೇಕಾಗಿದೆ ಎಂದು ಹೇಳಿದರು. ಕಾಲೇಜಿನ ಪರೀಕ್ಷಾಂಗ ನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

MFGE In the Eyes of the Press.....

STAR OF MYSORE

Saturday 8th March 2025

RIE expert delves on analysing teachers' performance



Mysuru, Mar. 8- Examination Section and Internal Quality Assessment Cell (IQAC) of SBRR Mahajana First Grade College (Autonomous), Jayalakshmipuram in city, had organised a workshop on 'Assessment and Evaluation: Enhancing Teaching and Learning' recently.

Dr. T.V. Somashekar, Assistant Professor, Department of Education, Regional Institute of Education (RIE) - NCERT, Mysuru, was the resource person.

He said that one can look this activity in both the directions — one in teacher's perspective and another after evaluating assessment process.

"Assessment helps in setting your own standards; compare you with your own self to improve yourself. Primarily assessment is for self-improvement. Assessment is done from our own perspective whereas evaluation has some set of rules to be followed; basical assessment involves evaluation in it. The prime objective of assessment is to decipher the learning needs of students to allow them to build on their strengths and support them to overcome the gaps in learning, if any," said Dr. Somashekar.

By observing students learning and development using classroom and school based assessment strategies, he explained about the principles of assessment, learning outcomes and criterion for better assessment.

The major purpose of 'assessment is for facilitating the learning' process and 'assessment as the learning' process which encourages students to critically assess, reflect and analyse their own work by identifying the strengths and gaps in learning.

The third one is 'assessment of learning' which sets the benchmarks in learning against curricular aims and objectives, he emphasised. Teachers must know that the assessment procedure they are following must be valid and reliable.

Dr. B.R. Jayakumari, Principal, Mahajana First Grade College, said, "Education is a never-ending learning process, so the teachers are always students. Every faculty members must make use of these types of programmes as it will help in evaluating students' performance both in curricular and extracurricular activities."

Shruthy Poonacha, Controller of Examination, welcomed. Sunil Kumar, Assistant Professor, Department of BBA, compered.

Dr. S.R. Ramesh, Chief Executive Officer & Academic Advisor, D. Geetha, IQAC coordinator and faculty members of the college were present.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 22.03.2025



ಯುವಜನತೆ ಪಕ್ಷಿ ಸಂರಕ್ಷಣಾ ಕಾರ್ಯದಲ್ಲಿ ಕೈಜೋಡಿಸಿ

ಮೈಸೂರು: ಇಂದಿನ ಯುವಜನತೆ ಪಕ್ಷಿಗಳ ಸಂರಕ್ಷಣಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ಪರಿಸ ರವಾದಿ ಎ.ಎಸ್. ಪ್ರದೀಪ್ ಕರೆ ನೀಡಿದರು. ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ವಿಜ್ಞಾನ ವಿಭಾಗ ಆಯೋಜಿಸಿದ್ದ ವಿಶ್ವ ಗುಬ್ಬಚ್ಚಿ ದಿನಾಚರಣೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಗುಬ್ಬಚ್ಚಿಗಳ ಸಂಖ್ಯೆ ದಿನೇ ದಿನೇ ಕ್ಷೀಣಿ ಸುತ್ತಿದ್ದು, ಇತರೆ ಪಕ್ಷಿಗಳು ಕೂಡ ಕಡಿಮೆ ಯಾಗುತ್ತಾ ಬರುತ್ತಿದೆ. ಕಾರಣ ವಾಸಸ್ಥಾನದ ಕೊರತೆ, ಆಹಾರ ಧಾನ್ಯಗಳ ಕೊರತೆ ಮತ್ತು ಪರಿಸರ ಮಾಲಿನ್ಯದಿಂದಾಗಿ ಗುಬ್ಬಚ್ಚಿಗಳ ಅವನತಿಗೆ ಕಾರಣವಾಗುತ್ತಿವೆ ಎಂದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥೆ ಎಂ.ಎಚ್. ಸುನಿತಾ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 24 ಮಾರ್ಚ್ 2025

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ವಿಶ್ವ ಗುಬ್ಬಚ್ಚಿ ದಿನ' ಆಚರಣೆ



ಮೈಸೂರು, ಮಾ. 23– ಎಸ್.ಬಿ. ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ವಿಜ್ಞಾನ ವಿಭಾಗದ ವತಿಯಿಂದ 'ವಿಶ್ವ ಗುಬ್ಬಚ್ಚಿ ದಿನಾಚರಣೆ' ಯನ್ನು ಆಚರಿಸಲಾಯಿತು. ನಮ್ಮ ಸುತ್ತಲಿನ ಪಕ್ಷಿಗಳು ಮತ್ತು ಅವುಗಳ ಪರಿಸರ ವಿಷಯವಾಗಿ ಒಂದು ದಿನದ ಕಾರ್ಯಾಗಾರ ವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾ ಗಾರವು ಗುಬ್ಬಚ್ಚಿಗಳ ಸಂಖ್ಯೆ ಮತ್ತು ಇತರೆ ಪಕ್ಷಿಗಳನ್ನು ಸಂರಕ್ಷಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಪರಿಸರವಾದಿ ಹಾಗೂ ವನ್ಯಜೀವಿ ರಕ್ಷಕ ಪ್ರದೀಪ್ ಎ.ಎಸ್. ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗುಬ್ಬಚ್ಚಿಗಳ ಸಂಖ್ಯೆ ದಿನೇ ದಿನೆ ಕ್ಷೀಣಿಸುತ್ತಿದ್ದು, ಇತರೆ ಪಕ್ಷಿಗಳು ಕೂಡ ಕಡಿಮೆಯಾಗುತ್ತಾ ಬರುತ್ತಿವೆ. ಕಾರಣ ವಾಸಸ್ಥಾನದ ಅಸುರಕ್ಷತೆ, ಆಹಾರ ಧಾನ್ಯಗಳ ಕೊರತೆ ಮತ್ತು ಪರಿಸರ ಮಾಲಿನ್ಯದಿಂದಾಗಿ ಗುಬ್ಬಚ್ಚಿಗಳ ಅವನತಿಗೆ ಕಾರಣವಾಗುತ್ತಿವೆ ಎಂದರು.

ಅವುಗಳ ಉಳಿವಿಗಾಗಿ ಗೂಡು ಕಟ್ಟುವ ಸ್ಥಳಗಳನ್ನು ಒದಗಿಸುವುದು, ಕೀಟನಾಶಕಗಳ ಬಳಕೆಗಳನ್ನು ಕಡಿಮೆ ಮಾಡುವ ಮೂಲಕ ಪಕ್ಷಿಗಳನ್ನು ಸಂರಕ್ಷಿಸಬಹುದು ಎಂದು ತಿಳಿಸಿದರು.

ಇಂದಿನ ಯುವಜನತೆ ಪಕ್ಷಿಗಳ ಸಂರಕ್ಷಣಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಪ್ರೋತ್ಸಾಹಿಸಿದರು. ಪಕ್ಷಿಗಳ ಉಳಿವಿನ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿ ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶು ಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸುನಿತಾ ಎಂ.ಎಚ್. ನಿರೂಪಿಸಿ, ಸ್ವಾಗತಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಜರಿದ್ದರು.

STAR OF MYSORE

Monday 24th March 2025

World Sparrow Day celebrated at Mahajana First Grade College



Mysuru, Mar. 24 (KS)- As part of World Sparrow Day celebrations, the Department of Environmental Science of SBRR Mahajana First Grade College, had organised workshop on "Birds around us and creating an environment for birds" at its premises in city recently.

The workshop aimed to spread awareness about the declining sparrow population and the importance of conserving these beautiful birds. The session was led by the resource person A.S. Pradeep, who shared valuable insights into the lives of sparrows and other birds, as well as the factors affecting their survival.

The speaker introduced the types of birds, their habitats and also highlighted about the reasons for the decline in sparrow population because of loss of habitat, lack of food, scarcity of grains and pollution.

He discussed the practical steps to be adapted to bring sparrows back by providing nesting spaces and reducing pesticide use. He encouraged the students to engage youngsters by creating awareness about sparrow conservation and encouraging participation in local bird-watching and conservation activities. The programme was led by College Principal Dr. B.R. Jayakumari.



A.S. Pradeep, resource person

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 20 ಏಪ್ರಿಲ್ 2025

MAHAJANA EDUCATION SOCIETY (R)
Education to Excel

SBRR MAHAJANA FIRST GRADE COLLEGE (Autonomous)

Jayalakshmipuram, Mysuru – 570 012.

Affiliated to University of Mysore, Re-Accredited by NAAC with 'A' Grade, College with Potential for Excellence

A NAAC 3rd Cycle

ADMISSIONS OPEN FOR 2025-26

For application forms and admissions to first year degree programs please visit the college office between 10.30 am & 5.30 pm Email: principal.fgc@mahajana.edu.in Enquiry: 0821-2512065, 91132 93595, Dept of Tourism: 94499 18541, Dept of BCA-(AI): 93530 00473, 99166 01882.

PROGRAMS OFFERED

- **B.A :** History, Economics, Geography (English Medium)
  History, Economics, Sociology (English Medium)
  Journalism & Mass Communication, Economics, English (Opt.)
- **B.Com** ❖ **BBA** ❖ **BCA** ❖ **BCA** (Artificial Intelligence) (Offered at PG Campus)
- **B.Sc :** Criminology & Forensic Science, Psychology, Biochemistry
  Physics, Mathematics, Computer Science
  Biotechnology, Biochemistry, Microbiology
  Physics, Chemistry, Mathematics
- **BBA** - Aviation & International Tourism, Hotel & Hospitality } Offered at PG Campus

- **100% Program Fee Exemption for Students with Score of 95% & above**
  To avail Fee Exemption in the subsequent years:
  - 100% concession in program fee on scoring 95% & above
  - 50% concession in program fee on scoring between 90- 94.99%
- **Scholarship & Fee Concession for Meritorious and Sports Students**
- **25% Concession on Program Fee for the Specially Abled and Children of In-service & Ex-service Personnel**
- **Fee Exemptions does not apply for BCA (AI)**

Separate Boys & Girls Hostel facility available Hostel Enquiry: 88616 77775

For more Information log on to: www.fgc.mahajana.edu.in

Why Join Mahajana College ?

1. Centrally Located in the Heritage City of Mysuru
2. Aided institution and Affiliated to University of Mysore
3. Accredited by NAAC with 'A' Grade (3rd Cycle)
4. Conferred with 'College with Potential for Excellence' Status by UGC
5. Conferred with Autonomous Status by UGC
6. Updated and Relevant Curriculum
7. Practicing Outcome Based Education (OBE)
8. 100 + Well – qualified and Experienced Faculty
9. Use of Information & Communication Technology (ICT) for Enhanced Learning
10. Excellent Infrastructure and State-of-the-art Laboratories
11. Well-equipped Sports Facility with Multi-Gym
12. Digital Library and Audio Visual Centres
13. Studio-Media Centre for Creative Activities
14. Coaching for Competitive Exams
15. Collaboration with industry for visits & Interaction
16. Promotion of Research, innovation & Entrepreneurship through Research cell
17. ASIC Platform to Promote Leadership among the Students
18. Career Guidance and Placement Assistance
19. Cash Prize for Toppers and Merit Scholarships for Meritorious Students
20. Eco- friendly Swacch Campus with Enhanced Academic Ambience

30+ Certificate & Value-added courses

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 3.04.2025

ಪದವಿಯ ನಂತರದ ಸೂಕ್ತ ಮಾರ್ಗದರ್ಶನ

ಮಹಾಜನ ಪ್ರಥಮ ದರ್ಜೆ ಕಾಲೇಜಿಲ್ಲಿ ಸಂವಾದ ಕಾರ್ಯಕ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ಆಡಳಿತ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ನಿಮ್ಮನ್ನು ಮತ್ತು ನಿಮ್ಮ ಭವಿಷ್ಯವನ್ನು ಪ್ರಸ್ತುತಪಡಿಸುವುದು ಪದವಿಯ ನಂತರ ಪ್ರಸ್ತುತಿ ಕೌಶಲ್ಯ ಕರಗತ ಮಾಡಿಕೊಳ್ಳುವುದು ಮತ್ತು ಸರಿಯಾದ ಮಾರ್ಗ ಆರಿಸಿಕೊಳ್ಳುವ ಕುರಿತು ಸಂವಾದ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಬೆಂಗಳೂರಿನ ರಾಮಯ್ಯ ಕಾಲೇಜಿನ ಮಾರ್ಕೆಟಿಂಗ್ ಮತ್ತು ಅಂತಾರಾಷ್ಟ್ರೀಯ ವ್ಯವಹಾರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಅರುಲ್ ಜ್ಯೋತಿ ಮತ್ತು ರಾಮಯ್ಯ ಕಾಲೇಜಿನ ವ್ಯವಹಾರ ಅಭಿವೃದ್ಧಿ ಸಲಹೆಗಾರ್ತಿ ಅಕ್ಷತಾ ಆಗಮಿಸಿದ್ದರು.

ಅರುಲ್ ಜ್ಯೋತಿ ಅವರು ಮಾತನಾಡಿ, ಪದವಿಯ ನಂತರ ಪ್ರಸ್ತುತಿ ಕೌಶಲ್ಯ ಮತ್ತು ಸರಿಯಾದ ಮಾರ್ಗವನ್ನು ಆರಿಸಿಕೊಳ್ಳುವುದರ ಪ್ರಾಮುಖ್ಯತೆ ಮತ್ತು ಪದವಿ ಮುಗಿದ ನಂತರ ಯಶಸ್ಸನ್ನು ಪಡೆಯಲು ವಿದ್ಯಾರ್ಥಿಗಳು ಮಾಡಬೇಕಾದ ಪ್ರಾಮಾಣಿಕ ಪ್ರಯತ್ನಗಳನ್ನು ತಿಳಿಸಿದರು.

ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ ಮತ್ತು ಪ್ರಸ್ತುತಿ ಕೌಶಲ್ಯ ಸುಧಾರಿಸುವಲ್ಲಿ ಮತ್ತು ಪದವಿ ನಂತರ ಸರಿಯಾದ ಮಾರ್ಗ ಆರಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಜವಬ್ದಾರಿಯುತರಾಗಿ ಇರಬೇಕು ಎಂದು ತಿಳಿಸಿದರು. ಈ ಅಧಿವೇಶನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಮನವರಿಕೆ ಮಾಡಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲ ಡಾ.ಎಚ್. ಶ್ರೀಧರ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವ್ಕುಮಾರ್ ಮತ್ತು ಕಾರ್ಯಕ್ರಮ ಸಂಯೋಜಕಿ ಎಂ. ರಶ್ಮಿ, ಸಹಾಯಕ ಪ್ರಾಧ್ಯಾಪಕಿ ಎನ್. ಅನಿತಾ ಇದ್ದರು. ವಿದ್ಯಾರ್ಥಿನಿಯರಾದ ಯು. ಸ್ನೇಹಾ ಸ್ವಾಗತಿಸಿದರು. ಸಂಜನಾ ವಂದಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಗುರುವಾರ 3 ಏಪ್ರಿಲ್ 2025
3 APRIL 2025

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂವಾದ



ವಿಜಯವಾಣಿ ಚಿತ್ರ

ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ಆಡಳಿತ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರುಲ್ ಜ್ಯೋತಿ, ಅಕ್ಷತಾ, ಡಾ. ಎಚ್.ಶ್ರೀಧರ, ಡಾ.ಶಿವಕುಮಾರ್, ಎಂ.ರಶ್ಮಿ, ಅನಿತಾ ಭಾಗವಹಿಸಿದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ಆಡಳಿತ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ 'ನಿಮ್ಮನ್ನು ಮತ್ತು ನಿಮ್ಮ ಭವಿಷ್ಯವನ್ನು ಪ್ರಸ್ತುತಪಡಿಸುವುದು, ಪದವಿಯ ನಂತರ ಪ್ರಸ್ತುತಿ ಕೌಶಲಗಳನ್ನು ಕರಗತ ಮಾಡಿಕೊಳ್ಳುವುದು ಮತ್ತು ಸರಿಯಾದ ಮಾರ್ಗವನ್ನು ಆರಿಸಿಕೊಳ್ಳುವುದು' ವಿಷಯ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಬೆಂಗಳೂರಿನ ರಾಮಯ್ಯ ಕಾಲೇಜಿನ ಮಾರ್ಕೆಟಿಂಗ್ ಮತ್ತು ಅಂತಾರಾಷ್ಟ್ರೀಯ ವ್ಯವಹಾರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಅರುಲ್ ಜ್ಯೋತಿ ಮಾತನಾಡಿ, ಯಶಸ್ಸನ್ನು ಪಡೆಯಲು ವಿದ್ಯಾರ್ಥಿಗಳು ಮಾಡಬೇಕಾದ ಪ್ರಾಮಾಣಿಕ ಪ್ರಯತ್ನಗಳನ್ನು ತಿಳಿಸಿದರು.

ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ ಮತ್ತು ಪ್ರಸ್ತುತಿ ಕೌಶಲಗಳನ್ನು ಆರಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಸುಧಾರಿಸುವಲ್ಲಿ ಮತ್ತು ಪದವಿ ನಂತರ ಸರಿಯಾದ ಮಾರ್ಗವನ್ನು ಆರಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಜವಾಬ್ದಾರಿಯುತರಾಗಿರಬೇಕು ಎಂದು ತಿಳಿಸುತ್ತಾ, ಈ ಅಧಿವೇಶನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಮನವರಿಕೆ ಮಾಡಿದರು. ಸಂಪನ್ಮೂಲ ವ್ಯಕ್ತಿ ಅಕ್ಷತಾ, ಪ್ರಭಾರ ಪ್ರಾಂಶುಪಾಲ ಡಾ. ಎಚ್.ಶ್ರೀಧರ, ಡಾ.ಶಿವಕುಮಾರ್, ಎಂ.ರಶ್ಮಿ, ಅನಿತಾ ಇತರರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 3.04.2025

ಮಹಾಜನ ಕಾಲೇಜಿನಲ್ಲಿ ಸಂವಾದಾತ್ಮಕ ಅಧಿವೇಶನ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರ ಮತ್ತು ಆಡಳಿತ ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗಗಳು ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಬಿಬಿಎ ಮತ್ತು ಬಿ.ಕಾಂ ವಿಭಾಗದಲ್ಲಿ ಸ್ಟಾಕ್ ಮಾರ್ಕೆಟ್ ಅರಿವು ಕುರಿತು ಸಂವಾದ ಕಾರ್ಯಕ್ರಮ ವಿದ್ಯಾರ್ಥಿಗಳಿಗಾಗಿ ಆಯೋಜಿಸಿತ್ತು.

ಟ್ರೇಡಿಂಗ್‌ತಜ್ಞಚೇತನ್‌ತಮ್ಮ ಅನುಭವವನ್ನು ಹಂಚಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಶೇರು ಎಂದರೇನು, ವಿವಿಧ ರೀತಿ ಶೇರುಗಳು, ಕ್ರಿಪ್ಟೋ ಕರೆನ್ಸಿ, ಕ್ಯಾಂಡಲ್ಸ್, ಫ್ಯೂಚರ್ಸ್ ಆಪ್ಷನಲ್ ಮಾರ್ಕೆಟ್ ಹಾಗೂ ಶೇರು ಮಾರುಕಟ್ಟೆಯಲ್ಲಿ ಹೇಗೆ ಷೇರುಗಳನ್ನು ಖರೀದಿಸುವುದು, ಮಾರಾಟ ಮಾಡುವುದು ಈ ಎಲ್ಲ ವಿಚಾರಗಳನ್ನು ಲೈವ್ ಮಾರುಕಟ್ಟೆಯನ್ನು ಬಳಸುವ ಮೂಲಕ ತಿಳಿಸಿಕೊಟ್ಟರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್ ಮತ್ತು ಕಾರ್ಯಕ್ರಮ ಸಂಯೋಜಕಿ ಎಸ್. ಕಾವ್ಯಶ್ರೀ ಮತ್ತು ಡಾ. ಮುತ್ತಮ್ಮ ಮತ್ತು ಅಧ್ಯಾಪಕೇತರರು ಇದ್ದರು. ವಿದ್ಯಾರ್ಥಿ ಸಂಯೋಜಕ ರೋಹನ್ ಸ್ವಾಗತಿಸಿದರು, ರೋಹಿತ್ ಪ್ರಿಯಾಂಕ, ನಿತ್ಯಾಂಜಲಿ, ವೀಣಾ ಕಾರ್ಯಕ್ರಮ ಆಯೋಜಿಸಿದ್ದರು. ವಾಣಿಜ್ಯಶಾಸ್ತ್ರ ಮತ್ತು ಆಡಳಿತ ವ್ಯವಹಾರ ಶಾಸ್ತ್ರ ವಿಭಾಗದ ಬಿ.ಕಾಂ ಮತ್ತು ಬಿಬಿಎ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಫಲಾನುಭವಿಗಳಾಗಿ ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 10.04.2025

ಗಣಿತದ ಅಮೂರ್ತ ಸೌಂದರ್ಯ ವಾಸ್ತವತೆಯ ನಡುವಿನ ಸೇತುವೆ

ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ.ಬಿ. ಮಧು ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ವಾಸ್ತವಿಕ ಸಂಖ್ಯೆಗಳು ಗಣಿತದ ಅಮೂರ್ತ ಸೌಂದರ್ಯ ಮತ್ತು ನಮ್ಮ ಸುತ್ತಲಿನ ಪ್ರಪಂಚದ ಸ್ಪಷ್ಟ ವಾಸ್ತವತೆಯ ನಡುವಿನ ಸೇತುವೆಯಾಗಿದೆ ಎಂದು ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ವಿಜ್ಞಾನ ಮತ್ತು ಗಣಿತಶಾಸ್ತ್ರ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಬಿ. ಮಧು ಅಭಿಪ್ರಾಯಪಟ್ಟರು.

ನಗರದ ಮಹಾಜನ ಪ್ರಥಮ ದರ್ಜೆಕಾಲೇಜನಗಣಿತಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ನೈಜ ಸಂಖ್ಯೆಗಳ ನಿರ್ಮಾಣ ಎಂಬ ವಿಷಯ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ನೈಜ ಸಂಖ್ಯೆಗಳ ನಿರ್ಮಾಣವು ಗಣಿತದಲ್ಲಿ ಮೂಲಭೂತವಾಗಿದೆ, ಏಕೆಂದರೆ ಅವು ಕಲನಶಾಸ್ತ್ರ, ಬೀಜಗಣಿತ ಮತ್ತು ವಿಶ್ಲೇಷಣೆ ಸೇರಿದಂತೆ ಹಲವು ಕ್ಷೇತ್ರಗಳಿಗೆ ಆಧಾರವಾಗಿವೆ. ನೈಜ ಸಂಖ್ಯೆಗಳು ಭಾಗಲಬ್ಧ ಸಂಖ್ಯೆಗಳ ವಿಸ್ತರಣೆಯಾಗಿದ್ದು, ಭಾಗಲಬ್ಧ ಮತ್ತು ಅಭಾಗಲಬ್ಧ ಸಂಖ್ಯೆಗಳನ್ನು ಒಳಗೊಂಡಿವೆ. ನೈಜ ಸಂಖ್ಯೆಗಳನ್ನು ನಿರ್ಮಿಸುವ ಗುರಿಯು ಉದ್ದಗಳು, ಪ್ರದೇಶಗಳು ಮತ್ತು ಸಮಯದಂತಹ ಒಳಗೊಂಡಿವೆ. ನೈಜ ಸಂಖ್ಯೆಗಳನ್ನು ನಿರ್ಮಿಸುವ ಗುರಿಯು ಉದ್ದಗಳು, ಪ್ರದೇಶಗಳು ಮತ್ತು ಸಮಯದಂತಹ ನಿರಂತರ ವಿದ್ಯಮಾನಗಳಲ್ಲಿ ಉದ್ಭವಿಸುವ ಪ್ರಮಾಣಗಳನ್ನು ಎದುರಿಸಲು ಕಠಿಣ ಅಡಿಪಾಯವನ್ನು ಒದಗಿಸುವುದು ಎಂದರು.



ಕೆಲವು ಗಣಿತದ ಪರಿಕಲ್ಪನೆಗಳನ್ನು ವಿವರಿಸಲು ಭಾಗಲಬ್ಧ ಸಂಖ್ಯೆಗಳ ಅಸಮರ್ಪಕತೆಯಿಂದ ನೈಜ ಸಂಖ್ಯೆಗಳ ಅಗತ್ಯವು ಹುಟ್ಟಿಕೊಂಡಿತು. ಪ್ರಾಚೀನ ಗ್ರೀಕ್ ಗಣಿತಜ್ಞರು ಅಭಾಗಲಬ್ಧ ಸಂಖ್ಯೆಗಳನ್ನು ಕಂಡು ಹಿಡಿದರು. ಆದರೆ ನೈಜ ಸಂಖ್ಯೆಗಳ ಔಪಚಾರಿಕ, ಸಂಪೂರ್ಣ ನಿರ್ಮಾಣವನ್ನು 19 ನೇ ಶತಮಾನದವರೆಗೆ ಅಭಿವೃದ್ಧಿಪಡಿಸಲಾಗಿಲ್ಲ ಎಂದು ಅವರು ತಿಳಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಎಂ.ಪಿ. ಸುಮತಿ, ಸಹಾಯಕ ಪ್ರಾಧ್ಯಾಪಕ ಎಲ್. ನಿರಂಜನ್ ಮತ್ತು ಬಿ. ಎಸ್ಸಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 9.04.2025

ಅಭಿನಂದನೆ 4ಬಿ ಸಿಒವೈ 13ಕೆಎಆರ್ ಬಿಎನ್ಎನ್.ಸಿಸಿ ಎಸ್ಯುಒ ಬಿ. ಕಾರ್ತಿಕ್ ಮತ್ತು 1ಕೆಎಆರ್ ಆರ್ಟಿಲರಿ ಬ್ಯಾಟರಿಯ ಎಸ್ಯುಒ ಎಂ.ಎಸ್. ಹರ್ಷಿತ ಗೆ ಸನ್ಮಾನ

ಎನ್‌ಸಿಸಿ ಯುವ ವಿನಿಮಯದಲ್ಲಿ ಮಹಾಜನ ಕೆಡೆಟ್‌ಗಳ ಸಾಧನೆ

• **ಕನ್ನಡಪ್ರಭ ವಾರ್ತೆ** ಮೈಸೂರು

2024-25ನೇ ಸಾಲಿನ ಎನ್‌ಸಿಸಿ ಯುವ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕಾಗಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇಬ್ಬರು ಪ್ರತಿಷ್ಠಿತ ಕೆಡೆಟ್‌ಗಳನ್ನು ವಾರದ ಸಮಾವೇಶದಲ್ಲಿ ಸನ್ಮಾನಿಸಿತು.

ಕಾಲೇಜಿನ 4ಬಿ ಸಿಒವೈ 13ಕೆಎಆರ್ ಬಿಎನ್‌ಎನ್.ಸಿಸಿ ಎಸ್‌ಯುಒ ಬಿ. ಕಾರ್ತಿಕ್ ಮತ್ತು 1ಕೆಎಆರ್ ಆರ್ಟಿಲರಿ ಬ್ಯಾಟರಿಯ ಎಸ್‌ಯುಒ ಎಂ.ಎಸ್. ಹರ್ಷಿತ ಅವರನ್ನು ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯವನ್ನು ಪ್ರತಿನಿಧಿಸಲು ಪ್ರತಿಷ್ಠಿತ ಎನ್.ಸಿಸಿ ಯುವ ವಿನಿಮಯ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗಿತ್ತು. ಮಾ. 12 ರಂದು ನಡೆದ ಮಾರಿಷಸ್ ಸ್ವತಂತ್ರ



ಮತ್ತು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಭಾರತವನ್ನು ಪ್ರತಿನಿಧಿಸಲು ಎಸ್‌ಯುಒ ಕಾರ್ತಿಕ್ ಮಾ. 10 ರಿಂದ 20 ರವರೆಗೆ ನಡೆದ ಮಾರಿಷಸ್‌ಗೆ ಹೋದ ವೈಇಪಿ ತಂಡದ ಭಾಗವಾಗಿದ್ದರು. ಅಲ್ಲಿ ಪ್ರಧಾನಿ ನರೇಂದ್ರ ಮೋದಿ ಮುಖ್ಯ ಅತಿಥಿಯಾಗಿದ್ದರು.

ಮಹಾಶಿವರಾತ್ರಿ ಮತ್ತು 262ನೇ ನೇಪಾಳ ಸೇನಾ ದಿನಾಚರಣೆಯ ಆಚರಣೆಯೊಂದಿಗೆ ಫೆ. 21 ರಿಂದ ಮಾ. 4 ರವರೆಗೆ ನೇಪಾಳದಲ್ಲಿ ನಡೆದ ವೈಇಪಿಯಲ್ಲಿ ಎಸ್‌ಯುಒ ಹರ್ಷಿತ ಭಾಗವಹಿಸಿದ್ದರು. ನೇಪಾಳ ಸೇನಾ ದಿನಾಚರಣೆಯ ಆಚರಣೆಯ ಸಂದರ್ಭದಲ್ಲಿ ವೈಇಪಿ ತಂಡದೊಂದಿಗೆ ಡಿ.ಜಿ. ಎನ್‌ಸಿಸಿ ಫ್ಲಿನೆಂಟ್ ಜನರಲ್ ಗುರ್ಬಿರ್ಪಾಲ್ ಸಿಂಗ್ ಇದ್ದರು. ಈ ಕಾರ್ಯಕ್ರಮಗಳಿಗೆ ವಿವಿಧ ದೇಶಗಳ ಸಹವರ್ತಿಗಳೊಂದಿಗೆ ತೊಡಗಿಸಿಕೊಳ್ಳಲು ಅಂತಾರಾಷ್ಟ್ರೀಯ ಸಹಕಾರ, ಸಾಂಸ್ಕೃತಿಕ ವಿನಿಯಮ ಮತ್ತು ನಾಯಕತ್ವ ಕೌಶಲ್ಯಗಳನ್ನು ಹೆಚ್ಚಿಸಲು ಅನನ್ಯ ಅವಕಾಶವನ್ನು ನೀಡಿತ್ತು. ನಮ್ಮ ಕಾಲೇಜಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪ್ರತಿಷ್ಠಿತ ಯುವ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೆಡೆಟ್‌ಗಳನ್ನು ಆಯ್ಕೆಮಾಡಲಾಗಿದ್ದು, ಇದು ಸಂಸ್ಥೆಗೆ ನಿಜವಾಗಿಯೂ ಹೆಮ್ಮೆಯ ಮತ್ತು ಐತಿಹಾಸಿಕ ಕ್ಷಣವಾಗಿದೆ.

ಕಾಲೇಜಿನ ವಾರದ ಸಮಾವೇಶದ ಮುಖ್ಯ ಅತಿಥಿ ಮೈಸೂರಿನ ಹರಿವಿದ್ಯಾಲಯದ ಡೀನ್ ಮತ್ತು ಚಾಲೆಂಜರ್ಸ್ ಅಕಾಡೆಮಿಯ ಎಂ.ಡಿ. ಬ್ರಿಜೇಶ್ ಪಟೇಲ್ ಭಾಗವಹಿಸಿ ಮಾತನಾಡಿ, ಇವರು ಇಬ್ಬರು ಕೆಡೆಟ್‌ಗಳ ಪ್ರಯತ್ನಗಳನ್ನು ಪ್ರಶಂಸಿಸಿ ಅವರ ಸಾಧನೆಗಳ ಬಗ್ಗೆ ಅಪಾರ ಹೆಮ್ಮೆ ವ್ಯಕ್ತಪಡಿಸಿದರು ಮತ್ತು ನಾಯಕತ್ವ ಅಭಿವೃದ್ಧಿಯಲ್ಲಿ ಅಂತಹ ಅಂತಾರಾಷ್ಟ್ರೀಯ ಅನುಭವಗಳ ಮೌಲ್ಯವನ್ನು ಒತ್ತಿ ಹೇಳಿದರು.

ಕಾಲೇಜಿನಪ್ರಾಂಶುಪಾಲೆಡಾ.ಬಿ.ಆರ್. ಜಯಕುಮಾರಿ ಇವರು ಕೆಡೆಟ್‌ಗಳ ಗಮನಾರ್ಹ ಸಾಧನೆಗಳಿಗಾಗಿ ಅಭಿನಂದಿಸಿದರು. ಪ್ಲೈಯಿಂಗ್ ಆಫೀಸರ್ ಡಾ.ಪಿ.ಜಿ. ಪುಷ್ಪರಾಣಿ ಮತ್ತು ಸಿಟಿಒ ವಿ. ಗಾಯತ್ರಿ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಏಪ್ರಿಲ್ 9, 2025

ಇಬ್ಬರು ಕೆಡೆಟ್‌ಗಳಿಗೆ ಸನ್ಮಾನ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇಬ್ಬರು ಕೆಡೆಟ್‌ಗಳನ್ನು ಸನ್ಮಾನಿಸಲಾಯಿತು

ಪ್ರಜಾವಾಣಿ ವಾರ್ತೆ

ಮೈಸೂರು: 2024-25ನೇ ಸಾಲಿನ ಎನ್‌ಸಿಸಿ ಯುವ ವಿನಿಮಯ ಕಾರ್ಯಕ್ರಮದಲ್ಲಿ (ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಂ) ಭಾಗವಹಿಸಿ ದ್ದಕ್ಕಾಗಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇಬ್ಬರು ಕೆಡೆಟ್‌ಗಳನ್ನು ಕಾಲೇಜಿನ ವಾರದ ಸಮಾವೇಶದಲ್ಲಿ ಸನ್ಮಾನಿಸಲಾಯಿತು.

ಕಾಲೇಜಿನ ಕಾರ್ತಿಕ್ ಬಿ. ಮತ್ತು ಹರ್ಷಿತ ಎಂ.ಎಸ್ ಅವರನ್ನು ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯವನ್ನು ಪ್ರತಿನಿಧಿಸಲು ಎನ್‌ಸಿಸಿ ಯುವ ವಿನಿಮಯ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗಿತ್ತು ಎಂದು ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ ತಿಳಿಸಿದರು.

ಮುಖ್ಯ ಅತಿಥಿಯಾಗಿ ಹರಿವಿದ್ಯಾಲಯದ ಡೀನ್ ಎಂ.ಡಿ. ಬ್ರಿಜೇಶ್ ಪಟೇಲ್ ಮಾತನಾಡಿದರು. ಪ್ಲೈಯಿಂಗ್ ಆಫೀಸರ್ ಪಿ.ಜಿ. ಪುಷ್ಪರಾಣಿ ಮತ್ತು ಸಿಟಿಒ ವಿ.ಗಾಯತ್ರಿ ಉಪಸ್ಥಿತರಿದ್ದರು.

STAR OF MYSORE

Monday 21st April 2025

Mahajana Cadets attend NCC Youth Exchange Programme in Mauritius and Nepal



Mysuru, Apr. 21- In recognition of their remarkable display of excellence and commitment to National Cadet Corps (NCC) in the Youth Exchange Programme (YEP) for the year 2024-25, two distinguished Cadets of SBRR Mahajana First Grade College (Autonomous) Jayalakshmipuram, Mysuru were felicitated during the college weekly assembly.

SUO **B. Karthik** of the 4B COY 13 KAR BN NCC and SUO **M.S. Harshitha** of the 1 KAR ARTY Battery of SBRR Mahajana First Grade College were selected for the prestigious NCC Youth Exchange Programme to represent Karnataka and Goa NCC Directorate.

SUO Karthik was part of YEP team to Mauritius from Mar. 10 to 20 to represent India during Mauritius Independence and Republic Day celebrations held on Mar. 12, where Prime Minister Modi was the chief guest.

SUO Harshitha attended the YEP in Nepal from Feb. 21 to Mar. 4, coinciding with the celebrations of Maha Shivarathri and 262nd Nepal Army Day.

The YEP team was accompanied by DG NCC Lt. Gen. Gurbirpal Singh during the celebration of Nepal Army day.

These programmes offered a unique opportunity for the cadets to engage with their counterparts from various countries, fostering international cooperation, cultural exchange and enhancing leadership skills. This is the first time in the history of Mahajana College that Cadets were selected to participate in the prestigious YEP.

Chief guest Brijesh Patel, Dean of Harividyala, Mysuru, and MD of Challengers Academy, congratulated the Cadets for their remarkable achievements.

Also present were Dr. B.R. Jayakumari, Principal of SBRR Mahajana First Grade College, Flying Officer Dr. P.G. Pushparani and CTO V. Gayathri, who applauded the efforts of both Cadets and emphasised the value of such international experiences in personal and leadership development.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 12.04.2025

ಪದಗಳಲ್ಲಿ ವರ್ಣಸಲಾಗದನ್ನು ಒಂದು ಫೋಟೋ ಕಟ್ಟಿಕೊಡುತ್ತದೆ: ಪ್ರಾಧ್ಯಾಪಕ ಎಸ್. ನಿಂಗಪ್ಪ

• ಕನ್ನಡಪ್ರಭ ವಾರ್ತೆ ಮೈಸೂರು

ಪದಗಳಲ್ಲಿ ವರ್ಣಸಲಾಗದನ್ನು ಒಂದು ಫೋಟೋ ಕಟ್ಟಿಕೊಡುತ್ತದೆ ಎಂದು ನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಛಾಯಾಗ್ರಹಣ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಸ್. ನಿಂಗಪ್ಪ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಮತ್ತು ಐಕ್ಯೂಎಸ್‌ಸಿ ಸಹಯೋಗದೊಂದಿಗೆ ಕಾಲೇಜಿನ ಎವಿಸಿ-2 ಸಭಾಂಗಣದಲ್ಲಿ ಛಾಯಾಗ್ರಹಣ ಎಂಬವಿಷಯದಕುರಿತುಒಂದುದಿನದಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ತಾವು ತೆಗೆದ ಪಿಕ್ಟೋರಿಯಲ್, ವೈಲ್ಡ್ ಲೈಫ್, ಕಟ್ಟಡಗಳು, ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಫೋಟೋಗಳನ್ನು ಪ್ರದರ್ಶಿಸಿದರು. ಆ ಫೋಟೋಗಳ ಆಧಾರದ ಮೇಲೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪ್ರಾಯೋಗಿಕ ಭಾಗವಾಗಿ ಕಾಲೇಜಿನ ಸಮೀಪದಲ್ಲಿರುವ ಕುಕ್ಕರಹಳ್ಳಿ ಕೆರೆಗೆ ಭೇಟಿ ನೀಡಿ, ವಿದ್ಯಾರ್ಥಿಗಳಿಂದ ಆಲ್ಲಿನ ಪಕ್ಷಿಗಳು, ಜನರು ಮತ್ತು ಸೂರ್ಯಾಸ್ತದ ಛಾಯಾಗ್ರಹಣ ಮಾಡಿಸಲಾಯಿತು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಎ. ಅಮೃತ ಶಂಕಪಾಲ್, ಸಹಾಯಕ ಪ್ರಾಧ್ಯಾಪಕಿ ಸ್ವರ್ಣ, ತಾಂತ್ರಿಕ ವಿಭಾಗದ ಮುಖ್ಯಸ್ಥ ಸಿ. ರಾಜೇಂದ್ರ ಪ್ರಸಾದ್, ಐಟಿ ಸಿಬ್ಬಂದಿ ಆರ್. ಅರುಣ್, ಪತ್ರಿಕೋದ್ಯಮದ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 24.04.2025

ಮೈವಿವಿ ಅಂತರ ವಲಯ ಪುರುಷರ ಕ್ರೀಡಾಕೂಟದ ಬಹುಮಾನ ವಿತರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

2024-25ನೇ ಸಾಲಿನ ಮೈಸೂರು ವಿವಿ ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾಕೂಟದ ಬಹುಮಾನ ವಿತರಣಾ ಕಾರ್ಯಕ್ರಮವು ಬುಧವಾರ ಜರುಗಿತು.

ವಿಜೇತರಿಗೆ ಬಹುಮಾನ ವಿತರಿಸಿದ ಮೈಸೂರು ವಿವಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಡಾ.ಎಚ್.ಪಿ. ಜ್ಯೋತಿ ಮಾತನಾಡಿ, ಶಿಕ್ಷಣ ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ಯಾವ ಕಾರ್ಯವು ಕಷ್ಟಕರ ಆಗಿರುವುದಿಲ್ಲ, ಹಾಗೂ ವೃತ್ತಿಯಲ್ಲಿ ಅವರು ಯಶಸ್ವಿಯಾಗಿರುತ್ತಾರೆ ಎಂದು ಹೇಳಿದರು. ಅಂತರ ವಲಯ ಕ್ರೀಡಾಕೂಟದಲ್ಲಿ ಹಾಸನ, ಮಂಡ್ಯ, ಚಾಮರಾಜನಗರ ವಿಶ್ವವಿದ್ಯಾನಿಲಯದ ಅಂತಿಮ ವಿದ್ಯಾರ್ಥಿಗಳಿಗೆ ಇದು ಕಡೆಯ ಕ್ರೀಡಾಕೂಟವಾಗಿದ್ದು, ಇದರಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳಿಗೆ ಅವರು ಅಭಿನಂದನೆ ತಿಳಿಸಿದರು. ಈ ಕ್ರೀಡಾಕೂಟದಲ್ಲಿ ಮಾನಸಗಂಗೋತ್ರಿ ಸ್ನಾತಕೋತ್ತರ ಕ್ರೀಡಾ ಮಂಡಳಿ ವಿದ್ಯಾರ್ಥಿಗಳ ತಂಡ (ಪ್ರಥಮ), ಸೆಪಿಯೆಂಟ್ ಕಾಲೇಜು (ದ್ವಿತೀಯ) ಹಾಗೂ ಮಹಾಜನ ಪ್ರಥಮ ದರ್ಜೆ ಕಾಲೇಜು (ತೃತೀಯ) ಬಹುಮಾನ ಪಡೆದರು. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ವೆಂಕಟೇಶ್, ಕಾಂತರಾಜು ಮೊದಲಾದವರು ಇದ್ದರು.

MFGE In the Eyes of the Press.....

STAR OF MYSORE

Thursday 3rd April 2025

Wins Inter-Collegiate Throwball Tourney



The Throwball Team of SBRR Mahajana First Grade College, Jayalakshmipuram, Mysuru, emerged victorious in the recently held University of Mysore Inter-Collegiate Throwball Tournament for Women organised by Maharani's Commerce and Management College, Mysuru. Seen in the picture are *(sitting from left)* ***Team Captain Kavitha, Physical Education Director P.S. Madhusudhana, Academic Advisor Dr. S.R. Ramesh, Mahajana Education Society Hon. Secretary Dr. T. Vijayalakshmi Muralidhar, SBRR Mahajana FGC Principal Dr. B.R. Jayakumari, Physical Education Director Dr. H.N. Bhaskar, Vice-Captain Parinitha;*** *(standing from left)* ***K. Somashekar, M.K. Spandana, Shravya Bopaiah, Harshita M. Gowda, Darshitha, Jeevitha, T.G. Harshitha, Punyashree and M.K. Sanjana.***

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 3.04.2025

ಮಹಾಜನ ಕಾಲೇಜಿನಲ್ಲಿ ವಿಶ್ವ ಜಲದಿನ

ಬೋಧಕ, ಬೋಧಕೇತರ ವರ್ಗದಿಂದ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಪರಿಸರ ಅಧ್ಯಾಯನ ವಿಭಾಗ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಜಲದಿನ- 2025ರ ಅಂಗವಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಕಾಲೇಜಿನ ಮಕ್ಕಳಿಗೆ ಪ್ರತಿಜ್ಞಾ ವಿಧಿಯ ಪತ್ರಗಳನ್ನು ವಿತರಿಸಿ, ಅವರ ವಿವರಗಳನ್ನು ಅರ್ಜಿಯ ನಮೂನೆಯಲ್ಲಿ ಭರ್ತಿ ಮಾಡಿ ಸಹಿ ಪಡೆಯುವ ಮೂಲಕ ನೀರಿನ ಬಳಕೆಯ ಮಹತ್ವವನ್ನು ತಿಳಿಸಲಾಯಿತು.

ಪ್ರತಿಜ್ಞಾ ವಿಧಿಯನ್ನು ಬೋಧಿಸುವ ಮುನ್ನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಪ್ರಸ್ತುತ ಸನ್ನಿವೇಶದಲ್ಲಿ ನಮ್ಮ ಸುತ್ತಲಿನ ಪರಿಸರವನ್ನು ಸಮರ್ಪಕವಾಗಿ ಪೋಷಿಸಲು, ನಾಗರೀಕ ಸಮಾಜ ವಿಫಲವಾಗಿದ್ದು, ಅನೇಕ ಪ್ರಕೃತಿ ವಿಕೋಪದಿಂದಾಗಿ ಇಂದು ಮಾನವಕುಲ ನಲುಗಿಹೋಗಿದೆ. ಮುಂದೊಂದು ದಿನ ಕುಡಿಯುವ ನೀರಿಗಾಗಿ ತತ್ತರಿಸುವಂತ ಸಂದರ್ಭ ರ್ಮಾಣವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಾದ ನಾವು ಪರಿಸರ ಪೋಷಿಸಿ, ಬೆಳಸುವುದರ ಮೂಲಕ ಸುಸ್ಥಿರ ಅಭಿವೃದ್ಧಿಯತ್ತ ಮುಖ ಮಾಡಬೇಕಿದೆ. ಹಾಗಾಗಿ ನಾವು ನೀರಿನ ಮಿತವಾದ ಬಳಕೆ, ಕೆರೆಗಳ ಶುದ್ಧೀಕರಣ, ಜಲಮೂಲಗಳ ರಕ್ಷಣೆ, ನೀರಿನ ಹಿಂಗುವಿಕೆ ಮತ್ತು ಮಳೆ ನೀರಿನ್ನು ಸಹ ಸಮರ್ಪಕವಾಗಿ ಬಳಸಿಕೊಳ್ಳುವ ಜೊತೆಗೆ ನೀರನ್ನು ಬಹಳ ಜತನವಾಗಿ ಉಪಯೋಗಿಸಿಕೊಂಡು ಎಲ್ಲಾ ಜೀವಸಂಕುಲಗಳ ಉಳಿವಿಗೆ ಶ್ರಮಿಸಬೇಕಿದೆ ಎಂದು ಹೇಳಿದರು.

ನೀರು ಅತ್ಯಂತ ಅಮೂಲ್ಯವಾಗಿದ್ದು ಅದು ಜೀವ ಜಲವಷ್ಟೇ ಅಲ್ಲದೆ ಎಲ್ಲಾ ಜೀವರಾಶಿಗಳ ಜೀವಾಳವಾಗಿದೆ. ಹಾಗಾಗಿ ಅದರ ಪುನರ್ಬಳಕೆ ಮತ್ತು ಮಿತವಾದ ಬಳಕೆಗಳು ಮುಂದಿನ ದಿನಗಳಲ್ಲಿ ಸುಸ್ಥಿರ ಪರಿಸರಕ್ಕೆ ನೆರವಾಗುವ ಮೂಲಕ ಮಾನವಕುಲದ ಏಳಿಗೆಗೆ ಸಹಕಾರಿಯಾಗುತ್ತದೆ ಎಂದು ತಿಳಿಸುತ್ತಾ, ಜಲ ಸಂರಕ್ಷಣೆ ಅಭಿಯಾನದಲ್ಲಿ ನಾವೆಲ್ಲರೂ ಬದ್ಧತೆಯಿಂದ, ಜವಾಬ್ದಾರಿಯಿಂದ ಭಾಗವಹಿಸಿ ಜನ ಸಮುದಾಯಕ್ಕೆ ಇದರ ಬಗ್ಗೆ ಅರಿವು ಮೂಡಿಸುವಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಪಾತ್ರ ದೊಡ್ಡದು ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ, ಡಾ.ಸಿ.ಎಸ್. ಸಿದ್ದರಾಜು, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್. ವೆಂಕಟಲಕ್ಷ್ಮಿ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ, ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪಿ.ಜಿ. ಪುಷ್ಪಾರಾಣಿ, ಆರ್. ಸಿದ್ದಪ್ಪ, ಎ.ಆರ್. ನಂದೀಶ ಇದ್ದರು.



ಮಹಾಜನ ಕಾಲೇಜಿನಲ್ಲಿ ವಿಶ್ವ ಜಲದಿನದ ಅಂಗವಾಗಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

MFGE In the Eyes of the Press.....

ಹೊಸ ದಿಗಂತ

ಸುಸ್ಥ ಜಾಗೃತ ಸಮಾಜ ಧ್ಯೇಯ

ಭಾನುವಾರ

11 ಮೇ 2025

ರಂಗಾಯಣ ನಿರ್ದೇಶಕಿ ಡಾ. ಗೀತಾ ಮೊಂಟಡ್ಕ ಅಭಿಪ್ರಾಯ

ಶಿಸ್ತಿನ ಬದುಕಿಗೆ ರಂಗಭೂಮಿ ಸಹಕಾರಿ

ಮೈಸೂರು: ರಂಗಭೂಮಿ ಜೀವನದಲ್ಲಿ ಶಿಸ್ತನ್ನು ಬೆಳೆಸುತ್ತದೆ ಎಂದು ರಂಗಾಯಣದ ನಿರ್ದೇಶಕಿ ಡಾ. ಗೀತಾ ಮೊಂಟಡ್ಕ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ ರಂಗತಂಡ (ಸಾರಂತ)ದ ಹಿರಿಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭವನ್ನು ಸಾರಂತದ ವಿದ್ಯಾರ್ಥಿನಿಗೆ ಬಣ್ಣ ಹಚ್ಚುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಂಗಭೂಮಿ ಯನ್ನು ಆಸಕ್ತಿಯಾಗಿ ಬೆಳೆಸಿಕೊಂಡು ವಿದ್ಯಾರ್ಥಿಗಳು ತಮ್ಮ ಒಟ್ಟಾರೆ ಅಭಿವೃದ್ಧಿಯ ಕಡೆ ಗಮನಹರಿಸಬೇಕು ಹಾಗೂ ತಮ್ಮ ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ರಂಗಭೂಮಿ ಜೀವನ ಶೈಲಿಯಲ್ಲಿ ಶಿಸ್ತನ್ನು ಬೆಳೆಸುತ್ತದೆ.

ಜೊತೆಗೆ ನಮ್ಮನ್ನು ನಾವು ಅರಿಯುವುದರಲ್ಲಿ ಮುಖ್ಯಪಾತ್ರವಹಿಸುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ. ಎಸ್. ಆರ್. ರಮೇಶ್, ಕೈಕ್ಷಣಿಕ ಡೀನ್ ಡಾ. ಶ್ರೀಧರ ಹೆಬ್, ಐಕ್ಯೂಎಸಿ ಸಂಚಾಲಕಿ ಗೀತಾ ಡಿ, ಸಾರಂತ ಸಂಚಾಲಕರಾದ ರಾಧೇಶ್ ಎ, ಸುಭಾಷಿಣಿ ವಿ, ಹಾಗೂ ಸಾರಂತತಂಡದ ಸದಸ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಎಲ್ಲಾ ಪಾತ್ರಕ್ಕೂ ನ್ಯಾಯ ಒದಗಿಸಿ

ಕಲಾವಿದರು ನಾಟಕ ಮಾಡುವಾಗ ಯಾವುದೇ ಕಾರಣಕ್ಕೂ ಸಣ್ಣಪಾತ್ರ, ದೊಡ್ಡಪಾತ್ರ ಎಂಬ ತಾತ್ಸರ್ಯವನ್ನು ಬೆಳೆಸಿಕೊಳ್ಳದೆ, ಎಲ್ಲಾ ಪಾತ್ರಕ್ಕೂ ಸರಿಯಾದ ನ್ಯಾಯ ಒದಗಿಸಿಕೊಡಬೇಕು. ಹಾಗಿದ್ದಲ್ಲಿ ನಾವು ಯತ್ನಿಸಿ ಪದವಿಯಲ್ಲಿಕ್ಕೆ ಸಾಧ್ಯ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 8 ಮೇ 2025

■ ಮಹಾಜನ ಪ್ರಥಮ ದರ್ಜೆ ಕಾಲೇಜು : ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸಮಾರೋಪ ಭಾಷಣ : ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ. ಜ.ಬಿ. ಶಿವರಾಜು, ಶಾಸಕ ಜಿ.ಡಿ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಚಲನಚಿತ್ರ ನಟಿ ಕು. ಅನುಪಾ ರೈ, ಅಧ್ಯಕ್ಷತೆ : ಕು. ನಿದಾ ತರನ್ನುಂ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಡಾ. ಸಿ.ಕೆ. ರೇಣುಕಾರ್ಯ, ಡಾ. ಎಸ್.ಆರ್. ರಮೇಶ್, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.45ಕ್ಕೆ

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 4.05.2025

ಸಮಗ್ರ ಇತಿಹಾಸ ಪ್ರಶ್ನಕೋಶ ವಿಶೇಷ ಸಂಪುಟ ಬಿಡುಗಡೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಸಮಗ್ರ ಇತಿಹಾಸ ಪ್ರಶ್ನಕೋಶ ಸಂಪುಟವನ್ನು ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ಬಿಡುಗಡೆಗೊಳಿಸಿದರು.

ಕಾಲೇಜಿನ ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಅವರು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಗಳ ಪದವಿ ಕಾಲೇಜುಗಳ ಇತಿಹಾಸ ಅಧ್ಯಯನ ಮಂಡಳಿಗಳು ರೂಪಿಸಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಎಲ್ಲಾ 6 ಸೆಮಿಸ್ಟರ್ ಗಳ 18 ಪತ್ರಿಕೆಗಳ ಮಾದರಿ ಪ್ರಶ್ನಕೋಶಗಳನ್ನು ಐಎಸ್ ಬಿಎನ್ ಅಡಿಯಲ್ಲಿ ಸಿದ್ದಪಡಿಸಿದ್ದಾರೆ.ಕಾಲೇಜಿನಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಪ್ರಕಟಿತ ಸಂಪುಟದ ಸಂಪಾದಕ ಡಾ.ಎಚ್. ಶ್ರೀಧರ, ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಎ.ಆರ್. ನಂದೀಶ, ಜಯಲಕ್ಷ್ಮೀ ಮೊದಲಾದವರು ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಮಂಗಳವಾರ, 6 ಮೇ 2025

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ತೃತೀಯ ಸ್ಥಾನ



ಮೈಸೂರು ವಿಶ್ವವಿದ್ಯಾನಿಲಯ, ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿ ಸಿದ್ದ ಅಂತರ ಕಾಲೇಜು ಅಂತರ ವಲಯ ಮಟ್ಟದ ಮಹಿಳೆಯರ ಕ್ರೀಡಾಕೂಟದಲ್ಲಿ ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ತೃತೀಯ ಸ್ಥಾನ ಲಭಿಸಿದೆ. ವಿಜೇತರೊಂದಿಗೆ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ಡಾ.ಎಚ್. ಎನ್.ಭಾಸ್ಕರ್, ಪ್ರಾಂಶುಪಾಲ ರಾದ ಡಾ.ಬಿ.ಆರ್.ಜಯಕುಮಾರಿ, ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಗೌರವ ಕಾರ್ಯದರ್ಶಿಗಳು, ಮಹಾಜನ ವಿದ್ಯಾಸಂಸ್ಥೆಯ ಕೆ.ಸೋಮಶೇಖರ್ ಹಾಗೂ ತಂಡದ ನಾಯಕಿ ಎಂ.ಕೆ.ಸಂಜನಾ ಅವರನ್ನು ಚಿತ್ರದಲ್ಲಿ ಕಾಣಬಹುದು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂಗಳವಾರ • ಮೇ 6, 2025



ಮೈಸೂರು ವಿ.ವಿ ದೈಹಿಕ ಶಿಕ್ಷಣ ವಿಭಾಗವು ಈಚೆಗೆ ಆಯೋಜಿಸಿದ್ದ ಮಹಿಳಾ ಕ್ರೀಡಾಕೂಟದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡ ರನ್ನರ್ ಅಪ್ ಪ್ರಶಸ್ತಿ ಗೆದ್ದುಕೊಂಡಿತು. ತಂಡದ ನಾಯಕಿ ಎಂ.ಕೆ.ಸಂಜನಾ ಮತ್ತು ವಿದ್ಯಾರ್ಥಿಗಳೊಂದಿಗೆ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ಭಾಸ್ಕರ್, ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ಸಂಸ್ಥೆಯ ಕಾರ್ಯದರ್ಶಿ ವಿಜಯಲಕ್ಷ್ಮಿ ಮುರುಳೀಧರ, ಕೆ.ಸೋಮಶೇಖರ್ ಪಾಲ್ಗೊಂಡಿದ್ದರು

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 9.05.2025

ಮಾರ್ಗದರ್ಶನ ಹುಣಸೂರು ಕ್ಷೇತ್ರದ ಶಾಸಕ ಜೆ.ಡಿ. ಹರೀಶ್ ಗೌಡ ಅಭಿಮತ | ಮಹಾಜನ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪ

ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಿದರೆ ಯಶಸ್ಸು

• **ಕನ್ನಡಪ್ರಭ ವಾರ್ತೆ** ಮೈಸೂರು

ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಿದರೇ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಹುಣಸೂರು ಕ್ಷೇತ್ರದ ಶಾಸಕ ಜೆ.ಡಿ. ಹರೀಶ್ ಗೌಡ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ನಡೆದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ, ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾನು ಸಹ ಇದೇ ಸಂಸ್ಥೆಯಲ್ಲಿ ಪಿಯುಸಿ ವ್ಯಾಸಂಗ ಮಾಡಿದ್ದೆ. ಈ ಸಂಸ್ಥೆಯ ವಿದ್ಯಾರ್ಥಿಯಾಗಿದ್ದ ನನಗೆ, ಇದೇ ಸಂಸ್ಥೆಯ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿ, ಸನ್ಮಾನ ಸ್ವೀಕರಿಸಿದ್ದು ಎಲ್ಲಾ ಸಾಧನೆಗಿಂತ ದೊಡ್ಡದು ಎಂದು ಅವರು ಸಂತಸ ವ್ಯಕ್ತಪಡಿಸಿದರು.

ನಾನು ಓದುವ ಸಂದರ್ಭದಲ್ಲಿ ರಾಜಕೀಯಕ್ಕೆ ಬರುವ ಯಾವ ಚಿಂತನೆಯೂ ಇರಲಿಲ್ಲ. ಎಂ.ಎಸ್ ಓದಬೇಕು ಎಂದು



ವಿದೇಶಕ್ಕೆ ಹೋಗಿದ್ದೆ. ಆದರೆ, ಭಾರತಕ್ಕೆ ವಾಪಸ್ ಬಂದಾಗ ಆಕಸ್ಮಿಕವಾಗಿ ಚುನಾವಣೆಗೆ ಧುಮುಕಿ, ಇಂದು ರಾಜಕೀಯದಲ್ಲಿ ಸಕ್ರಿಯನಾಗಿದ್ದೇನೆ. ಬದುಕು ನಾವು ಅಂದುಕೊಂಡಂತೆ ಇರುವುದಿಲ್ಲ. ಅನೇಕ ದಾರಿಗಳು, ಸವಾಲುಗಳು ಬರುತ್ತಿರುತ್ತವೆ. ಅದಕ್ಕೆ ನಾವು ಸಿದ್ಧರಬೇಕು. ಈ ಎಲ್ಲಾ ಹಂತಗಳನ್ನು ಎದುರಿಸಲು ನಮಗೆ ಮುಖ್ಯವಾಗಿ ಬೇಕಾಗಿರುವುದು ಧೈರ್ಯ ಮತ್ತು ಆತ್ಮವಿಶ್ವಾಸ ಎಂದು ಅವರು ಹೇಳಿದರು.

ನಾವು ಓದುವುದಕ್ಕೂ, ಮುಂದೆ ನಮ್ಮ ಜೀವನದಲ್ಲಿ ನಡೆಯುವುದಕ್ಕೂ ಸಂಬಂಧವಿರುವುದಿಲ್ಲ. ಓದುವುದೇ ಬೇರೆ, ಮಾಡುವುದೇ ಬೇರೆ. ನಿಮ್ಮ ತಂದೆ-ತಾಯಿಗಳು ನಿಮ್ಮ ಬಗ್ಗೆ ಅನೇಕ ಕನಸುಗಳನ್ನು ಕಂಡಿರುತ್ತಾರೆ. ಅವರು ಹೇಳಿದನ್ನು ನಾವು ಕೇಳಬೇಕು ಎಂದರು.

ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಹಾಗಾಗಿ ಉದ್ಯೋಗ ಗಿಟ್ಟಿಸಿಕೊಳ್ಳುವ ದೃಷ್ಟಿಯಲ್ಲಿ ನಾವು ಓದಬೇಕು ಮತ್ತು ಅದಕ್ಕೆ ಬೇಕಾದ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ, ಪೋಷಕರು ತಮ್ಮ ಮಕ್ಕಳ ಉದ್ಯೋಗಕ್ಕಾಗಿ ರಾಜಕೀಯ ವ್ಯಕ್ತಿಗಳ ಮತ್ತು ಬೇರೆಯವರ ಮುಂದೆ ತಮ್ಮ ಸ್ವಾಭಿಮಾನವನ್ನು ಬಿಟ್ಟು ಕೈಚಾಚಿ ನಿಲ್ಲುವಂತಾಗಬಾರದೆಂದರೇ ನೀವು ಚೆನ್ನಾಗಿ ಓದಬೇಕು, ಬದುಕನ್ನು ನಿಭಾಯಿಸುವಲ್ಲಿ ಗಟ್ಟಿಯಾಗಬೇಕು. ಬದುಕು ಕಟ್ಟಿಕೊಳ್ಳುವುದಕ್ಕೆ ನೂರಾರು ಅವಕಾಶಗಳಿವೆ ಎಂದು ಅವರು ಕಿವಿಮಾತು ಹೇಳಿದರು.

ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿಯ ನಿರ್ದೇಶಕ ಪ್ರೊ.ಜಿ.ಬಿ. ಶಿವರಾಜು ಮಾತನಾಡಿ, ವಿದ್ಯೆ ಎಂಬುದು ಕೇವಲ ಪ್ರಶಸ್ತಿ ಪತ್ರಗಳನ್ನು ಕೊಡುವುದಲ್ಲ. ಮೊದಲು ಮಾನವರನ್ನಾಗಿ, ಮನುಷ್ಯತ್ವವನ್ನು ಬೆಳೆಸುವುದೇ ವಿದ್ಯೆ. ಮನಷ್ಯನ ಶ್ರೇಷ್ಠ ಚಿಂತನೆಗಳೇ ಜೀವನದಲ್ಲಿ ನಮ್ಮನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುವುದು. ಯುವಕರೇ ರಾಷ್ಟ್ರದ ಆತ್ಮ, ನೀವೇ ದೇಶದ ಅಭಿವೃದ್ಧಿ. ಈ ನಿಟ್ಟಿನಲ್ಲಿ ಗಾಂಧಿಯ ತತ್ವಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನಟಿ ಅನುಷಾ ರೈ ಮಾತನಾಡಿ, ನಿಮ್ಮ ತಂದೆ- ತಾಯಿ ಹೆಮ್ಮೆ ಪಡುವಂತೆ ನೀವಲ್ಲರು ಸಾಧನೆ ಮಾಡಬೇಕು. ಜೀವನದಲ್ಲಿ ಕಲಿತ ವಿದ್ಯೆಯನ್ನು ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ವಿದ್ಯೆಯನ್ನು ಚೆನ್ನಾಗಿ ಕಲಿತರೇ ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಬದುಕಬಹುದು. ಇದನ್ನು ನೆನಪಿಟ್ಟುಕೊಂಡು ವಿದ್ಯಾರ್ಥಿ ಜೀವನ ಅರ್ಥಪೂರ್ಣವಾಗಿ ಸಾಗಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ವರ್ಷದ ಅತ್ಯುತ್ತಮ ವಿದ್ಯಾರ್ಥಿ ಸಂಸದೆಯಾಗಿ ಹೊರಹೊಮ್ಮಿದ ಅಂತಿಮ ವರ್ಷದ ಬಿ.ಎ ವಿದ್ಯಾರ್ಥಿನಿ ನಿದಾ ತರನ್ನುಂ ಅವರನ್ನು ಸನ್ಮಾನಿಸಲಾಯಿತು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ. ರೇಣುಕಾರ್ಯ, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ. ಸಹಜ ಡಾ.ಎಸ್.ಆರ್. ರಮೇಶ್, ಪರೀಕ್ಷಾಂಗನಿಯಂತ್ರಣಾಧಿಕಾರಿ ಶ್ರುತಿ ಪೂಣಚ್ಚ, ಪ್ರತಿಭಾ ವೇದಿಕೆಯ ಸಂಚಾಲಕ ಎಂ. ನಾಗೇಶ, ವಿದ್ಯಾರ್ಥಿ ಸಂಸತ್‌ಸಂಚಾಲಕಿ ಡಾ.ಪಿ.ಬಿ. ಪುಷ್ಪಾರಾಣಿ ಮೊದಲಾದವರು ಇದ್ದರು. ಸುನಿಲ್ ನಿರೂಪಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಮೇ 9, 2025



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ'ದಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿದರು

'ಉದ್ಯೋಗಕ್ಕೆ ಸ್ಪರ್ಧೆ ಹೆಚ್ಚಳ'

ಮೈಸೂರು: 'ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, ಇರುವ ಹುದ್ದೆಗಳಿಗೆ ಸ್ಪರ್ಧೆಯೂ ಹೆಚ್ಚಿದೆ. ಹೀಗಾಗಿ ಪೂರಕ ಓದು ಹಾಗೂ ಕೌಶಲ ಸಿದ್ಧಿಸಿಕೊಳ್ಳಬೇಕು' ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಸಲಹೆ ನೀಡಿದರು.

ಜಯಲಕ್ಷ್ಮಿಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ' ಉದ್ಘಾಟಿಸಿ ಮಾತನಾಡಿ, 'ಪೋಷಕರ ತ್ಯಾಗವನ್ನು ಮರೆಯಬಾರದು. ಬದುಕು ಕಟ್ಟಿಕೊಳ್ಳಲು ನೂರಾರು ಅವಕಾಶಗಳಿದ್ದು, ಪ್ರಯತ್ನ ಬಿಡಬಾರದು' ಎಂದರು.

'ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಇದ್ದೇ ಇದೆ. ಅದನ್ನು ಬೆಳೆಸಿಕೊಳ್ಳಬೇಕು. ಅವಕಾಶ ಸಿಕ್ಕಾಗ ಪ್ರತಿಭೆಯನ್ನು ತೋರಬೇಕು. ನಾನೂ ಇದೇ ಕಾಲೇಜಿನಲ್ಲಿ ಓದಿದವ. ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದೆ. ಬದುಕು ನಾವು ಅಂದುಕೊಂಡಂತೆ ಇರುವುದಿಲ್ಲ. ಅನೇಕ ಸವಾಲುಗಳು ಎದುರಾಗುತ್ತವೆ. ಸಿದ್ಧರಾಗಿರಬೇಕಷ್ಟೇ' ಎಂದರು.

ಗಾಂಧಿಸ್ಮಾರಕ ನಿಧಿಯ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು, ನಟಿ ಅನುಷಾ ರೈ, ಪರೀಕ್ಷಾ ನಿಯಂತ್ರಣಾಧಿಕಾರಿ ಶೃತಿ ಪೂಣಚ್ಚ, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಸಿ.ಕೆ.ರೇಣುಕಾರ್ಯ, ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಸ್. ಆರ್. ರಮೇಶ್, ಎಂ.ನಾಗೇಶ ಪಾಲ್ಗೊಂಡಿದ್ದರು.



ಕನ್ನಡಪ್ರಭ

ಗುರುವಾರ 8.05.2025

- ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪ, ಆಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸಮಾರೋಪ ಭಾಷಣ– ಪ್ರೊ.ಜಿ.ಬಿ. ಶಿವರಾಜು, ಶಾಸಕ ಜಿ.ಡಿ. ಹರೀಶ್ ಗೌಡ, ಮುಖ್ಯ ಆತಿಥಿ– ನಟಿ ಅನುಷಾ ರೈತ, ಅಧ್ಯಕ್ಷತೆ– ನಿದಾ ತರನ್ನುಂ, ಉಪಸ್ಥಿತಿ– ಟಿ. ಮುರಳೀಧರ ಭಾಗವತ್, ಡಾ.ಸಿ.ಕೆ. ರೇಣುಕಾರ್ಯ, ಡಾ.ಎಸ್.ಆರ್. ರಮೇಶ್, ಜಯಲಕ್ಷ್ಮೀಪುರಂ, ಡಾ.ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.45.

ಪ್ರಜಾವಾಣಿ

ಗುರುವಾರ • ಮೇ 8, 2025

ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್ ಸಮಾರೋಪ. ಭಾಷಣ– ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು. ಸ್ಥಳ: ಕಾಲೇಜಿನ ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮಿಪುರಂ. ಬೆಳಿಗ್ಗೆ 10.45

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 8 ಮೇ 2025

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸಮಾರೋಪ ಭಾಷಣ : ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ. ಜಿ.ಬಿ. ಶಿವರಾಜು, ಶಾಸಕ ಜಿ.ಡಿ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಚಲನಚಿತ್ರ ನಟಿ ಕು. ಅನುಷಾ ರೈ, ಅಧ್ಯಕ್ಷತೆ : ಕು. ನಿದಾ ತರನ್ನುಂ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಡಾ. ಸಿ.ಕೆ. ರೇಣುಕಾರ್ಯ, ಡಾ. ಎಸ್.ಆರ್. ರಮೇಶ್, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.45ಕ್ಕೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 6.05.2025

ಮಹಾಜನ ಕಾಲೇಜಲ್ಲಿ ಮಶ್ರೂಮ್, ಮೈಸಿಲಿಯಮ್ ತಂತ್ರಜ್ಞಾನ ಉಪನ್ಯಾಸ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಜೈವಿಕತಂತ್ರಜ್ಞಾನ ವಿಭಾಗವು ಮಶ್ರೂಮ್ ಮತ್ತು ಮೈಸಿಲಿಯಮ್ ತಂತ್ರಜ್ಞಾನಗಳು ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನಡೆಯಿತು.

ಶಿಲೀಂಧ್ರ ಜೀವಶಾಸ್ತ್ರಜ್ಞರು ಹಾಗೂ ಆಲ್ಫ್ ಪ್ರೊಟೀನ್ ಸಲಹೆಗಾರ ಡಾ. ಯಶಸ್ವಿನಿ ಬಾಲ ರಾಜು ಅವರು ಮಶ್ರೂಮ್ ಮತ್ತು ಮೈಸಿಲಿಯಮ್ ಕೋರ್ಸ್‌ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಶಿಲೀಂಧ್ರ ಜೈವಿಕ ತಂತ್ರಜ್ಞಾನದ ಸುಸ್ಥಿರ ಕೃಷಿ, ಆಹಾರ ಉತ್ಪಾದನೆ ಮತ್ತು ಉದ್ಯಮ ಶೀಲತಾ ಅವಕಾಶಗಳು ಹೆಚ್ಚುತ್ತಿರುವ ಪ್ರಸ್ತುತ ದಿನಗಳಲ್ಲಿ ಇದರ ಮಹತ್ವವನ್ನುಅರಿಯುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸಿದರು.



ಪ್ರಗತಿ ಪರ ಶಿಕ್ಷಕಿ ಹಾಗೂ ಸಂಶೋಧಕರಾದ ಡಾ. ಸ್ನೇಹಲತಾ ಹಾಗೂ ಪ್ರಸಿದ್ಧ ವೆಲ್ ನೆಸ್ ಗುರು ಹಾಗೂ ಶಾಖಾಹಾರಿಯೂ ಆದ ಸಂದೀಪ್ ಶಿವಶಂಕರ್ ಇದ್ದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಎಸ್.ಆರ್. ರಮೇಶ್ ಹಾಗೂ ವಿಜ್ಞಾನ ವಿಭಾಗದಎಲ್ಲಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.

ಮೌಲ್ಯವರ್ಧಿತಕೋರ್ಸ್‌ನ್ನು35 ವಿದ್ಯಾರ್ಥಿ ಗಳೊಂದಿಗೆ ನೋಂದಾಯಿಸಲಾಯಿತು. ಈ ಕೋರ್ಸಿನಲ್ಲಿ ವಿದ್ಯಾರ್ಥಿಗಳು ಶಿಲೀಂಧ್ರಗಳ ಜೈವಿಕ ತತ್ವಗಳು, ಕೃಷಿತಂತ್ರಗಳು ಮತ್ತು ಸುಸ್ಥಿರ ಅಭ್ಯಾಸಗಳಲ್ಲಿ ಮೈಸಿಲಿಯಮ್ ನ ನವೀನ ಉಪಯೋಗಗಳ ಬಗ್ಗೆ ಉಪನ್ಯಾಸ, ಪ್ರಯೋ ಗಾಲಯ ಮತ್ತು ಆಣಬೆಗಳನ್ನು ಹೇಗೆ ಬೆಳೆಸು ವುದು, ಮೈಸಿಲಿಯಲ್ ಬೆಳವಣಿಗೆಯ ಮಾದರಿ ಗಳನ್ನು ಹೀಗೆ ಹತ್ತು ಹಲವಾರು ಸಂಶೋಧನಾ ಅನುಭವವನ್ನುಪಡೆದುಕೊಂಡುಮೌಲ್ಯವರ್ಧಿತ ಕೋರ್ಸಿಗೆ ಸಂಬಂಧಿಸಿದ ಶಿಲೀಂಧ್ರ ಬೇಸಾಯವನ್ನು ಪ್ರಾಯೋಗಿಕವಾಗಿ ಬೆಳೆದು ಅದರ ಪ್ರಯೋಜನ ಪಡೆದುಕೊಂಡರು.

ವಾರದ ಸಮಾವೇಶದಲ್ಲಿಎಲ್ಲಾ ವಿದ್ಯಾರ್ಥಿ ಗಳಿಗೂ ಪ್ರಮಾಣಪತ್ರವನ್ನು ವಿತರಿಸಲಾಯಿತು. ಬಿ.ಎಸ್ಸಿ ವಿದ್ಯಾರ್ಥಿ ಅಕ್ಷೋಭ್ಯ ಭಟ್ ಪ್ರಾರ್ಥಿಸಿದರು. ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಎಸ್. ಅಮೂಲ್ಯ ಸ್ವಾಗತಿಸಿದರು, ವಿಭಾಗದ ಮುಖ್ಯಸ್ಥೆ ಪ್ರಿಯಾಂಕಶೆಣೈ ವಂದಿಸಿದರು ಹಾಗೂ ಅತಿಥಿ ಉಪನ್ಯಾಸಕಿ ಪ್ರೀತಿಕ ಕಾಮತ್ ನಿರೂಪಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂಗಳವಾರ • ಮೇ 6, 2025



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ನಡೆದ 'ಜೈವಿಕ ತಂತ್ರಜ್ಞಾನ– ಸುಸ್ಥಿರ ಕೃಷಿ' ಕುರಿತ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ಜೀವ ವಿಜ್ಞಾನಿ ಯಶಸ್ವಿನಿ ಬಾಲರಾಜು, ಸ್ನೇಹಲತಾ, ಸಂದೀಪ್ ಶಿವಶಂಕರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಸಿಇಒ ರಮೇಶ್ ಪಾಲ್ಗೊಂಡಿದ್ದರು